CC-O. In Public Domain. Digitized by eGangotri

ಶ್ರೀಶಾರದಾಚಂದ್ರಮೌಳೀಶ್ವರರತ್ನಗರ್ಭಗಣಪತಿಶ್ರೀಶಂಕರಜಗದ್ಗುರು.

ದೇವತಾಭ್ಯೋ ನಮೋ ನಮಃ ।

ಶೃಂಗಗಿರಿಶ್ರೀಶಾರದಾಜಗದ್ಗುರುಪೀಠಾಧಿಪತಿಗಳಆದೇಶಾನುಸಾರರಚಿತ

ಸಂಕ್ಷಿಪ್ತಶ್ರೀಮಾಧವೀಯಶಂಕರವಿಜಯಃ।

ಶ್ರೀಮಚ್ಛಂಕರಜಗದ್ಗುರುಸಾರ್ವಭೌಮರ ಮತ್ತು ಅವರ ಮುಖ್ಯ-
ಶಿಷ್ಯಚತುಷ್ಟಯದವರ ನೈಜಚರಿತ್ರೆ.



ಸರ್ವಶ್ರೇಯಸ್ಕರಶ್ರೌತಸ್ಮಾರ್ತಧರ್ಮಸಂರಕ್ಷಕಾ
ಚತುರ್ಭಿಃ ಸಹ ಶಿಷ್ಯೈಸ್ತು ಶಂಕರೋಽ ಮಂಡರ್ಯಾ ಯುಧ್ಭುವಂ ।

೧೯೮೬

ಗ್ರಂಥಕರ್ತಾ :—

ಶೃಂಗಗಿರಿಕವಿನರಸಿಂಹಶರ್ಮಾ

ಅದ್ವೈತಾಶ್ರಮ,
೪೯೨, ೩೩ ಎ ಅಡ್ಡರಸ್ತೆ, ೪ನೇ ವಿಭಾಗ,
ಜಯನಗರ, ಬೆಂಗಳೂರು-೫೬೦೦೧೧.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರಾಣಸಮುಚ್ಚಯಪ್ರಕಾಶನ

ಪ್ರಥಮ ಪುಷ್ಪ

ಸಂಕ್ಷಿಪ್ತ ಶ್ರೀಶಂಕರವಿಜಯ

ಅನುವಾದಕರು :—

ಶೃಂಗಗಿರಿ ಕವಿನರಸಿಂಹಶರ್ಮಾ

ಬೆಂಗಳೂರು

ಪ್ರಕಾಶಕರು

ಪುರಾಣಸಮುಚ್ಚಯಪ್ರಕಾಶನ

ಶ್ರೀ ಶ್ರೀಕಂಠೇಶ್ವರಸ್ವಾಮಿದೇವಸ್ಥಾನದ ಬೀದಿ,

ನಂಜನಗೂಡು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯಸೂಚಿಃ—

		ಪುಟಗಳು
೧.	ಉಪಕ್ರಮಃ।	1–8
೨.	ಚಿಂತನಂ।	1–8
೩.	ಶ್ರೀಶಂಕರವಿಜಯಃ।	1–88
೪.	ಶ್ರೀಶಿಷ್ಯಚರಿತ್ರೆ।	1–31
೫.	ಶ್ರೀಭಗವತ್ಪಾದದಿವ್ಯವೈಭವಂ।	1–44
೬.	ಪರಿಶಿಷ್ಟಂ।	1–3

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲನೇ ಮುದ್ರಣ :೧೯೮೬ ೧೦೦೦ ಪ್ರತಿಗಳು

ಎಲ್ಲ ಹಕ್ಕುಗಳನ್ನು ಪ್ರಕಾಶಕರಿಗೆ

ಕಾದಿರಿಸಿದೆ.

ಬೆಲೆ : ೧೨-೦೦ ರೂಪಾಯಿಗಳು.

ಪ್ರಕಾಶಕರು :

ಪುರಾಣಸಮುಚ್ಚಯಪ್ರಕಾಶನ

ಶ್ರೀ ಶ್ರೀಕಂಠೇಶ್ವರಸ್ವಾಮಿದೇವಸ್ಥಾನದ ಬೀದಿ,

ನಂಜನಗೂಡು ೫೭೧೩೦೧

ಮುದ್ರಕರು :

ಶ್ರೀವೈದ್ಯನಾಥ ಪ್ರಿಂಟರ್ಸ್

ಶ್ರೀ ಶ್ರೀಕಂಠೇಶ್ವರಸ್ವಾಮಿದೇವಸ್ಥಾನದ ಬೀದಿ,

ನಂಜನಗೂಡು ೫೭೧೩೦೧

Sri Vidyabharathi Book Centre, Sringeri

CC-O. In Public Domain. Digitized by eGangotri

ರಿ. ನಂ. *K R·N·U. 54.*

ಪುರಾಣಸಮುಚ್ಚಯಪ್ರಕಾಶನ (ರಿ.)
ಶ್ರೀಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ರಸ್ತೆ,
ನಂಜನಗೂಡು 571 301

ಶ್ರೀಗಣೇಶಪುರಾಣ ಮತ್ತು ಶಿವಪುರಾಣಗಳು ಸಂಪುಟಗಳ ಮೂಲಕ ಕನ್ನಡಾನುವಾದಗಳೊಡನೆ ನಮ್ಮ ಪ್ರಕಾಶನದಲ್ಲಿ ಈಗ ಮುದ್ರಿತವಾಗುತ್ತಿವೆ.

ಶ್ರೀಗಣೇಶಪುರಾಣದ ದ್ವಿತೀಯಸಂಪುಟವು ನಿಮ್ಮ ಕೈಸೇರಿದ ಪ್ರತಿ ಮೂರು ತಿಂಗಳಿಗೆ ಒಮ್ಮೆ ಒಂದೊಂದು ಸಂಪುಟವನ್ನು ಬಿಡುಗಡೆ ಮಾಡುವ ಯೋಜನೆ ಇದೆ.

ಪ್ರಕಟಣೆಯ ಪ್ರತಿ ಸಂಪುಟದ ಮೌಲ್ಯ ರೂ. 25-00, ಹಾಗೂ ಅಂಚೆವೆಚ್ಚ ಪ್ರತ್ಯೇಕವಾಗಿರುತ್ತದೆ. ಸಂಪೂರ್ಣಗ್ರಂಥವನ್ನು ಹೊಂದುವ ಗ್ರಾಹಕರ ಅನುಕೂಲಕ್ಕಾಗಿ ರಿಯಾಯಿತಿಮೌಲ್ಯದಲ್ಲಿ ಸಂಪುಟಗಳನ್ನು ನೀಡಬೇಕೆಂದು ನಿಶ್ಚಯಿಸಲಾಗಿದೆ. ಪ್ರಕಟಣೆಗೆ ಮುಂಚಿತವಾಗಿ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳುವವರಿಗೆ, ಪ್ರತಿಸಂಪುಟಕ್ಕೆ 20 ರೂ. ನಂತೆ ಒಟ್ಟು 20 ಸಂಪುಟಕ್ಕೆ ರೂ. 400-00. ಈ ಮೊಬಲಗನ್ನು ಗ್ರಾಹಕರು **ಎಂಟುಕಂತುಗಳಿಗೆ** ಮೀರದಂತೆ ನೀಡಬಹುದು. ಪ್ರಕಟಿತ ಗ್ರಂಥವು ಸುಮಾರು 400 ಪುಟಗಳನ್ನು ಹೊಂದಿದ್ದು, ಡೆಮ್ಮಿ 1/8 [ಅಷ್ಟಾಂಶ] ಅಳತೆಯನ್ನು, ಹಾಗೂ ಅರ್ಧಕ್ಯಾಲಿಕೋ ಕವಚವನ್ನು ಹೊಂದಿರುತ್ತದೆ.

ಆಸ್ತಿಕಮಹಾಶಯರು, ಈ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕಾಗಿ ಪ್ರಾರ್ಥಿಸುತ್ತೇವೆ.

ಅನುವಾದಕರು, ಕಾರ್ಯನಿರ್ವಾಹಕರು,

ಶೃಂಗಗಿರಿ ಕವಿ ನರಸಿಂಹಶರ್ಮಾ. **ಎಸ್. ನಾಗರಾಜದೀಕ್ಷಿತ್.**

ಸೂಚನೆ :-

ಮೇಲ್ಕಂಡ ಸಂಸ್ಥೆಗೆ ಹಣಕಳುಹಿಸುವವರು M. O. ಅಥವಾ ಡ್ರಾಫ್ಟ್ ಮುಖಾಂತರ ಕಳುಹಿಸಿಕೊಡಬೇಕಾಗಿ ಕೋರುತ್ತೇವೆ.

ಮುದ್ರಕರು:- ಶ್ರೀವೈದ್ಯನಾಥಪ್ರಿಂಟರ್ಸ್, ನಂಜನಗೂಡು.
ಪ್ರಕಾಶಕರು:- ಪುರಾಣಸಮುಚ್ಚಯಪ್ರಕಾಶನ, ನಂಜನಗೂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶಾಯ ನಮಃ

ಉಪಕ್ರಮಃ ।

ನಮಾಂಸಿ ಸಂತು ಭೂಯಾಂಸಿ ಭೂಯಸೀ ಶ್ರೇಯಸೇ ಮಮ ।
ಗುರವೇಽಪಾರಸಂಸಾರಸಾಗರೋತ್ತಾರಸೇತವೇ ॥

ಕೊನೆಗಾಣದ ದುಃಖಮಯಸಂಸಾರಸಾಗರವನ್ನು ಅನಾಯಾಸವಾಗಿ ದಾಟಿಸುವ ಸೇತುವೆಗಳಾಗಿರುವ ಶ್ರೀಗುರುವರ್ಯರಿಗೆ, ಮಹತ್ತಾದ ಶ್ರೇಯಸ್ಸು ನನಗೆ ಸಿದ್ಧಿಸುವುದಕ್ಕಾಗಿ ನನ್ನ ಅನಂತಾನಂತ ಪ್ರಣಾಮಗಳುಅರ್ಪಿತಗಳಾಗಿವೆ.

"ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"–ಎಂದು ಭಕ್ತರಿಗೆ ನೀಡಿದ ಅಭಯವಚನದಂತೆ, ಶ್ರೀಪರಮೇಶ್ವರನು, ಈ ಕಲಿಯುಗದಲ್ಲಿ ನಾಮಾವಶೇಷವಾಗುವುದರಲ್ಲಿದ್ದ, ಸರ್ವಶ್ರೇಯಸ್ಕರವಾದ, ವೈದಿಕಸನಾತನವರ್ಣಾಶ್ರಮ ಧರ್ಮವನ್ನು ಉಜ್ಜೀವಿಸುವುದಕ್ಕಾಗಿ ಶ್ರೀಮಚ್ಛಂಕರಭಗವತ್ಪೂಜ್ಯಪಾದಾಚಾರ್ಯಸಾರ್ವಭೌಮರ ರೂಪದಿಂದ ಅವತರಿಸಿಬಂದು ಧರ್ಮಸ್ಥಾಪನೆಯನ್ನು ಮಾಡಿರುವ ವಿಷಯವು ಸರ್ವಪ್ರಸಿದ್ಧವೇ ಇದೆ. ಶ್ರೀಭಗವತ್ಪಾದರವರು ಅವತರಿಸದಿದ್ದಿದ್ದರೆ, ವೈದಿಕಧರ್ಮದ ಹೆಸರೇ ಲೋಕದಲ್ಲಿ ಇಲ್ಲವಾಗಿ, ಶ್ರೇಯೋಮಾರ್ಗವೇ ಲುಪ್ತವಾಗಿ ಲೋಕವೆಲ್ಲವೂ ದುರಂತಾನರ್ಥಕ್ಕೆ ಗುರಿಯಾಗುತ್ತಿತ್ತೆಂಬುದು ವಿಮರ್ಶಕರ ಅಭಿಪ್ರಾಯವಾಗಿದೆ.

ಹದಿನಾಲ್ಕುಲೋಕಗಳ ರೂಪವಾಗಿರುವ ಈ ಬ್ರಹ್ಮಾಂಡದಲ್ಲಿ ಭರತಖಂಡವೇ ಕರ್ಮಭೂಮಿಯಾಗಿದೆ. ಇಲ್ಲಿ ನಡೆಯುವ ಶಾಸ್ತ್ರೀಯಕರ್ಮಗಳ ಫಲಗಳೇ ಇತರಲೋಕಗಳಲ್ಲಿಯೂ ಇತರ ಜನ್ಮಗಳಲ್ಲಿಯೂ ಅನುಭವಕ್ಕೆ ಬರುತ್ತವೆಯಾಗಿ, ಇಲ್ಲಿ ಧರ್ಮಾಧರ್ಮನಿಯಮಗಳು ಯಥಾವತ್ತಾಗಿ ನಡೆದರೇನೇ ಜಗತ್ತೆಲ್ಲವೂ ನೆಮ್ಮದಿಯನ್ನು ಹೊಂದುವುದು. ಲೋಕಾಂತರ-ಜನ್ಮಾಂತರ ಕಾಲಾಂತರಗಳಲ್ಲಿ ಸುಖವನ್ನು ಉಂಟುಮಾಡುವಂಥ ಕರ್ಮವು ಧರ್ಮವು; ಲೋಕಾಂತರ–ಜನ್ಮಾಂತರ–ಕಾಲಾಂತರಗಳಲ್ಲಿ ದುಃಖಕ್ಕೆ ಕಾರಣವಾದ ಕರ್ಮವು ಅಧರ್ಮವು. ಅತೀಂದ್ರಿಯಗಳಾಗಿರುವ ಈ ಧರ್ಮಾಧರ್ಮಕರ್ಮಗಳ ವಿಷಯದಲ್ಲಿ, ಅಪೌರುಷೇಯವಾಗಿ ನಿರ್ದುಷ್ಟಪ್ರಮಾಣವಾಗಿರುವ ವೇದಶಾಸ್ತ್ರವೊಂದೇ ಪ್ರಮಾಣವಾಗಿರುತ್ತದೆ. ಶ್ರೇಯಸ್ಕರವಾಗಿರುವ ಧರ್ಮಕ್ಕೆ ಹಾನಿಯು ಮತ್ತೆ ಮತ್ತೆ ಆಗುವುದು ಸಹಜವಾದ್ದರಿಂದ, ಈ ಧರ್ಮದ ರಕ್ಷಣೆಗಾಗಿ ಶ್ರೀಭಗವದವತಾರಗಳು ಕರ್ಮಭೂಮಿಯಾಗಿರುವ ಭಾರತಖಂಡದಲ್ಲಿಯೇ ಆಗುತ್ತಿರುವುದು ಇತಿಹಾಸಪುರಾಣಗಳಿಂದ ವ್ಯಕ್ತವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವಂತನ ಎಲ್ಲ ಅವತಾರಗಳೂ ಧರ್ಮರಕ್ಷಣೆಗಾಗಿಯೇ ಆಗುವುದಾದರೂ, ಶ್ರೀಭಗವತ್ಪಾದರ ಅವತಾರವು ಅತಿಮಹತ್ವದ್ದಾಗಿದೆ. ಅವತಾರಗಳೆಲ್ಲ ಪ್ರಾಯಶಃ ಜಗದ್ರಕ್ಷಣೆಯಲ್ಲಿ ಅಧಿಕೃತನಾಗಿರುವ ಶ್ರೀಮಹಾವಿಷ್ಣುವಿನ ಅವತಾರಗಳೇ ಆಗಿರುತ್ತವೆ. ಮತ್ಸ್ಯಕೂರ್ಮವರಾಹನಾರಸಿಂಹವಾಮನ-ಮುಂತಾದ ಅವತಾರಗಳಲ್ಲಿ-ಧರ್ಮನಿರತರಾದ ಪ್ರಜೆಗಳು ಇದ್ದೇಇದ್ದರು; ಇವರಿಗೆ ಹಾನಿಕರರಾಗಿದ್ದ ದಾನವರ ಸಂಹಾರಮಾತ್ರವೇ ಕಾರ್ಯವಾಗಿತ್ತು; ಅಷ್ಟುಮಾತ್ರದಿಂದ ಲೋಕವೆಲ್ಲವೂ ನಿರಾತಂಕವಾಗಿ ಧರ್ಮನಿರತವಾಗುತ್ತಿತ್ತು. ಆದರೆ ಈ ಕಲಿಯುಗದಲ್ಲಿ ಬೌದ್ಧಾದಿನಾಸ್ತಿಕಮತಗಳ ವಿಶೇಷ ಪ್ರಾಬಲ್ಯದಿಂದ ಪ್ರಜೆಗಳಿಗೆ ವೇದಶಾಸ್ತ್ರದಲ್ಲಿಯೂ, ಅದರಿಂದ ಬೋಧಿತವಾಗಿರುವ ವರ್ಣಾಶ್ರಮಧರ್ಮನಿಯಮಗಳಲ್ಲಿಯೂ ಶ್ರದ್ಧೆಯೇ ನಿರ್ಮೂಲವಾಗಿತ್ತು; ಆದಕಾರಣ, ಕೇವಲ ಶಕ್ತಿಮಾತ್ರದಿಂದ ಧರ್ಮೋದ್ಧಾರವಾಗುವಂತಿರಲಿಲ್ಲ. ಇದಕ್ಕಾಗಿ ವೇದಶಾಸ್ತ್ರಗಳ-ಪ್ರಾಮಾಣ್ಯವನ್ನು ವಿಶೇಷವಾಗಿ ಪ್ರತಿಪಾದಿಸಿಕೊಡಬೇಕಾಗಿತ್ತು. ಆದ್ದರಿಂದ-**ಈಶಾನಃ ಸರ್ವವಿದ್ಯಾನಾಂ**-ಎಂದು ನಿಖಿಲವಿದ್ಯಾಧಿಪತಿಯಾಗಿ ಪ್ರಸಿದ್ಧನಾಗಿರುವ ಶ್ರೀಪರಮೇಶ್ವರನಿಂದಲೇ ಈ ಕಾರ್ಯವು ನೆರವೇರಬೇಕಾಯಿತು. ಇದರಿಂದರ ಶ್ರೀಭಗವತ್ಪಾದ ಮಹತ್ವವು ವಿಶದವಾಗುವುದು.

"ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್"-ಎಂಬ ನ್ಯಾಯದಂತೆ, ವೇದಶಾಸ್ತ್ರದ ಅರ್ಥತಾತ್ಪರ್ಯವನ್ನು ಇತಿಹಾಸಪುರಾಣಗಳಿಂದ ವಿಶದವಾಗಿ ತಿಳಿಯತಕ್ಕದ್ದು. ಇತಿಹಾಸಪುರಾಣಗಳು ಅನೇಕಕಥಾದೃಷ್ಟಾಂತಗಳಿಂದ ವೇದಾರ್ಥವನ್ನೇ ವಿಶದೀಕರಿಸುತ್ತವೆ. ಜೀವಿತದಲ್ಲಿ ಸಂಭವಿಸುವ ಹಲವಾರು ಬಿಕ್ಕಟ್ಟಿನ ಸ್ಥಿತಿಗಳನ್ನು ಉದಾಹರಿಸಿ-"ಇಂಥ ಸಂದರ್ಭಗಳಲ್ಲಿ ನಮ್ಮ ಶಕ್ತಿ-ಇಚ್ಛೆ-ಸೌಕರ್ಯಗಳನ್ನನುಸರಿಸಿ, ಶಾಸ್ತ್ರದ ಧರ್ಮನಿಯಮವನ್ನು ಅನಾದರಿಸಿ ನಡೆಯುವುದು ಯುಕ್ತವೇ, ಅಥವಾ ನಮ್ಮ ಇಚ್ಛಾಸೌಕರ್ಯಾದಿಗಳಿಗೆಲ್ಲ ವಿರುದ್ಧವಾಗಿದ್ದರೂ ಶಾಸ್ತ್ರೀಯಧರ್ಮನಿಯಮಾನುಸರಣೆಯೇ ಯುಕ್ತವೋ?"-ಎಂಬುದನ್ನು ವಿವೇಚಿಸಿ, ಧರ್ಮನಿಯಮಾನುಸರಣೆಯೇ ಸರ್ವಥಾ ಅವಶ್ಯವೆಂಬುದನ್ನು ಪ್ರತಿಪಾದಿಸುವುದೇ ಇತಿಹಾಸಪುರಾಣಗಳ ಮುಖ್ಯತಾತ್ಪರ್ಯಾರ್ಥವು. ಇತಿಹಾಸವಾದ ಶ್ರೀಮದ್ವಾಲ್ಮೀಕಿರಾಮಾಯಣದಲ್ಲಿ ಶ್ರೀರಾಮಚಂದ್ರನು ಸರ್ವವಿಧದಿಂದಲೂ ಧರ್ಮನಿಷ್ಠನೇ ಆಗಿದ್ದನೆಂಬುದು-**"ಧರ್ಮಾತ್ಮಾ ಸತ್ಯಸಂಧಶ್ಚ; ರಾಮೋ ವಿಗ್ರಹವಾನ್ ಧರ್ಮಃ; ಧರ್ಮಂ ಸರ್ವಾತ್ಮನಾಶ್ರಿತ್ಯ"**-ಎಂದು ಮುಂತಾಗಿ ಪ್ರತಿಪಾದಿತವಾಗಿದೆ. ಶ್ರೀರಾಮಚಂದ್ರನು ತಾನು ಹೀಗೆ ಸ್ವಧರ್ಮನಿಷ್ಠನಾಗಿ ನಡೆದುಕೊಂಡು, ಲೋಕಕ್ಕೆ ಮಾರ್ಗದರ್ಶಕನಾದನು; ಆದರೆ, ಶ್ರೀರಾಮನು ಯಾವಧರ್ಮಶೋಧನೆಯನ್ನೂ ಮಾಡಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನೊಂದು ಇತಿಹಾಸವಾದ ಶ್ರೀಮನ್ಮಹಾಭಾರತದಲ್ಲಿ ಶ್ರೀಕೃಷ್ಣಪರಮಾತ್ಮನು ಧರ್ಮವಿರೋಧಿಗಳಾದವರನ್ನು ನಾಶಮಾಡಿರುದು ಮಾತ್ರವೇ ಅಲ್ಲದೆ, ಅರ್ಜುನನ ನಿಮಿತ್ತದಿಂದ ಶ್ರೀಮದ್ಭಗವದ್ಗೀತೋಪನಿಷತ್ತನ್ನು ಉಪದೇಶಿಸಿರುತ್ತಾನೆ. ಆದರೆ, ಅಷ್ಟುಮಾತ್ರದಿಂದ ಧರ್ಮಸ್ಥಾಪನಾಕಾರ್ಯವೇನೂ ಆದಂತಾಗಲಿಲ್ಲ; ಆಗಿನ ಕಾಲಕ್ಕೆ ಅಷ್ಟೇಸಾಕಾಗಿದ್ದಿರಬಹುದು; ಆದರೆ ನಾಸ್ತಿಕಕು ು ?ಗಳ ಪ್ರಾಬಲ್ಯದಿಂ ; ಶ್ರೀಗೀತೋಪ-ದೇಶವೂ ಅಡಗಿಹೋಯಿತು.

ಲೋಕದಲ್ಲಿ ಪ್ರಚಾರದಲ್ಲಿರುವ ಮತಗಳು ಶ್ರೌತವೆಂದೂ ಅಶ್ರೌತವೆಂದೂ ಎರಡುವಿಧವಾಗಿವೆ. ಶ್ರುತಿಯನ್ನೇ ಮುಖ್ಯವಾಗಿ ಪ್ರಮಾಣವೆಂದು ಒಪ್ಪುವ ಮತವು ಶ್ರೌತಮತವು. ಅಶ್ರೌತಮತವು ತಾರ್ಕಿಕ ಮತ್ತು ತಾಂತ್ರಿಕಗಳೆಂದು ಎರಡುಪ್ರಕಾರ-ವಾಗಿದೆ. ಇವು ಒಂದುವಿಧದಲ್ಲಿ ಶ್ರುತಿಯನ್ನು ಪ್ರಮಾಣವೆಂದು ಅಂಗೀಕರಿಸಿದರೂ, ತಮತಮಗೆ ಸಮ್ಮತವಾದ ತರ್ಕವನ್ನೋ ತಂತ್ರವನ್ನೋ ಮುಖ್ಯಪ್ರಮಾಣವೆಂದು ಅಂಗೀಕರಿಸಿ, ಶ್ರುತಿಗೂ ಅದೇ ಸಮ್ಮತವಾದ ಅರ್ಥವೆಂದು ವಾದಿಸುವುವು–ಹೀಗೆ ಇವು ವಸ್ತುತಃ ಅಶ್ರೌತಮತಗಳೇ ಆಗಿರುತ್ತವೆ. ವೇದವನ್ನು ಪ್ರಮಾಣವೆಂದು ಒಪ್ಪದ ಮತಗಳು ಚಾರ್ವಕ, ಬೌದ್ಧ ಮತ್ತು ಜೈನಮತಗಳು–ಇವು ನಾಸ್ತಿಕಮತಗಳೆಂದೂ ಹೇಳಲ್ಪಡುತ್ತವೆ. ನ್ಯಾಯ, ವೈಶೇಷಿಕ, ಸಾಂಖ್ಯಯೋಗ–ಮತಗಳು ತಾರ್ಕಿಕಮತಗಳು-ಇವು ವೇದವನ್ನು ಪ್ರಮಾಣವೆಂದು ಒಪ್ಪಿದರೂ, ತಮ್ಮ ತಮ್ಮ ತರ್ಕಗಳಿಗೆ ಅನುಗುಣ-ವಾಗಿಯೇ ವೇದವಾಕ್ಯಗಳಿಗೆ ಅರ್ಥವನ್ನು ವರ್ಣಿಸುವುವು; ಹೀಗಾಗಿ ಈ ಮ ಗಳಿಗೆ ತಮ್ಮ ತಮ್ಮ ತರ್ಕವೇ ಪ್ರಮಾಣವಾಗಿದೆಯೇ ಹೊರತು ವೇದವಲ್ಲ. ಹಾಗೆಯೇ ಶೈವವೈಷ್ಣವಶಾಕ್ತಬ್ರಾಹ್ಮಗಾಣಾಪತ್ಯಾದಿತಂತ್ರಗಳನ್ನೇ ಮುಖ್ಯವಾಗಿ ಪ್ರಮಾಣವೆಂದು ಒಡಂಬಡುವ ಶೈವವೈಷ್ಣವಶಾಕ್ತಾದಿಮತಗಳು ತಾಂತ್ರಿಕಮತಗಳು. ಇವೂ ತಮ್ಮತಮ್ಮ ತಂತ್ರಗಳಿಗೆ ಸಮ್ಮತವಾಗಿಯೇ ವೇದವಚನಗಳಿಗೆ ಅರ್ಥತಾತ್ಪರ್ಯವನ್ನು ವರ್ಣಿಸುತ್ತ ಅಶ್ರೌತಮತಗಳೇ ಆಗಿವೆ. ಪಾಶ್ಚಾತ್ಯದೇಶದ ಕ್ರೈಸ್ತ, ಮಹಮ್ಮದೀಯ–ಮುಂತಾದ ಮತಗಳೂ ಈ ತಾಂತ್ರಿಕಮತಗಳ ಗುಂಪಿಗೇ ಸೇರತಕ್ಕವುಗಳಾದರೂ, ವೇದವನ್ನು ಪ್ರಮಾದವೆಂದು ಒಪ್ಪದುದರಿಂದ ನಾಸ್ತಿಕಮತಗಳ ಗೋಷ್ಠಿಗೇ ಸೇರತಕ್ಕವುಗಳಾಗಿವೆ.

ಸರ್ವಶ್ರೇಯಸ್ಕರವಾಗಿರುವ ಧರ್ಮದ ವಿಷಯವು ಕಾಲಾಂತರಲೋಕಾಂತರಗಳಿಗೆ ಸಂಬಂಧಿಸಿರುತ್ತ ಅತೀಂದ್ರಿಯವಾದ್ದರಿಂದ, ಈ ವಿಷಯದಲ್ಲಿ ಅಪೌರುಷೇಯವಾಗಿ ಸರ್ವದೋಷರಹಿತವಾಗಿರುವ ವೇದವೊಂದೇ ಪ್ರಮಾಣವಾಗುತ್ತದೆ. ಆದಕಾರಣ ಅವೈದಿಕಮತಗಳು ಈ ವಿಷಯದಲ್ಲಿ ಪ್ರಮಾಣವಾಗಲಾರವು. ಈ ಕಾರಣದಿಂದಲೇ ಶ್ರೀವಿಷ್ಣುವು ಬೌದ್ಧಾವತಾರಮಾಡಿ ಬೌದ್ಧಮತವನ್ನೂ ಶ್ರೀಕೃಷ್ಣಾವತಾರಮಾಡಿ ಶ್ರೀಮದ್ಗೀತೋಪನಿಷತ್ತನ್ನೂ ಪ್ರಚಾರಮಾಡಿದರೂ, ವೇದಾರ್ಥಕ್ಕೆ ವಿರುದ್ಧವಾದ್ದರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೌದ್ಧಮತವನ್ನು ಅಪ್ರಮಾಣವೆಂದೂ, ವೇದಾರ್ಥಬೋಧಕವಾಗಿರುವ ಶ್ರೀಗೀತೆಯನ್ನು ಪ್ರಮಾಣವೆಂದೂ ಬಲ್ಲವರು ಅಂಗೀಕರಿಸುತ್ತಾರೆ. ಈ ಪ್ರಕಾರವಾಗಿ ವೈದಿಕಮತವೊಂದೇ ಶ್ರೇಯಸ್ಕರವಾದ ಪ್ರಾಮಾಣಿಕಮತವಾಗಿರುತ್ತದೆ.

ವೇದವು ಕರ್ಮಕಾಂಡವೆಂದೂ ಜ್ಞಾನಕಾಂಡವೆಂದೂ ಎರಡುಭಾಗವಾಗಿದೆ. ಇದರಲ್ಲಿ ಕರ್ಮಕಾಂಡವು ಅನೇಕವಿಧಗಳಾದ ಕರ್ಮಗಳನ್ನು ವಿಧಿಸುತ್ತದೆ; ಜ್ಞಾನ-ಕಾಂಡವು ಪರಮಪುರುಷಾರ್ಥಸಿದ್ಧಿಗೆ ಮುಖ್ಯಸಾಧನವಾಗಿರುವ ಪಾರಮಾರ್ಥಿಕತತ್ತ್ವ-ವನ್ನು ಪ್ರತಿಪಾದಿಸುತ್ತದೆ. ವೇದಪ್ರಾಮಾಣ್ಯವಾದಿಗಳಲ್ಲಿ ಕೆಲವರು ಕರ್ಮಕಾಂಡಕ್ಕೆ ಮಾತ್ರವೇ ಪ್ರಾಮಾಣ್ಯವನ್ನು ಒಡಂಬಡುತ್ತಾರೆ-ಇವರು ಪೂರ್ವಮೀಮಾಂಸಕರೆಂದೂ ಕರ್ಮಮೀಮಾಂಸಕರೆಂದೂ ಪ್ರಸಿದ್ಧರಾಗಿದ್ದಾರೆ; ಜ್ಞಾನಕಾಂಡವನ್ನು ಪ್ರಮಾಣವೆಂದು ಒಪ್ಪುವವರು ಉತ್ತರಮೀಮಾಂಸಕರೆಂದೂ, ಬ್ರಹ್ಮಮೀಮಾಂಸಕರೆಂದೂ, ವೇದಾಂತಿ-ಗಳೆಂದೂ ಪ್ರಸಿದ್ಧರಾಗಿದ್ದಾರೆ. ಇವರ ಅಭಿಪ್ರಾಯದಲ್ಲಿ ಕರ್ಮಕಾಂಡವು, ಜ್ಞಾನಕಾಂಡ ಪ್ರತಿಪಾದಿತವಾಗಿರುವ ತತ್ತ್ವಜ್ಞಾನಕ್ಕೆ ಸಾಧನಗಳಾದ ಕರ್ಮಗಳನ್ನು ಬೋಧಿಸುತ್ತ ಪ್ರಮಾಣವಾಗಿದೆ! ತಾಂತ್ರಿಕವೈಷ್ಣವಮತಗಳಲ್ಲಿ ಕೆಲವರು ಕರ್ಮಕಾಂಡವನ್ನು ಪ್ರಮಾಣ ವೆಂದೂ, ಮತ್ತೆ ಕೆಲವರು ಅಪ್ರಮಾಣವೆಂದೂ ಅಂಗೀಕರಿಸುತ್ತಾರೆ. ಜ್ಞಾನಕಾಂಡ-ವನ್ನು ಪ್ರಮಾಣವೆಂದು ಅಂಗೀಕರಿಸುವವರಲ್ಲಿಯೂ ಕೆಲವರು ಪ್ರಪತ್ತಿಯನ್ನೋ, ಭಕ್ತಿಯನ್ನೋ, ಬೇರೆಯಾವುದನ್ನೋ ಜ್ಞಾನಕಾಂಡಕ್ಕೆ ಮುಖ್ಯತಾತ್ಪರ್ಯಾರ್ಥವೆಂದು ಹೇಳುವರು.

ಈಪ್ರಕಾರವಾಗಿ ಶಾಸ್ತ್ರವಿಚಾರದಲ್ಲಿ ಅನೇಕಭಿನ್ನಭಿನ್ನಾಭಿಪ್ರಾಯಗಳು ಇವೆ. ಅನರ್ಥವು ಪರಿಹೃತವಾಗಿ ಶ್ರೇಯೋಲಾಭವಾಗುವುದು ಎಲ್ಲರಿಗೂ ಅವಶ್ಯವಾಗಿರುವುದ-ರಿಂದ, ಇದಕ್ಕೆ ಮುಖ್ಯಸಾಧನವು ಯಾವುದೆಂಬುದನ್ನು ನಿಶ್ಚಿತವಾಗಿ ತಿಳಿಯಬೇಕಾಗಿದೆ. ಈ ವಿಷಯದಲ್ಲಿ ವೇದವೊಂದೇ ಮುಖ್ಯಪ್ರಮಾಣವೆಂಬುದನ್ನು ಪ್ರತಿಪಾದಿಸಿಕೊಟ್ಟು, ಪಾರಮಾರ್ಥಿಕವಾದ ವೇದತಾತ್ಪರ್ಯಾರ್ಥವನ್ನು, ಇತರಮತಗಳ ಸಿದ್ಧಾಂತಗಳ ನಿರಸನೆಯು ಪೂರ್ವಕವಾಗಿ, ವಿಸ್ಪಷ್ಟವಾಗಿ ಪ್ರತಿಪಾದಿಸಿಕೊಟ್ಟಿರುವ ಶ್ರೀಮದ್ಭಗವ-ತ್ಪಾದಾಚಾರ್ಯರ ಮಹಿಮೆಯು ಅಸದೃಶವಾಗಿ, ಸರ್ವೋತ್ಕೃಷ್ಟವಾಗಿ ಬೆಳಗುತ್ತದೆ! ಆದಕಾರಣ, ಸರ್ವಲೋಕವೂ ಶ್ರೀಭಗವತ್ಪಾದರವರಿಗೆ ಚಿರಋಣಿಯೆಂಬಲ್ಲಿ ಸಂದೇಹವಿಲ್ಲ!

ಶ್ರೀಭಗವತ್ಪಾದರವರ ಚರಿತ್ರೆಯನ್ನು ಯಥಾವತ್ತಾಗಿ ತಿಳಿದುಕೊಂಡು, ಅವರ ಅಮೋಘಗಳಾದ ಉಪದೇಶಗಳನ್ನು ತಿಳಿದು ಅನುಸರಿಸಿ, ಶ್ರೇಯೋಭಾಗಿಗಳಾಗುವುದೇ, ಶ್ರೀಭಗವತ್ಪಾದರ ಈ ಋಣವಿಮೋಚನೆಗೆ ಮುಖ್ಯವಾದ ಉಪಾಯವಾಗಿದೆ; ಆದ್ದರಿಂದ ಶ್ರೀಭಗವತ್ಪಾದರ ನೈಜಚರಿತ್ರೆಯನ್ನು ನಿರೂಪಿಸುವುದು ಅವಶ್ಯವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವತ್ಪಾದರ ಚರಿತ್ರೆಯ ವಿಷಯದಲ್ಲಿ ಆನಂದಗಿರೀಯ, ಚಿದ್ವಿಲಾಸೀಯ, ವ್ಯಾಸಾಚಲೀಯ–ಮುಂತಾದ ಹಲವಾರು ಪ್ರಾಚೀನಶಂಕರವಿಜಯಗ್ರಂಥಗಳು ಪ್ರಚಾರದಲ್ಲಿವೆ, ಈಚಿನ ವಿಮರ್ಶಕರ ಅನೇಕಪ್ರಕಟಣೆಗಳೂ ಪ್ರಸಿದ್ಧವಿವೆ. ಇವುಗಳಲ್ಲಿ ಅನೇಕಾಂಶಗಳಲ್ಲಿ ಪರಸ್ಪರವಿರೋಧವು ಕಂಡುಬರುತ್ತ, ಏಕವಾಕ್ಯತೆಯಿಲ್ಲವಾಗಿದೆ. ಆದರೆ **'ಪ್ರಾಚೀನಶಂಕರಜಯೇ ಸಾರಃ ಸಂಗೃಹ್ಯತೇ ಸ್ಫುಟಂ'**–ಎಂಬ ಪ್ರತಿಜ್ಞೆಯಂತೆ **ಶ್ರೀಮಾಧವೀಯಶಂಕರವಿಜಯಕಾವ್ಯವೇ** ಶ್ರೀಭಗವತ್ಪಾದರವರ ಚರಿತ್ರೆಯಲ್ಲಿ ಪ್ರಮಾಣವಾಗಿರುತ್ತದೆ. "ಪ್ರಾಚೀನರ ಶಂಕರವಿಜಯಗ್ರಂಥಗಳಲ್ಲಿ, ಶ್ರೀಭಗವತ್ಪಾದರವರ ಮಹಿಮೆಗೆ ಮಾರುಹೋಗಿ ಅಲ್ಲಲ್ಲಿ ಅತಿಶಯೋಕ್ತಿಗಳೂ ಸಂಭವಿಸಿರುವುದು ಸಹಜವು; ಇವುಗಳನ್ನು ಶೋಧಿಸಿ, ಸಾರವಾದ, ಎಂದರೆ ವಾಸ್ತವವಾದ, ಅಂಶವೇ ನಿರೂಪಿತವಾಗುತ್ತದೆ"–ಎಂದು ಈ ಪ್ರತಿಜ್ಞೆಯ ತಾತ್ಪರ್ಯವಾಗಿದೆ. ಆನಂದರಾಮಾಯಣ, ಅಧ್ಯಾತ್ಮರಾಮಾಯಣ, ಅದ್ಭುತರಾಮಾಯಣ, ಶೇಷರಾಮಾಯಣ–ಮುಂತಾದ ಪ್ರಾಚೀನರಾಮಾಯಣಗ್ರಂಥಗಳೂ, ಈಚಿನ ತುಲಸೀದಾಸರಾಮಾಯಣ, ಕಂಬರಾಮಾಯಣ ತೊರವೇರಾಮಾಯಣ–ಮುಂತಾದ ರಾಮಾಯಣಗಳೂ ಇದ್ದರೂ,–**"ನ ತೇ ವಾಗನೃತಾ ಕಾಚಿದತ್ರ ಕಾವ್ಯೇ ಭವಿಷ್ಯತಿ"**।–ಎಂಬ ಶ್ರೀಬ್ರಹ್ಮದೇವನ ವರಪ್ರಸಾದಸಂಪನ್ನವಾದ ಶ್ರೀಮದ್ವಾಲ್ಮೀಕಿರಾಮಾಯಣವೇ ಶ್ರೀರಾಮಚರಿತೆಯಲ್ಲಿ ಪ್ರಮಾಣವಾಗಿರುತ್ತದೆ; ಇತರರಾಮಾಯಣಗ್ರಂಥಗಳು, ಶ್ರೀವಾಲ್ಮೀಕಿರಾಮಾಯಣದಿಂದ ಪ್ರಭಾವಿತಗಳಾಗಿ ಸ್ವೋತ್ಪ್ರೇಕ್ಷಿತಾಂಶಗಳಿಂದಲೂ ಮಿಶ್ರವಾದವುಗಳಾಗಿವೆ. ಇದರಂತೆ ಪ್ರಾಮಾಣಿಕವಾಗಿರುವ ಶ್ರೀಮಾಧವೀಯಶಂಕರವಿಜಯಕಾವ್ಯಾನುಸಾರವಾಗಿ ಯಥಾರ್ಥವಾದ ಶ್ರೀಭಗವತ್ಪಾದರವರ ದಿವ್ಯಚರಿತ್ರೆಯನ್ನು ನಿರೂಪಿಸುವುದು ಯುಕ್ತವಾಗಿದೆ.

"ಹದಿಮೂರನೆಯ ಶತಮಾನದ ಶ್ರೀಮಾಧವರಿಗೆ ಎಂಟನೆಯ ಶತಮಾನದವರಾದ ಶ್ರೀಭಗವತ್ಪಾದರ ಚರಿತ್ರೆಯ ಪರಿಚಯವು ಹೇಗೆ ಇತ್ತು?"–ಎಂದು ಕೆಲವರು ಆಶಂಕಿಸುವುದುಂಟು. ಅವಿಚ್ಛಿನ್ನಪರಂಪರೆಯ ಸಂಪ್ರದಾಯವಿದ್ದುದರ ಪರಿಜ್ಞಾನವಿಲ್ಲದುದೇ ಇಂಥ ಸಂದೇಹಗಳಿಗೆ ಅವಕಾಶವಾಗುತ್ತದೆ **"ಈಶಾನ ಸರ್ವವಿದ್ಯಾನಾಂ"**–ಎಂಬ ಶ್ರುತಿಯಂತೆ ಸರ್ವವಿದ್ಯಾಧಿಪತಿಯಾಗಿರುವ ಶ್ರೀಪರಮೇಶ್ವರನು–**"ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ"** ಎಂಬ ಶ್ರುತಿಯಂತೆ, ಹಗಲಿರುಳುಗಳಂತೆ ಎಡಬಿಡದೆ ಅನಾದ್ಯನಂತವಾಗಿ ನಿರಂತರವೂ ನಡೆದುಬರುತ್ತಿರುವ ಜಗತ್ತಿನ ಸೃಷ್ಟಿಪ್ರಳಯಗಳಲ್ಲಿ, ಪ್ರತಿಸೃಷ್ಟಿಯ ಆದಿಯಲ್ಲಿಯೂ ಶ್ರೀಹಿರಣ್ಯಗರ್ಭಬ್ರಹ್ಮನನ್ನು ಸೃಷ್ಟಿಸಿ, ಜಗತ್ಕ್ಷೇಮಕ್ಕೆ ಅವಶ್ಯವಾದ ಶ್ರೇಯಃಸಾಧನೆಯನ್ನು ಬೋಧಿಸುವ ವೇದಶಾಸ್ತ್ರವನ್ನು ಅರ್ಥಸಹಿತವಾಗಿ ಉಪದೇಶಿಸುತ್ತಾನೆ; ಅರ್ಥ-

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹಿತವಾಗಿಯೇ ಗುರುಶಿಷ್ಯಪರಂಪರೆಯಿಂದ ಈ ವೇದವು ಇವತ್ತಿನವರೆವಿಗೂ ಪ್ರಚಾರವಾಗಿ ಬಂದಿರುತ್ತದೆ. ಕಾಲಮಹಿಮೆಯಿಂದ ಕ್ಷೀಣವಾಗುತ್ತಿದ್ದುದನ್ನು ಪರಿಭಾವಿಸಿ, ಶ್ರೀಸಾಯಣಮಾಧವರು ನಾಲ್ಕುವೇದಗಳಿಗೂ ಅನಾದಿಸಂಪ್ರದಾಯನುಸಾರವಾಗಿಯೇ ಭಾಷ್ಯಗಳನ್ನು ವಿರಚಿಸಿರುವರು. ಹೀಗಿರುವಲ್ಲಿ–"ಅತಿಪ್ರಾಚೀನಕಾಲದ ವೇದಗಳ ಅರ್ಥವು ಅತ್ಯರ್ವಾಚೀನ ಸಾಯಣರಿಗೆ ಹೇಗೆ ತಿಳಿಯಿತು"?–ಎಂಬ ಆಧುನಿಕರ ಆಕ್ಷೇಪದಂತೆ ಶ್ರೀಮಾಧವರ ಶ್ರೀಶಂಕರವಿಜಯಕಾವ್ಯದ ಆಕ್ಷೇಪಣೆಯನ್ನೂ ತಿಳಿಯತಕ್ಕದ್ದು.

ಮತ್ತೆ ಕೆಲವರು–"ಕಾವ್ಯವು ಚಾರಿತ್ರಿಕವಿಷಯದಲ್ಲಿ ಪ್ರಮಾಣವಾಗುವುದಿಲ್ಲ'–ಎಂದು ಆಕ್ಷೇಪಿಸುವರು. "ವನಿತೆಯರ ಕಚಕುಚಜಘನವಿಲಾಸಗಳ ವರ್ಣನೆಯೇ ಕಾವ್ಯ" ವೆಂದು ಬಗೆಯುವವರ ಆಕ್ಷೇಪವೇ ಇದು. **"ಕಾವ್ಯಂ ಕಾಂತಾಸಮ್ಮಿತತಯೋಪದೇಶಯುಜೇ''**–ಎಂಬ ಆಲಂಕಾರಿಕರವಚನದಂತೆ–"ದುರೂಹವಾದ ಹಿತಕರವಾದ ಶಾಸ್ತ್ರಾರ್ಥವನ್ನು ಸುಕುಮಾರಮತಿಗಳಿಗೂ ಮನೋಹರವಾಗುವಂತೆ ಬೋಧಿಸುವ ರಮ್ಯಗಳಾದ ಮಾತುಗಳೇ ಕಾವ್ಯ"–ವು–ಎಂಬುದು ಯಥಾರ್ಥವು. ಈ ರೀತಿಯಲ್ಲಿ ಶ್ರೀಮಾಧವೀಯಾಶಂಕರವಿಜಯಕಾವ್ಯವು ಇಂಥ ಮಹೋತ್ತಮಕಾವ್ಯವಾಗಿದೆ.

ಶ್ರೀಮಾಧವೀಯಶಂಕರವಿಜಯಕಾವ್ಯವು ಹದಿನಾರುಸರ್ಗಗಳ ೧೮೪೩ ಪದ್ಯಗಳ ಮಹಾಗ್ರಂಥವು.

ಯದ್ವದ್ಧ್ವಟಾನಾಂ ಪಟಲೋ ವಿಶಾಲೋ ವಿಲೋಕ್ಯತೇಽಲ್ಪೇ ಕಿಲದರ್ಪಣೇಽಪಿ।
ತದ್ವನ್ಮದೀಯೇ ಲಘುಸಂಗ್ರಹೇಽಸ್ಮಿನ್ವಿಲೋಕ್ಯತಾಂ ಶಾಂಕರವಾಕ್ಯಸಾರಃ ॥

"ಚಿಕ್ಕಕನ್ನಡಿಯಲ್ಲಿಯೇ ವಿಶಾಲವಾದ ಆನೆಗಳ ಹಿಂಡನ್ನು ಕಾಣಬಹುದಾಗುವಂತೆ, ಅಲ್ಪವಾದ ನನ್ನ ಈ ಸಂಗ್ರಹಗ್ರಂಥದಲ್ಲಿಯೇ ಶ್ರೀಶಂಕರಭಗವತ್ಪಾದರವರ ವಾಕ್ಯಗಳ ಸಾರವು ಕಾಣಲ್ಪಡಲಿ'' **"ಶಂಕರವಾಕ್ಯಸಾರಃ''**–ಎಂದರೆ, ಶ್ರೀಭಗವತ್ಪಾದರ ವಿಷಯಕಗಳಾದ ಚಾರಿತ್ರಿಕವಾಕ್ಯಗಳ ಸಾರ; ಮತ್ತು ಶ್ರೀಭಗವತ್ಪಾದರ ಉಪದೇಶವಾಕ್ಯಗಳ ತತ್ತ್ವಾರ್ಥ–ಎಂದೂ ಅರ್ಥವು–ಎಂಬ ಶ್ರೀಮಾಧವರ ವಚನದಂತೆ, ಈ ಕಾವ್ಯದಲ್ಲಿ ಶ್ರೀಭಗವತ್ಪಾದರವರ ಚರಿತ್ರೆಯೊಡನೆ ಅವರ ಉಪದೇಶವೂ ಗರ್ಭಿತವಾಗಿರುತ್ತದೆ. ಪ್ರೌಢವಾದ ಶೈಲಿಯಲ್ಲಿ, ಉದಾತ್ತವಿಷಯಗಳನ್ನು, ಲೋಕೋತ್ತರರೀತಿಯಲ್ಲಿ ಪ್ರತಿಪಾದಿಸುವ ಈ ಗ್ರಂಥವು ಸಾಮಾನ್ಯಜನತೆಗೆ ದುರ್ಗಮವೇ ಆಗಿದೆ. ಶ್ರೀಭಗವತ್ಪಾದರವರ ಚರಿತ್ರೆಯ ಮತ್ತು ಉಪದೇಶದ ಮುಖ್ಯಾಂಶಗಳನ್ನು ತಿಳಿಯಬಯಸುವ ವಿವೇಕಿಗಳಿಗಾಗಿ, ಶ್ರೀಮಾಧವರ ವಚನಗಳನ್ನೇ ಸಂಗ್ರಹಿಸಿ ೧೨೮ ಪದ್ಯಗಳಲ್ಲಿ ಇದು

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರೂಪಿತವಾಗಿದೆ. ಶ್ರೀಭಗವತ್ಪಾದರ ಚರಿತ್ರೆಯನ್ನು ಪಾರಾಯಣಮಾಡುವವರಿಗೂ, ಪ್ರವಚನೋಪನ್ಯಾಸಗಳನ್ನು ಮಾಡುವವರಿಗೂ ಸಹ ಇದು ಉಪಯುಕ್ತವಾಗುವಂತೆ, ಈ ಪದ್ಯಗಳ ತಾತ್ಪರ್ಯಾರ್ಥವೂ ವಿವರಿಸಲ್ಪಟ್ಟಿದೆ.

ಇದರಲ್ಲಿ ಮೊದಲನೆಯದು ಶ್ರೀಭಗವತ್ಪಾದರ ಮಹಿಮೆಯ ದ್ಯೋತಕವಾಗಿರುವ ಪ್ರಸಿದ್ಧವಾದ ಪದ್ಯ; ಎರಡನೆಯದು ಸಂಗ್ರಹಕಾರನ ಮಂಗಳ ಪದ್ಯ; ೧೧೩, ೧೧೪ ಮತ್ತು ೧೩೬ರಿಂದ ಮುಂದಿನಪದ್ಯಗಳೂ ಸಂಗ್ರಹಕಾರನವೇ; ಉಳಿದ ೧೩೪ ಪದ್ಯಗಳು ಶ್ರೀಮಾಧವೀಯಶಂಕರವಿಜಯಕಾವ್ಯದ ಪದ್ಯಗಳೇ ಆಗಿವೆ. ಇವುಗಳಲ್ಲಿ ಕೆಲವೆಡೆಗಳಲ್ಲಿ ಸಂದರ್ಭೋಚಿತವಾಗಿ ಮೂಲವಚನಗಳನ್ನು ಹೊಂದಿಸಿಕೊಂಡಿದೆ. ಈ ನನ್ನ ಅಲ್ಪ-ಪ್ರಯಾಸವು ವಾಚಕವೃಂದದಲ್ಲಿ ಸಾರ್ಥಕವಾಗುವುದೆಂದು ಹಾರೈಸುತ್ತೇನೆ.

ಶ್ರೀಭಗವತ್ಪಾದರವರ ಮುಖ್ಯಶಿಷ್ಯಚತುಷ್ಟಯದವರ ಚರಿತ್ರೆಯೂ ಸಂಗ್ರಹವಾಗಿ ನಿರೂಪಿತವಾಗಿದೆ.

ಶ್ರೀಗುರುವರಚರಣನಳಿನಯುಗಲಾರ್ಪಿತಮಸ್ತು.

ಇತಿ ವಿಜ್ಞಚರಣವಿನೇಯಃ
ಶೃಂಗಗಿರಿ-ಕವಿ-ನರಸಿಂಹಶರ್ಮಾ
"ಅದ್ವೈತಾಶ್ರಮಃ।"

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿಂತನಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿಂತನಂ ।

ವಿನತಾಸುತಗತಿಪೂಜಿತಮಜಿತಂ ಕಾಲೇನ ನಿತ್ಯಜಿತಕಾಮಂ ।
ಅಗಜಾಪತಿಮುಹಮನಿಶಂ ವಿಗತಾನ್ಯವ್ಯಾಪೃತಿರ್ಭಜೇ ಶರಣಂ ॥

(ಗರುಡಗಮನಶ್ರೀಮಹಾವಿಷ್ಣುವಿನಿಂದ ಪೂಜಿತನೂ; ಮೃತ್ಯುವಿನಿಂದ ಜಿತ-ನಾಗದವನೂ, ನಿತ್ಯವೂ ಜಿತಕಾಮನೂ ಆಗಿರುವ; ಶ್ರೀಹಿಮವಂತಪರ್ವತರಾಜನ ಪುತ್ರಿಯಾಗಿರುವ ಶ್ರೀಪಾರ್ವತೀದೇವಿಯ ಪೂಜ್ಯಪ್ರಿಯಪತಿಯೂ ಆಗಿರುವ ಶ್ರೀಪರಮೇಶ್ವರ-ನನ್ನೇ, ಇತರಸಕಲವ್ಯವಹಾರವನ್ನೂ ತೊರೆದು, ನಿರಂತರವೂ ಆಶ್ರಯಿಸುತ್ತೇನೆ.)

ಪ್ರಪಂಚವು ಚೇತನ, ಅಚೇತನ– ಎಂದು ಎರಡುವಿಧವಾಗಿದೆ. ಸ್ವಾರ್ಥಶೂನ್ಯ-ವಾದ ಅಚೇತನವು, ಸ್ವಾರ್ಥಚೇತನದ ಉಪಕಾರಕ್ಕಾಗಿಯೇ ಇರುತ್ತದೆ.

ಚೇತನವು ದೇವತಿರ್ಯಙ್ಮನುಷ್ಯರೆಂದು ಮೂರುವಿಧವಾಗಿದೆ. ಮನುಷ್ಯರಿಗಿಂತ ಮೇಲಿನವರು ದೇವತೆಗಳು, ಕೆಳಗಿನವು ತಿರ್ಯಗ್ಜಂತುಗಳು. ದೇವತೆಗಳೂ ತಿರ್ಯ-ಗ್ಜಂತುಗಳೂ ಸಹ ಮನುಷ್ಯರ ಉಪಯೋಗಕ್ಕಾಗಿಯೇ ಇರುವುದರಿಂದ, ಮಾನವನ ಉತ್ಕರ್ಷವು ಸ್ಪಷ್ಟವಾಗುವುದು.

ದೇವ ಮನುಷ್ಯ, ತಿರ್ಯಕ್– ಎಂಬ ಈ ವಿಭಾಗವೆಲ್ಲ ದೇಹಕ್ಕೇ ಸಂಬಂಧಿಸಿದುದು ಇವೆಲ್ಲ ಶರೀರದ ಭೇದಗಳೇ ಆಗಿವೆ. ಆದ್ದರಿಂದ ಮಾನವಶರೀರವೇ ಉತ್ತಮವೆಂದು ತಿಳಿದುಬರುವುದು. ದೇವತೆಗಳ ಶರೀರಗಳಲ್ಲಿ ಕೈ, ತಲೆ, ಕಣ್ಣು– ಮುಂತಾದ ಅವ-ಯವಗಳಲ್ಲಿ ತಾರತಮ್ಯವಿರುವುದಾದರೂ, ದೇಹದ ಅಕಾರವು ಮಾನವಾಕಾರವೇ ಆಗಿ-ರುತ್ತದೆ. ಮನುಷ್ಯದೇಹದಲ್ಲಿಯೇ ಜ್ಞಾನ ಮತ್ತು ಕರ್ಮೇಂದ್ರಿಯಗಳಿಗೆ ಬೇರೆಬೇರೆ ಗೋಲಕಗಳಿರುತ್ತ, ತಮ್ಮ ತಮ್ಮ ಕಾರ್ಯಗಳನ್ನು ಪೂರ್ಣವಾಗಿ ನಿರ್ವಹಿಸಲು ಸಮರ್ಥ ಗಳಾಗಿವೆ; ತಿರ್ಯತ್ಪ್ರಾಣಿಗಳ ಶರೀರಗಳಲ್ಲಿ ಈ ಸಂಪತ್ತು ಇರುವುದಿಲ್ಲ.

ದೇವಾದಿ ಈಶರೀರಗಳ ಪ್ರಾಪ್ತಿ– ಎಂದರೆ ಜನ್ಮವು– ಚೇತನನಾಗಿರುವ ಆತ್ಮನಿಗೆ ಕರ್ಮನಿಮಿತ್ತವಾಗಿ ಉಂಟಾಗಿರತಕ್ಕವು. ಈ ಕರ್ಮಗಳು ಶಾಸ್ತ್ರಬೋಧಿತಗಳಾಗಿರುವ ಧರ್ಮಾಧರ್ಮರೂಪಗಳು.

"ಪುಣ್ಯೈರಾಪ್ನೋತಿ ದೇವತ್ವಂ ನಿಷಿದ್ಧೈರ್ನಾರಕೀಂ ಜನಿಂ ।
ಉಭಾಭ್ಯಾಂ ಪುಣ್ಯಪಾಪಾಭ್ಯಾಂ ಮಾನುಷ್ಯಂ ಲಭತೇಽವಶಃ ॥"–

ಎಂಬ ಪ್ರಮಾಣದಂತೆ– "ಶಾಸ್ತ್ರವಿಹಿತಗಳಾಗಿರುವ ಧರ್ಮಕರ್ಮಗಳಿಂದ ಉತ್ತಮ ಗಳಾದ ದೇವಾದಿಜನ್ಮವು ಲಭಿಸುವುದು; ಶಾಸ್ತ್ರನಿಷಿದ್ಧವಾದ ಅಧರ್ಮಕರ್ಮಗಳಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ನರಕತಿರ್ಯಗಾದಿಜನ್ಮಗಳು ಉಂಟಾಗುವುವು; ಈ ಪುಣ್ಯಪಾಪಗಳು ಒಂದು ಸಾಮ್ಯಾವಸ್ಥೆಗೆ ಬಂದಾಗ, ಅಂಥ ಕರ್ಮಗಳಿಂದ ಮನುಷ್ಯಜನ್ಮವು ದೊರೆಯುವುದು. ಹೀಗೆ ಶಾಸ್ತ್ರೀಯಧರ್ಮಾಧರ್ಮಕರ್ಮಗಳೇ ಎಲ್ಲ ಲೋಕಗಳಲ್ಲಿಯೂ, ಎಲ್ಲ ಜನ್ಮಗಳಿಗೂ ಕಾರಣಗಳಾಗಿವೆ. ಶಾಸ್ತ್ರೀಯಕರ್ಮಗಳನ್ನು ತಿಳಿದುಕೊಂಡು ಅನುಷ್ಠಿಸುವುದಕ್ಕೆ ತಿರ್ಯಗ್ಜಂತುಗಳಿಗೆ ಸಾಧ್ಯವಿಲ್ಲವೆಂದು ಸ್ಪಷ್ಟವೇ ಇದೆ. ಇದರಂತೆ, ಮನುಷ್ಯನಿಗಿಂತ ಮೇಲಾಗಿರುವ ದೇವಾದಿಗಳಿಗೂ, ಆ ಲೋಕಗಳ ದಿವ್ಯಭೋಗಗಳನ್ನು ಅನುಭವಿಸುವುದರಲ್ಲಿಯೇ ಅವರು ಆಸಕ್ತರಾಗಿರುವುದರಿಂದ, ಶಾಸ್ತ್ರೀಯಕರ್ಮಗಳನ್ನು ಅನುಷ್ಠಿಸುವ ಸಾಮರ್ಥ್ಯವಿರುವುದಿಲ್ಲ; ಆದ್ದರಿಂದಲೇ– **'ಮನುಷ್ಯಾಧಿಕಾರತ್ವಾಚ್ಛಾಸ್ತ್ರಸ್ಯ'**– 'ಶಾಸ್ತ್ರವೆಲ್ಲ ಮನುಷ್ಯರನ್ನೇ ಕುರಿತದ್ದು'– ಎಂದು ನಿಶ್ಚಯಿಸಲ್ಪಟ್ಟಿದೆ. ಹೀಗಾಗಿ ಕರ್ಮಭೂಮಿಯಾಗಿರುವ ಭರತಖಂಡದಲ್ಲಿ ಜನ್ಮವನ್ನು ಪಡೆದಿರುವ ಮನುಷ್ಯರು ಮಾಡುವ ಶಾಸ್ತ್ರೀಯಧರ್ಮಾಧರ್ಮಕರ್ಮಗಳ ಫಲವೇ ಎಲ್ಲ ಲೋಕಗಳಲ್ಲಿಯೂ ಎಲ್ಲ ಜನ್ಮಗಳಲ್ಲಿಯೂ ಅನುಭವಿಸಲ್ಪಡುತ್ತದೆಂದು ಸ್ಪಷ್ಟಪಡುವುದು.

ಇದರಿಂದ ಮನುಷ್ಯನ ಹೊಣೆಯು ವ್ಯಕ್ತವಾಗುವುದು– ತನ್ನ ಉತ್ತರೋತ್ತರ ಏಳಿಗೆಯನ್ನೋ ಹಾನಿಯನ್ನೋ ಮಾಡಿಕೊಳ್ಳುವುದು ಮನುಷ್ಯನ ಅಧೀನದಲ್ಲಿಯೇ ಇದೆ. ಈ ದೃಷ್ಟಿಯಿಂದ ನೋಡಿದಲ್ಲಿ ಮನುಷ್ಯನ ಸರ್ವೋತ್ಕರ್ಷವು ಎದ್ದುತೋರುವುದು ಒಂದು ವಸ್ತುವು ಅನೇಕವಿಧದಲ್ಲಿ ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ಉಪಯೋಗವಾಗಬಹುದು.

ಅಮಂತ್ರಮಕ್ಷರಂ ನಾಸ್ತಿ ನಾಸ್ತಿ ಮೂಲಮನೌಷಧಂ ।
ಅಯೋಗ್ಯಃ ಪುರುಷೋ ನಾಸ್ತಿ ಯೋಜಕಸ್ತತ್ರ ದುರ್ಲಭಃ ॥

"ಪ್ರತಿಯೊಂದು ಅಕ್ಷರವೂ ಮಂತ್ರವೇ; ಪ್ರತಿಮೂಲಿಕೆಯೂ ಔಷಧವೇ; ಪ್ರತಿಯೊಬ್ಬಮನುಷ್ಯನೂ ಯೋಗ್ಯನೇ; ಅವುಗಳನ್ನು ಯುಕ್ತವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವವರು ದುರ್ಲಭರು"– ಎಂಬಂತೆ, ನಮಗೆ ದೊರೆತಿರುವ ವಸ್ತುವಿನಿಂದ ಲಭಿಸಬಹುದಾದ ಅತ್ಯುತ್ತಮಪ್ರಯೋಜನವನ್ನು ಪಡೆಯುವುದೇ ವಿಚಾರಕುಶಲನಾದ ವಿವೇಕಿಮಾನವನ ಘನತೆಯು! ಮೇಲೆ ವಿವರಿಸಿರುವಂತೆ, ಕರ್ಮಭೂಮಿಯಾಗಿರುವ ಭರತಖಂಡದಲ್ಲಿ ವೈದಿಕವರ್ಣಾಶ್ರಮಧರ್ಮಕ್ಕೆ ಅಧಿಕಾರಹೊಂದಿರುವ ಮನುಷ್ಯನು ತನಗೆ ಲಭಿಸಿರುವ ದುರ್ಲಭವೂ ಸರ್ವೋತ್ಕೃಷ್ಟವೂ ಆಗಿರುವ ಮನುಷ್ಯಜನ್ಮವನ್ನು ವ್ಯರ್ಥಗೊಳಿಸದೆ, [illegible]

Sri Vidyabharathi Book Centre, Sringeri

CC-O. In Public Domain. Digitized by eGangotri

ಮನುಷ್ಯನಿಗೆ ತನಗೆ ಮೇಲಿನವರಾದ ದೇವಾದಿಗಳ ಪರಿಚಯವು ಈಗ ಇಲ್ಲ-ವಾದರೂ, ಕೆಳಗಿನ ಪಶುವೃಕ್ಷಾದಿಗಳ ಅನುಭವವಿರುತ್ತದೆ. ಅವುಗಳಂತೆಯೇ ತಾನೂ ಈ ಲೋಕದಲ್ಲಿ ಹುಟ್ಟಿಬಂದಿದ್ದು, ಕೆಲವು ಕಾಲ ಜೀವಿಸಿದ್ದು, ಮೃತನಾಗುವುದು ಕಂಡಿದೆ. ಆದರೆ,– "ಇಲ್ಲಿಗೆ ಬಂದದ್ದು ಎಲ್ಲಿಂದ, ಹೇಗೆ, ಏಕೆ? ಇಲ್ಲಿಂದ ಹೋಗುವುದೂ ಎಲ್ಲಿಗೆ, ಏಕೆ? ಕ್ಲೇಶಕರವಾಗಿರುವ ಈ ಜೀವಿತಕ್ಕಾದರೂ ಕಾರಣವೇನು"?– ಇವೇ ಮೊದಲಾದ ವಿಷಯಗಳುಮಾತ್ರ ಯಾರಿಗೂ ತಿಳಿದುಬರುವುದಿಲ್ಲ. ಯಾವುದೊಂದೂ ಇದೆಯೋ ಇಲ್ಲವೋ– ಎಂಬುದು ಪ್ರಮಾಣದಿಂದಲೇ ನಿಶ್ಚಿತವಾಗುವುದು– ಪ್ರಮಾಣವಿಲ್ಲದೆ ಇದೆ-ಯೆಂದೋ ಇಲ್ಲವೆಂದೋ ಯಾವುದನ್ನೂ ನಿಶ್ಚಯಿಸಲಾಗುವುದಿಲ್ಲ. ನಮ್ಮ ಜೀವಿತಕಾಲದ ವಿಷಯಗಳನ್ನೇ ಸರಿಯಾಗಿ ತಿಳಿಯಲಾರದ ನಾವು, ಜೀವಿತದ ಹಿಂದುಮುಂದಿನ ವಿಷಯಗಳನ್ನು ತಿಳಿಯಲು ಸಾಧ್ಯವೆ? ಆದರೂ, ಇವುಗಳನ್ನು ಅವಶ್ಯವಾಗಿ ತಿಳಿಯ-ಬೇಕಾಗಿದೆ– ಹಿಂದಿನ ಸ್ಥಿತಿಯು ಈಗಿನದಕ್ಕೂ, ಈಗಿನದು ಮುಂದಿನ ಸ್ಥಿತಿಗೂ ಕಾರಣ-ವಾಗುವುದರಿಂದ,– "ಮುಂದೆ ನಮಗೆ ಹಾನಿಯಾಗದಂತೆ, ಒಳ್ಳೆಯದೇ ಆಗುವುದಕ್ಕೆ ಈಗ ನಾವು ಹೇಗೆ ನಡೆದುಕೊಳ್ಳಬೇಕೆಂಬುದನ್ನು ಅವಶ್ಯವಾಗಿ ತಿಳಿಯಬೇಕಾಗಿದೆ. ಹೀಗೆ ನಾವು ಈಗ ಹೇಗಿರಬೇಕೆಂಬ ನಿಯಮವೇನೂ ಇಲ್ಲವೆಂದು ನಿಶ್ಚಿತವಾದರೆ, ಆಗ ನಾವು ಸ್ವೇಚ್ಛೆಯಾಗಿರಬಹುದಾಗುತ್ತದೆ. ಹಾಗಿಲ್ಲದೆ, ಈಗ ನಮ್ಮ ಕರ್ತವ್ಯವು ಇರುವುದೆಂದು ನಿಶ್ಚಿತವಾಗುವ ಪಕ್ಷದಲ್ಲಿ, ಆಗ ಅದಕ್ಕೆ ಅಧೀನವಾಗಿಯೇ ವರ್ತಿಸಬೇಕಾಗುವುದು.

ಪ್ರಪಂಚದಲ್ಲಿನ ಹಲವಾರು ವಿಚಾರಧುರೀಣರು ಅನಾದಿಕಾಲದಿಂದಲೂ ಈ ವಿಷಯಗಳನ್ನು ಚರ್ಚಿಸುತ್ತಿರುವರು. ಇವರ ಅಭಿಪ್ರಾಯಗಳೇ ಮತಗಳೆಂದೂ **ದರ್ಶನ**ಗಳೆಂದೂ ಪ್ರಚಾರದಲ್ಲಿವೆ. ಕೇವಲ ಊಹಾಪೋಹಗಳಿಗೆ ಅಧೀನಗಳಾಗಿರುವ ಇವುಗಳಲ್ಲಿ ಒಂದು ನಿಶ್ಚಿತವಾದ ಅಭಿಪ್ರಾಯವು ಇಲ್ಲವಾಗಿದೆ. ಪ್ರಮಾಣಾಧೀನವಾಗಿ ಉಂಟಾಗುವ ಅರ್ಥದಲ್ಲಿ ಭಿನ್ನಾಭಿಪ್ರಾಯಗಳಿಗೆ ಅವಕಾಶವಿರಲಾರದು. ಅತೀಂದ್ರಿಯಗಳಾಗಿರುವ ಈ ವಿಷಯಗಳಲ್ಲಿ ಅಲೌಕಿಕವಾದ ಪ್ರಮಾಣವನ್ನೇ ಆಶ್ರಯಿಸತಕ್ಕದ್ದಾಗಿದೆ. ಅಂಥ ಪ್ರಮಾಣವು ವೇದಶಾಸ್ತ್ರವಲ್ಲದೆ; ಬೇರೆ ಯಾವುದೂ ಇರುವುದಿಲ್ಲ.

ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ ।
ಆದೌ ವೇದಮಯೀ ದಿವ್ಯಾ ಯತಃ ಸರ್ವಾಃ ಪ್ರವೃತ್ತಯಃ॥ (ಮನುಃ)

ಎಂಬಪ್ರಮಾಣದಂತೆ, ಅಪೌರುಷೇಯವಾಗಿ, ಯಾವದೋಷವೂ ಇಲ್ಲದೆ, ಪರಮ-ಪ್ರಮಾಣವಾಗಿರುವ ವೇದಶಾಸ್ತ್ರವು ಅತೀಂದ್ರಿಯಗಳಾಗಿರುವ ವಿಷಯಗಳನ್ನು ನಿಶ್ಚಿತ-ವಾಗಿ ತಿಳಿಯಲು ಮುಖ್ಯಸಾಧನವಾಗಿರುತ್ತದೆ. ವೇದಶಾಸ್ತ್ರವು ನಮ್ಮ ಹಿಂದುಮುಂದಿನ ಸ್ಥಿತಿಗಳನ್ನು ಮಾತ್ರವಲ್ಲದೆ, ಮುಂದೆ ನಮಗೆ ಕ್ಷೇಮವಾಗುವಂತೆ ಈಗ ನಾವು ಹೇಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನಡೆದುಕೊಳ್ಳಬೇಕೆಂಬುದನ್ನೂ ಸ್ಪಷ್ಟವಾಗಿ ಬೋಧಿಸುತ್ತದೆ. ಆದಕಾರಣ ವೇದಶಾಸ್ತ್ರವನ್ನು ಯಥಾವತ್ತಾಗಿಯೂ ಪೂರ್ಣವಾಗಿಯೂ ತಿಳಿದುಕೊಂಡು, ಅದಕ್ಕನುಸಾರವಾಗಿ ನಡೆಯುವುದು ಅಗತ್ಯವು.

ವೇದಪ್ರಮಾಣವನ್ನು ಅಂಗೀಕರಿಸಿರುವವರಲ್ಲಿಯೂ ಭಿನ್ನಾಭಿಪ್ರಾಯಗಳು ಕಂಡು ಬರುತ್ತಿರುವುದು ಸತ್ಯವೇ. ಆದರೆ, ನಿತ್ಯವಾಗಿರುವ ವೇದಶಾಸ್ತ್ರದ ಮುಖ್ಯತಾತ್ಪರ್ಯಾರ್ಥವನ್ನು ಆನಾದಿಸಂಪ್ರದಾಯಾನುಸಾರವಾಗಿಯೇ ತಿಳಿಯತಕ್ಕದ್ದು ಯದ್ಯಪಿ ಇವರೆಲ್ಲರೂ ತಮ್ಮ ಮತವು ಅನಾದಿಸಂಪ್ರದಾಯಸಿದ್ಧವೆಂದೇ ನಂಬಿರುತ್ತಾರೆ; ಆದರೆ, ಶ್ರೇಯಸ್ಕಾಮಿಗಳು ಅಭಿಮಾನಾದಿಗಳನ್ನು ಬಿಟ್ಟು, ನಿರಪೇಕ್ಷವಾದ ವಿಚಾರದಿಂದ ಅರ್ಥ ನಿಶ್ಚಯವನ್ನು ಪಡೆಯತಕ್ಕದ್ದು. ಕೇವಲಾಭಿಮಾನದಿಂದ ಯಾವುದನ್ನೋ ನಂಬಿಕೊಂಡು ಅನುಸರಿಸಿದರೆ, ಅದರಿಂದ ಕ್ಷೇಮಲಾಭವಾಗುವ ಭರವಸೆಯಿರಲಾರದು. ಜನರಿಗೆ ಶ್ರೇಯಸ್ಕರವಾಗಿರುವ ಸನ್ಮಾರ್ಗವನ್ನು ಬೋಧಿಸುವುದಕ್ಕಾಗಿಯೇ ಶಾಸ್ತ್ರವು ಪ್ರವೃತ್ತವಾಗಿರುವುದು. ಜನರಿಗೆ ಅರ್ಥವಾಗದ ಮಾತುಗಳಿಂದ ಶಾಸ್ತ್ರವು ಬೋಧಿಸುವುದಾದರೆ, ಅದರಿಂದ ಯಾರಿಗೆ ಪ್ರಯೋಜನವಾದೀತು? **"ಲೋಕಾವಗತಸಾಮರ್ಥ್ಯಃ ಶಬ್ದೋ ವೇದೋಽಪಿ ಬೋಧಕಃ।"**– 'ಲೋಕದಲ್ಲಿ ಪ್ರಸಿದ್ಧವಾಗಿರುವ ಶಬ್ದದ ಅರ್ಥವೇ ವೇದದ ಶಬ್ದಕ್ಕೂ ಅರ್ಥವು'– ಎಂಬುದು ಶಾಸ್ತ್ರದ ನಿಯಮವು. ಆದ್ದರಿಂದ ವೇದದ ಶಬ್ದಗಳಿಗೂ ಲೋಕಪ್ರಸಿದ್ಧವಾದ ಅರ್ಥವನ್ನೇ ಅಂಗೀಕರಿಸಬೇಕು. ಇದೇ ನ್ಯಾಯದಂತೆ, ಶ್ರೀಮಚ್ಛಂಕರಭಗವತ್ಪಾದರವರು ಪ್ರತಿಪಾದಿಸಿರುವ ಅದ್ವೈತಸಿದ್ಧಾಂತವು ಅನಾದಿಸತ್ಸಂಪ್ರದಾಯಸಿದ್ಧವಾದುದು ನಾಸ್ತಿಕ ಮತ್ತು ಅವೈದಿಕಮತಗಳ ಪ್ರಾಬಲ್ಯದಿಂದ ಮಲಿನವಾಗಿದ್ದ, ಅನಾದಿಸಿದ್ಧ ಅದ್ವೈತಸಿದ್ಧಾಂತವನ್ನೇ ಅವರು ಶುದ್ಧಿಗೊಳಿಸಿ ಪ್ರತಿಪಾದಿಸಿರುವರೇ ಹೊರತು, ಇತರರಂತೆ, ಇದು ಅವರೇ ಹೊಸದಾಗಿ ಕಲ್ಪಿಸಿ ಪ್ರತಿಪಾದಿಸಿದ ಮತವಲ್ಲ. ಇತರರು ವೇದವಾಕ್ಯಗಳಿಗೆ ಮಾಡಿರುವ ಅರ್ಥವು ವಿಚಿತ್ರತರವಾಗಿರುವುದು ಕಂಡುಬರುತ್ತದೆ.

ಕರ್ಮಸಾಧ್ಯವಾದದ್ದೂ ಆಗಂತುಕವಾದದ್ದೂ ನಿತ್ಯವಾಗದುದರಿಂದ, ನಿತ್ಯವಾದ ಮೋಕ್ಷವು ಜೀವನ ನಿತ್ಯಸಿದ್ಧಸ್ವರೂಪವೇ ಆಗಿರಬೇಕೆಂದು ನಿಶ್ಚಿತವಾಗುವುದು **"ವಿಮುಕ್ತಶ್ಚ ವಿಮುಚ್ಯತೇ; ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ–"** ಮುಂತಾದ ಶ್ರುತಿವಚನಗಳೂ ಈ ಅರ್ಥವನ್ನು ತಿಳಿಸುತ್ತವೆ. ಹೀಗೆ ನಿತ್ಯಸಿದ್ಧವಾಗಿರುವ ನಿತ್ಯಮುಕ್ತ ಸ್ವರೂಪವು ಈಗ ಅನುಭವಕ್ಕೆ ಬರದೆ ಇರುವುದಕ್ಕೆ, ಬೇರೆ ಯಾವಕಾರಣವೂ ಕಾಣ ಬರದಿರುವುದರಿಂದ, ಸ್ವರೂಪಾಜ್ಞಾನವೇ ಇದಕ್ಕೆ ಕಾರಣವೆಂದು ತಿಳಿದುಬರುವುದು **"ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ; ಅನ್ಯತೇನ ಪ್ರತ್ಯೂಥಾಃ"**– ಮುಂತಾದ ವಚನಗಳೂ ಇದನ್ನು ಬೋಧಿಸುತ್ತವೆ. ಈ ಅಜ್ಞಾನ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಹಾರದಿಂದ ಆತ್ಮನ ನಿತ್ಯಮುಕ್ತನಸ್ಥಿತಿಯು ಅನುಭವಗಮ್ಯವಾಗಿ ಕೃತಾರ್ಥತೆಯು ಸಿದ್ಧಿಸುವುದೆಂಬುದೂ ಈಗ ನ್ಯಾಯಸಿದ್ಧವಾಗುವುದು. ಅಜ್ಞಾನದ ನಿವೃತ್ತಿಯು ಕೇವಲ ಜ್ಞಾನದಿಂದಲೇ ಆಗುವುದೆಂಬುದೂ ಸರ್ವಸಮ್ಮತವೇ ಆಗಿದೆ. ಈ ಪ್ರಕಾರವಾಗಿ ಆತ್ಮತತ್ತ್ವಜ್ಞಾನವೇ ಮೋಕ್ಷಸಾಧನವೆಂಬುದು ವಿಶದವಾಗುವುದು.—**"ಜ್ಞಾನಾದೇವ ತು ಕೈವಲ್ಯಂ; ಜ್ಞಾತ್ವಾ ಶಾಂತಿಮೃಚ್ಛತಿ"**– ಮುಂತಾದ ಪ್ರಮಾಣಸಿದ್ಧವಾಗಿದೆ ಈ ಅರ್ಥವು. ನಿಷ್ಕಾಮನೆಯಿಂದ ಅನುಷ್ಠಿಸಿದ ತಮ್ಮ ತಮ್ಮ ವೈದಿಕವರ್ಣಾಶ್ರಮಧರ್ಮಗಳಿಂದ ಚಿತ್ತಶುದ್ಧಿಯನ್ನು ಹೊಂದಿ, ಅನಂತರ ಶ್ರೀಸದ್ಗುರುಗಳ ಮೂಲಕವಾಗಿ ವೇದಾಂತಗಳ ಶ್ರವಣಮನನನಿದಿಧ್ಯಾಸನಗಳ ಪರಿಪಾಕದಿಂದ, ಮೋಕ್ಷಸಾಧನವಾದ ಈ ಆತ್ಮತತ್ತ್ವಜ್ಞಾನವು ಲಭಿಸುವುದೆಂಬುದು ವೇದಾಂತಪ್ರಮಾಣರಾಜಮಾರ್ಗವಾಗಿದೆ. ಅನಾದಿವೇದಶಾಸ್ತ್ರಪ್ರಮಾಣಸಿದ್ಧವಾಗಿರುವ ಈ ವಿಷಯವನ್ನು ಅಬಾಧಿತವಾಗಿ ಪ್ರತಿಪಾದಿಸಿಕೊಟ್ಟು, ವೈದಿಕವರ್ಣಾಶ್ರಮಧರ್ಮಸಂಸ್ಥಾಪನೆಯು ಶ್ರೀಭಗವದವತಾರದ ಮಹತ್ಕಾರ್ಯವನ್ನು ಶ್ರೀಭಗವತ್ಪಾದರವರು ಪೂರ್ಣವಾಗಿ ನೆರವೇರಿಸಿ ಜಗದೇಕಗುರುಸಾರ್ವಭೌಮರಾಗಿ ಜಯಶೀಲರಾಗಿರುವರು!

ಇತರ ಮತದವರೆಲ್ಲರೂ ಪ್ರಾಯಃ ಭಕ್ತಿಮಾರ್ಗಾವಲಂಬಿಗಳೇ ಆಗಿರುತ್ತಾರೆ. ಈ ಭಕ್ತಿಮಾರ್ಗದಲ್ಲಿ ವೈದಿಕವರ್ಣಾಶ್ರಮಧರ್ಮನಿಯಮಗಳಿಗೆ ಹೆಚ್ಚಿನ ಪ್ರಾಶಸ್ತ್ಯವೇ ಇರುವುದಿಲ್ಲ. ಮಾಯಾಪ್ರಕೃತಿಯ ಸತ್ತ್ವರಜಸ್ತಮೋಗುಣಗಳ ಪ್ರಾಧಾನ್ಯದಿಂದಾಗಿರುವ ಗುಣಮೂರ್ತಿಗಳಲ್ಲಿಯೇ ಒಂದಾದ ಶಿವವಿಷ್ಣುಶಕ್ತಿ– ಮುಂತಾದುದನ್ನೇ, ಪರತತ್ತ್ವವೆಂದು ಇವರುಗಳು ನಂಬುತ್ತಾರೆ– ತ್ರಿಮೂರ್ತ್ಯತೀತವಾದ ನಿರ್ಗುಣಪರತತ್ತ್ವದ ತಿಳಿವೇ ಇವರಿಗಿರುವುದಿಲ್ಲ. ಆದರೆ, ನಿರ್ಗುಣಪರತತ್ತ್ವವಿರುವುದು ಪ್ರಮಾಣಸಿದ್ಧವಿದೆ.

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ।
ಗುರುಃ ಸಾಕ್ಷಾತ್ಪರಂ ಬ್ರಹ್ಮ ತಸ್ಮೈ ಶ್ರೀಗುರುವೇ ನಮಃ ।

ಇಲ್ಲಿ– ಬ್ರಹ್ಮವಿಷ್ಣುಮಹೇಶ್ವರರೆಂಬ ಮೂವರು ಗುಣಮೂರ್ತಿಗಳಿಗೆ ಬೇರೆಯಾಗಿ ನಿರ್ಗುಣಪರಬ್ರಹ್ಮವಿರುವುದು ಸ್ಪಷ್ಟವಿದೆ.

ಸತ್ತ್ವಂ ರಜಸ್ತಮ ಇತಿಪ್ರಕೃತೇರ್ಗುಣಾಸ್ತೈಃ–
ರ್ಯುಕ್ತಃ ಪರಃ ಪುರುಷ ಏಕ ಇಹಾಸ್ಯ ಧತ್ತೇ ।
ಸ್ಥಿತ್ಯಾದಯೇ ಹರಿವಿರಿಂಚಿಹರೇತಿ ಸಂಜ್ಞಾಃ–

ಶ್ರೀವಿಷ್ಣುಭಾಗವತದ ಈ ಮಾತಿನಲ್ಲಿ– ಪ್ರಕೃತಿಯ ಸತ್ತ್ವರಜಸ್ತಮೋಗುಣಗಳಿಂದ ಜಗತ್ತಿನ ಸ್ಥಿತ್ಯಾದಿಗಳಿಗಾಗಿ, ಹರಿ–ವಿರಿಂಚಿ–ಹರ–ಎಂಬ ಸಂಜ್ಞೆಗಳನ್ನು ಹೊಂದುವ ಪರಪುರುಷನು, ಈ ತ್ರಿಮೂರ್ತಿಗಳಿಗೆ ಬೇರೆಯಾಗಿ ನಿರ್ಗುಣಸ್ವರೂಪನೆಂದು-ವಿಶದವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಬ್ರಹ್ಮೇಶಾನಾಚುತೇಶಾಯ'– ಎಂಬ ಆದಿತ್ಯಹೃದಯದ ವಚನದಲ್ಲಿ–ಆದಿತ್ಯ ರೂಪನೆಂದು ಹೇಳಿರುವ ಪರಮಾತ್ಮನು, ಬ್ರಹ್ಮ–ಈಶಾನ–ಅಚ್ಯುತ–ರಿಗೆ ಮೇಲಾಗಿರುವ ನಿರ್ಗುಣತತ್ತ್ವವೆಂದು ವ್ಯಕ್ತವಾಗಿದೆ.

ನಮಃ ಸವಿತ್ರೇ ಜಗದೇಕಚಕ್ಷುಷೇ ಜಗತ್ಪ್ರಸೂತಿಸ್ಥಿತಿನಾಶಹೇತವೇ ।
ತ್ರಯೀಮಯಾಯ ತ್ರಿಗುಣಾತ್ಮಧಾರಿಣೇ ವಿರಿಂಚಿನಾರಾಯಣಶಂಕ–ರಾತ್ಮನೇ॥–

ಇಲ್ಲಿಯೂ ಜಗತ್ತಿನ ಪ್ರಸೂತಿಸ್ಥಿತಿನಾಶಗಳಿಗೆ ಕಾರಣರಾಗಿರುವ ತ್ರಿಗುಣಾತ್ಮರಾದ ವಿರಿಂಚಿನಾರಾಯಣಶಂಕರಸ್ವರೂಪನಾದ ಸವಿತೃವು, ಇವರಿಗೆ ಬೇರೆಯಾದ ನಿರ್ಗುಣ-ಸ್ವರೂಪನೆಂದು ವ್ಯಕ್ತವಿದೆ.

ರಜೋಜುಷೇ ಜನ್ಮನಿ ಸತ್ತ್ವವೃತ್ತಯೇ ಸ್ಥಿತೌ ಪ್ರಜಾನಾಂ ಪ್ರಳಯೇ ತಮಸ್ಸ್ಪೃಶೇ ।
ಅಜಾಯ ಜನ್ಮಸ್ಥಿತಿನಾಶಹೇತವೇ ತ್ರಯೀಮಯಾಯ ತ್ರಿಗುಣಾತ್ಮನೇ ನಮಃ॥ (ಬಾಣಕವಿಃ।)

ಎಂದು ಮಹಾಕವಿಗಳೂ ಇದನ್ನೇ ವರ್ಣಿಸುತ್ತಾರೆ.

ಮಾಯಾರೂಪಗಳಾಗಿರುವ ಸತ್ತ್ವರಜಸ್ತಮೋಗುಣಗಳಿಂದಾಗಿರುವ ಬ್ರಹ್ಮವಿಷ್ಣು-ರುದ್ರರು ವ್ಯಕ್ತಸ್ವರೂಪರು; ಈ ಗುಣರಹಿತವಾಗಿರುವ ನಿರ್ಗುಣಸ್ವರೂಪವು ಅವ್ಯಕ್ತ-ತತ್ತ್ವವು. ಇಂಥ ಅವ್ಯಕ್ತತತ್ತ್ವವು ಶ್ರೀಗೀತೆಯಲ್ಲಿಯೂ ಸ್ಪಷ್ಟವಾಗಿ ಪ್ರತಿಪಾದಿತವಾಗಿ-ರುವುದು–**"ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ।"**– ಎಂದು **"ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮಬುದ್ಧಯಃ।"**– ಎಂದು, ಅವ್ಯಕ್ತತತ್ತ್ವಸ್ವರೂಪವನ್ನು ಬಿಟ್ಟು ವ್ಯಕ್ತಸ್ವರೂಪವನ್ನು ತಿಳಿಯುವವರು ಅಬುದ್ಧಿ-ಗಳೆಂದು ನಿಂದಿತವಾಗಿರುವುದು. ಇಂಥ ವಚನಗಳನ್ನು ಹೇರಳವಾಗಿ ಉದಹರಿಸಬಹುದು.

'ನಿರ್ಗುಣ' ಶಬ್ದಕ್ಕೆ-'ಹೇಯಗುಣರಹಿತ'ವೆಂದು ಅರ್ಥಹೇಳುವುದು. ಗುಣಶಬ್ದದ ಅರ್ಥದ ಪರಿಜ್ಞಾನವಿಲ್ಲದ ದೋಷದ್ದೇ ಸರಿ; ಶಾಸ್ತ್ರದಲ್ಲಿ ಸತ್ತ್ವರಜಸ್ತಮೋಗುಣಗಳೇ ಗುಣಶಬ್ದದ ಅರ್ಥವಾಗಿದೆ. ಬ್ರಹ್ಮಶಬ್ದಕ್ಕೆ–'ಗುಣಪೂರ್ತಿ'ಯೆಂದೋ; 'ಅನಂತಕಲ್ಯಾಣ ಗುಣಗಣಪರಿಪೂರ್ಣ'ವೆಂದೋ ಅರ್ಥಹೇಳುವುದು, ದಯಾದಾಕ್ಷಿಣ್ಯ– ಮುಂತಾದ ಮಾಯಾಪ್ರಯುಕ್ತಗಳಾದ ಲೌಕಿಕಗುಣವಿಷಯವೇ ಆಗಿ, ಕೇವಲ ವ್ಯಾವಹಾರಿಕ ಸ್ಥಿತಿಯ ವರ್ಣನೆಯಾಗುವುದೇ ಹೊರತು, ತಾತ್ತ್ವಿಕಾರ್ಥವಾಗುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಕಲಶ್ರುತಿಸ್ಮೃತೀತಿಹಾಸಪುರಾಣಾಗಮಗಳಿಗೂ ಅದ್ವಿತೀಯಬ್ರಹ್ಮಾತ್ಮತಾತತ್ತ್ವದಲ್ಲಿಯೇ ಪರಮತಾತ್ಪರ್ಯವಾಗಿರುವುದು. ಹೀಗಿರುವಲ್ಲಿ, ಇವುಗಳಲ್ಲಿ ಸಾತ್ವಿಕರಾಜಸತಾಮಸಗಳೆಂಬ ಭೇಧವನ್ನು ಕಲ್ಪಿಸಿ, ಸಾತ್ವಿಕಗಳು ಮಾತ್ರವೇ ಪ್ರಮಾಣಗಳೆಂದು ಹೇಳುವುದು, ಅಲ್ಪತನವೇ ಸರಿ, ತಾಮಸಶೈವಾದಿಪುರಾಣಗಳಲ್ಲಿ ಪ್ರತಿಪಾದಿತಾದ್ವೈತ-ತತ್ತ್ವವು ಅಪ್ರಾಮಾಣಿಕವೆಂದು ಹೇಳಿದರೆ, ಸಾತ್ವಿಕಭಾಗವತಾದಿಪುರಾಣಾದಿಗಳಲ್ಲಿ ಪ್ರತಿಪಾದಿತವಾಗಿರುವ ಅದ್ವೈತತತ್ತ್ವವು ಪ್ರಾಮಾಣಿಕವಲ್ಲವೆ

ಸರ್ವವೇದಾಂತಸಿದ್ಧಾಂತಂ ಯತ್ ಬ್ರಹ್ಮಾತ್ಮೈಕತ್ವದರ್ಶನಂ ।
ಅದ್ವಿತೀಯಂ ಪರಂ ಬ್ರಹ್ಮ ಕೈವಲ್ಯೈಕಪ್ರಯೋಜನಂ॥– ಎಂಬ

ಇದು ಶ್ರೀವಿಷ್ಣುಭಾಗವತದ ಪಾರಮಾರ್ಥಿಕತಾತ್ಪರ್ಯಪ್ರತಿಪಾದಕವಾದ ಮಾತು ಹೆಚ್ಚು ಹೇಳಿ ಪ್ರಯೋಜನವೇನು? ನಿಷ್ಪಕ್ಷಪಾತಜಿಜ್ಞಾಸುಗಳಿಗೆ ಒಂದು ವಿಷಯವನ್ನು ತಿಳಿಸಿ, ಪ್ರಕೃತ ವಿಷಯವನ್ನು ಮುಕ್ತಾಯಗೊಳಿಸುತ್ತೇವೆ–

ಶ್ರೀವಾಯುಪುರಾಣದಲ್ಲಿ ಶ್ರೀಭಗವದ್ವ್ಯಾಸಮಹರ್ಷಿಗಳು ಎಲ್ಲ ಪುರಾಣಾದಿಗಳ-ಲ್ಲಿಯೂ ತಾವು ಪ್ರತಿಪಾದಿಸಿರುವ ಶಾಸ್ತ್ರಾರ್ಥವನ್ನು ಕಡೆಯಲ್ಲಿ ೧೦೪ ನೆ ಅಧ್ಯಾಯದಲ್ಲಿ ಹೀಗೆ ಸಂಗ್ರಹಿಸಿದ್ದಾರೆ–

ವರ್ಣಾಶ್ರಮವತಾಂ ಧರ್ಮೋ ಮಯಾ ಸಮ್ಯಗುದಾಹೃತಃ ।
ಮುಕ್ತಿಮಾರ್ಗಾ ಬಹುವಿಧಾ ಉಕ್ತಾ ವೇದಾವಿರೋಧತಃ ॥೨೧॥

ಜೀವೇಶ್ವರಬ್ರಹ್ಮಭೇದೋ ನಿರಸ್ತಃ ಸೂತ್ರನಿರ್ಣಯೇ ।
ನಿರೂಪಿತಂ ಪರಂ ಬ್ರಹ್ಮ ಶ್ರುತಿಯುಕ್ತಿವಿಚಾರತಃ ॥೨೨॥

ತದ್ಬ್ರಹ್ಮ ಪರಮಂ ಶುದ್ಧಮನಾದ್ಯಂತಮನಾಮಯಂ ।
ನಿತ್ಯಂ ಸರ್ವಗತಂ ಸ್ಥಾಣು ಕೂಟಸ್ಥಂ ಕೂಟವರ್ಜಿತಂ ॥೨೮॥

ಅಧ್ಯಸ್ತಂ ಸರ್ಪವದ್ಯತ್ರ ವಿಶ್ವಮೇತತ್ಪ್ರಕಾಶತೇ ।
ವಿಶ್ವಸ್ಮಿನ್ನಪಿ ಚಾನ್ವೇತಿ ನಿರ್ವಿಕಾರಂ ಚ ರಜ್ಜುವತ್ ॥೩೦॥

ಸರ್ವಂ ಬ್ರಹ್ಮೈವ ನಾನಾತ್ವಂ ನಾಸ್ತೀತಿ ನಿಗಮಾ ಜಗುಃ ॥೩೩॥

ಯಸ್ಮಿನ್ನಿದಂ ಯತಶ್ಚೇದಂ ಯೇನೇದಂ ಯದಿದಂ ಸ್ಮೃತಂ ।
ಯದಜ್ಞಾನಾಜ್ಜಗದ್ಭಾತಿ ಯಸ್ಮಿನ್ ಜ್ಞಾತೇ ಜಗನ್ನ ಹಿ ॥೩೪॥

Sri Vidyabharathi Book Centre, Sringeri

CC-O. In Public Domain. Digitized by eGangotri

ರಜ್ಜ್ವಾವಹಿರ್ಮೃತಾ ವಾದಿ ನೀಲಿಮಾ ಗಗನೇ ಯಥಾ ।
ಅಸದ್ವಿಶ್ವಮಿದಂ ಭಾತಿ ಯಸ್ಮಿನ್ನಜ್ಞಾನಕಲ್ಪಿತಂ ॥೩೫॥

ಯದನವಚ್ಛಿನ್ನ ಏವಾಯಂ ಯಥಾಕಾಶೋ ವಿಭಿದ್ಯತೇ ।
ಕಾರ್ಯೋಪಾಧಿಪರಿಚ್ಛಿನ್ನಂ ತದ್ವದ್ಯಜ್ಜೀವಸಂಜ್ಞಕಂ ॥೩೬॥

ಮಯಯಾ ಚಿತ್ರಕಾರಿಣ್ಯಾ ವಿಚಿತ್ರಗುಣಶೀಲಯಾ ।
ಬ್ರಹ್ಮಾಂಡಂ ಚಿತ್ರಮತುಲಂ ಯಸ್ಮಿನ್ ಭಿನ್ನಮಿವಾರ್ಪಿತಂ ॥೩೭॥
ಇತ್ಯಾದಿ

ಶ್ರೀಭಗವತ್ಪಾದರವರು ಪರಮತನಿರಾಕರಣಪೂರ್ವಕವಾಗಿ ವಿಸ್ತಾರವಾಗಿ ಪ್ರತಿಪಾದಿಸಿರುವ ಪಾರಮಾರ್ಥಿಕತತ್ತ್ವಾರ್ಥವೇ ಇದು. ಆದುದರಿಂದ ಶ್ರೀಭಗವತ್ಪಾದರು ಪ್ರತಿಪಾದಿಸಿರುವ ತತ್ತ್ವಾರ್ಥವನ್ನೇ ಸಂಪ್ರದಾಯಜ್ಞರಾದ ಶ್ರೀಸದ್ಗುರುವರ್ಯರನ್ನು ಸೇವಿಸಿ ತಿಳಿದು, ತಕ್ಕ ಸಾಧನೆಗಳನ್ನು ಯಥಾವತ್ತಾಗಿ ಅನುಷ್ಠಿಸಿ, ಎಲ್ಲರೂ ಶ್ರೆಯೋವಂತರಾಗತಕ್ಕದ್ದೆಂದು ಸರ್ವಂ ಶುಭಂ॥

ಗಾಢಧ್ವಾಂತ ನಿಮಜ್ಜನಪ್ರಮುಷಿತಪ್ರಜ್ಞಾನನೇತ್ರಂ ಪರಂ
ನಷ್ಟಪ್ರಾಯಮುಪಾಸ್ತಸರ್ವಕರಣಂ ಶ್ವಾಸಾವಶೇಷಂ ಜನಂ ।
ದ್ರಾತ್ಕಾರುಣ್ಯವಶಾತ್ಪ್ರಬೋಧಯತಿಯೋ ಬೋಧಾಂಶುಭಿಃ ಪ್ರಾಂಶುಭಿಃ
ಸೋಽಯಂ ಶಂಕರದೇಶಿಕೇಂದ್ರಸವಿತಾಸ್ಮಾಕಂ ಪರಂ ದೈವತಂ ॥

ರಾತ್ರಿಯಲ್ಲಿ ದಟ್ಟವಾದ ಕತ್ತಲೆಯಲ್ಲಿ ಮುಳುಗಿ ನಿದ್ರಿತನಾಗಿ, ಹೊರಗಿನ ತಿಳಿವನ್ನೇ ಕಳೆದುಕೊಂಡು, ಇಂದ್ರಿಯ ವ್ಯಾಪಾರಗಳನ್ನೆಲ್ಲ ತೊರೆದು, ಉಸಿರು ಮಾತ್ರ ಇರುವವನಾಗಿ, ನಷ್ಟಪ್ರಾಯನೇ ಆಗಿರುವ ಜನವನ್ನು ಪೂರ್ವದಿಕ್ಕಿನಲ್ಲಿ ಉದಯಿಸಿ, ತನ್ನ ನೀಳಗಳಾದ ಕಿರಣಗಳಿಂದ ಜನಕ್ಕೆ ದಯೆಯಿಂದ ಎಚ್ಚರಗೊಳಿಸುದ ಶ್ರೀಸೂರ್ಯನಾರಾಯಣ ದೇವನಂತೆ;

ಅನಾದಿಕಾಲದ ದೃಢವಾದ ಅಜ್ಞಾನಾಂಧಕಾರದಲ್ಲಿ ಮುಳುಗಿ, ಶ್ರೆಯೋಜ್ಞಾನವನ್ನೇ ಕಳೆದುಕೊಂಡು, ದುರಂತ ಸಂಸಾರಸಾಗರದಲ್ಲಿ ನಷ್ಟಪ್ರಾಯವಾಗಿರುವ ಲೋಕವನ್ನು ದಯೆಯಿಂದ, ಅನುಭವಗಮ್ಯವಾಗುವಂಥ ತಮ್ಮ ಉಪದೇಶಗಳಿಂದ, ತನ್ನ ನಿಜಸ್ವರೂಪದಲ್ಲಿ ಎಚ್ಚರಗೊಳಿಸುವ ಶ್ರೀಶಂಕರಭಗವತ್ಪಾದಸೂರ್ಯರೇ ನಮಗೆಲ್ಲ ಪರಾದೇವತೆಯಾಗಿ ಸೇವ್ಯರು.

ಶೃಂಗಗಿರಿ ಕವಿ ನರಸಿಂಹಶರ್ಮಾ,
"ಅದ್ವೈತಾಶ್ರಮಃ।"

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಓಂ ॥

ಶ್ರೀಪರಬ್ರಹ್ಮಣೇ ನಮಃ

ಶ್ರೀಗಣೇಶಾಯ ನಮಃ ಶ್ರೀಗುರುಭ್ಯೋ ನಮಃ । ಶ್ರೀಸರಸ್ವತ್ಯೈ ನಮಃ ।

ಸಂಕ್ಷಿಪ್ತಮಾಧವೀಯ—

ಶ್ರೀ ಶಂಕರ ವಿಜಯಃ

(ವಿವರಣಪೂರ್ವಕಾನುವಾದಸಹಿತಃ !)

ಶ್ರುತಿಸ್ಮೃತಿಪುರಾಣಾನಾಮಾಲಯಂ ಕರುಣಾಲಯಂ ।
ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಂ ॥ ॥೧॥

ಅನುವಾದ

"ಶ್ರುತಿಸ್ಮೃತಿಪುರಾಣಗಳಿಗೆ ತೌರುಮನೆಯಾಗಿ, ದಯಾಮಯರಾಗಿ, ಸಕಲ-ಲೋಕಗಳಿಗೂ ಸುಖವನ್ನು ಉಂಟುಮಾಡುವ ಶ್ರೀಮಚ್ಛಂಕರಭಗವತ್ಪಾದಾ-ಚಾರ್ಯವರ್ಯರನ್ನು ಭಕ್ತಿಶ್ರದ್ಧಾಪೂರ್ವಕವಾಗಿ ವಂದಿಸುತ್ತೇನೆ."

ವಿಶೇಷವಿಷಯ—

[ಮಾನಾಧೀನಾ ಮೇಯಸಿದ್ಧಿಃ।- ಎಂಬ ಪ್ರಮಾಣದಂತೆ"- ಯಾವ ವಿಷಯವೇ ಆದರೂ, ಅದನ್ನು ತಿಳಿಸಬಲ್ಲ ಪ್ರಮಾಣದಿಂದಲೇ ತಿಳಿಯಲಾಗುವುದು. ಅತೀಂದ್ರಿಯಗಳಾದ ಈಶ್ವರ ಲೋಕಾಂತರ, ಜನ್ಮಾಂತರ, ಧರ್ಮಾಧರ್ಮಗಳು-ಮುಂತಾದವಿಷಯಗಳಲ್ಲಿ, ಅಪೌರುಷೇಯಗಳಾಗಿರುವ ಶ್ರುತಿಸ್ಮೃತೀತಿಹಾಸಪುರಾಣಗಳೇ ಪರಮಪ್ರಮಾಣಗಳು- ಮೇಲಿನ **ಪುರಾಣಶಬ್ದವು ಇತಿಹಾಸಕ್ಕೂ** ಸೂಚಕವು. ಶ್ರೀಭಗವತ್ಪಾದರವರು ಈ ಪ್ರಮಾಣಗಳನ್ನೆಲ್ಲ ಯಥಾವತ್ತಾಗಿ ಬಲ್ಲವರಾಗಿದ್ದಾರೆ; ಶ್ರೇಯಸ್ಕರವಾದ ಈ ವಿಷಯಗಳನ್ನು ಲೋಕಕ್ಕೆ ಬೋಧಿಸಿ ಸುಖವನ್ನು ಉಂಟುಮಾಡುವ ದಯಾಮಯರಾಗಿರುವರು; ಇಂಥ ಮಹಾಮಹಿಮರ ಧ್ಯಾನಾರ್ಚನವಂದನಾದಿಗಳು ಸರ್ವರಿಗೂ ಇಹಪರಶ್ರೇಯೋಽಭ್ಯುದಯಗಳಿಗೆ ಅವಶ್ಯವು.]

ಅನುವಾದಕರ ಮಂಗಳಾಚರಣೆ

ದುಷ್ಪಾರಸಂಸಾರಸಮುದ್ರಮಗ್ನಂ
ತತ್ತಾರಣೋಪಾಯವಿಶೇಷಶೂನ್ಯಂ ।
ಜ್ಞಾನೋಡುಪೇನೋದ್ಧರತೀಹ ವಿಶ್ವಂ
ತಂ ದೇಶಿಕಾಧೀಶ್ವರಮಾಶ್ರಯೇಽಹಂ ॥೨॥

Sri Vidyabharathi Book Centre, Sringeri

CC-O. In Public Domain. Digitized by eGangotri

ದಾಟಿಹೋಗಲು ಅಶಕ್ಯವಾದ ಅಪಾರವಾದ, ಸಂಸಾರದುಃಖಸಮುದ್ರದಲ್ಲಿ ಮುಳುಗಿ, ಅದನ್ನು ದಾಟಿಹೋಗಲು ಅವಶ್ಯವಾಗಿರುವ ಉಪಾಯವಿಶೇಷವನ್ನು ತಿಳಿಯದೆ, ದುಃಖಿತವಾಗಿರುವ ಜಗತ್ತನ್ನು ಜ್ಞಾನವೆಂಬ ಹಡಗಿನಿಂದ ಉದ್ಧರಿಸುವ ಶ್ರೀಜಗದ್ಗುರುಸಾರ್ವಭೌಮರನ್ನು ಆಶ್ರಯಿಸುತ್ತೇನೆ.

[ಶಾಸ್ತ್ರೀಯವರ್ಣಾಶ್ರಮ ಧರ್ಮಾಧರ್ಮ ಕರ್ಮಗಳಿಗೆ ವಶರಾಗಿ, ನಿರಂತರವೂ ಇಹಪರಗಳಲ್ಲಿ ಜನ್ಮಮರಣಪರಂಪರೆಯ ಮೂಲಕವಾಗಿ ಸುಖ-ಗಳನ್ನು ಅನುಭವಿಸುತ್ತಿರುವಿಕೆಯು ಸಂಸಾರವು ಅನಾದ್ಯನಂತವಾಗಿರುವ ಈ ಸಂಸಾರಕ್ಕೆ ಆತ್ಮತತ್ತ್ವಜ್ಞಾನವೇ ಪರಿಹಾರೋಪಾಯವು. ಈ ಸಂಸಾರಕ್ಕೆ ಅನಾದಿಯಾಗಿರುವ ಅಜ್ಞಾನವೇ ಮೂಲಕಾರಣವು. ಆತ್ಮತತ್ತ್ವಜ್ಞಾನದಿಂದಲೇ ಈ ಅಜ್ಞಾನವು ನಾಶವಾಗುವುದು. ಇಂಥ ತತ್ತ್ವಜ್ಞಾನವನ್ನು ಉಪದೇಶಿಸಿ, ಎಲ್ಲರನ್ನೂ ಸಂಸಾರಸಾಗರದಿಂದ ಉದ್ಧರಿಸುತ್ತಿರುವ ಶ್ರೀಸದ್ಗುರುವರ್ಯರೇ ಸರ್ವರಿಗೂ ಆಶ್ರಯರು.]

೧. ಉಪೋದ್ಘಾತಃ ।

ಮೂಲ ಪ್ರಣಮ್ಯ ಪರಮಾತ್ಮಾನಂ ಶ್ರೀವಿದ್ಯಾತೀರ್ಥರೂಪಿಣಂ ।
ಪ್ರಾಚೀನಶಂಕರಜಯೇ ಸಾರಃ ಸಂಗೃಹ್ಯತೇ ಮಯಾ ॥ ॥೩॥

ಶ್ರೀವಿದ್ಯಾತೀರ್ಥರರೂಪದ ಶ್ರೀಪರಮಾತ್ಮನನ್ನು ಸಾಷ್ಟಾಂಗಪ್ರಣಾಮ ಮಾಡಿ, ಪೂರ್ವಾಚಾರ್ಯರುಗಳ ಶ್ರೀಶಂಕರವಿಜಯಗ್ರಂಥಗಳ ಸಾರವು ನನ್ನಿಂದ ಸಂಗ್ರಹಿಸಲ್ಪಡುತ್ತದೆ.

ಏಕದಾ ದೇವತಾ ರೂಪ್ಯಾಚಲಸ್ಥಮುಪತಸ್ಥಿರೇ ।
ದೇವದೇವಂ ತುಷಾರಾಂಶುಮಿವ ಪೂರ್ವಾಚಲಸ್ಥಿತಂ ॥ ॥೪॥

ಕರ್ಮಭೂಮಿಯಾಗಿರುವ ಭರತಖಂಡದಲ್ಲಿ ವೈದಿಕಧರ್ಮವು ಶಿಥಿಲವಾಗಿದ್ದ ಒಂದು ಸಮಯದಲ್ಲಿ, ದೇವತೆಗಳು, ರಜತಗಿರಿಯಾದ ಕೈಲಾಸದ ಶಿಖರದಲ್ಲಿ ಬೆಳಗುತ್ತಿದ್ದ ದೇವದೇವನಾದ ಶ್ರೀಮಹಾದೇವನನ್ನು, ಪೂರ್ವದಿಕ್ಕಿನ ಉದಯ-ಪರ್ವತದ ಶಿಖರದಲ್ಲಿ ಉದಯಿಸುತ್ತಿರುವ ಶರತ್ಕಾಲದ ಪೂರ್ಣಿಮಾಚಂದ್ರನನ್ನು ಹೇಗೋ ಹಾಗೆ, ಸೇವಿಸಿ, ಸ್ತುತಿಸಿ ಪ್ರಾರ್ಥಿಸಿಕೊಂಡರು.

[ಜಗತ್ತಿನ ಸ್ಥಿತಿಗೆ ಕಾರಣನಾಗಿ ರಕ್ಷಕನಾಗಿರುವ ಶ್ರೀಮಹಾವಿಷ್ಣುವು ಕಾರಣಾಂತರದಿಂದ ಬೌದ್ಧಾವತಾರವನ್ನು ತಾಳಿ ನಾಸ್ತಿಕಮತವನ್ನು ಪ್ರಚಾರ ಮಾಡಿರಲಾಗಿ. ಆದರಿಂದ ವೈದಿಕಾಸ್ತಿಕಧರ್ಮಕ್ಕೆ ಹಾನಿಯುಂಟಾಗಿರಲು, ಉಪಾ-

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಂತರವನ್ನು ಕಾಣದೆ, ಧರ್ಮಹಾನಿಯಿಂದ ತಲ್ಲಣಿಸಿದ ದೇವತೆಗಳು, ಶ್ರೀಪರಮೇಶ್ವರನನ್ನು ಶರಣಹೋದರು, ಉದಯಗಿರಿಯ ಶಿಖರದ ಮೇಲೆ ರಂಜಿಸುವ ಚಂದ್ರನಂತೆ, ದೇವತೆ- ಗಳಿಗೆ ರಜತಗಿರಿಯಮೇಲೆ ವಿರಾಜಿಸುತ್ತಿದ್ದ ಶ್ರೀಪರಶಿವನು ಗೋಚರಿಸಿದನೆಂದುವರ್ಣಿಸಿದೆ. ವರ್ಣನಾಮಯವಾದ ಕಾವ್ಯವು ಚಾರಿತ್ರಿಕಾದಿತಾತ್ವಿಕವಿಷಯಗಳಲ್ಲಿಪ್ರಮಾಣಗಳಾಗಲಾರವೆಂದು ಕೆಲವರು ಶಂಕಿಸು- ವರು. "ಸ್ತ್ರೀಯರ ಕಚಕುಚಜಘನ- ವಿಲಾಸಾದಿಗಳ ವರ್ಣನೆಯೇ ಕಾವ್ಯ"-ವೆಂಬ ಪಾಮರರ ಅಭಿಪ್ರಾಯವು ಇದು. **'ಕಾವ್ಯಂ ವ್ಯವಹಾರವಿದೇ ಶಿವೇತರಕ್ಷತಯೇ'** ಎಂಬ ಆಲಂಕಾರಿಕರ ಅಭಿಮತದಂತೆ, ಇಹಪರಗಳಶ್ರೇಯೋಽಭ್ಯುದಯಗಳಿಗೆ ಅವಶ್ಯವಾಗಿರುವ ಸನ್ಮಾರ್ಗವನು ಸಂಕುಚಿತಾರಮತಿಗಳಿಗೂ ರಂಜನೆಯಾಗುವಂತೆ, ಮನೋಹರವಾಗಿ ವರ್ಣಿಸುವವಮಾತೇ ಕಾವ್ಯ"- ವೆಂಬುದು-ಯಥಾರ್ಥವು. ಉದಯಗಿರಿಯ ಶಿಖರದಲ್ಲಿ ಉದಯಿಸುವ ಪೂರ್ಣಚಂದ್ರನು, ಲೋಕವನ್ನು ಆವರಿಸಿರುವ ಅಂಧಕಾರವು ಹುಟ್ಟದಂತೆಯೇ ಮಾಡುವಂತೆ, ಶ್ರೀಪರಮೇಶ್ವರನು ಲೋಕಕ್ಕೆ ಹಾನಿಕರವಾಗಿರುವ ನಾಸ್ತಿಕಮತವನ್ನು ಪ್ರಚಾರವಾಗದಂತೆತಡೆದು, ಲೋಕವನ್ನು ಬೆಳಗಿಸುವ ಚಂದ್ರ-ನಂತೆ ಸನ್ಮಾರ್ಗವನ್ನು ಪ್ರಚಾರಮಾಡುವನು"- ಎಂಬ ತಾತ್ಪರ್ಯದ ಈ ವರ್ಣನೆಯು ವಿಶೇಷವಾಗಿ ಅನ್ವರ್ಥವೇ ಆಗಿರುತ್ತದೆ. **ಉಪಸ್ಥಾನವೆಂದರೆ ಸ್ತುತಿ]**

ವಿಜ್ಞಾಪ್ಯಮೇವ ಭಗವನ್ವಿದ್ಯತೇ ಯದ್ಧಿತಾಯ ನ।
ವ್ಯಾಪ್ತೇದಾನೀಂ ಪ್ರಭೋ ಧಾತ್ರೀ ರಾತ್ರಿಃ ಸಂತಮಸೈರಿವ ॥೪॥

ಪಾಖಂಡೈಃ ಶಾಸ್ತ್ರಸನ್ಮಾರ್ಗದೂಷಕೈರ್ನಾಸ್ತಿಕಾಧಮೈಃ
ವರ್ಣಾಶ್ರಮಸಮಾಚಾರಾನ್ ದ್ವಿಷಂತಿ ಬ್ರಹ್ಮವಿದ್ವಿಷಃ ॥೫॥

"ಸರ್ವಜ್ಞನೂ, ಸರ್ವಶಕ್ತನೂ, ಸರ್ವೇಶ್ವರನೂ, ಸರ್ವಹಿತಕಾರಿಯೂ ಆಗಿರುವ ಭಗವಂತನೆ, ನಮ್ಮ ಹಿತವನ್ನು ತಿಳಿದು, ತಾನೇ ಅದನ್ನು ಮಾಡುತ್ತಿರುವ ನಿನಗೆ, ವಿಜ್ಞಾಪಿಸಿಕೊಳ್ಳುವುದೇನಿದೆ? ಆದರೂ ಪ್ರಕೃತಸ್ಥಿತಿಯನ್ನು ವಿಜ್ಞಾಪಿಸಿ- ಕೊಳ್ಳುವುದು ನಮ್ಮ ಕರ್ತವ್ಯವಾಗಿರುವುದು. ಹೇ ಪ್ರಭೋ, ರಾತ್ರಿಯಲ್ಲಿ ಗಾಢಾಂಧಕಾರದಿಂದ ಹೇಗೋ ಹಾಗೆ. ಈಗ ಭೂಮಿಯು,

"ಶಾಸ್ತ್ರೀಯಸನ್ಮಾರ್ಗವನ್ನು ದೂಷಿಸುತ್ತಿರುವ ನಾಸ್ತಿಕಾಧಮರಾದ ಪಾಖಂಡಿಗಳಿಂದ ತುಂಬಿಹೋಗಿದೆ; ಬ್ರಹ್ಮದ್ವೇಷಿಗಳಾಗಿರುವ ಇವರುಗಳು, ಶ್ರೇಯಸ್ಕರವಾಗಿರುವ ವೈದಿಕಸನಾತನವರ್ಣಾಶ್ರಮಧರ್ಮವನ್ನು ದೂಷಿಸಿ ದ್ವೇಷಿಸುತ್ತಿರುವರು;

Sri Vidyabharathi Book Centre, Sringeri

CC-O. In Public Domain. Digitized by eGangotri

[ಪಾ- ಎಂದರೆ ಸರ್ವರಿಗೂ ರಕ್ಷಕವಾಗಿರುವ ಸಮ್ಯಗ್ಜ್ಞಾನವು; ಇದನ್ನು ಖಂಡಿಸುವ, ನಿರಾಕರಿಸುವ, ನಾಸ್ತಿಕರು, ಪಾಖಂಡಿಗಳು.

ಬ್ರಹ್ಮ- ಎಂದರೆ ಪರಮಾತ್ಮ; ಅವನಿಂದ ಲೋಕಕ್ಷೇಮಕ್ಕಾಗಿ ಪ್ರಚಾರವಾಗಿರುವ ವೇದಶಾಸ್ತ್ರ; ಇದನ್ನು ಶೌಚಾಚಾರಾದಿನಿಯಮಪೂರ್ವಕವಾಗಿ ಅನುಸರಿಸುವ ಬ್ರಾಹ್ಮಣರು- ಇವೆಲ್ಲವನ್ನೂ ದ್ವೇಷಿಸುವ ನಾಸ್ತಿಕರು- ಪಾಖಂಡಿಗಳು.]

ತದ್ಭವಾನ್ ಲೋಕರಕ್ಷಾರ್ಥಮುತ್ಸಾದ್ಯ ನಿಖಿಲಾನ್ ಖಲಾನ್ ।
ವರ್ತ್ಮ ಸ್ಥಾಪಯತು ಶ್ರೌತಂ ಜಗದ್ಯೇನ ಸುಖಂ ವ್ರಜೇತ್ ॥೬॥

"ಆದಕಾರಣ, ಲೋಕದ ರಕ್ಷಣೆಗಾಗಿ, ನಾಸ್ತಿಕರಾದ ಎಲ್ಲ ದುಷ್ಟರನ್ನೂ ನಾಶಮಾಡಿ, ಯಾವುದರಿಂದ ಜಗತ್ತು ಸುಖವನ್ನು ಹೊಂದುವುದೋ ಅಂಥ ಶ್ರೌತ ಸನ್ಮಾರ್ಗವನ್ನು ತಾವು ಸ್ಥಾಪಿಸೋಣವಾಗಬೇಕು"- ಎಂದು.

"ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"-ಎಂಬಂತೆ

ವೈದಿಕಸನ್ಮಾರ್ಗನಿರತರಾದ ಸಾಧುಗಳ ರಕ್ಷಣೆ, ವೈದಿಕವರ್ಣಾಶ್ರಮಧರ್ಮವಿರೋಧಿಗಳಾದ ದುಷ್ಕೃತಿಗಳ ನಾಶ- ಇದೇ ಜಗತ್ಕ್ಷೇಮಕರವಾದ ಧರ್ಮಸಂಸ್ಥಾಪನೆಯ ಮಹತ್ಕಾರ್ಯವು. ಈಗಿನ ಪ್ರಪಂಚವು ಎಲ್ಲೆಡೆಯಲ್ಲಿಯೂ ನೆಮ್ಮದಿಯಿಲ್ಲದೆ ಅಶಾಂತಿಯಿಂದ ತಲ್ಲಣಿಸುತ್ತಿರುವುದಕ್ಕೆ ಧರ್ಮದ ಹಾನಿಯೇ ಕಾರಣವೆಂಬುದನ್ನು ವಿಚಾರಕುಶಲರಾದ ನಾಗರಿಕರು ಇನ್ನೂ ತಿಳಿಯದೆ, ಈ ಧರ್ಮದ ಹಾನಿಗೆ ಹಾತೊರೆಯುತ್ತಿರುವುದು ಜಗತ್ತಿನ ದೌರ್ಭಾಗ್ಯವೇ ಸರಿ".]

ಇತ್ಯುಕ್ತ್ವೋಪರತಾನ್ ದೇವಾನುವಾಚ ಗಿರಿಜಾಪತಿಃ ।
ಮನೋರಥಂ ಪೂರಯಿಷ್ಯೇ ಮಾನುಷ್ಯಮವಲಂಬ್ಯ ವಃ ॥೭॥

ಚತುರ್ಭಿಃ ಸಹಿತಃ ಶಿಷ್ಯೈಶ್ಚತುರ್ಭಿರ್ಹರಿವದ್ಭುಜೈಃ ।
ಯತೀಂದ್ರಃ ಶಂಕರೋ ನಾಮ ಭವಿಷ್ಯಾಮಿ ಮಹೀತಲೇ ॥೮॥

ಹೀಗೆ ವಿಜ್ಞಾಪಿಸಿ ನಿಂತಿದ್ದ ದೇವತೆಗಳನ್ನು ಕುರಿತು, ಶ್ರೀಗಿರಿಜಾಪತಿಯಾದ ಆ ಶ್ರೀಪರಮೇಶ್ವರನು ಹೀಗೆ ಹೇಳಿದನು- "ಎಲೈ ದೇವತೆಗಳಿರಾ, ನಾನು ಮನುಷ್ಯಭಾವವನ್ನು ತಾಳಿ ನಿಮ್ಮ ಇಷ್ಟವನ್ನು ಪೂರೈಸುವೆನು;

"ಶ್ರೀಹರಿಯು ನಾಲ್ಕುಭುಜಗಳಿಂದ ಹೇಗೋ ಹಾಗೆ, ನಾಲ್ಕು ಜನ ಚತುರರಾದ ಶಿಷ್ಯರುಗಳಿಂದ ಸಹಿತನಾಗಿ, ಭೂಮಿಯಲ್ಲಿ ಶಂಕರನೆಂಬ ಹೆಸರಿನಿಂದ ಯತೀಂದ್ರನಾಗಿ ಬರುವೆನು"- ಎಂದು.

Sri Vidyabharathi Book Centre, Sringeri

CC-O. In Public Domain. Digitized by eGangotri

[ಗಿರಿ ಎಂದರೆ ಪರ್ವತದಂತೆ ಸ್ಥಿರವಾಗಿ, ಕೂಟಸ್ಥನಿತ್ಯವಾದ ಸಚ್ಚಿದಾನಂದ-ಘನಸ್ವರೂಪದ ನಿರ್ಗುಣನಿರ್ವಿಶೇಷಾಖಂಡಚಿನ್ಮಾತ್ರಪರಬ್ರಹ್ಮತತ್ತ್ವವು; ಇದರಲ್ಲಿ ಕಲ್ಪಿತವಾಗಿರುವ ಅನಾದಿಭಾವರೂಪಾಜ್ಞಾನವು **ಗಿರಿಜಾ**; ಇದರ ಮಾಯಾಶಕ್ತಿಗೆ ಅಧೀನನಾಗದೆ, ಮಾಯೋಪಹಿತಚೈತನ್ಯರೂಪನಾದ **ಶ್ರೀಪರಮೇಶ್ವರನು ಗಿರಿಜಾಪತಿಯು.** ಮಾಯಾಪ್ರಯುಕ್ತವಾದ ಸರ್ವಜ್ಞತ್ವ ಸರ್ವಶಕ್ತಿಮತ್ತ್ವ-ಸರ್ವೇಶ್ವರತ್ವ, ಸರ್ವನಿಯಾಮಕತ್ವಾದಿಗುಣಯುಕ್ತನಾದ ಶ್ರೀಪರಮೇಶ್ವರನು, ನಿಖಿಲಜಗತ್ತಿನ ಉತ್ಪತ್ತಿಸ್ಥಿತಿಲಯಗಳಿಗೆ ಅಭಿನ್ನನಿಮಿತ್ತೋಪಾದಾನಕಾರಣನಾಗಿ ಅದ್ವಿತೀಯಸ್ವರೂಪನಾಗಿರುವನು;

'ಮಾನುಷ್ಯೇ ಮನುಷ್ಯವಚ್ಚೇಷ್ಟಾ' ಎಂಬಂತೆ. ಮನುಷ್ಯರಿಗೆ ಸನ್ಮಾರ್ಗೋ-ಪದೇಶವನ್ನು ಮಾಡುವುದಕ್ಕಾಗಿ, ಅವರಂತೆಯೇ ವ್ಯವಹರಿಸಬೇಕಾಗುವುದು; ಆದ್ದರಿಂದಲೇ ಶ್ರೀಪರಮೇಶ್ವರನು ಮನುಷ್ಯನಾಗಿ ಅವತರಿಸಿದನು;

ದುಷ್ಟಶಿಕ್ಷಣಶಿಷ್ಟರಕ್ಷಣರೂಪವಾದ ಧರ್ಮಸಂಸ್ಥಾಪನಾಕಾರ್ಯಕ್ಕೆ, ಶ್ರೀಮಹಾವಿಷ್ಣುವಿಗೆ ಶಂಖಚಕ್ರಗದಾಪದ್ಮಧಾರಿಗಳಾದ ನಾಲ್ಕು ಭುಜಗಳಂತೆ. ಶ್ರೀಭಗವತ್ಪಾದರಿಗೆ ದುರ್ಮತನಿರಾಕರಣೆ ಸನ್ಮತಪ್ರತಿಷ್ಠಾಪನೆಗೆ ನಾಲ್ಕು ಜನ ಮುಖ್ಯಶಿಷ್ಯರು ನೆರವಾಗಿದ್ದರು.

ಬ್ರುವನ್ನೇವಂ ದಿವಿಷದಃ ಕಟಾಕ್ಷಾನನ್ಯದುರ್ಲಭಾನ್ ।
ಕುಮಾರೇ ನಿದಧೇ ಭಾನುಃ ಕಿರಣಾನಿವ ಪಂಕಜೇ ॥೯॥

ದೇವತೆಗಳನ್ನು ಕುರಿತು ಹೀಗೆ ಹೇಳುತ್ತಿದ್ದಂತೆಯೇ ಶ್ರೀಪರಶಿವನು ಇತರರಿಗೆ ದುರ್ಲಭವಾದ ವಾತ್ಸಲ್ಯಪೂರ್ಣವಾದ ತನ್ನ ಕಟಾಕ್ಷಗಳನ್ನು, ಸೂರ್ಯ-ದೇವನು ತನ್ನ ಕಿರಣಗಳನ್ನು ಕಮಲಗಳಲ್ಲಿ ಹೇಗೋ ಹಾಗೆ, ಶ್ರೀಕುಮಾರಸ್ವಾಮಿ-ಯಲ್ಲಿ ಇಟ್ಟನು,

ಅವದನ್ನದನಂ ಸ್ಕಂದಮಮುಂದಂ ಚಂದ್ರಶೇಖರಃ ।
ಜೈಮಿನೀಯನಯಾಂಭೋಧೇಃ ಶರತ್ಪರ್ವಶಶೀ ಭವ ॥೧೦॥

ಬ್ರಹ್ಮಾಪಿ ತೇ ಸಹಾಯಾರ್ಥಂ ಮಂಡನೋ ನಾಮ ಭೂಸುರಃ ।
ಭವಿಷ್ಯತಿ ಮಹೇಂದ್ರೋಽಪಿ ಸುಧನ್ವಾ ನಾಮ ಭೂಮಿಪಃ ॥೧೧॥

ಶ್ರೀಪರಮೇಶ್ವರನು ತನ್ನ ಮಗನಾದ ಶ್ರೀಸ್ಕಂದಸ್ವಾಮಿಯನ್ನು ಕುರಿತು, ಎಲ್ಲರಿಗೂ ಕೇಳಿಸುವಂತೆಯೇ, ನುಡಿದನು– " ಅಪ್ಪ ಕುಮಾರ, ಜೈಮಿನಿಮಹರ್ಷಿ-ಯಿಂದ ಪ್ರಚಾರಿತವಾಗಿರುವ ಪೂರ್ವಮೀಮಾಂಸಾಶಾಸ್ತ್ರವೆಂಬ ಸಮುದ್ರಕ್ಕೆ ಶರತ್ಕಾಲದ ಪೂರ್ಣಿಮಾಚಂದ್ರನಾಗು;

Sri Vidyabharathi Book Centre, Sringeri

CC-O. In Public Domain. Digitized by eGangotri

ವೈದಿಕಕರ್ಮಕಾಂಡದ ಈ ಉದ್ಧಾರಕಾರ್ಯದಲ್ಲಿ ನಿನಗೆ ಸಹಾಯಕನಾಗಿ ಬ್ರಹ್ಮದೇವನು **ಮಂಡನನೆಂಬ** ಬ್ರಾಹ್ಮಣೋತ್ತಮನಾಗಿಯೂ, ಮಹೇಂದ್ರನು **ಸುಧನ್ವನೆಂಬ** ರಾಜನಾಗಿಯೂ ಭೂಮಿಯಲ್ಲಿ ಅವತರಿಸಿಬರುವರು"– ಎಂದು.

[ವೇದಶಾಸ್ತ್ರವು ಕರ್ಮಕಾಂಡವೆಂದೂ ಜ್ಞಾನಕಾಂಡವೆಂದೂ ಎರಡು ಭಾಗ-ವಾಗಿದೆ. "**ದ್ವೇ ವಿದ್ಯೇ ವೇದಿತವ್ಯೇ ಪರಾ ಚೈವಾಪರಾ ಚ** ।–ತಿಳಿಯಬೇಕಾದ್ದು ಪರಾಪರಾರೂಪಗಳಾಗಿರುವ ಎರಡುವಿದ್ಯೆಗಳೇ"–ಎಂದು ಶ್ರುತಿಯೇ ತಿಳಿಸುತ್ತದೆ:

ಶ್ರೀಗೀತೆಯೂ ಸಹ– '**ದ್ವೇ ನಿಷ್ಠೇ ಮಯಾ ಪ್ರೋಕ್ತೇ– ಜ್ಞಾನಯೋಗೇನ ಸಾಂಖ್ಯಾನಾಂ, ಕರ್ಮಯೋಗೇನ ಯೋಗಿನಾಂ**।' – ಎಂದು ಜ್ಞಾನಯೋಗ ಮತ್ತು ಕರ್ಮಯೋಗವೆಂದು ಎರಡೇ ಶ್ರೇಯಃಸಾಧನೆಗಳನ್ನು ಉಪದೇಶಿಸಿರುತ್ತೆ. ಭಕ್ತಿಮಾರ್ಗವೆಂಬ ಬೇರೊಂದು ಸಾಧನವು ಯಾವುದೂ ಪ್ರಾಮಾಣಿಕವಾಗಿರು-ವುದಿಲ್ಲ; ಭಕ್ತಿಶ್ರದ್ಧಾಪೂರ್ವಕವಾಗಿಯೇ ಕರ್ಮನಿಷ್ಠೆಯನ್ನೂ ಜ್ಞಾನನಿಷ್ಠೆಯನ್ನೂ ಸಾಧಿಸತಕ್ಕದ್ದಾಗಿದೆ.

ಶ್ರೀವೇದವ್ಯಾಸಮಹರ್ಷಿಗಳು ತಮ್ಮ ಶಿಷ್ಯರಾದ **ಶ್ರೀಜೈಮಿನಿಮುನಿ**ಗಳಿಂದ ಪೂರ್ವಮೀಮಾಂಸಾರೂಪವಾದ ವೈದಿಕಕರ್ಮಕಾಂಡದ **ಅರ್ಥ**ವನ್ನು ಪ್ರಚಾರಮಾಡಿಸಿದರು. ಉತ್ತರಮೀಮಾಂಸಾರೂಪವಾದ ವೈದಿಕಜ್ಞಾನಕಾಂಡದ ಅರ್ಥವನ್ನು **ಶ್ರೀಬ್ರಹ್ಮಸೂತ್ರಗಳ** ಮೂಲಕವಾಗಿ ತಾವೇ ಪ್ರಚಾರಮಾಡಿರು-ತ್ತಾರೆ.'**ಅಥಾತೋ ಧರ್ಮಜಿಜ್ಞಾಸಾ**' ಎಂದು ಮೊದಲಾಗಿರುವ ೧೨ ಅಧ್ಯಾಯಗಳ ಪೂರ್ವಮೀಮಾಂಸಾಶಾಸ್ತ್ರಕ್ಕೆ ಶ್ರೀಶಬರಸ್ವಾಮಿಗಳು ಅಮೋಘವಾದ ಭಾಷ್ಯವನ್ನು ರಚಿಸಿರುವರು. ಶ್ರೀಸ್ಕಂದಾವತಾರರಾದ ಶ್ರೀಕುಮಾರಿಲಭಟ್ಟಪಾದರು ಈ ಭಾಷಾಸಮುದ್ರಕ್ಕೆ ಪೂ[illegible]ರಾಗಿದ್ದಾರೆ. ಜೈಮಿನೀಯಪೂರ್ವಮೀಮಾಂಸಾಶಾಸ್ತ್ರವು ಪಾಪಭೂಯಿಷ್ಠರಿಗೆ ತಾಮಸಶಾಸ್ತ್ರವಾಗಿರುವುದು, ಇವರ ಅವೈದಿಕತ್ವಕ್ಕೆ ಸಾಕ್ಷಿಯಾಗಿದೆ!

ಲೋಕದಲ್ಲಿ ಯಾವಕಾರ್ಯಕ್ಕೂ ಸಹಕಾರಬೇಕಾಗಿರುವುದು. ಶ್ರೀಕುಮಾರಿಲಭಟ್ಟಪಾದರ ಕರ್ಮಕಾಂಡದ ಪ್ರಚಾರಕ್ಕೆ ಸಹಾಯಕರನ್ನಾಗಿ ಶ್ರೀಪರಮೇಶ್ವರನು ತನ್ನ ಪ್ರಥಮಶಿಷ್ಯನಾದ ಶ್ರೀಬ್ರಹ್ಮದೇವನನ್ನು ಕಳುಹಿಸಿದನು.

ಮತ್ತು '**ಹತಂ ಜ್ಞಾನಂ ಕ್ರಿಯಾಹೀನಂ ಹತಾ ಜ್ಞಾನಂ ವಿನಾ ಕ್ರಿಯಾ**।' ಕಾರ್ಯಕ್ಕೆ ಬರದ ಜ್ಞಾನವೂ. ಜ್ಞಾನದ ಬೆಂಬಲವಿಲ್ಲದ ಕ್ರಿಯೆಯೂ ವ್ಯರ್ಥವೂ "ಅನರ್ಥಕರವೂ ಆಗುವುದು; ಜ್ಞಾನಕ್ರಿಯಾಶಕ್ತಿಗಳೆರಡೂ ಐಕಮತ್ಯದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರವರ್ತಿಸುವುದು, ಕಾರ್ಯಸಿದ್ಧಿಗೆ ಅವಶ್ಯವಾಗುವುದು. ಇದಕ್ಕಾಗಿಯೇ, ಕ್ರಿಯಾಶಕ್ತಿಸಂಪನ್ನನಾದ ದೇವರಾಜನಾದ ಮಹೇಂದ್ರನ ಸಹಾಯವನ್ನೂ ಶ್ರೀಪರಮೇಶ್ವರನು ಒದಗಿಸಿಕೊಟ್ಟನು. ಜ್ಞಾನಕಾಂಡದ ತನ್ನ ಕಾರ್ಯದಲ್ಲಿಯೂ ಇವರೀರ್ವರ ನೆರವೂ ಮಹತ್ತರದ್ದೇ ಆಗಿದೆ.]

೨. ವೈದಿಕಮತಪ್ರಸಾರ-ಬೌದ್ಧಮತತಿರಸ್ಕಾರ

ಮುಂದೇನಾಯಿತೆಂಬುದನ್ನು ತಿಳಿಸುತ್ತಾರೆ—

ಅಥೇಂದ್ರೋ ನೃಪತಿರ್ಭೂತ್ವಾ ಪ್ರಜಾ ಧರ್ಮೇಣ ಪಾಲಯನ್ ।
ಪ್ರತೀಕ್ಷಮಾಣಃ ಕ್ರೌಂಚಾರಿಂ ಮೇಲಯಾಮಾಸ ಸೌಗತಾನ್ ॥೧೨॥

ಅನಂತರ ದೇವರಾಜನಾದ ಇಂದ್ರನು ಸುಧನ್ವನೆಂಬ ರಾಜನಾಗಿ ಅವತರಿಸಿ, ಪ್ರಜೆಗಳನ್ನು ಧರ್ಮದಿಂದ ರಕ್ಷಿಸುತ್ತ, ಕ್ರೌಂಚಪರ್ವತವನ್ನು ಸೀಳಿ ಕ್ರೌಂಚಾರಿಯೆಂದು ಪ್ರಸಿದ್ಧನಾಗಿದ್ದ ಶ್ರೀಕುಮಾರಿಲಸ್ವಾಮಿಯು ಅವತರಿಸಿಬರುವುದನ್ನು ನಿರೀಕ್ಷಿಸುತ್ತ- - ಅವರ ಕಾರ್ಯಕ್ಕೆ ಸಹಕಾರಿಯಾಗಿ, ಬೌದ್ಧರಿಗೆ ಆಶ್ರಯವನ್ನು ಕೊಟ್ಟು, ತನ್ನ ರಾಜಧಾನಿಯಲ್ಲಿ ಅವರನ್ನೆಲ್ಲ ಒಂದುಕಡೆ ಸೇರಿಸಿಕೊಂಡನು.

ತತಃ ಸ ತಾರಕಾರಾತಿಃ ಸ್ಫುಟಯನ್ ವೈದಿಕಾಶಯಂ ।
ರಾಜ್ಞಃ ಸುಧನ್ವನಃ ಪ್ರಾಪ ನಗರೀಂ ಸ ಜಯನ್ ದಿಶಃ ॥ ॥೧೩॥

ಅಷ್ಟರಲ್ಲಿ, ತಾರಕಾಸುರನ ಸಂಹಾರಕ್ಕಾಗಿಯೇ ದೇವಸೇನಾಪತಿಯಾಗಿ ಅವತರಿಸಿದ್ದ, ಶ್ರೀಪರಮೇಶ್ವರನ ಪುತ್ರನಾದ ಶ್ರೀಷಣ್ಮುಖಸ್ವಾಮಿಯು, ಶ್ರೀಕುಮಾರಿಲಭಟ್ಟಪಾದರಾಗಿ ಅವತರಿಸಿಬಂದು, ಪೂರ್ವಮೀಮಾಂಸಾಶಾಸ್ತ್ರದ ಮೇಲಿನ ಶ್ರೀಶಾಬರಭಾಷ್ಯಕ್ಕೆ ಅಸದೃಶವೂ ಅಮೋಘವೂ ಆದ ವಾರ್ತಿಕವನ್ನು ವಿರಚಿಸಿ, ಅಪೌರುಷೇಯವಾಗಿ ನಿರ್ದುಷ್ಟಪ್ರಮಾಣವಾಗಿರುವ ವೇದಾರ್ಥವನ್ನು ಪ್ರಚಾರಮಾಡುತ್ತ, ಅವೈದಿಕಮತಗಳನ್ನೆಲ್ಲ ಅಪ್ರಮಾಣಗಳೆಂದು ನಿರಾಕರಿಸುತ್ತ, ಎಲ್ಲೆಡೆಯಲ್ಲಿಯೂ ದಿಗ್ವಿಜಯಶಾಲಿಗಳಾಗಿ, ಕ್ರಮೇಣ ಸುಧನ್ವರಾಜನ ರಾಜಧಾನಿಗೆ ಬಂದರು.

ಸೋಽಭಿನಂದ್ಯಾಶಿಷಾ ಭೂಪಮಾಸೀನಃ ಕಾಂಚನಾಸನೇ ।
ಶ್ರುತಕೋಕಿಲಸಂರಾವವ್ಯಾಜಾದ್ರಾಜಾನಮಬ್ರವೀತ್ ॥ ॥೧೪॥

ರಾಜನ ಸಭೆಯನ್ನು ಪ್ರವೇಶಿಸಿ. ರಾಜನನ್ನು ಆಶೀರ್ವಾದಗಳಿಂದ ಸಂತೋಷಗೊಳಿಸಿ, ಗೌರವಪುರಃಸರವಾಗಿ ರಾಜನು ನೀಡಿದ ಸುವರ್ಣಾಸನವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲಂಕರಿಸಿದರು. ಅದೇ ಸಮಯದಲ್ಲಿ, ರಾಜಸಭೆಯ ಪಕ್ಕದ ಉದ್ಯಾನವನದಲ್ಲಿ ಮಧುರವಾಗಿ ಧ್ವನಿಗೈದ ಕೋಗಿಲೆಯ ಧ್ವನಿಯನ್ನು ನೆಪಮಾಡಿಕೊಂಡು, ಶ್ರೀಭಟ್ಟಪಾದರು ರಾಜನನ್ನು ಕುರಿತು ಹೀಗೆ ಹೇಳಿದರು—

ಮಲಿನೈಶ್ಚೇನ್ನ ಸಂಗಸ್ತೇ ನೀಚೈಃ ಕಾಕಕುಲೈಃ ಪಿಕ ।
ಶ್ರುತಿದೂಷಕನಿರ್ಹ್ರಾದೈಃ ಶ್ಲಾಘನೀಯಸ್ತದಾ ಭವೇಃ ॥೧೫॥

"ಎಲೆ ಪಿಕ, ಕೋಗಿಲೆ, ಮಲಿನಗಳೂ, ನೀಚಗಳೂ, ಶ್ರುತಿದೂಷಣೆಯ ಶಬ್ದವೂ, ಆಗಿರುವ ಈ ಕಾಗೆಗಳ ಸಹವಾಸವು ನಿನಗೆ ಇಲ್ಲದಿದ್ದಿದ್ದರೆ, ಆಗ ನೀನು ಶ್ಲಾಘನೀಯನಾಗುತ್ತಿದ್ದೆ"–ಎಂದು.

[ಈ ಪದ್ಯದಲ್ಲಿ, ಕೋಗಿಲೆ ಮತ್ತು ಕಾಗೆಗಳ ನೆಪದಿಂದ, ರಾಜನ ಮತ್ತು ಇವನ ಸಭಿಕರಾಗಿದ್ದ ಬೌದ್ಧರ ತಾರತಮ್ಯವನ್ನು ವರ್ಣಿಸುತ್ತ, ಬೌದ್ಧರ ದೂಷಣೆಯು ಗರ್ಭಿತವಾಗಿದೆ. "ರಾಜನು ಕೋಗಿಲೆಯಂತೆ ಶ್ರುತಿಗೆ (ವೇದಕ್ಕೆ) ಹಿತವಾಗಿ ಮನೋಹರವಾದ ಮಾತನಾಡುವವನು; ಸದಾಚಾರಶೋಭಿತನು, ವರ್ಣಾ-ಶ್ರಮದ ಉತ್ತಮಕ್ಷತ್ರಿಯಜಾತಿಯವನು; ಈ ಬೌದ್ಧರು– 'ಕಾಕಾ'– ಎಂದು ಶ್ರುತಿಗೆ-ಕರ್ಣಕ್ಕೆ– ಕಠೋರವಾಗುವಂತ ಕೂಗುವ ಕಾಗೆಗಳಂತೆ, ಶ್ರುತಿ– ಎಂದರೆ ವೇದವನ್ನು- ನಿಂದಿಸುವ ಮಾತನ್ನಾಡತಕ್ಕವರು; ಕಾಗೆಗಳು ಮಲಿನ, ಎಂದರೆ ಕಪ್ಪುಬಣ್ಣದವಾಗಿರುವಂತೆ, ಬೌದ್ಧರು ಮಲಿನರು– ಎಂದರೆ ಶಾಸ್ತ್ರೀಯಸದಾಚಾರ-ಶೂನ್ಯರು– ಆಚಾರವಂತನೇ ಶುಚಿಯು; ಗುಂಪುಕಟ್ಟಿಕೊಂಡು ವಿಹರಿಸುವ ಕಾಗೆ-ಗಳಂತೆ, ಬೌದ್ಧರು ಸಂಘಚಾರಿಗಳು– **'ಸಂಘಂ ಶರಣಂ ಗಚ್ಛಾಮಿ'**- ಎಂಬುದೇ ಬೌದ್ಧರ ಮೊದಲದೀಕ್ಷೆ. ಇಂಥ ಕಾಗೆಗಳ ಸಹವಾಸವಿಲ್ಲದಿದ್ದರೆ ಕೋಗಿಲೆಯು ಹೇಗೋ ಹಾಗೆ, ಇಂಥ ಬೌದ್ಧರ ಸಹವಾಸವಿಲ್ಲದಿದ್ದಿದ್ದರೆ, ಎಲೈ ರಾಜ, ಶ್ಲಾಘ್ಯ-ನೆನಿಸುತ್ತಿದ್ದೆ"– ಎಂದು ತಾತ್ಪರ್ಯವು.]

ಷಡಭಿಜ್ಞಾ ನಿಶಮ್ಯೇಮಾಂ ವಾಚಂ ತಾತ್ಪರ್ಯಗರ್ಭಿತಾಂ ।
ನಿತರಾಂ ಚರಣಸ್ಪೃಷ್ಟಾ ಭುಜಂಗಾ ಇವ ಚುಕ್ರುಧುಃ ॥೧೬॥

ತಮ್ಮ ದೂಷಣೆಯ ತಾತ್ಪರ್ಯದಿಂದ ತುಂಬಿರುವ ಈ ಮಾತನ್ನು ಕೇಳಿ, ಕಾಲಿನಿಂದ ಒದೆಯಲ್ಪಟ್ಟ ಸರ್ಪದಂತೆ, ಬೌದ್ಧರು ಅತಿಯಾಗಿ ಕೋಪಗೊಂಡರು.

ಆಗ ಆ ಬೌದ್ಧಪಂಡಿತರು ತಮ್ಮ ಮತವನ್ನು ಸ್ಥಾಪಿಸಿಕೊಳ್ಳುವುದಕ್ಕೂ ವೈದಿಕಮತವನ್ನು ಖಂಡಿಸುವುದಕ್ಕೂ ಸಿದ್ಧರಾಗಿ, ಶ್ರೀಕುಮಾರಿಲಪಂಡಿತರೊಡನೆ ವಾದಮಾಡಲು ಉದ್ಯುಕ್ತರಾದರು. ಆದರೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅಥಃ ಪೇತುರ್ಬುಧೇಂದ್ರೇಣ ಕ್ಷತಾಃ ಪಕ್ಷೇಷು ತತ್ಕ್ಷಣಂ ।
ತರ್ಕಕರ್ಕಶವಜ್ರೇಣ ತಥಾಗತಧರಾಧರಾಃ ॥ ॥೧೭॥

ವಿದ್ವಚ್ಛ್ರೇಷ್ಠರಾದ ಶ್ರೀಕುಮಾರಿಲಭಟ್ಟಪಾದರೆಂಬ ದೇವೇಂದ್ರನಿಂದ, ಕಠಿಣಗಳಾದ ತರ್ಕಗಳೆಂಬ ವಜ್ರಾಯುಧದಿಂದ, ಮತಗಳೆಂಬ ಪಕ್ಷ(ರೆಕ್ಕೆ)ಗಳು ಕತ್ತರಿಸಲ್ಪಡಲಾಗಿ, ಅಕಂಪ್ಯರಾಗಿದ್ದ ಬೌದ್ಧರೆಂಬ ಪರ್ವತಗಳು ಕೆಳಕ್ಕೆ ಉರುಳಿಬಿದ್ದು ಹೋದುವು.

[ಹಿಂದೆ ಪರ್ವತಗಳಿಗೂ ಪಕ್ಷಿಗಳಂತೆ ರೆಕ್ಕೆಗಳಿದ್ದು, ಅಲ್ಲಲ್ಲಿ ಹಾರಾಡಲು ಆರಂಭಿಸಿದಾಗ, ಅವುಗಳ ಬೀಳುವಿಕೆಯ ಭಯದಿಂದ ಜನರು ದೇವೇಂದ್ರನಿಗೆ ಮೊರೆಯಿಡಲು, ದೇವೇಂದ್ರನು ತನ್ನ ತೀವ್ರವಾದ ವಜ್ರಾಯುಧದಿಂದ ಪರ್ವತಗಳ ರೆಕ್ಕೆಗಳನ್ನೆಲ್ಲ ಕತ್ತರಿಸಲಾಗಿ, ಅಲ್ಲಲ್ಲಿಯೇ ಅವು ಕೆಳಕ್ಕೆ ಬಿದ್ದುಹೋದುವು. ಪರ್ವತಗಳಂತೆ ಬೌದ್ಧರು ಇತರರಿಂದ ಖಂಡಿಸಲಾಗದಂಥ ಪಕ್ಷವಾದಗಳಿಂದ ದೃಢವಾಗಿದ್ದರು; ದೇವೇಂದ್ರನಂತೆ ಬುಧೇಂದ್ರರಾದ ಶ್ರೀಕುಮಾರಿಲರು, ವಜ್ರಾಯುಧದಂತೆ ದೃಢವಾಗಿರುವ, ನಿರಾಕರಿಸಲಶಕ್ಯಗಳಾದ, ಪ್ರಾಮಾಣಿಕತರ್ಕಗಳಿಂದ ಪರ್ವತಗಳ ಪಕ್ಷ(ರೆಕ್ಕೆ)ಗಳನ್ನು ಹೇಗೋಹಾಗೆ, ಅವರ ಪಕ್ಷ(ಮತಸಿದ್ಧಾಂತ)ಗಳನ್ನು ಕತ್ತರಿಸಲಾಗಿ, ಖಂಡಿಸಲಾಗಿ, ಪರ್ವತಗಳಂತೆ ಅಭೇದ್ಯರಾಗಿದ್ದ ಆ ಬೌದ್ಧರು ಕೆಳಕ್ಕುರುಳಿದರು–ಪರಾಜಿತರಾದರು–ಎಂದು ತಾತ್ಪರ್ಯವು. ಶ್ರೀಕುಮಾರಿಲರ ವಾರ್ತಿಕಗಳಲ್ಲಿ ಬೌದ್ಧಮತದ ನಿರಾಕರಣೆಯು ವಿಶದವಾಗಿದೆ]

ಇದರಿಂದ ದುಃಖಿತರಾಗಿದ್ದ ಬೌದ್ಧರ ಸಂಗಡವನ್ನು ಕಂಡು ಅಂತರಂಗದಲ್ಲಿ ಹರ್ಷಗೊಂಡವನಾದರೂ ಇದುವರೆಗೂ ಅವರಿಗೆ ಆಶ್ರಯವನ್ನು ನೀಡಿದ್ದ ರಾಜನು, ರಾಜನೀತಿಯಲ್ಲಿ ನಿಪುಣನಾಗಿದ್ದ ಅವನು ಬೌದ್ಧರ ಪಕ್ಷವನ್ನು ವಹಿಸಿಕೊಂಡವನಂತೆ, ಅವರಿಗೆ ಸಮಾಧಾನವಾಗುವ ಹಾಗೆಹೇಳಿದನು–

ಬಭಾಷೇಽಥ ಧರಾಧೀಶೋ ವಿದ್ಯಾಯತ್ತೌ ಜಯಾಜಯೌ ।
ಯಃ ಪತಿತ್ವಾ ಗಿರೇಃ ಶೃಂಗಾದವ್ಯಯಸ್ತನ್ಮತಂ ಶುಭಂ ॥ ॥೧೮॥

ಆಗ ರಾಜನು ಸಭೆಯಲ್ಲಿ ಹೀಗೆ ಹೇಳಿದನು–"ವಾದದಲ್ಲಿ ಜಯಾಪಜಯಗಳು ಪಾಂಡಿತ್ಯಕ್ಕೆ ಅಧೀನವಾಗುತ್ತವೆ–ಇದರಿಂದ ಸನ್ಮತವು ಯಾವುದೆಂಬುದು ನಿಶ್ಚಿತವಾಗುವುದಿಲ್ಲ. ವೈದಿಕ ಮತ್ತು ಬೌದ್ಧಪಕ್ಷದವರಲ್ಲಿ, ಈ ಪರ್ವತದ ಶಿಖರವನ್ನೇರಿ ಧುಮುಕಿ ಬಿದ್ದು ಯಾರು ಯಾವಹಾನಿಯನ್ನೂ ಹೊಂದದಿರುವರೋ, ಅವರ ಮತವನ್ನೇ ಶುಭವಾದ ಸನ್ಮತವೆಂದು ನಿರ್ಣಯಿಸುತ್ತೇನೆ"–ಎಂದು.

ಇದಕ್ಕೆ ಹೆದರಿ ಬೌದ್ಧರಲ್ಲಿ ಯಾರೂ ಮುಂದೆಬರದೆ ಇರಲು ;

ಯದಿ ವೇದಾಃ ಪ್ರಮಾಣಂ ಸ್ಯುರ್ಭೂಯಾತ್ಕಾಚಿನ್ನ ಮೇ ಕ್ಷತಿಃ ।
ಇತಿ ಘೋಷಯತಾ ತಸ್ಮಾನ್ನ್ಯಪಾತಿ ಸುಮಹಾತ್ಮನಾ ॥೧೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಆಕೂಡಲೆ–"ವೇದಗಳು ಪ್ರಮಾಣಗಳೇ ಆಗಿರುವುದರಿಂದ ನನಗೆ ಯಾವ ಹಾನಿಯೂ ಆಗುವುದಿಲ್ಲ"–ಎಂದು ಗಟ್ಟಿಯಾಗಿ ಉದ್ಘೋಷಿಸುತ್ತ, ಮಹಾತ್ಮರಾದ ಶ್ರೀಕುಮಾರಿಲರು ಪರ್ವತವನ್ನೇರಿ, ಅದರ ಎತ್ತರವಾದ ಶಿಖರದಿಂದ ಧುಮುಕಿದರು!

ಸೌಗತಾಸ್ತ್ವಬ್ರುವನ್ನೇದಂ ಪ್ರಮಾಣಂ ಮತನಿರ್ಣಯೇ ।
ಮಣಿಮಂತ್ರೌಷಧೈರೇವಂ ದೇಹರಕ್ಷಾ ಭವಿಷ್ಯತಿ ॥೨೦॥

ಇದನ್ನು ಕಂಡು ಬೌದ್ಧರು–"ಮತನಿರ್ಣಯದಲ್ಲಿ ಇದು ಪ್ರಮಾಣವಾಗುವುದಿಲ್ಲ; ಮಣಿ, ಮಂತ್ರ, ಔಷಧಿ–ಮುಂತಾದವುಗಳಿಂದಲೂ ಹೀಗೆ ದೇಹದ ರಕ್ಷಣೆಯು ಸಂಭಾವಿತವಾಗುತ್ತದೆ"–ಎಂದು ಆಕ್ಷೇಪಿಸಿದರು.

ದುರ್ಧಿಭೈರನ್ಯಥಾನೀತೇ ಪ್ರತ್ಯಕ್ಷೇಽರ್ಥೇಽಪಿ ಪಾರ್ಥಿವಃ ।
ಭ್ರುಕುಟೀಭೀಷಣಮುಖಃ ಸಂಧಾಮುಗ್ರತರಾಂ ವ್ಯಧಾತ್ ॥೨೧॥

ಹೀಗೆ ಪ್ರತ್ಯಕ್ಷಪರೀಕ್ಷೆಯಿಂದ ನಿಶ್ಚಿತವಾದ ಅರ್ಥವೂ ದುರ್ಬುದ್ಧಿಯ ಬೌದ್ಧರಿಂದ ಅಪ್ರಾಮಾಣಿಕವಾಗಿ ಮಾಡಲ್ಪಡಲಾಗಿ, ಅತಿಯಾಗಿ ಕೋಪಗೊಂಡ ರಾಜನು, ಹುಬ್ಬುಗಂಟಿಕ್ಕಿದ ಭಯಂಕರವಾದ ಮುಖವುಳ್ಳವನಾಗಿ, ಕ್ರೂರವಾದ ಪ್ರತಿಜ್ಞೆಯನ್ನು ಮಾಡಿದನು.

ಪೃಚ್ಛಾಮಿ ಭವತಃ ಕಿಂಚಿದ್ವಕ್ತುಂ ನ ಪ್ರಭವಂತಿ ಯೇ ।
ಯಂತ್ರೋಪಲೇಷು ತಾನ್ ಸರ್ವಾನ್ ಘಾತಯಿಷ್ಯಾಮ್ಯಸಂಶಯಂ ॥೨೨॥

"ಹಾಗಾದರೆ, ನಾನು ಈಗ ಒಂದು ಪರೀಕ್ಷೆಯನ್ನು ಇಡುತ್ತೇನೆ; ಅದಕ್ಕೆ ಸರಿಯಾದ ಉತ್ತರವನ್ನು ಹೇಳಲು ಯಾರು ಸಮರ್ಥರಾಗುವುದಿಲ್ಲವೋ, ಆ ಪಕ್ಷದವರೆಲ್ಲರನ್ನೂ ಕಲ್ಲಿನಯಂತ್ರಗಳಲ್ಲಿ ಅರೆಯಿಸಿ ನಾಶಪಡಿಸುತ್ತೇನೆ"–ಎಂದು.

ಇತಿ ಸಂಶ್ರುತ್ಯ ಗೋತ್ರೇಶೋ ಘಟಮಾಶೀವಿಷಾನ್ವಿತಂ ।
ಆನೀಯಾತ್ರ ಕಿಮಸ್ತೀತಿ ಪಪ್ರಚ್ಛ ದ್ವಿಜಸೌಗತಾನ್ ॥೨೩॥

ಹೀಗೆ ಸಭೆಯಲ್ಲಿ ಹೇಳಿ, ರಹಸ್ಯವಾಗಿ ಒಂದು ಗಡಿಗೆಯಲ್ಲಿ ಒಂದು ಸರ್ಪವನ್ನು ಹಿಡಿಸಿಟ್ಟು, ಅದನ್ನು ಸಭೆಗೆ ತರಿಸಿ,–"ಇದರಲ್ಲಿ ಏನಿದೆ?"–ಎಂದು ಬ್ರಾಹ್ಮಣರನ್ನೂ ಬೌದ್ಧರನ್ನೂ ಪ್ರಶ್ನೆಮಾಡಿದನು.

ಮಾರನೆಯ ದಿವಸ ಉತ್ತರವನ್ನು ಹೇಳುವುದಾಗಿ ರಾಜನಿಗೆ ತಿಳಿಸಿ, ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು. ಮಾರನೆಯ ದಿವಸ ಬಂದು,

Sri Vidyabharathi Book Centre, Sringeri

CC-O. In Public Domain. Digitized by eGangotri

ತತಸ್ತೇ ಸೌಗತಾಃ ಸರ್ವೇ ಭುಜಂಗೋಽಸ್ತೀತ್ಯವಾದಿಷುಃ ।
ಭೋಗೀಶಭೋಗಶಯನೋ ಭಗವಾನಿತಿ ಭೂಸುರಾಃ ॥೨೪॥

ಬೌದ್ಧರೆಲ್ಲರೂ–"ಇಲ್ಲಿ ಸರ್ಪವಿದೆ"–ಎಂದು ಹೇಳಿದರು; "ಆದಿಶೇಷನ ಮೇಲೆ ಪವಡಿಸಿರುವ ಭಗವಾನ್ ಶ್ರೀವಿಷ್ಣುವು ಇರುವನು"–ಎಂದು ಬ್ರಾಹ್ಮಣರು ಹೇಳಿದರು.

ಬ್ರಾಹ್ಮಣರು ಹೇಳಿದ್ದು ತಪ್ಪಾಗಿ, ತನ್ನ ಪ್ರತಿಜ್ಞೆಯಂತೆ ಅವರನ್ನೆಲ್ಲ ನಾಶಪಡಿಸಬೇಕಾಗಿಬಂದದ್ದಕ್ಕಾಗಿ ದುಃಖಾಕ್ರಾಂತನಾಗಿ ರಾಜನಿರಲು,–"ಬ್ರಾಹ್ಮಣವಾಣಿಯು ಸತ್ಯವೇ, ಎಂದೂ ಅಸತ್ಯವಾಗುವುದಿಲ್ಲ"–ಎಂಬ ಅಶರೀರವಾಣಿಯು ಕೇಳಿಬರಲಾಗಿ;

ತತಃ ಕುಂಭೇ ಹರೇರ್ಮೂರ್ತಿಂ ದೃಷ್ಟ್ವಾ ಸ ವಸುಧಾಧಿಪಃ ।
ನಿರಸ್ತಾಖಿಲಸಂದೇಹೋ ಘಾತಯಾಮಾಸ ಸೌಗತಾನ್ ॥೨೫॥

ಶ್ರೌತಸನ್ಮಾರ್ಗವಿದ್ವೇಷಸಂದೂಷಿತನಿಜಾಶಯಾನ್ ।
ಇಷ್ಟೋಽಪಿ ದೃಷ್ಟದೋಷಶ್ಚೇದ್ವಧ್ಯ ಏವ ಮಹಾತ್ಮನಾಂ ॥೨೬॥

ಆಗ ರಾಜನು, ಗಡಿಗೆಯನ್ನು ತೆರೆದು, ಶ್ರೀಹರಿಯ ವಿಗ್ರಹವನ್ನು ಕಂಡು ಸಭೆಯಲ್ಲಿ ಎತ್ತಿತೋರಿಸಿ, ವೈದಿಕಮಾರ್ಗವೇ ಸನ್ಮಾರ್ಗವೆಂಬಲ್ಲಿ ಸರ್ವಸಂಶಯಗಳನ್ನೂ ತೊರೆದು, ತಾನು ಮಾಡಿದ ಪ್ರತಿಜ್ಞೆಯಂತೆ, ಬೌದ್ಧರನ್ನೆಲ್ಲ ನಾಶಗೊಳಿಸಿದನು.

ನಿರ್ದುಷ್ಟಶ್ರುತಿಪ್ರಮಾಣಕವಾದ ಸನ್ಮಾರ್ಗದಲ್ಲಿ ಪರಮದ್ವೇಷದಿಂದ ದುಷ್ಟವಾದ ಅಭಿಮತವುಳ್ಳ ಬೌದ್ಧರನ್ನು ನಾಶಮಾಡಿಸಿದನು. ಇದು ನ್ಯಾಯವೇ ಆಗಿದೆ: ಏಕೆಂದರೆ ಇಷ್ಟನೇ ಆಗಿದ್ದರೂ, ಅವನಲ್ಲಿ ದೋಷವು ಕಂಡುಬಂದಾಗ, ಮಹಾತ್ಮರಿಗೆ ಅಂಥವನು ವಧ್ಯನೇ ಆಗುವನು.

[ಜ್ಯೋತಿಃಶಾಸ್ತ್ರದಲ್ಲಿ ಪ್ರವೀಣರಾಗಿದ್ದ ಬೌದ್ಧರು ಮಧ್ಯರಾತ್ರಿಯಲ್ಲಿ ಗ್ರಹಸ್ಥಿತಿಯನ್ನು ಪರೀಕ್ಷಿಸಿ, ಅಲ್ಲಿ ಸರ್ಪವಿರುವುದನ್ನು ನಿಶ್ಚಯಿಸಿಕೊಂಡದ್ದು ಸರಿಯಾಗಿತ್ತು. ಗಾಯತ್ರೀಶರಣರಾದ ಬ್ರಾಹ್ಮಣರು, ಉಷಃಕಾಲದಲ್ಲಿ ಶ್ರೀಸೂರ್ಯನಾರಾಯಣದೇವನನ್ನು ಉಪಾಸನಾಮಾಡಲಾಗಿ, ಅನಂತರ ಅದು ಬದಲಾಯಿಸಿ ಶ್ರೀಶೇಷಶಾಯಿವಿಗ್ರಹವಾಗಿದ್ದುದನ್ನು ಶ್ರೀಸೂರ್ಯದೇವನು ಬ್ರಾಹ್ಮಣರಿಗೆ ಉಪದೇಶಿಸಿದನು. ದೈವಯೋಗದಿಂದ ಈ ಬದಲಾವಣೆಯಾಗಿತ್ತು. ವೈದಿಕಧರ್ಮಕ್ಕೇ ದೈವಬಲವಿರುವುದು ಇದರಿಂದ ವ್ಯಕ್ತಪಡುವುದು.]

ಹತೇಷು ತೇಷು ದುಷ್ಟೇಷು ಪರಿತಸ್ತಾರ ಕೋವಿದಃ ।
ಶ್ರೌತಮಾರ್ಗಸ್ತಮಿಸ್ರೇಷು ನಷ್ಟೇಷ್ವಿವ ರವೇರ್ಮಹಃ ॥೨೭॥

Sri Vidyabharathi Book Centre, Sringeri

CC-O. In Public Domain. Digitized by eGangotri

ವೈದಿಕಸನ್ಮಾರ್ಗಕ್ಕೆ ವಿರೋಧಿಗಳಾದ ನಾಸ್ತಿಕಬೌದ್ಧರು ಹೀಗೆ ನಾಶವಾಗಲಾಗಿ, ಅರುಣೋದಯದಿಂದ ರಾತ್ರಿಯ ಅಂಧಕಾರವು ಕಳೆಯಲು ಸೂರ್ಯನ ಪ್ರಕಾಶದಂತೆ, ಶ್ರೌತಸನ್ಮಾರ್ಗವು ನಿರಾತಂಕವಾಗಿ ಲೋಕದಲ್ಲಿ ಪ್ರಚಾರಗೊಂಡಿತು.

[ಆಸೇತುಹಿಮಾಚಲಪರ್ಯಂತವಾದ ಭರತಖಂಡದಲ್ಲಿ ಬೌದ್ಧರ ಒಂದು ಪಿಳ್ಳೆಯೂ ಇಲ್ಲದಿದ್ದದ್ದು ಇದಕ್ಕೆ ಸಾಕ್ಷಿಯಾಗಿದೆ. ಈಚೆಗೆ ಬೌದ್ಧರು ಹೊರದೇಶದಿಂದ ಭಾರತದೇಶಕ್ಕೆ ಬಂದು ಪ್ರಬಲಿಸುತ್ತಿರುವರು.]

೩. ಶ್ರೀಭಗವತ್ಪಾದರ ಅವತಾರವು.

ವೃಷೇಶ್ವರಸ್ಯ ಪ್ರಣತಾರ್ತಿಹರ್ತುಃ ಪ್ರಸಾದತಃ ಪ್ರಸ್ತುತನೀತಿಭಾಜಃ ।
ಕಶ್ಚಿತ್ತದಭ್ಯಾಶಗತೋಽಗ್ರಹಾರಃ ಕಾಲಟ್ಯಭಿಖ್ಯೋಽಸ್ತಿ ಮಹಾ-
ನ್ಮನೋಜ್ಞಃ ॥೨೮॥

ಶರಣಾಗತಭಕ್ತರ ಸಕಲಪೀಡೆಗಳನ್ನೂ ಪರಿಹರಿಸುವ, ವೃಷಾಚಲಾಧಿಪತಿಯಾದ. ಶ್ರೀಪರಮೇಶ್ವರನ ಅನುಗ್ರಹದಿಂದ, ಯಾವ ಈತಿಬಾಧೆಗಳೂ ಇಲ್ಲದೆ, ಮನೋಹರವಾದ ಕಾಲಟೀ ಎಂಬ ಅಗ್ರಹಾರವು ಕೇರಳದೇಶದ ವೃಷಾಚಲದ ಸಮೀಪದಲ್ಲಿಯೇ ಬೆಳಗುತ್ತಿದೆ.

ಕಶ್ಚಿದ್ವಿಪಶ್ಚಿದಿಹ ನಿಶ್ಚಿತಧೀರ್ವಿರೇಜೇ ವಿದ್ಯಾಧಿರಾಜ ಇತಿ ವಿಶ್ರುತ-
ನಾಮಧೇಯಃ ।

ರುದ್ರೋ ವೃಷಾದ್ರಿನಿಲಯೋಽವತರೀತುಕಾಮೋ ಯತ್ಪುತ್ರಮಾತ್ಮ-
ಪಿತರಂ ಸಮರೋಚಯತ್ಸಃ ॥೨೯॥

ವಿದ್ವದ್ಬ್ರಾಹ್ಮಣೋತ್ತಮರ ಈ ಅಗ್ರಹಾರದಲ್ಲಿ, ವಿದ್ಯಾಧಿರಾಜರೆಂದು ಪ್ರಸಿದ್ಧ ಹೆಸರಿನ ತತ್ತ್ವಜ್ಞಾನನಿಶ್ಚಯವುಳ್ಳ ವಿದ್ವದಗ್ರೇಸರರು ಇದ್ದರು; ವೈದಿಕಧರ್ಮದ ರಕ್ಷಣೆಗಾಗಿ ಅವತರಿಸಿಬರಲು ಇಚ್ಛಿಸಿದ ಶ್ರೀಪರಶಿವನು, ಇವರ ಸುಪುತ್ರರನ್ನೇ ತನ್ನ ತಂದೆಗಳನ್ನಾಗಿ ಬಯಸಿದನು.

[ಪಾರಂಪರ್ಯದಿಂದಲೂ ಇದು ಶಿಷ್ಟವಂಶವೆಂಬುದನ್ನು ಇದು ಸೂಚಿಸುವುದು.]

ಪುತ್ರೋಽಭವತ್ತಸ್ಯ ಪುರಾತ್ತಪುಣ್ಯೈಃ ಸುಬ್ರಹ್ಮತೇಜಾಃ ಶಿವ-
ಗುರ್ವಭಿಖ್ಯಃ ।

ಆರ್ಯಾಭಿಧಾಮಾತ್ಮಕುಲೋಚಿತಾಂ ಸ ಗುರ್ವಾಜ್ಞಯಾ ವೈ
ವಿಧಿನೋಪಯೇಮೇ ॥೩೦॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರ ಪೂರ್ವಜನ್ಮಗಳ ಪುಣ್ಯಗಳ ಫಲವಾಗಿ, ಬ್ರಹ್ಮತೇಜಃಸಿನಿಂದ ವಿರಾಜಿಸು-ತ್ತಿದ್ದ, ಶ್ರೀಶಿವಗುರುಗಳೆಂಬ ಪುತ್ರರು ಅವರಿಗೆ ಲಭಿಸಿದರು; ಇವರು ತಮ್ಮ ವಂಶಕ್ಕೆ. ಅನುರೂಪರಾದ **ಶ್ರೀಆರ್ಯಾ**– ಎಂಬ ನಾಮಧೇಯದಿಂದ ಶೋಭಿಸುತ್ತಿದ್ದವರನ್ನು, ತಂದೆಯವರ ಆಜ್ಞೆಯಮೇರೆ, ವಿಧಿವತ್ತಾಗಿ ಮದುವೆಯಾದರು.

(ಹಿರಿಯರೇ ಯೋಗ್ಯಸಂಬಂಧವನ್ನು ಬೆಳೆಸುವುದು ಸತ್ಸಂಪ್ರದಾಯವು. ಶ್ರೀಶಿವನ ಅವತಾರಕ್ಕೆ ಸ್ಥಾನರಾಗಿದ್ದ ಇವರಿಗೆ "**ಶಿವಗುರು**"ಗಳೆಂಬ ಹೆಸರು ಅನ್ವರ್ಥವಾಗಿತ್ತು.)

ತಸ್ಯಾಮುದ್ವೀಕ್ಷ್ಯ ಸದೃಶಂ ತನೂಜಂ ಕಾಲಾದ್ಬಹೋರಪ್ಯಭಿತಪ್ತಚಿತ್ತಃ
ಇತೋಷ ಸಂತೋಷಯಿತುಂ ತಪೋಭಿಃ ಸೋಮಾರ್ಧಮೂರ್ಧಾನ–
ಮುಮಾರ್ಧದೇಹಂ ||೩೧||

ಬಹುಕಾಲವು ಕಳೆದರೂ ತಮಗೆ ಅನುರೂಪನಾದ ಪುತ್ರನು ಉದಯಿಸಿದ್ದನ್ನು ಕಾಣದೆ, ಚಿಂತಾಕ್ರಾಂತರಾಗಿ, ಅವರು, ಸತ್ಪುತ್ರಲಾಭಕ್ಕಾಗಿ, ಚಂದ್ರಾರ್ಧಚೂಡನೂ ಉಮಾರ್ಧದೇಹನೂ ಆಗಿರುವ ಶ್ರೀಪರಮೇಶ್ವರನನ್ನು ತಪಸ್ಸುಗಳಿಂದ ಪ್ರಸನ್ನನನ್ನಾಗಿ-ಮಾಡಿಕೊಳ್ಳಲು ಇಚ್ಛಿಸಿದರು]

[ಶ್ರೀಕೃಷ್ಣನೂ ಸಂತಾನಲಾಭಕ್ಕಾಗಿ ಶ್ರೀಶಿವಾರಾಧನೆಯನ್ನು ಮಾಡಿದ್ದುದು ಹರಿವಂಶದಲ್ಲಿ ಪ್ರಸಿದ್ಧವಿದೆ.]

ದೇವೋಽಪ್ಯಪೃಚ್ಛದಥ ಸ್ವಪ್ನಗತಸ್ತದಾನೀಂ ಸರ್ವಜ್ಞಮೇಕಮುಹ
ಸರ್ವಗುಣೋಪಪನ್ನಂ ।
ಪುತ್ರಂ ದದಾನ್ಯಥ ಬಹೂನ್ವಿಪರೀತವೃತ್ತಾನ್ ಭೂರ್ಯಾಯುಷ-
ಸ್ತನುಗುಣಾನವದದ್ದ್ವಿಜೇಶಃ ||೩೨||

ಆ ದಂಪತಿಗಳು ಹೀಗೆ ತಪಸ್ಸನ್ನು ಆಚರಿಸುತ್ತಿರಲು, ಒಂದು ಸಂವತ್ಸರವು ಕಳೆಯುವಷ್ಟರಲ್ಲಿ, ಒಂದು ರಾತ್ರಿ ಶ್ರೀಶಿವನು ಸ್ವಪ್ನದಲ್ಲಿ ಶ್ರೀಶಿವಗುರುಗಳಿಗೆ ಕಾಣಿಸಿಕೊಂಡು "ಸರ್ವಜ್ಞನೂ, ಸರ್ವಸದ್ಗುಣಶೋಭಿತನೂ ಆಗಿರುವ ಒಬ್ಬ ಪುತ್ರನನ್ನು ಕೊಡಲೆ? ಅಥವಾ, ಇದಕ್ಕೆ ವಿರುದ್ಧವಾಗಿ ಅಲ್ಪಗುಣಶಾಲಿಗಳಾಗಿ ದೀರ್ಘಾಯುಗಳೂ ಆಗುವ ಅನೇಕಪುತ್ರರನ್ನು ಕೊಡಲೆ?"– ಎಂದು ಅವರನ್ನು ಪ್ರಶ್ನೆಮಾಡಿದನು. ಇದಕ್ಕೆ ಆ ದ್ವಿಜಶ್ರೇಷ್ಠರು ವಿಜ್ಞಾಪಿಸಿದರು.

[ಬಹುಪುತ್ರರನ್ನು ಕೊಡುವುದಾದರೆ ಅವರು ದೀರ್ಘಾಯುಗಳಾಗಿರುವರೆಂದು ಹೇಳಿದ್ದರಿಂದ, ಅಪೇಕ್ಷಿಸುವ ಗುಣವಂತನಾದ ಏಕಪುತ್ರನು ಅಲ್ಪಾಯುವಾಗುವನೆಂದು **ಸೂಚಿತವಾಗುವುದು.**]

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗ ಶ್ರೀಶಿವಗುರುಗಳು 'ವರಮೇಕೋ-ಗುಣೀ ಪುತ್ರೋ ನ ತು ಮೂರ್ಖಶತಾನ್ಯಪಿ । ಏಕಶ್ಚಂದ್ರಸ್ತಮೋ ಹಂತಿ ನ ಚ ತಾರಾಗಣೋಽಪಿ ಚ ॥-"ನೂರುಮಂದಿ ಮೂರ್ಖಪುತ್ರರಿಗಿಂತ ಗುಣಶಾಲಿಯಾದ ಒಬ್ಬ ಪುತ್ರನೇ ಉತ್ತಮನು; ಗಾಢಾಂಧಕಾರದ ರಾತ್ರಿಯಲ್ಲಿ ನಕ್ಷತ್ರಗಳ ಗುಂಪುಗಳಿಂದೇನು? ಒಬ್ಬ ಚಂದ್ರನಿಂದಲೇ ಲೋಕವು ಬೆಳಗುವುದು"-ಎಂಬ ನೀತಿಯನ್ನು ಪರ್ಯಾಲೋಚಿಸಿ, ಹೀಗೆ ಪ್ರಾರ್ಥಿಸಿದರು-

ಪುತ್ರೋಽಸ್ತು ಮೇ ಬಹುಗುಣಃ ಪ್ರಥಿತಾನುಭಾವಃ ಸರ್ವಜ್ಞತಾಪದ-
ಮಿತೀರಿತ ಆಬಭಾಷೇ ।

ದಾದ್ಯಾಮುದೀರಿತಪದಂ ತನಯಂ ತಪೋ ಮಾ ಪೂರ್ಣೋ ಭವಿಷ್ಯತಿ
ಗೃಹಂ ದ್ವಿಜ ಗಚ್ಛ ದಾರೈಃ ॥೩೩॥

"ಬಹುಸದ್ಗುಣಶಾಲಿಯೂ, ಸರ್ವಜ್ಞನೂ, ಮಹಿಮಾವಂತನೂ ಆದ ಒಬ್ಬ ಪುತ್ರನೇ ನನಗೆ ಲಭಿಸಲಿ"- ಎಂದು. ಹೀಗೆ ವಿಜ್ಞಾಪಿಸಲ್ಪಟ್ಟ ಶ್ರೀಪರಶಿವನು-"ನಿನ್ನಿಂದ ಹೇಳಲ್ಪಟ್ಟ ಗುಣವಂತಪುತ್ರನನ್ನೇ ಕೊಡುತ್ತೇನೆ; ಇನ್ನು ತಪಸ್ಸು ಸಾಕು; ನಿಮ್ಮ ಇಚ್ಛೆಯು ಪೂರ್ಣವಾಗುವುದು; ಎಲೈ ಬ್ರಾಹ್ಮಣನೆ, ನಿನ್ನ ಪತ್ನಿಯೊಡನೆ ಈಗ ಮನೆಗೆ ಹೋಗು"- ಎಂದು ತಿಳಿಸಿದನು.

[ಇಂಥಗುಣಶಾಲಿ ಶ್ರೀಶಿವನೇ ಅನ್ಯದ್ದರಿಂದಲೂ, ತಾನು ಅವತರಿಸಬೇಕಾಗಿದ್ದುದರಿಂದಲೂ, ತಾನೇ ಅವರಿಗೆ ಪುತ್ರನಾಗಿ ಜನಿಸಿದನು.

ಗರ್ಭಂ ದಧಾರ ಶಿವಗರ್ಭಮಸೌ ಮೃಗಾಕ್ಷೀ ಗರ್ಭೋಽಪ್ಯವರ್ಧತ
ಶನೈರಥ ಯುಕ್ತಕಾಲೇ ।

ಜಾಯಾ ಸತೀ ಶಿವಗುರೋಃ ಸುಷುವೇ ಕುಮಾರಂ ಶ್ರೀಪಾರ್ವತೀವ
ಸುಖಿನೀ ಸುಮುಖೇ ಮುಹೂರ್ತೇ ॥೩೪॥

ಶ್ರೀಶಿವಗುರುಗಳ ಧರ್ಮಪತ್ನಿಯವರಾದ ಶ್ರೀಆರ್ಯಾಂಬೆಯವರು, ಶ್ರೀಪರಶಿವನ ಅನುಗ್ರಹದಂತೆ, ಶಿವಗರ್ಭವನ್ನು-ಶಿವತೇಜೋಯುಕ್ತವಾದ ಗರ್ಭವನ್ನು- ಧರಿಸಿದರು; ಗರ್ಭವೂ ಕ್ರಮವಾಗಿ ವೃದ್ಧಿಹೊಂದುತ್ತ ಬಂದು, ಸಕಾಲದಲ್ಲಿ ನವಮಾಸಗಳು ತುಂಬಲು, ಶ್ರೀಪಾರ್ವತೀದೇವಿಯು ಶ್ರೀಕುಮಾರಸ್ವಾಮಿಯನ್ನು ಹೇಗೋ ಹಾಗೆ, ಸುಮುಹೂರ್ತದಲ್ಲಿ ಸುಕುಮಾರನನ್ನು ಅನಾಯಾಸವಾಗಿ ಪ್ರಸವಿಸಿದರು.

[ಶ್ರೀಕುಮಾರಸ್ವಾಮಿಯ ಅವತಾರದಂತೆ ಶ್ರೀಶಿವನ ಈ ಅವತಾರವೂ ಲೋಕರಕ್ಷಣೆಗೇ ಆಗಿರುವುದು ಇದರಿಂದ ತಿಳಿದುಬರುವುದು]

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜ್ಯಶ್ರೀರಿವ ನಯಕೋವಿದಸ್ಯ ರಾಜ್ಞೋ ವಿದ್ಯೇವ ವ್ಯಸನದವೀ-
ಯಸೋ ಬುಧಸ್ಯ ।
ಶುಭ್ರಾಂಶೋಶ್ಛವಿರಿವ ಶಾರದಸ್ಯ ಪಿತ್ರೋಃ ಸಂತೋಷೈಃ ಸಹ
ವವೃಧೇ ತದೀಯಮೂರ್ತಿಃ ॥೩೫॥

ರಾಜನೀತಿನಿಪುಣನಾದ ರಾಜನ ರಾಜ್ಯಸಂಪತ್ತಿನಂತೆಯೂ; ದುರ್ವ್ಯಸನಗಳಿಂದ ದೂರನಾಗಿರುವ ವಿವೇಕಿಯ ವಿದ್ಯೆಯಂತೆಯೂ; ಶರತ್ಕಾಲದ ಶುಕ್ಲಪಕ್ಷದ ಚಂದ್ರನಂತೆಯೂ; ತಾಯಿತಂದೆಗಳ ಸಂತೋಷದೊಡನೆ ಈ ಕುಮಾರನ ಶರೀರವು ಕ್ರಮವಾಗಿ ವೃದ್ಧಿಹೊಂದಿತು.

[ಶ್ರೀಭಗವತ್ಪಾದರು ಅವತರಿಸಿದ ಸ್ಥಳದ ಮತ್ತು ಕಾಲದ ವಿಷಯಗಳಲ್ಲಿ ಚಾರಿತ್ರಿಕವಿಮರ್ಶಕರಲ್ಲಿ ಏಕಾಭಿಪ್ರಾಯವಿರುವುದಿಲ್ಲ. ಪಂಡಿತರುಗಳಲ್ಲಿಯೂ ಭಿನ್ನಾಭಿಪ್ರಾಯವು ಕಂಡುಬರುತ್ತಿದೆ. ಆದರೆ, ತಮಿಳುನಾಡಿನ ಶ್ರೀ ಕೆ. ವಿ. ವೆಂಕಟರಮಣನ್ ಎಂಬ ಜ್ಯೋತಿಷ್ಕರು, ಶ್ರೀಮಾಧವೀಯ ಶಂಕರವಿಜಯಗ್ರಂಥದ ಆಧಾರದ ಮೇಲೆ, ಕ್ರಿ. ಶ ೮೦೫ರಲ್ಲಿ ಶ್ರೀಭಗವತ್ಪಾದರ ಅವತಾರವಾಗಿರುವುದೆಂಬುದನ್ನು ನಿರ್ಧರಿಸಿದ್ದಾರೆ. ಅವರು ತಮ್ಮ ಶೋಧನೆಯ ಫಲಿತಾಂಶವನ್ನು ಹೀಗೆ ವಿವರಿಸಿದ್ದಾರೆ–

"I have studied all the available literature giving widely differring versions on the subject— (birth of Adi Shankara); but unfortunately some of them do not stand the test of Astronomy, except Madhava Shankara Vijayam, whieh contains some astronomical particulars in Sarga 2, sloka 71—

"Shankara was born in auspicious Lagna, occupied and aspected by benefics, when sun, Mars. Jupitor and Saturn were exalted in Kendras."

Shankara Jayanthi Festivals are being celebrated unanimously all over India, on Vaisakha Sukla Panchami, from time immemorial, the lunar date is fixed as such. On the basis of this astronomical data, I worked-out the planetary positions from the beginning of Kaliyuga, in a prayerful spirit, to find-

Sri Vidyabharathi Book Centre, Sringeri

CC-O. In Public Domain. Digitized by eGangotri

ous the truth. After three and half years of study and research, my joy knows no bound to find-out that the rare planetary combination referred-to in Madhaviya Shankara Vijayam occured only in 805 A. D.

Hence, according to my calculation, Sri Adi Shankara was born at Kaladi (Lat 8-12 and Long 76-59) at about 17-30 ghatis after sun-rise, on Monday, Vaisakha Sukla Panchami—805 A. D. in Karkataka Lagna, in the Nadi Amsa of Parameswari, when Moon was in the consellation of Ardra.- i s the correct date of birth.

(Tamil Shankarakrupa Magzine Vol. 15 issue, page 113-816)

"ಆದಿಶಂಕರರ ಜನ್ಮದಿನದ ವಿಷಯದಲ್ಲಿ ಪರಸ್ಪರ-ಅತ್ಯಂತಭಿನ್ನಭಿನ್ನಗಳಾದ ಅಭಿಪ್ರಾಯಗಳನ್ನು ಕೊಡುವ ಎಲ್ಲರ ಹೇಳಿಕೆಗಳನ್ನೂ ನಾನು ವಿಮರ್ಶಿಸಿದ್ದೇನೆ; ಆದರೆ ದುರದೃಷ್ಟವಶಾತ್, ಇವುಗಳಲ್ಲಿ, ಜ್ಯೋತಿಃಶಾಸ್ತ್ರದ ಕೆಲವು ಅಂಶಗಳನ್ನು ತಿಳಿಸುವ ಮಾಧವೀಯಶಂಕರವಿಜಯವೊಂದಲ್ಲದೆ, ಇತರ ಒಂದೂ ಜ್ಯೋತಿರ್ಗಣಿತದ ಪರೀಕ್ಷೆಗೆ ನಿಲ್ಲತಕ್ಕದ್ದಾಗಿರುವುದಿಲ್ಲ.

"ಮಾಧವೀಯಶಂಕರವಿಜಯದ ಎರಡನೆಯ ಸರ್ಗದ ೭೧ನೆಯ ಪದ್ಯವು—

"ಶ್ರೀಶಂಕರರು, ಶುಭಗ್ರಹಗಳಿಂದ ಕೂಡಿದ ಮತ್ತು ಅವುಗಳ ವೀಕ್ಷಣೆಯುಳ್ಳ, ಸೂರ್ಯ, ಅಂಗಾರಕ ಗುರು ಮತ್ತು ಶನಿಗ್ರಹಗಳು ಕೇಂದ್ರದಲ್ಲಿ ಉಚ್ಚರಾಗಿದ್ದ, ಶುಭ-ಲಗ್ನದಲ್ಲಿ ಜನಿಸಿದರು"೨—ಎಂಬುದಾಗಿ ತಿಳಿಸುತ್ತದೆ.

"ಶ್ರೀಶಂಕರಜಯಂತ್ಯುತ್ಸವವು ಭರತಖಂಡದ ಎಲ್ಲೆಡೆಯಲ್ಲಿಯೂ, ಬಹುಕಾಲದಿಂದಲೂ, ಪ್ರತಿಸಂವತ್ಸರವೂ, ಪ್ರಾಯಿಕವಾಗಿ, ವೈಶಾಖಶುದ್ಧಪಂಚಮೀದಿವಸವೇ, ಆಚರಿಸಲ್ಪಡುತ್ತಿದೆ. ಈ ಅಂಶಗಳನ್ನು ಆಶ್ರಯಿಸಿಕೊಂಡು ಶ್ರೀಶಂಕರರ ಜನ್ಮದಿನವನ್ನು ನಿರ್ಣಯಿಸುವ ಪೂರ್ಣಶ್ರದ್ಧೆಯಿಂದ, ಕಲಿಯುಗದ ಆರಂಭದಿಂದಲೂ ಶೋಧಿಸುತ್ತ ಬಂದಿದ್ದೇನೆ. ಮೂರುವರೆವರ್ಷಗಳಕಾಲದ ಈ ಶೋಧನೆಯಿಂದ, ಮಾಧವೀಯಶಂಕರವಿಜಯದಲ್ಲಿ ತಿಳಿದುಬರುವ ಗ್ರಹಗಳ ಸನ್ನಿವೇಶವು, ಕ್ರಿಸ್ತಶಕ 805ರಲ್ಲಿ ಮಾತ್ರವೆ ಖಚಿತವಾಗಿ ಗೊತ್ತುಬಂದ [illegible] ಆನಂದಕ್ಕೆ [illegible].

Sri Vidyabharathi Book Centre, Sringeri.

CC-O. In Public Domain. Digitized by eGangotri

"ನನ್ನ ಗಣನೆಯ ಪ್ರಕಾರವಾಗಿ, ಶ್ರೀಮದಾದ್ಯಶಂಕರಭಗವತ್ಪಾದರು, ಕಾಲಟಿಯಲ್ಲಿ (8೦-12ಉ ಮತ್ತು ರೇಖಾಂಶ 76೦- 56ಪೂ) ಸೂರ್ಯೋದಯಾನಂತರ, ಸುಮಾರು 17-30 ಘಳಿಗೆಯಲ್ಲಿ ವೈಶಾಖಶುದ್ಧಪಂಚಮಿ ಸೋಮವಾರದ ದಿವಸ, ಕರ್ಕಾಟಕಲಗ್ನದಲ್ಲಿ, ಶ್ರೀಪರಮೇಶ್ವರೀನಾದ್ಯಂಶದಲ್ಲಿ, ಚಂದ್ರನು ಆರ್ದ್ರಾನಕ್ಷತ್ರದಲ್ಲಿ ಇದ್ದಾಗ—ಎಂದರೆ ಕ್ರಿಸ್ತಶಕ 805ನೇ ಸಂವತ್ಸರದಲ್ಲಿ ಅವತರಿಸಿದ್ದಾರೆ."

(ತಮಿಳುಶ್ರೀಶಂಕರಕೃಪಾಪತ್ರಿಕೆಯ ೧೫ನೆಯ ಸಂಚಿಕೆಯ ಪುಟಗಳು ೧೧೩-೧೧೬)

ಶ್ರೀಶೃಂಗಗಿರಿಜಗದ್ಗುರುಪೀಠದಲ್ಲಿ ವಿರಾಜಿಸಿದ, ಇಲ್ಲಿಯ ಸಂಪ್ರದಾಯಾನುಸಾರವಾಗಿ ಶ್ರೀಭಗವತ್ಪಾದರ ಅವತಾರರೇ ಆದ, ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತೀಮಹಾಸ್ವಾಮಿಗಳವರು- ತಿರುವಾಂಕೂರು ಮತ್ತು ಕೊಚ್ಚಿಮಹಾರಾಜರುಗಳು- ಹಾಗೂ ಮೈಸೂರುಮಹಾರಾಜರು—ಇವರುಗಳ ಸಹಾಯದಿಂದ, ಪ್ರಯತ್ನಪೂರ್ವಕವಾಗಿ ಪರಿಶೋಧನೆಗಳನ್ನು ನಡೆಯಿಸಿ, ಶ್ರೀಶಂಕರರ ಚರಿತ್ರೆಯಲ್ಲಿ ಪ್ರಸಿದ್ಧವಾಗಿರುವಂತೆ ಪೂರ್ಣಾನದಿಯು ಎರಡುಭಾಗವಾಗಿ ಪ್ರವಹಿಸುವಿಕೆ, ಶ್ರೀಕೃಷ್ಣವಿಗ್ರಹದ ಪ್ರತಿಷ್ಠೆ— ಮುಂತಾದಚಿಹ್ನೆಗಳಿಂದ ಅಲಂಕೃತವಾಗಿರುವ, ಕೇರಳದೇಶದಲ್ಲಿರುವ ಶ್ರೀಕಾಲಟೀ ಅಗ್ರಹಾರವೇ ಶ್ರೀಶಂಕರರು ಅವತರಿಸಿದ ಸ್ಥಳವೆಂದು ನಿರ್ಣಯಿಸಿ, ಶ್ರೀಶಂಕರರ ಮತ್ತು ಶ್ರೀಶಾರದಾಮ್ಮನವರ ದೇವಾಲಯಗಳನ್ನು ನಿರ್ಮಿಸಿ, ಶ್ರೀಕಾಲಟಿಯನ್ನು ಪವಿತ್ರವಾದ ಕ್ಷೇತ್ರವನ್ನಾಗಿ ಬೆಳಗಿಸಿದ್ದಾರೆ. ಆದುದರಿಂದ ಶ್ರೀಕಾಲಟೀಅಗ್ರಹಾರವೇ ಶ್ರೀಶಂಕರರ ಜನ್ಮಸ್ಥಳವೆಂದು ಸಿದ್ಧವು.

Kalati, has, however, been finally declared to be his birth place, after the most careful enquiry instituted at the instance of the Late Jagadguru of Sringeri Sri Sachidananda Shivabhinava Narasimha Bharathy Swamy (1857–1912), one of the most distinguished of Shankara's Successors. After this was settled, no time was lost in acquiring the necessary ground in that village through the generosity of his Highness the late Maharaja of Travancore. A suitable memorial now graces the spot.

"ಶ್ರೀಶೃಂಗಗಿರಿಶ್ರೀಶಾರದಾಪೀಠಾಧಿಪತಿಗಳಾಗಿದ್ದ, ಮಹಾಮಹಿಮಾಶಾಲಿಗಳಾದ, ಶ್ರೀಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತೀಮಹಾಸ್ವಾಮಿಗಳವರು (ಕ್ರಿ. ಶ.

Sri Vidyabharathi Book Centre, Sringeri

CC-O. In Public Domain. Digitized by eGangotri

೧೮೫೩-೧೯೧೨) ಸೂಕ್ಷ್ಮವಾಗಿ ಪರಿಶೀಲಿಸಿ, ಈಗಿನ ಕಾಲಟೀಕ್ಷೇತ್ರವನ್ನೇ ಶ್ರೀಶಂಕರ-ಗವತ್ಪಾದರವರ ಜನ್ಮಸ್ಥಳವೆಂದು ನಿಶ್ಚಯಿಸಿದರು. ಕೂಡಲೇ ತಿರುವಾಂಕೂರು-ಮಹಾರಾಜರವರ ಉದಾರಸಹಾಯದಿಂದ ಆ ಸ್ಥಳವನ್ನು ಶ್ರೀಮಠಕ್ಕೆ ಸ್ವಾಧೀನಪಡಿಸಿ-ಕೊಂಡು. ಅಲ್ಲಿ ಶ್ರೀಭಗವತ್ಪಾದರ ಮತ್ತು ಶ್ರೀಶಾರದಾಮ್ಮನವರ ದೇವಾಲಯಗಳನ್ನು ರಚಿಸಿದರು. ಇವತ್ತಿಗೂ ಈ ಕ್ಷೇತ್ರವು ಧರ್ಮಾಭಿಮಾನಿಗಳಿಗೆ ಪರಮಾದರಣೀಯವಾಗಿ ಬೆಳಗುತ್ತಿದೆ.''

“ಶ್ರೀಸಚ್ಚಿದಾನಂದಶಿವಾಭಿನವನರಸಿಂಹಭಾರತೀಮಹಾಸ್ವಾಮಿಗಳವರು ಶೃಂಗಗಿರಿಯಲ್ಲಿಯೇ ಇದ್ದುಕೊಂಡು, ಕೇರಳದೇಶದ ಕಾಲಟೀ ಅಗ್ರಹಾರವನ್ನು ಶ್ರೀಭಗವತ್ಪಾದ-ರವರ ಜನ್ಮಸ್ಥಳವೆಂಬುದನ್ನು ಕಂಡುಹಿಡಿದದ್ದು ಮಹಾ-ಆಶ್ಚರ್ಯವೇ ಅಲ್ಲವೆ!''-ಎಂದು ಒಬ್ಬ ಮಹನೀಯರು ಒಕ್ಕಣಿಸಿದ್ದಕ್ಕೆ— ‘ತಮ್ಮ ಮನೆ ತಮಗೆ ತಿಳಿಯದೆ?’ ಎಂದು ಬಹುಗಂಭೀರವಾಗಿ, ಇವರ ಪರಮಶಿಷ್ಯರಾದ ಶ್ರೀಮಚ್ಚಂದ್ರಶೇಖರಭಾರತೀಮಹಾ-ಸ್ವಾಮಿಗಳವರು ಉತ್ತರಿಸಿದ್ದನ್ನೂ ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳತಕ್ಕದ್ದಾಗಿದೆ.

ಹಾಗೆಯೇ ಶ್ರೀಭಗವತ್ಪಾದರ ಜನ್ಮಸ್ಥಳದ ವಿಷಯದಲ್ಲಿಯೂ, ಕಂಚಿ, ಚಿದಂಬರ-ಎಂದು ಮುಂತಾಗಿ ವಿವಾದಗಳಿವೆ; ಆದರೆ ಕಾಲಟಿಯೆಂಬುದೇ ಪ್ರಾಮಾಣಿಕವಾಗಿದೆ.

೪. ಶ್ರೀಶಂಕರರ ಬಾಲ್ಯ ಮತ್ತು ವಿದ್ಯಾಭ್ಯಾಸ.

ಅಥ ಶಿವೋ ಮನುಜೋ ನಿಜಲೀಲಯಾ ದ್ವಿಜಗೃಹೇ ದ್ವಿಜಮೋಹ-
ಮುಪಾವಹನ್ ।
ಗುರುಮುಖಾತ್ಸ ಕಲಾಸು ಸಮಾಪ್ತವಾನ್ ಕುಶಲತಾಂ ಸಕಲಾಸು
ಸಮುನ್ನತಾಂ ॥೩೬॥

ಈಪ್ರಕಾರವಾಗಿ ಶ್ರೀಪರಶಿವನು, ತನ್ನ ಮಾಯಾಲೀಲೆಯಿಂದ ಮಾನವಭಾವವನ್ನು ತಳೆದು, ಆ ದ್ವಿಜದಂಪತಿಗಳಿಗೆ ತಮ್ಮ ಮಗನೆಂಬ ಮೋಹವನ್ನು ಉಂಟು-ಮಾಡುತ್ತಬೆಳೆದು, ತಮ್ಮ ತಂದೆಗಳ ಮೂಲಕವಾಗಿಯೇ ಎಲ್ಲ ಕಲೆಗಳಲ್ಲಿಯೂ ಅಧಿಕವಾದ ಕೌಶಲವನ್ನು ಪಡೆದನು.

ಅನಂತರ ಗುರುಕುಲವನ್ನು ಸೇರಿ ವಿದ್ಯಾಭ್ಯಾಸವನ್ನು ಮಾಡುತ್ತ,—

ಅಜನಿ ದುಃಖಕರೋ ನ ಗುರೋರಸೌ ಶ್ರವಣತಃ ಸಕೃದೇವ ಪರಿಗ್ರಹೀ।
ಸಮಭಜದ್ಗುರುಣಾ ಸಮತಾಂ ತತೋಽಪ್ಯಧಿಕತಾಮಚಿರಾತ್ಕಿಲ
ಲೀಲಯಾ ॥೩೭॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಗುರುಗಳು ಉಪದೇಶಿಸಿದ್ದನ್ನು ಒಂದುಸಲ ಕೇಳಿದಮಾತ್ರದಿಂದಲೇ ಗ್ರಹಿಸು ತ್ತಿದ್ದ ಶ್ರೀಶಂಕರರು ಅವರ ಗುರುಗಳಿಗೆ ಮತ್ತೆ ಮತ್ತೆ ಬೋಧಿಸಬೇಕಾದ ದುಃಖವನ್ನು ಉಂಟುಮಾಡುತ್ತಿರಲಿಲ್ಲ; ಸ್ವಲ್ಪಕಾಲದಲ್ಲಿ ತಮ್ಮ ಗುರುಗಳಿಗೆ ಸಮವಾದ ಪಾಂಡಿತ್ಯ-ವನ್ನು ಹೊಂದಿದ್ದಲ್ಲದೆ, ಅವರಿಗಿಂತಲೂ ಅಧಿಕರೂ ಆದರು.

[ಶ್ರೀಭಗವತ್ಪಾದರು ಯಾರಲ್ಲಿ ವಿದ್ಯಾಭ್ಯಾಸವನ್ನು ಮಾಡಿದರೆಂಬಲ್ಲಿಯೂ ಯಾವ ವಿವರವೂ ದೊರೆಯುವುದಿಲ್ಲವೆಂದು ಹಲವರು ಶಂಕಿಸುತ್ತಾರೆ. ಆದರೆ- ಒಬ್ಬ ವಿವೇಚಕರು ಹೇಳಿರುವಂತೆ-

ಶ್ರೀಶಂಕರರ ಬಾಲ್ಯ ಮತ್ತು ವಿದ್ಯಾಭ್ಯಾಸಗಳ ವಿಷಯದಲ್ಲಿ ಯಾವ ವಿವರವೂ ದೊರೆಯುವುದಿಲ್ಲವೆಂದು ಚರಿತ್ರಕಾರರು ಖೇದಪಡುತ್ತಾರೆ. ಆದರೂ ಪ್ರಪಂಚವಿರುವ ವರೆಗೂ ಸರ್ವದೇಶಗಳಲ್ಲಿಯೂ ವಿಚಾರನಿಪುಣರೆನಿಸುವವರ ಗಮನವನ್ನು ಸೆಳೆಯುತ್ತಾ ಆಶ್ಚರ್ಯಗೊಳಿಸಿ ಮುಗ್ಧರನ್ನಾಗಿ ಮಾಡುವಂಥ ಉಪದೇಶಾಮೃತಸಾಗರವನ್ನು ನಿರ್ಮಿ-ಸುವುದಕ್ಕೆ ಎಂಥ ಶಿಕ್ಷಣವು ಅವಶ್ಯವೋ ಅಂಥ ಶಿಕ್ಷಣವನ್ನು ಶ್ರೀಶಂಕರರು ಹೊಂದಿದ್ದ ರೆಂದು ಇವರು ಸಮಾಧಾನಮಾಡಿಕೊಳ್ಳಬಹುದು.

Be that as it may; childhood and education of Shankara were, what could be naturally expected of one, whose writings continue to be deeply admired and appreciated by the most thoughtful human race both here and in the remote west, after the lapse of ten long centuries. (Shankaracharya his life-and teaching-by Seethadatha Datta-1898).

"ಅದು ಹೇಗಾದರೂ ಇರಲಿ; ನಮ್ಮ ದೇಶದಲ್ಲಿಯೂ ದೂರದ ಪಾಶ್ಚಾತ್ಯದೇಶ-ಗಳಲ್ಲಿಯೂ, ಯಾವಾಗಲೂ, ಎಲ್ಲ ಪ್ರಾಜ್ಞರ ಮನಸೆಳೆದು, ಅದ್ಭುತಾಶ್ಚರ್ಯಗಳನು ಉಂಟುಮಾಡುವಂಥ ಗ್ರಂಥಸಂದೋಹವನ್ನು ವಿರಚಿಸಬೇಕಾದರೆ ಎಂಥ ಶಿಕ್ಷಣವು ಆವಶ್ಯಕವೋ, ಶ್ರೀಶಂಕರಭಗತ್ಪಾದರವರ ಬಾಲ್ಯ ಮತ್ತು ವಿದ್ಯಾಭ್ಯಾಸಗಳು ಅಂಥವುಗಳೇ ಆಗಿರಬೇಕೆಂಬಲ್ಲಿ ಸಂದೇಹವೇನಿದೆ?"

ಶ್ರೀಮಾಧವರು ಈ ವಿಷಯವನ್ನು ಹೃದಯಂಗಮವಾಗಿ ವ್ಯಕ್ತಪಡಿಸಿದ್ದಾರೆ—

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಮತಾನಿ ಚ ತೇನ ಕಾನಿ ನೋನ್ಮಥಿತಾನಿ ಪ್ರಥಿತೇನ ಧೀಮತಾ ।
ಸ್ವಮತಾನಿ ಚ ತೇನ ಖಂಡಿತಾನ್ಯತಿಯತ್ನೈರಪಿ ಸಾಧಿತಾನಿ ಕೈಃ ॥೩೮॥

ಪ್ರಸಿದ್ಧಪ್ರತಿಭಾಶಾಲಿಗಳಾದ ಶ್ರೀಭಗವತ್ಪಾದರಿಂದ, ಅವೈದಿಕಗಳಾದ ಯಾವ ಕುಮತಗಳು ತಾನೆ ನಿರಾಕರಿಸಲ್ಪಟ್ಟಿರುವುದಿಲ್ಲ; ಮತ್ತು ಅವರಿಂದ ಹಾಗೆ ಖಂಡಿಸಲ್ಪಟ್ಟಿರುವ ಮತಗಳಲ್ಲಿ, ಯಾವಮತದವರು ತಾನೆ, ಮಹಾಪ್ರಯಾಸದಿಂದಲಾದರೂ, ಅವರು ನಿರಾಕರಿಸಿರುವ ದೋಷಗಳನ್ನು ಪರಿಹರಿಸಿಕೊಂಡು, ತಮ್ಮ ಮತವನ್ನು ಸರಿಯೆಂದು ಸಾಧಿಸಿಕೊಂಡಿರುತ್ತಾರೆ? [ಶ್ರೀಭಗವತ್ಪಾದರ ಭಾಷ್ಯಾದಿಗ್ರಂಥಗಳೇ ಇವತ್ತಿಗೂ ಈ ವಿಷಯದಲ್ಲಿ ಪ್ರತ್ಯಕ್ಷಪ್ರಮಾಣಗಳಾಗಿವೆ.]

ಹಾಗೆಯೇ, ಶ್ರೀಭಗವತ್ಪಾದರವರು ಪ್ರತಿಪಾದಿಸಿರುವ ಸಿದ್ಧಾಂತದ ಮೇಲೆ ಯಾರಾದರೂ ದೋಷವನ್ನು ತೋರಿಸಿಕೊಡಲು ಸಮರ್ಥರಾಗಿದ್ದಾರೆಯೆ? ಶ್ರೀಶಂಕರರಿಂದ ಪ್ರಸಾಧಿತವಾಗಿರುವ ಅದ್ವೈತಸಿದ್ಧಾಂತದ ಮೇಲೆ ಯಾವ ದೋಷವನ್ನು ತೋರಿಸಲೂ ಯಾರೂ ಸಮರ್ಥರಾಗಲಾರರು. ಶ್ರೀಭಗವತ್ಪಾದರವರ ಸಿದ್ಧಾಂತದ ಮೇಲೆ ದೋಷವನ್ನು ತೋರಿಸುವ ಸಾಹಸವನ್ನು ಮಾಡಿರುವವರೆಲ್ಲರೂ, ಅದನ್ನು ಸರಿಯಾಗಿ ತಿಳಿಯದೆಯೇ ಮಾಡಿರುವುದು ಸ್ಪಷ್ಟವಾಗಿದೆ.

ಇದರಿಂದಲೇ ಶ್ರೀಶಂಕರಭಗವತ್ಪಾದಾಚಾರ್ಯರವರ ಉತ್ಕರ್ಷವು ಜಗದ್ವಿಖ್ಯಾತವಾಗುತ್ತದೆ. ಮನುಷ್ಯಮಾತ್ರರಲ್ಲಿ ಅಸಂಭಾವ್ಯಮಾನವಾದ ಈ ಮಹಿಮೆಯೇ ಶ್ರೀಶಂಕರರು ಅವತಾರಪುರುಷರೆಂಬುದಕ್ಕೆ ಸಾಕಷ್ಟು ಸಾಕ್ಷಿಯಾಗಿದೆ. ಶ್ರೀಶಂಕರರನ್ನು ಅವತಾರಪುರುಷರೆಂದು ಅಂಗೀಕರಿಸಲು ಅಸಮರ್ಥರಾದ ಆಧುನಿಕರೂ ಸಹ, ಶ್ರೀಶಂಕರಭಗವತ್ಪಾದರವರ ಈ ಲೋಕೋತ್ತರಮಹಿಮೆಯನ್ನು ಮಾತ್ರ ಅಲ್ಲಗಳೆಯುವಂತಿಲ್ಲ. ದರಿದ್ರಬ್ರಾಹ್ಮಣೋತ್ತಮನ ಅನುಗ್ರಹಕ್ಕಾಗಿ ಸುವರ್ಣವರ್ಷಣ, ಪೂರ್ಣಾನದೀಗೃಹಸಮೀಪನಯನ, ಆಕಾಶಗಮನ, ಪರಕಾಯಪ್ರವೇಶ, ಮೃತಶಿಶೂಜ್ಜೀವನ, ಕೈಲಾಸಗಮನ, ಶಾರದಾನುಗ್ರಹಸಂಪಾದನ— ಇವೇ ಮೊದಲಾದ ಶ್ರೀಭಗವತ್ಪಾದರ ಚರಿತ್ರಾಂಶಗಳನ್ನು ಇದೇ ದೃಷ್ಟಿಯಿಂದ ತಿಳಿಯತಕ್ಕದ್ದು. ಶಾಸ್ತ್ರಸಂಸ್ಕಾರಶುದ್ಧಬುದ್ಧಿಯವರಿಗೆ ಇವುಗಳಲ್ಲಿ ಯಥಾರ್ಥತಾಬುದ್ಧಿಯೇ ಉಂಟಾಗುವುದರಲ್ಲಿ ಅಡ್ಡಿಯಿರುವುದಿಲ್ಲ.

ಶ್ರೀಶಂಕರರು ಅತಿ ಬಾಲ್ಯದಲ್ಲಿಯೇ ಪಿತೃವಿಯೋಗವನ್ನು ಅನುಭವಿಸಿ, ಗುರುಕುಲದಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿ, ಮಾತೃಸೇವಾನಿರತರಾಗಿದ್ದು, ಆತುರಸನ್ಯಾಸವನ್ನು ಪರಿಗ್ರಹಿಸಿ, ಮಾತೃಯೋಗಕ್ಷೇಮಾದಿಭಾರವನ್ನು ಬಂಧುವರ್ಗದವರಿಗೆ ವಹಿಸಿ, ಶ್ರೀಗೋವಿಂದಭಗವತ್ಪಾದರವರಿಂದ ಕ್ರಮಸನ್ಯಾಸವನ್ನೂ, ಮಹಾವಾಕ್ಯೋಪದೇಶವನ್ನೂ ವೇದಾಂತಸಿದ್ಧಾಂತರಹಸ್ಯವನ್ನೂ ಪಡೆದುದು ಸುಪ್ರಸಿದ್ಧವೇ ಇದೆ;

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶಿವಗುರು–ಆರ್ಯಾಂಬೆಯವರಿಗೆ ಬಹುಕಾಲದಮೇಲೆ ಶ್ರೀಶಂಕರರು ಪುತ್ರರಾಗಿ ಅವತರಿಸಿದ ಸಂದರ್ಭವನ್ನು ಅವಲಂಬಿಸಿಕೊಂಡು, ಶ್ರೀಶಂಕರರಿಂದ ಪ್ರತಿಪಾದಿತವಾಗಿರುವ ಅದ್ವೈತಸಿದ್ಧಾಂತಕ್ಕೆ ವಿರೋಧಿಗಳಾದ ಅನ್ಯಮತೀಯರು, ಶ್ರೀಶಂಕರರಜನನವಿಷಯದಲ್ಲಿ ಹಲವಾರುಅಶ್ಲೀಲಕಲ್ಪನೆಗಳನ್ನು ಆರೋಪಿಸಿರುವುದು ಕಂಡುಬರುತ್ತದೆ. ಶ್ರೀಶಂಕರರು ತಮ್ಮ ಮಾತೃಶ್ರೀಯವರಿಗೆ ಅಂತ್ಯಸಂಸ್ಕಾರವನ್ನು ಮಾಡುವಾಗ ಅವರ ಬಂಧುಗಳು ಸಹಕರಿಸದ ಅಂಶವನ್ನು ಈ ಕಲ್ಪನೆಗಳಿಗೆ ಒತ್ತಾಸೆಯಾಗಿ ತೆಗೆದುಕೊಳ್ಳುವರು. ಆದರೆ, ಶಿವಗುರುಗಳು ಕಾಲಾಧೀನರಾದಾಗಲಾಗಲಿ, ಶ್ರೀಶಂಕರರು ಗುರುಕುಲದಲ್ಲಿದ್ದು ವಿದ್ಯಾಭ್ಯಾಸನಡೆಸುತ್ತಿದ್ದಾಗಲಾಗಲಿ, ಆತುರಸನ್ಯಾಸವನ್ನು ಸ್ವೀಕರಿಸಿ ಮಾತೃಶ್ರೀಯವರನ್ನು ಬಂಧುವರ್ಗದವರಲ್ಲಿ ಒಪ್ಪಿಸಿ ಊರಿನಿಂದ ಹೊರಟುಬಂದಾಗಲಾಗಲಿ, ಇಂಥ ವಿರೋಧವೇನೂ ಉದಯಿಸುವುದರಿಂದ, ಇದೆಲ್ಲಾ ಮತಾಂತರದವರ ದ್ವೇಷಪೂರ್ವಕಗಳಾದ ಕಲ್ಪನೆಗಳೆಂದೇ ಸಿದ್ಧಿಸುವುದು.

Shankara's father died when he was about three, and no difficulty seems to have been experienced on the solemn occation of his funeral and requiem cermonies, on account of suspicion on the part of his castemen. But very different was the case when his mother followed her huband. It is stated that the lady was excommunicated for giving birth to an illegemate son.

This indicates that the story of Shankara's illegetimacy was an invention and concocted at a time when Shankara had already achieved his wide-spread fame.

"ಶ್ರೀಶಂಕರರಿಗೆ ಅವರ ಮೂರನೆಯವಯಸ್ಸಿನಲ್ಲಿ ಅವರ ಪಿತೃವಿಯೋಗವು ಸಂಭವಿಸಿತು. ಆ ಸಮಯದಲ್ಲಿ, ಅವರ ತಂದೆಯವರ ಅಂತ್ಯಕ್ರಿಯಾದಿಗಳಲ್ಲಿ, ಯಾವ ವಿಧವಾದ ವಿರೋಧವಾಗಲಿ, ಅಡಚಣೆಯಾಗಲಿ ಉಂಟಾಗಲಿಲ್ಲ. ಆದರೆ, ಶ್ರೀಶಂಕರರ ಮಾತೃಶ್ರೀಯವರು ವೈಕುಂಠಯಾತ್ರೆಯನ್ನು ಮಾಡಿದ ಸಂದರ್ಭವು ಬಹು ಬದಲಾವಣೆಯದಾಗಿತ್ತು; ಅವರ ಬಂಧುಗಳು ಯಾರೂ ಅವರ ಕಾರ್ಯಗಳಲ್ಲಿ ಸಹಕರಿಸದೇ, ಶ್ರೀಶಂಕರರ ಜನನದಲ್ಲಿ ಸಂದೇಹಪಟ್ಟು, ಜನರು ಅವರನ್ನು ಬಹಿಷ್ಕರಿಸಿದರೆಂದು ಹೇಳುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"""ಇದನ್ನು ಪರಿಶೀಲಿಸಿದರೆ, ಶ್ರೀಶಂಕರರ ಜನನದ ವಿಷಯದಲ್ಲಿ ಈ ಕಥೆಯು, ಶ್ರೀಶಂಕರರ ದಿವ್ಯಕೀರ್ತಿಯು ಜಗತ್ತನ್ನೆಲ್ಲ ವ್ಯಾಪಿಸಿಕೊಂಡು ಪ್ರಸಿದ್ಧಿಪಡೆದ ಬಹು ಕಾಲದ ಮೇಲೆ, ಅಸೂಯಾಪರರಾದ ಪರಮತೀಯರಿಂದ ಕಲ್ಪಿತವಾಗಿದುದೆಂದು ಸ್ಪಷ್ಟವಾಗುವುದು.

"ಶ್ರೀಶಂಕರರು ತಮ್ಮ ಜನ್ಮಭೂಮಿಯಾಗಿದ್ದ ಕಾಲಟಿಯಲ್ಲಿಯೇ ಶ್ರೀಶಾರದಾ-ಪ್ರತಿಷ್ಠೆಯನ್ನು ಮಾಡಿ ಮಠವನ್ನು ಸ್ಥಾಪಿಸಬೇಕಾಗಿತ್ತು; ಇವನ್ನು ಬಿಟ್ಟು ಶೃಂಗಗಿರಿ-ಯಲ್ಲಿ ಮಠವನ್ನು ಸ್ಥಾಪಿಸಿದುದಕ್ಕೂ ಈ ಬಂಧುಗಳ ವಿರೋಧವೇ ಕಾರಣವೆಂದು"—ಈ ವಾದಿಗಳು ಹೇಳುತ್ತಾರೆ. ಬಂಧುಗಳ ವಿರೋಧವುಂಟಾದುದು ಅವರು ಮಾತೃಶ್ರೀಯವ ರಿಗೆ ಅಂತ್ಯಸಂಸ್ಕಾರವನ್ನು ಮಾಡುವಾಗ ಮಾತ್ರವೇ ಹೊರತು, ಅದಕ್ಕೆ ಮುಂಚಿತ-ವಾಗಿ ಅಲ್ಲ. ಶ್ರೀಶೃಂಗಗಿರಿಯಲ್ಲಿ ಶ್ರೀಶಾರದಾಪ್ರತಿಷ್ಠೆಯನ್ನು ಮಾಡಿ, ಶ್ರೀಸುರೇಶ್ವರ-ನನ್ನು ಅಲ್ಲಿ ಪ್ರಥಮಾಚಾರ್ಯರನ್ನಾಗಿ ಏರ್ಪಡಿಸಿ, ಪಾಠಪ್ರವಚನಗಳನ್ನು ಮಾಡುತ್ತಾ ಅಲ್ಲಿ ೧೨ವರ್ಷಗಳ ಕಾಲ ವಾಸವಾಗಿದ್ದರು. ಒಂದು ದಿವಸ ತಮ್ಮ ಮಾತೃಶ್ರೀಯವರು ಅಂತ್ಯದಶೆಯಲ್ಲಿರುವುದನ್ನು ಜ್ಞಾನದೃಷ್ಟಿಯಿಂದ ತಿಳಿದು, ಕೂಡಲೆ ಆಕಾಶಮಾರ್ಗದಿಂದ ತಾಯಿಯವರ ಸಮೀಪಕ್ಕೆ ಬಂದರು. ಇದಲ್ಲದೆ ಅವರ ಬಂಧುಗಳು ಸಹಕರಿಸದುದಕ್ಕೆ ಕಾರಣವು—"ಸನ್ಯಾಸಿಗೆ ಮಾತೃಸಂಸ್ಕಾರಾದಿಗಳನ್ನು ಮಾಡುವುದಕ್ಕೆ ಅಧಿಕಾರವಿಲ್ಲ"-ವೆಂಬುದೇ'— ಹೊರತು, ಬೇರೆ ಯಾವುದೂ ಅಲ್ಲ. ಆದುದರಿಂದ, ನಿರಭಿಮಾನಿಗಳಾದ ಶ್ರೀಶಂಕರರು ಶ್ರೀಶೃಂಗಗಿರಿಕ್ಷೇತ್ರದ ಮಾಹಾತ್ಮ್ಯೆಯನ್ನರಿತೇ ಅಲ್ಲಿ ಶ್ರೀಶಾರದೆಯನ್ನು ಪ್ರತಿಷ್ಠಿಸಿ ಪ್ರಧಾನಮಠವನ್ನು ಸ್ಥಾಪಿಸಿದರೆಂಬುದು ನಿಶ್ಚಿತವಾಗುತ್ತದೆ. ಇದರಿಂದಲೇ ಶ್ರೀಶೃಂಗಗಿರಿಯ ಪೀಠದ ಉತ್ಕರ್ಷವು ವ್ಯಕ್ತವಾಗುತ್ತದೆ.

ಶಿವಗುರುಃ ಸ ಜರಂಸ್ತ್ರಿಸಮೇ ಶಿಶಾವಮೃತ ಕರ್ಮವಶಃ ಸುತಮೋದಿತಃ
ಉಪನಿನೀಷಿತಸೂನುರಪಿ ಸ್ವಯಂ ನ ಹಿ ಯಮೋಽಸ್ಯ ಕೃತಾಕೃತ-
ಮೀಕ್ಷತೇ ॥೪॥

ಶ್ರೀಶಿವಗುರುಗಳು ಪುತ್ರನ ಲೋಕೋತ್ತರಚರಿತ್ರೆಗಳಿಂದ ಸಂತೋಷಪಡುತ್ತಿದ್ದ-ವರು, ಶಿಶುವಿಗೆ ಮೂರನೆಯ ವಯಸ್ಸಿನಲ್ಲಿ ಚೂಡಾಕರ್ಮಸಂಸ್ಕಾರವನ್ನು ನೆರವೇರಿಸಿ-ದರು. ಪರಮಮೇಧಾವಿಗಳಾಗಿದ್ದ ಅವರಿಗೆ ಐದನೆಯ ವಯಸ್ಸಿನಲ್ಲಿಯೇ ಉಪ-ನಯನಸಂಸ್ಕಾರಗಳನ್ನು ಮಾಡಬೇಕೆಂಬ ಉದ್ದೇಶವುಳ್ಳವರಾಗಿದ್ದರೂ. ತಮ್ಮ ಪ್ರಾರಬ್ಧಕರ್ಮವಶದಿಂದ ಮರಣವನ್ನು ಹೊಂದಿದರು; ನಾವು ಮಾಡಿರುವುದನ್ನೂ ಮಾಡಬೇಕಾದುದನ್ನೂ ಯಮನು ಗಮನಿಸುವನೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪನಯಂ ಕಿಲ ಪಂಚಮವತ್ಸರೇ ಪ್ರವರಯೋಗಯುತೇ-
ಸುಮುಹೂರ್ತಕೇ ।
ದ್ವಿಜವಧೂ ರ್ನಿಯತಾ ಜನನೀ ಶಿರೋಽರ್ವ್ಯಧಿತ ತುಷ್ಟಮನಾಃ ಸಹ
ಬಂಧುಭಿಃ ೪೦॥

ಶ್ರೀಶಿವಗುರುಗಳ ಉದ್ದೇಶವನ್ನು ಬಲ್ಲವರಾಗಿದ್ದ ಶ್ರೀಆರ್ಯಾಂಬೆಯವರು, ಅವರ ಸಂಕಲ್ಪದಂತೆ, ಶ್ರೀಶಂಕರರಿಗೆ, ಅವರ ಐದನೆಯ ವಯಸ್ಸಿನಲ್ಲಿಯೇ, ಉತ್ತಮಯೋಗ-ಸಹಿತವಾಗಿದ್ದ ಸುಮುಹೂರ್ತದಲ್ಲಿ, ಬಂಧುಸಹಿತರಾಗಿ, ಉಪನಯನಸಂಸ್ಕಾರವನ್ನು ನಿರ್ವಹಿಸಿದರು.

[ಐದನೆಯ ವಯಸ್ಸಿನ ಉಪನಯನಸಂಸ್ಕಾರವು ಬ್ರಹ್ಮಜ್ಞಾನಸಿದ್ಧಿಗೆ ಸಾಧಕವೆಂದು ಶಾಸ್ತ್ರಸಿದ್ಧವು.]

ಅಧಿಜಗೇ ನಿಗಮಾಂಶ್ಚತುರೋಽಪಿ ಸ ಕ್ರಮಶ ಏವ ಗುರೋಃ
ಸಷಡಂಗಕಾನ್ ।
ಅಜನಿ ವಿಸ್ಮಿತಮತ್ರ ಮಹಾಮತೌ ದ್ವಿಜಸುತೇಽಲ್ಪತನೌ ಜನತಾಮನಃ
॥೪೧॥

ವೇದಾಧ್ಯಯನಕ್ಕೆ ಅಧಿಕಾರವನ್ನು ಉಂಟುಮಾಡಿಕೊಡುವ ಉಪನಯನ-ಸಂಸ್ಕಾರವನ್ನು ಪಡೆದು, ಶ್ರೀಶಂಕರರು ಗುರುಕುಲವನ್ನಾಶ್ರಯಿಸಿ, ಯಥಾವಿಧಿಯಾಗಿ ಅಲ್ಪಕಾಲದಲ್ಲಿಯೇ ಷಡಂಗಸಹಿತಗಳಾದ ನಾಲ್ಕುವೇದಗಳನ್ನೂ ಅರ್ಥಸಹಿತವಾಗಿ ಅಧ್ಯಯನಮಾಡಿದರು. ಅತ್ಯಲ್ಪವಯಸ್ಸಿನಲ್ಲಿಯೇ ಸಕಲವಿದ್ಯಾಪಾರಂಗತರಾದ ಈ ಮಹಾಬುದ್ಧಿಶಾಲಿಗಳನ್ನು ಕಂಡು ಎಲ್ಲರೂ ಪರಮಾಶ್ಚರ್ಯವಂತರಾದರು.

ಹೆಚ್ಚೇನು?—

ವೇದೇ ಬ್ರಹ್ಮಸಮಸ್ತದಂಗನಿಚಯೇ ಗರ್ಗೋಪಮಸ್ತತ್ಕಥಾ-
ತಾತ್ಪರ್ಯಾರ್ಥವಿವೇಚನೇ ಗುರುಸಮಸ್ತತ್ಕರ್ಮಸಂವರ್ಣನೇ ।
ಸಾಕ್ಷಾಜ್ಜೈಮಿನಿರೇವ ತದ್ವಚನಜಪ್ರೋದ್ಬೋಧಕಂದೇ ಸಮೋ
ವ್ಯಾಸೇನೈವ ಸ ಮೂರ್ತಿಮಾನಿವ ಸಮೋ ವಾಣೀವಿಲಾಸೈರ್ವೃತಃ
॥೪೨॥

ಶ್ರೀಸರಸ್ವತೀದೇವಿಯ ವೈಭವದಿಂದ ಅಲಂಕೃತರಾಗಿರುವ ಶ್ರೀಶಂಕರರು, ವೇದಗಳ ವಿಷಯದಲ್ಲಿ ಸಾಕ್ಷಾದ್ಬ್ರಹ್ಮದೇವನೇ ಆಗಿದ್ದರು; ವೇದಾಂಗಗಳ ವಿಷಯದಲ್ಲಿ ಸಾಕ್ಷಾದ್ಗರ್ಗರೇ ಆಗಿದ್ದರು; ವೇದವೇದಾಂಗಗಳ ಅರ್ಥವನ್ನು ವಿವರಿಸುವುದರಲ್ಲಿ ಸಾಕ್ಷಾದ್ಬೃಹಸ್ಪತಿಗಳೇ ಆಗಿದ್ದರು; ವೇದೋಪದಿಷ್ಟಗಳಾಗಿರುವ ಕರ್ಮಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ವಿವರಿಸುವುದರಲ್ಲಿ ಸಾಕ್ಷಾಜ್ಜೈಮಿನಿಮುನಿಗಳೇ ಆಗಿದ್ದರು; ವೇದವೇದಾಂತಗಳ ಪರಮತಾತ್ಪರ್ಯವಾದ ಪಾರಮಾರ್ಥಿಕತತ್ತ್ವವನ್ನು ಪ್ರತಿಪಾದಿಸುವುದರಲ್ಲಿ ಸಾಕ್ಷಾದ್ವ್ಯಾಸಮುನಿಗಳೇ ಆಗಿದ್ದರು.

೫. ಶ್ರೀಶಂಕರರ ಲೀಲೆ.

ಸ ಹಿ ಜಾತು ಗುರೋಃ ಕುಲೇ ವಸನ್ ಸವಯೋಭಿಃ ಸಹ ಭೈಕ್ಷ್ಯ-
ಲಿಪ್ಸಯಾ ।
ಭಗವಾನ್ ಭವನಂ ದ್ವಿಜನ್ಮನೋ ಧನಹೀನಸ್ಯ ವಿವೇಶ ಕಸ್ಯಚಿತ್
॥೪೩॥

ಶ್ರೀಶಂಕರರು ಗುರುಕುಲವಾಸದಲ್ಲಿದ್ದಾಗ, ಅದರ ನಿಯಮಗಳಿಗನುಸಾರವಾಗಿ ತಮ್ಮ ಇತರ ಸಹವಾಸಿಗಳಾದ ವಿದ್ಯಾರ್ಥಿಗಳೊಡನೆ, ಎಂದಿನಂತೆ, ಭಿಕ್ಷಾಟನೆಗಾಗಿ ಒಂದು ದಿನ ಧನಹೀನನಾಗಿ ಅತ್ಯಂತಬಡತನದಲ್ಲಿದ್ದ ಒಬ್ಬ ಬಡಬ್ರಾಹ್ಮಣನ ಮನೆ-ಯನ್ನು ಪ್ರವೇಶಿಸಿ, ಭಿಕ್ಷೆಯನ್ನು ಬೇಡಿದರು.

[ಧರ್ಮನಿಷ್ಠರಾಗಿದ್ದ ಅವರನ್ನು ಉದ್ಧರಿಸುವುದೇ ಅವರ ಉದ್ದೇಶವಾಗಿತ್ತು.]

ತಮುವೋಚತ ತತ್ರ ಸಾದರಂ ವಟುವರ್ಯಂ ಗೃಹಿಣಃ ಕುಟುಂಬಿನೀ ।
ವಿಧಿನಾ ಬಲು ವಂಚಿತಾ ವಯಂ ವಿತರೀತುಂ ವಟವೇ ನ ಶಕ್ನುಮಃ
॥೪೪॥

ಆ ಗೃಹಸ್ಥನ ಹೆಂಡತಿಯು, ವಟುಶ್ರೇಷ್ಠರಾದ ಶ್ರೀಶಂಕರರನ್ನು ಕಂಡು, ಪರಮಾದರತುಂಬಿದವಳಾಗಿ, ಅವರನ್ನು ಕುರಿತು– "ದುರದೃಷ್ಟದಿಂದ ವಂಚಿತರಾಗಿರುವ ನಾವು ಹಾ,! ಇಂಥ ವಟುವಿಗೆ ಏನನ್ನು ನೀಡಲೂ ಸಮರ್ಥರಾಗಿಲ್ಲವಲ್ಲ."– ಎಂದು ಉಸುರಿದಳು.

ಇತಿ ದೀನಮುದೀರಯಂತ್ಯಸೌ ಪ್ರದದಾನಾಮಲಕಂ ವ್ರತೀಂದವೇ।
ಸ ಮುನಿರ್ಮುರಭಿತ್ಕುಟುಂಬಿನೀಮುಪತಸ್ಥೌ ಕರುಣಾರ್ದ್ರಧೀಃ
ಸುಧೀಃ ॥೪೫॥

ಹೀಗೆ ದೈನ್ಯದಿಂದ ಹೇಳಿ, ಮನೆಯಲ್ಲಿ ಹುಡುಕಿ, ಅಕಸ್ಮಾತ್ತಾಗಿ ದೊರಕಿದ, ಒಣಗಿಹೋಗಿದ್ದ, ಒಂದು ನೆಲ್ಲಿಯಕಾಯನ್ನು ಆ ವಟುಚಂದ್ರರಿಗೆ ಅರ್ಪಿಸಿದಳು. ಶಿಷ್ಟಾ-ಚಾರಸಂಪನ್ನರಾಗಿದ್ದ ಆ ದ್ವಿಜದಂಪತಿಗಳ ದಾರಿದ್ರ್ಯದುಃಖದಿಂದಲೂ, ಆಕೆಯ ತುಂಬುಹೃದಯದ ಆದರದಿಂದಲೂ ತೃಪ್ತರಾಗಿ, ಕರುಣಾರ್ದ್ರಹೃದಯರಾದ ಶ್ರೀಶಂಕರರು ಮುರಹರನಾದ ಶ್ರೀಮಹಾವಿಷ್ಣುವಿನ ಪತ್ನಿಯಾದ ಶ್ರೀಮಹಾಲಕ್ಷ್ಮೀದೇವಿಯನ್ನು ಕನಕಧಾರಾಸ್ತೋತ್ರದಿಂದ ಸ್ತುತಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮುನಾ ಸ್ತವನೇನ ತೋಷಿತಾ ಕಮಲಾ ತದ್ಭವನಂ ಸಮಂತತಃ ।
ಕನಕಾಮಲಕೈರಪೂರಯಜ್ಜನತಾಯಾ ಹೃದಯಂ ಚ ವಿಸ್ಮಯೈಃ
॥೪೬॥

ಶ್ರೀಶಂಕರರ ಈ ಸ್ತುತಿಯಿಂದ ತುಷ್ಟಳಾದ ಶ್ರೀಲಕ್ಷ್ಮೀದೇವಿಯು ಆ ಧರಿದ್ರದ್ವಿಜ-ದಂಪತಿಗಳ ಮನೆ ಸನ್ನೆಲ್ಲ ಚಿನ್ನದ ನೆಲ್ಲಿಯಕಾಯಿಗಳಿಂದಲೂ, ಅದನ್ನು ಕಂಡು ಕೇಳಿದ ಜನಗಳ ಮನಸ್ಸನ್ನೂ ಪರಮಾಶ್ಚರ್ಯದಿಂದಲೂ ತುಂಬಿಸಿದಳು!

[ಶ್ರೀಶಂಕರರ ಸ್ತುತಿಗೆ ಪ್ರಸನ್ನಳಾಗಿ ಪ್ರತ್ಯಕ್ಷಳಾಗಲು, ಈ ದಂಪತಿಗಳಿಗೆ ಧನ-ಸಂಪತ್ತನ್ನು ಅನುಗ್ರಹಿಸಬೇಕೆಂದು ಶ್ರೀಶಂಕರರು ಪ್ರಾರ್ಥಿಸಿದರು. ಆಗ ಶ್ರೀಲಕ್ಷ್ಮೀ-ದೇವಿಯು– 'ಈ ಜನ್ಮದಲ್ಲಿ ಇವರಿಗೆ ಸಂಪತ್ತಿನ ಯೋಗವಿಲ್ಲವಲ್ಲ'– ಎಂದು ತಿಳಿಸಿದಳು. ಆಗ ಶ್ರೀಶಂಕರರು– ಆದರೂ ನನ್ನಂಥ ವಟುವಿಗೆ ತಮ್ಮ ಸರ್ವಸ್ವದಂತೆ ಈ ನೆಲ್ಲಿಯಕಾಯಿಯನ್ನು ಭಿಕ್ಷೆನೀಡಿದ್ದಾಳಷ್ಟೆ; ಇದಕ್ಕೆ ಯದ್ಯಪಿ ಫಲವು ಇವರ ಮುಂದಿನ ಜನ್ಮದಲ್ಲಿ ಲಭಿಸುವಂಥದ್ದಾದರೂ ನನ್ನ ಮೇಲೆ ದಯೆಮಾಡಿ ಆ ಫಲವನ್ನು ಈಗಲೇ ಅನುಗ್ರಹಿಸು"– ಎಂದು ಪ್ರಾರ್ಥಿಸಲಾಗಿ, ಪ್ರಸನ್ನಳಾಗಿ ಶ್ರೀಲಕ್ಷ್ಮೀದೇವಿಯು 'ತಥಾಸ್ತು'– ಎಂದು ಹೇಳಿ ಅಂತರ್ಹಿತಳಾದಳು– ಅಷ್ಟರಲ್ಲಿಯೇ ಆ ದಂಪತಿಗಳ ಮನೆಯು ಪೂರ್ಣವಾಗಿ ಸುವರ್ಣಾಮಲಕಲಗಳಿಂದ ತುಂಬಿತು. ಈ ಸಂದರ್ಭದಿಂದ-ಶ್ರೀಶಂಕರರ ಧರ್ಮಿಷ್ಠರ ವಿಷಯದಲ್ಲಿನ ದಯಾಪರತ್ವ, ದೇವತಾಭಕ್ತಿಪೂರ್ಣತ್ವ ಸತ್ಪಾತ್ರದ ದಾನದ ಮಹತ್ವ– ಮುಂತಾದ ವಿಷಯಗಳು ವ್ಯಕ್ತವಾಗುವುವು. ಶ್ರೀಶಂಕರರ ಲೀಲೆಗಳಲ್ಲಿ ಇದು ಒಂದಂಶಮಾತ್ರವು. ಶ್ರೀಭಗವತ್ಪಾದರಿಂದ ರಚಿತವಾಗಿ-ರುವ ಈ ಕನಕಧಾರಾಸ್ತೋತ್ರದ ಪಠಣೆಯು ಸಂಪತ್ಸಮೃದ್ಧಿಪ್ರದವೆಂದು ಸರ್ವ ಪ್ರಸಿದ್ಧವಿದೆ.]

೬. ಶ್ರೀಶಂಕರರ ಪೂರ್ಣವಿದ್ಯಾಫಲಸಿದ್ಧಿ

ಕಾಮಂ ವಸ್ತುವಿಚಾರತೋऽಚ್ಛಿನದಯಂ ಪಾರುಷ್ಯಹಿಂಸಾಕೃಧಃ
ಕ್ಷಾಂತ್ಯಾ ದೈನ್ಯಪರಿಗ್ರಹಾನೃತಕಥಾಲೋಭಾಂಸ್ತು ಸಂತೋಷತಃ ।
ಮಾತ್ಸರ್ಯಂ ತ್ವನಸೂಯಯಾ ಮಮಹಾಮಾಸಾ ಚಿರಂ ಭಾವಿತ-
ಸ್ವಾನ್ಯೋತ್ಕರ್ಷಗುಣೇನ ತೃಪ್ತಿಗುಣತಸ್ತೃಷ್ಣಾ ಪಿಶಾಚೀಮಪಿ॥೪೭॥

ಪ್ರಮಾಣಯುಕ್ತ್ಯನುಭವಗಳ ಸಾಮರಸ್ಯದಿಂದ 'ಅನಿತ್ಯಮಸುಖಂ ಲೋಕಂ'-ಎಂಬ ಗೀತೋಕ್ತಿಯಂತೆ, ಸಮಸ್ತದ್ವೈತಪ್ರಪಂಚವನ್ನೂ ಅನಿತ್ಯ ಮತ್ತು ದುಃಖ-ವೆಂಬುದನ್ನು ಮನಗಂಡು ಐಹಿಕಾಮುಷ್ಮಿಕ ಸಕಲವಿಷಯಗಳಲ್ಲಿಯೂ ಕಾಮನೆ ಯನ್ನು ಕತ್ತರಿಸಿಹಾಕಿ, ಪೂರ್ಣದೃಢವಿರಕ್ತಿಸಂಪನ್ನರಾದರು; ಸಹನಾಶಕ್ತಿಯಿಂದ ಕಾಠಿಣ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಂಸೆ, ಕೋಪಗಳನ್ನು ತ್ಯಜಿಸಿದರು; ಸಂತೋಷಗುಣದಿಂದ ದೈನ್ಯ, ಪರಿಗ್ರಹ, ಅನೃತ-ಕಥನ ಲೋಭಾದಿಗಳನ್ನು ಜಯಿಸಿದರು; ಅಸೂಯಾತ್ಯಾಗದಿಂದ ಮಾತ್ಸರ್ಯವನ್ನೂ, ತನಗಿಂತ ಹೆಚ್ಚಿನವರುಇರುವರೆಂಬುದನ್ನು ಭಾವಿಸುತ್ತ ಮದ ಮತ್ತು ಅಹಂಕಾರಗಳನ್ನು ದೂರಮಾಡಿದರು; ತೃಪ್ತಿಗುಣದಿಂದ ಅತ್ಯಾಶೆಯುಪಿಶಾಚಿಯನ್ನೂ ನಾಶಮಾಡಿಕೊಂಡರು. [ಸದ್ವಿದ್ಯಾಲಾಭದ ಫಲವೇ ಇದು.]

೭. ಶ್ರೀ ಶಂಕರರ ಮಾತೃಶುಶ್ರೂಷಾ

ಇತಿ ಸಪ್ತಮಹಾಯನೇಽಖಿಲಶ್ರುತಿಪಾರಂಗತತಾಂ ಗತೋ ವಟುಃ ।
ಪರಿವೃತ್ಯ ಗುರೋಃ ಕುಲಾದ್ಗೃಹೇ ಜನನೀಂ ಪರ್ಯಚರನ್ಮ-
ಹಾಯಶಾಃ ॥೪೮॥

ಈ ರೀತಿಯಲ್ಲಿ ಏಳನೆಯ ವಯಸ್ಸಿನಲ್ಲಿಯೇ ಸಕಲವಿದ್ಯಾಪಾರಂಗತರಾದ ಶ್ರೀಶಂಕರವಟುಗಳು, ಶ್ರೀಗುರುವರ್ಯರಿಗೆ ಉಚಿತವಾದ ಗುರುದಕ್ಷಿಣೆಯನ್ನು ಅರ್ಪಿಸಿ, ಅವರ ಹೃತ್ಪೂರ್ವಕವಾದ ಆಶೀರ್ವಾದ ಸಮ್ಮತಿಗಳನ್ನು ಪಡೆದು, ತಮ್ಮ ಮನೆಗೆ ಬಂದು, ತಮ್ಮ ಮಾತೃಶ್ರೀಯವರ ಸೇವೆಯಲ್ಲಿ ನಿರತರಾಗಿದ್ದರು.

ಜಾತು ಮಂದಗಮನಾಸ್ಯ ಹಿ ಮಾತಾ ಸ್ನಾತುಮಂಬುನಿಧಿಗಾಂ-
ಪ್ರತಿ ಯಾತಾ ।
ಆತಪೋಗ್ರಕಿರಣೈಃ ಪರಿಗೀತೈಃ ಸಾ ತಪಃಕೃಶತನುರ್ವಿಲಲಂಬೇ
॥೪೯॥

ಹೀಗಿರುವಲ್ಲಿ, ಗ್ರೀಷ್ಮಕಾಲದ ಒಂದು ದಿವಸ, ಎಂದಿನಂತೆ, ಮನೆಗೆ ದೂರದಲ್ಲಿ ಹರಿಯುತ್ತಿದ್ದ, ಸಮುದ್ರಗಾಮಿನಿಯಾದ ಪೂರ್ಣಾನದಿಯಲ್ಲಿ ಸ್ನಾನಕ್ಕಾಗಿ ಹೋಗಿದ್ದ ವಯೋವೃದ್ಧರಾಗಿ ಮಂದಗಮನರಾಗಿದ್ದ, ಆರ್ಯಾಂಬಾಮಾತೃಶ್ರೀಯವರು, ಸೂರ್ಯಬಿಂಬದ ತೀಕ್ಷ್ಣವಾದ ಬಿಸಿಲಿನ ತಾಪಕ್ಕೆ ಗುರಿಯಾಗಿ, ತಪಸ್ಸಿನಿಂದ ಕೃಶರಾಗಿದ್ದ ಅವರು ಮನೆಗೆ ಬರಲಾರದೆ ವಿಳಂಬಮಾಡಿದರು

ಶಂಕರಸ್ತದನು ಸಂಗತಮೋಹಾಂ ತಾಂ ಜನೇನ ಸದನಂ ಸಹ ನಿನ್ಯೇ ।
ಅಸ್ತವೀಜ್ಜಲಧಿಗಾಂ ಚ ನಿನೀಷುಃ ಸದ್ಮನೋಽಂಕತಿಮುಷಾ ಸ್ವಜನನ್ಯೈ
॥೫೦॥

ದಾರಿಯಲ್ಲಿ ಮೂರ್ಛಿತರಾಗಿ ಬಿದ್ದಿದ್ದ ಅವರನ್ನುಕೇಳಿ ತಿಳಿದು,, ಶ್ರೀಶಂಕರರು ಕೂಡಲೆ ಓಡಿಹೋಗಿ, ಬಂಧುಜನಗಳ ಸಹಾಯದಿಂದ ಅವರನ್ನು ಮನೆಗೆ ಕರೆತಂದರು ಮತ್ತು ತಾಯಿಯವರ ಸೌಕರ್ಯಕ್ಕಾಗಿ ಮನೆಯ ಹತ್ತಿರಕ್ಕೆ ಬರುವಂತೆ ಪೂರ್ಣಾನದಿಯನ್ನು ಪ್ರಾರ್ಥಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

[ಎಲ್ಲ ವಸ್ತುಗಳಿಗೂ ಅಧಿಷ್ಠಾನದೇವತೆಯಿರುತ್ತದೆ. ಜಲಮಯವಾದ ನದಿಯು ಯದ್ಯಪಿ ಜಡವಸ್ತುವೇ ಆದರೂ, ಅದರ ಅಧಿಷ್ಠಾನದೇವತೆಯ ಪ್ರೇರಣೆಗೆ ಅಧೀನ ವಾಗಿರುತ್ತದೆ.]

ಪ್ರಾತರೇವ ಸಮಲೋಕತ ಲೋಕಃ ಶೀತವಾತಹೃತಶೀಕರಪೂತಃ ।
ನೂತನಾಮಿವ ಧುನೀಂ ಪ್ರವಹಂತೀಂ ಮಾಧವಸ್ಯ ಸಮಯಾ ಸದನಂ ತಾಂ ॥೫೧॥

ಮಾರನೆಯ ದಿನ ಬೆಳಗಾಗುವ್ರದರೊಳಗೆ, ತಂಪಾದ ಗಾಳಿಯಿಂದ ತರಲ್ಪಟ್ಟ ಆ ನದಿಯ ತುಂತುರುಹನಿಗಳಿಂದ ಪವಿತ್ರರಾದ ಜನರೆಲ್ಲರೂ, ಹೊಸದಾಗಿ ಬಂದಂತಿದ್ದ, ಶ್ರೀಮಾಧವಮಂದಿರದ ಸಮೀಪದಲ್ಲಿ ಹರಿಯುತ್ತಿದ್ದ ಪೂರ್ಣಾನದಿಯನ್ನು ಆಶ್ಚರ್ಯ-ಪಡುತ್ತ ಕಂಡರು.

೮. ಶ್ರೀಶಂಕರರ ಸನ್ಯಾಸಗ್ರಹಣಸಂಕಲ್ಪ.

ಅಥ ಜಾತು ಸುತಸ್ಯ ಭಾವಿನಂ ಚರಿತಂ ಸಾ ನಿಶಮಯ್ಯ ವತ್ಸಲಾ ।
ಮರುತಾ ಕದಲೀವ ಕಂಪಿತಾ ಭೃಶಮಾಗಾಚ್ಛುಚಮಲ್ಪಚೇತನಾ ॥೫೨॥

ಹೀಗೆ ಶ್ರೀಶಂಕರರು ಮಾತೃಸೇವಾತತ್ಪರರಾಗಿರಲು, ಒಂದು ದಿವಸ ಶ್ರೀಭಗವತ್ಪಾದರ ಅವತಾರವನ್ನು ಅರಿತಿದ್ದ ಅಗಸ್ತ್ಯಾದಿಮಹರ್ಷಿಗಳು, ಅವರ ಸಂದರ್ಶನಕ್ಕಾಗಿ ಅವರ ಮನೆಗೆ ಬಂದರು. ಆತಿಥ್ಯದಿಂದ ಸಂತುಷ್ಟರಾಗಿದ್ದ ಅವರನ್ನು ಕರಿತ ಶ್ರೀಆರ್ಯಾಂಬೆಯವರು ತಮ್ಮ ಪುತ್ರರ ಮುಂದಿನ ಭವಿಷ್ಯವನ್ನು ಕುರಿತು ಪ್ರಶ್ನೆ-ಮಾಡಿದಾಗ, ಅವರ ಅಲ್ಪಾಯುಷ್ಯವನ್ನು ಕೇಳಿತಿಳಿದು, ಲೋಕಸಾಮಾನ್ಯದ ತಿಳವಿನ ಅವರು ಬಿರುಗಾಳಿಗೆ ಸಿಕ್ಕಿದ್ದ ಬಾಳೆಯಗಿಡದಂತೆ ಅತಿಯಾಗಿ ದುಃಖಿತರಾದರು.

ಅಥ ಶೋಕಪರೀತಚೇತನಾಂ ದ್ವಿಜರಾಡಿತ್ಥಮುವಾಚ ಮಾತರಂ ।
ಅವಗಮ್ಯ ತು ಸಂಸೃತಿಸ್ಥಿತಿಂ ಕಿಮಕಾಂಡೇ ಪರಿದೇವನಾ ತವ ॥೫೩॥

ದುಃಖಾತಿರೇಕದಿಂದ ಶೋಕಿಸುತ್ತಿದ್ದ ತಾಯಿಯವರನ್ನು ಸಮಾಧಾನಪಡಿಸುತ್ತ, ಅವರನ್ನು ಕುರಿತು ಶ್ರೀಶಂಕರರು ಹೇಳಿದರು– "ಅಮ್ಮ, ಸಂಸಾರದ ಇಂಥ ಸ್ಥಿತಿಯನ್ನು ತಿಳಿದೇ ಇರುವ ನಿಮಗೆ ಈ ವಿಷಯದಲ್ಲಿ ಶೋಕವೇಕಮ್ಮ;

ಪ್ರಬಲಾನಿಲವೇಲ್ಲಿತಾಂಭಸಃ ಸಮುದಂಚಜ್ಜಲಬಿಂದುಚಂಚಲೇ ।
ಅಪಿ ಮೂಢಮತಿಃ ಕಳೇವರೇ ಕುರುತೇ ಹಾ ಸ್ಥಿರಬುದ್ಧಿಮಂಬಿಕೇ॥೫೪॥

"ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಅಲ್ಲೋಲಕಲ್ಲೋಲವಾಗಿರುವ ಸಮುದ್ರದ ನೀರಿನ ಹನಿಯಂತೆ, ಅತ್ಯಂತಚಂಚಲವಾಗಿರುವ ಈ ದೇಹವನ್ನು, ಇದು ಸ್ಥಿರವಾಗಿರುವುದೆಂದು ಮೂಢಬುದ್ಧಿಯವನೇ ತಿಳಿಯುವನು;

Sri Vidyabharathi Book Centre, Sringeri

CC-O. In Public Domain. Digitized by eGangotri

ಕತಿ ನಾಮ ಸುತಾ ನ ಲಾಲಿತಾ ಕತಿ ವಾ ನೇಹ ಸುಖಾನ್ಯಭುಂಜಿ ಹಿ ।
ಕ್ವ ನು ತೇ ಕ್ವ ಚ ತಾನಿ ವಾ ವಯಂ ಭವಸಂಗಃ ಖಲು ಪಾಂಥಸಂಗಮಃ
॥೫೫॥

ಅನಾದಿಕಾಲದ ಅಸಂಖ್ಯಾತಜನ್ಮಗಳಲ್ಲಿ ಎಷ್ಟು ಜನಮಕ್ಕಳನ್ನು ನೀನು ಲಾಲಿಸಿಲ್ಲ? ಈ ಜನ್ಮದಲ್ಲಿಯೂ ಎಷ್ಟು ಸುಖವನ್ನು ಅನುಭವಿಸಿಲ್ಲ? ಅವರೆಲ್ಲ ಈಗ ಎಲ್ಲಿ ಆ ಸುಖವೆಲ್ಲ ಈಗ ಎಲ್ಲಿ, ನಾವೆಲ್ಲಿ? ಸಂಸಾರದಲ್ಲಿ ಬಳಗದವರ ಸಂಬಂಧವೂ, ಮಾರ್ಗಮಧ್ಯದಲ್ಲಿನ ಪ್ರಯಾಣಿಕರ ಸಮಾಗಮದಂತೆ ತಾತ್ಕಾಲಿಕಮಾತ್ರವು;

ಭ್ರಮತಾಂ ಭವವರ್ತ್ಮನಿ ಭ್ರಮಾನ್ನ ಹಿ ಕಿಂಚಿತ್ಸುಖಮಂಬ ಲಕ್ಷಯೇ।
ತದವಾಪ್ಯ ಚತುರ್ಥಮಾಶ್ರಮಂ ಪ್ರಯತಿಷ್ಯೇ ಭವಬಂಧಮುಕ್ತಯೇ
॥೫೬॥

ಅವಿಚ್ಛಿನ್ನಜನ್ಮಮರಣಪರಂಪರಾಪ್ರಾಪ್ತಿರೂಪವಾಗಿರುವ ಈ ಸಂಸಾರಮಹಾ-ಮಾರ್ಗದಲ್ಲಿ ಆಸಕ್ತರಾಗಿ ಭ್ರಾಂತಿಯಿಂದ ಅಲೆದಾಡುತ್ತಿರುವವರಿಗೆ ಏನೊಂದು ಸುಖ-ವನ್ನೂ ನಾನು ಕಾಣೆನು. ಆದ್ದರಿಂದ, ನಾನು ನಾಲ್ಕನೆಯ ಶ್ರೇಷ್ಠವಾದ ಸನ್ಯಾಸಾ-ಶ್ರಮವನ್ನು ಸ್ವೀಕರಿಸಿ, ಈ ದುರಂತಸಂಸಾರಬಂಧದಿಂದ ವಿಮುಕ್ತನಾಗಲು ಪ್ರಯತ್ನ-ವನ್ನು ಮಾಡುತ್ತೇನೆ'' –ಎಂದು

ವೃದ್ಧಾಮನನಾಂ ಸುತೀಂ ನ ಶಶಾಕ ದಿತ್ಸತೀಂ ತದಾ ।
ಅನುಜ್ಞಾಂ ಭಿಕ್ಷುವೃತ್ತಾ ತಾಂ ಕುರ್ವನ್ ಕಿಂಚಿದ್ವ್ಯಚಿಂತಯತ್
॥೫೭॥

ಅತಿವೃದ್ಧರೂ, ಪತಿವಿಯೋಗದುಃಖಿತರೂ, ಏಕಮಾತ್ರಪುತ್ರರೂ ಆಗಿದ್ದ ಶ್ರೀ ಆರ್ಯಾಂಬೆಮಾತೃಶ್ರೀಯವರು, ಮಗನ ಸನ್ಯಾಸಸ್ವೀಕಾರಕ್ಕೆ ಅನುಮೋದಿಸಲಾರದೇ ಇರಲಾಗಿ, ಇದಕ್ಕೆ ಅವರು ಅನುಮತಿಯನ್ನು ಕೊಡುವಂತೆ ಮಾಡುವ ಸನ್ನಿವೇಶವನ್ನು ಚಿಂತಿಸುತ್ತಿದ್ದರು. [ಯಾವುದಕ್ಕೂ ತಕ್ಕ ಕಾಲವು ಅಗತ್ಯವು.]

ಅಥ ಕದಾಚಿದ ಸೌತು ಮಿಮಂಕ್ಷಯಾ ಬಹುಜಲಾಂ ಸರಿತಂ ಸಮು-
ಪಾಯಯೌ ।
ಸಪದಿ ಕಶ್ಚನ ತಸ್ಯ ಸಮಗ್ರಹೀಜ್ಜಲಚರಶ್ಚರಣೇ ಜಲಮಿಯುಷಃ
॥೫೮॥

ಹೀಗಿರುವಲ್ಲಿ, ಒಂದುದಿನ ಎಂದಿನಂತೆ, ಶ್ರೀಶಂಕರರು, ಸ್ನಾನಮಾಡುವುದಕ್ಕಾಗಿ ಮನೆಯ ಸಮೀಪದಲ್ಲಿಯೇ ಹರಿಯುತ್ತಿದ್ದ ಪೂರ್ಣಪ್ರವಾಹದ ಪೂರ್ಣಾನದಿಯನ್ನು ಕುರಿತು ಹೋಗಿ, ನೀರಿನಲ್ಲಿ ಇಳಿಯುವಷ್ಟರಲ್ಲಿಯೇ ಒಂದು ಮೊಸಳೆಯು ಎಲ್ಲಿಂದಲೋ ಬಂದು, ಅವರ ಕಾಲನ್ನು ಬಲವಾಗಿ ಹಿಡಿದುಕೊಂಡಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ಯಜತಿ ನೂನಮಸೌ ಚರಣಂ ಚಲೋ ಜಲಚರೋಽಂಬ ತವಾನು-
ಮತೇನ ಮೇ ।
ಸಕಲಸನ್ನ್ಯ(ಸನೇ) ಪರಿಕಲ್ಪಿತೇ ಯದಿ ತವಾನುಮತಿಃ ಪರಿಕಲ್ಪ್ಯತೇ
॥೫೯॥

"ಅಮ್ಮ, ನಿನ್ನ ಅನುಮತಿಯಿಂದ ನಾನು ಸರ್ವಕರ್ಮಸನ್ಯಾಸವನ್ನು ಸಂಕಲ್ಪಿಸಿ-ದರೆ. ಆಗ ನಿಶ್ಚಿತವಾಗಿಯೂ ಚಪಲಸ್ವಭಾವದ ಈ ಜಲಚರಪ್ರಾಣಿಯು ನನ್ನ ಕಾಲನ್ನು ಬಿಟ್ಟರೂ ಬಿಡಬಹುದಮ್ಮ; ಆದ್ದರಿಂದ ನಿನ್ನ ಅನುಮತಿಯಿದ್ದರೆ ನಾನು ಸನ್ಯಾಸವನ್ನು ಸಂಕಲ್ಪಿಸುತ್ತೇನೆ"– ಎಂದು.

ಇತಿ ಶಿಶೌ ಚಕಿತಾ ವದತಿ ಸ್ಫುಟಂ ವ್ಯಥಿತಸಾನುಮತಿಂ ದ್ರುತಮಂಬಿಕಾ ।
ತದನು ಸನ್ನ್ಯಸನಂ ಮನಸಾ ವ್ಯಧಾಪಥ ಮುಮೋಚ ಶಿಶುಂ ಖಲನ-
ಕ್ರತಃ ॥೬೦॥

ಶಿಶುವು ಈ ರೀತಿಯಾಗಿ ಗಟ್ಟಿಯಾಗಿ ಹೇಳಲು, ಭಯಗ್ರಸ್ತರಾದ ಆರ್ಯಾಂಬಿಕೆ-ಯವರು 'ಹಾಗೆಯೇ ಮಾಡಪ್ಪ'– ಎಂದು ಕೂಡಲೆ ತಮ್ಮನುಮತಿಯನ್ನು ನೀಡಿದರು ಶ್ರೀಶಂಕರರು ಆಕ್ಷಣವೇ ಸನ್ಯಾಸವನ್ನು ಮನಸ್ಸಿನಿಂದ ಸಂಕಲ್ಪಿಸಿದರು. ಆ ದುಷ್ಟ-ಮೊಸಳೆಯೂ ಸಹ ಆಗ ಅವರ ಕಾಲನ್ನು ತ್ಯಜಿಸಿ ಹೊರಟುಹೋಯಿತು.

[ಸನ್ಯಾಸಿಯಾಗಿ ಬದುಕಿದ್ದರೆ, ಮಗನ ಮುಖವನ್ನಾದರೂ ನೋಡಿಕೊಂಡಿರ-ಲಾದೀತೆಂಬ ಆಸೆಯಿಂದ ಶ್ರೀಆರ್ಯಾಂಬೆಯವರು ಅನುಮತಿಯನ್ನಿತ್ತರು

ಮೊಸಳೆಯ ಬಾಯಿಗೆ ಸಿಕ್ಕಿದವನು ಅದರಿಂದ ತಪ್ಪಿಸಿಕೊಂಡು ಬಂದರೆ, ಅವನ್ನು ಹೊಸದಾಗಿ ತಾಯಿಯ ಹೊಟ್ಟೆಯಿಂದ ಹುಟ್ಟಬಂದಂತೆಯೇ ಸರಿ"– ಎಂದು ಲೋಕದಲ್ಲಿ ಗಾದೆಯಿದೆ; ಹೀಗಿರುವಲ್ಲಿ ಮೊಸಳೆಯು ವಾಸ್ತವವಾಗಿಯೂ ಶ್ರೀಶಂಕರ-ರನ್ನು ಹಿಡಿದಿದ್ದರೆ ಅದರಿಂದ ಅವರು ಪಾರಾಗವುದು ಅಶಕ್ಯವೇ ಆಗುತ್ತಿತ್ತು. ತಮ್ಮ ಸನ್ಯಾಸಸ್ವೀಕಾರಕ್ಕೆ ತಾಯಿಯವರ ಅನುಮತಿಯನ್ನು ಹೇಗಾದರೂ ಪಡೆಯಬೇಕೆಂದು ಶ್ರೀಶಂಕರರು ಮೊಸಳೆಯು ತಮ್ಮನ್ನು ಹಿಡಿದಂತೆ ನಟನೆಯನ್ನು ಮಾಡಿದರು"–ಎಂದು ಕೆಲವರು ಅಭಿಪ್ರಾಯಪಡುವರು. ವಸ್ತುಸ್ಥಿತಿಯ ಪರಿಜ್ಞಾನವಿಲ್ಲದದೋಷದ್ದು ಇಂಥ ಅಭಿಪ್ರಾಯವು. ಈ ವಂಚನೆಯೇಕೆ? ಅವರ ಅಭಿಪ್ರಾಯವನ್ನು ತಿರಸ್ಕರಿಸಿಯೇ ಸನ್ಯಾಸವನ್ನು ಅವರು ಸ್ವೀಕರಿಸ ಬಾರದಾಗಿತ್ತೆ?

ವಸ್ತುಸ್ಥಿತಿಯೇನೆಂದರೆ– ಶ್ರೀವೃಷಾಚಲೇಶ್ವರನು ಸ್ವಪ್ನದಲ್ಲಿಬಂದು, ಕೇಳಿದಾಗ ಶ್ರೀಶಿವಗುರುಗಳು ಅಲ್ಪಾಯುವಾದ ಪುತ್ರನನ್ನೇ ಒಪ್ಪಿ ಪ್ರಾರ್ಥಿಸಿದ್ದರು. ಮಗನ ಲೋಕೋತ್ತರಮಹಿಮೆಯನ್ನು ದಿನದಿನವೂ ಕಣ್ಣಾರೆಕಾಣುತ್ತಿದ್ದ ಶ್ರೀಆರ್ಯಾಂಬೆ-

Sri Vidyabharathi Book Centre, Sringeri

CC-O. In Public Domain. Digitized by eGangotri

ಯವರಿಗೆ, ಇದು ಮನಸ್ಸಿನಲ್ಲಿ ದೊಡ್ಡ ಆತಂಕವೇ ಆಗಿತ್ತು. ಮಹರ್ಷಿಗಳು ಮನೆಗೆಬಂದಾಗ ಅವರು ಶ್ರೀಶಂಕರರ ಆಯುಃಪರಿಮಿತಿಯನ್ನೇ ಮುಖ್ಯವಾಗಿ ಪ್ರಶ್ನಿಸಿದರು. ಶ್ರೀಅಗಸ್ತ್ಯರು ಅವರಿಗೆ ಎಂಟೇವರ್ಷಗಳು ಮಾತ್ರವೇ ಆಯುಃಪರಿಮಿತಿಯೆಂದು ಸೂಚಿಸಿದರು. ಏಳನೆಯ ವಯಸ್ಸಿನಲ್ಲಿಯೇ ಶ್ರೀಶಂಕರರು ಸಕಲವಿದ್ಯಾಭ್ಯಾಸವನ್ನೂ ಪೂರ್ಣಗೊಳಿಸಿಕೊಂಡು, ಗುರುಕುಲದಿಂದ ಮನೆಗೆ ಹಿಂತಿರುಗಿಬಂದಿದ್ದರು. ಈ ದಿವಸಕ್ಕೆ ಸರಿಯಾಗಿ ಶ್ರೀಶಂಕರರ ಎಂಟನೆಯ ವರ್ಷದ ಆಯುಸ್ಸು ಮುಗಿದಿತ್ತು. ಮಾರನೆಯ ದಿವಸವೇ ಉಷಃಕಾಲದಲ್ಲಿ ಸ್ನಾನಕ್ಕಾಗಿ ನದಿಗೆ ಇಳಿದಾಗ, ಮೃತ್ಯುವು ಮೊಸಳೆಯ ರೂಪದಿಂದ ಬಂದು, ಇವರನ್ನು ಗ್ರಹಣಮಾಡಿತು. ಯಾವುದೋರೂಪದಿಂದ ಮೃತ್ಯುವು ಸಕಾಲದಲ್ಲಿ ತಪ್ಪದೆ ಪ್ರಾಪ್ತವಾಗುವುದು.

"ಆಗಲಿ, ಆದರೂ ನಿರ್ದಿಷ್ಟವಾಗಿದ್ದ ಮೃತ್ಯುವಿನಿಂದ ಇವರು ಪಾರಾದದ್ದು ಹೇಗೆ?– ಎಂದರೆ, ಸತ್ಕರ್ಮಾನುಷ್ಠಾನದಿಂದ ಆಯುರ್ವೃದ್ಧಿಯಾಗುವುದೆಂಬುದು ಶಾಸ್ತ್ರಸಿದ್ಧವು. ನಿಯಮಪೂರ್ವಕವಾದ ಶ್ರೀಗುರುಶುಶ್ರೂಷೆ, ಸಾಂಗಸಕಲವೇದಶಾಸ್ತ್ರಾಧ್ಯಯನ ಬ್ರಹ್ಮಚರ್ಯಾಶ್ರಮಧರ್ಮಾನುಷ್ಠಾನ, ನಿಷ್ಕಲಂಕಮಾತೃಸೇವಾ, ದರಿದ್ರಬ್ರಾಹ್ಮಣೋದ್ಧಾರ ಇವೇ–ಮೊದಲಾದ ಪುಣ್ಯಕರ್ಮಗಳು, ಮಾತೃಶ್ರೀಯವರ ಹೃತ್ಪೂರ್ವಕಾಶೀರ್ವಾದ ಇವುಗಳ ಫಲವಾಗಿ ಶ್ರೀಶಂಕರರ ಆಯುಸ್ಸು ಹೆಚ್ಚಾದದ್ದೇನೂ ಆಶ್ಚರ್ಯವಲ್ಲ.

ಇದಲ್ಲದೆ, ಸನ್ಯಾಸಾಶ್ರಮಸ್ವೀಕಾರವು ಹೊಸಜನ್ಮವೆಂಬುದು ಶಾಸ್ತ್ರಮರ್ಯಾದೆಯು. ಶ್ರೀಮದ್ವಿದ್ಯಾರಣ್ಯಗುರುಗಳು ಪೂರ್ವಾಶ್ರಮದಲ್ಲಿ ಅತ್ಯಂತದಾರಿದ್ರ್ಯಪೀಡಿತರಾಗಿದ್ದು, ಶ್ರೀಭುವನೇಶ್ವರಿಯನ್ನು ಉಪಾಸನೆಮಾಡಿ, ಸಂಪದಭಿವೃದ್ಧಿಯನ್ನು ಬೇಡಿದಾಗ, ಆಜನ್ಮದಲ್ಲಿ ಅವರಿಗೆ ಧನಯೋಗವಿಲ್ಲವೆಂದು ಶ್ರೀಭುವನೇಶ್ವರಿಯು ತಿಳಿಸಲು, ಅವರು ಕೂಡಲೆ ಸನ್ಯಾಸಾಶ್ರಮವನ್ನು ಸ್ವೀಕರಿಸಲು, ಶ್ರೀಭುವನೇಶ್ವರಿಯು ಸುವರ್ಣವೃಷ್ಟಿಯನ್ನೇ ಅವರ ಉಪಾಸನೆಯ ಫಲಕ್ಕಾಗಿ ಕರೆದುದು ಸರ್ವಪ್ರಸಿದ್ಧವೇ ಇದೆ. ಶ್ರೀಶಂಕರರೇ ದರಿದ್ರಬ್ರಾಹ್ಮಣದಂಪತಿಗಳ ಮನೆಯಲ್ಲಿ, ಆ ಜನ್ಮದಲ್ಲಿಯೇ ಅವರಿಗೆ ಸುವರ್ಣಾಮಲಕಗಳ ಅಪಾರ ಸಂಪತ್ತನ್ನು ಅನುಗ್ರಹಿಸಲಿಲ್ಲವೆ ?

ಹೀಗೆ ಅವರ ಮೃತ್ಯುವು ಪರಿಹಾರವಾಗಲಾಗಿ, ಅವರಿಗೆ ಹೊಸದಾಗಿಯೇ ಎಂಟು ವರ್ಷಗಳ ಆಯುಸ್ಸು ಲಭಿಸಿತು.

[ಇದೇ ಮುಂದೆ ಶ್ರೀವ್ಯಾಸರ ಅನುಗ್ರಹದಿಂದ ದ್ವಿಗುಣವಾಗಿ, ಮೂವತ್ತೆರಡು ಸಂವತ್ಸರಗಳ ಆಯುಸ್ಸು ಅವರಿಗೆ ಸಿದ್ಧಿಸಿತು.

ಶ್ರೀಶಂಕರರು ಹೀಗೆ ಸನ್ಯಾಸವನ್ನು ಮಾನಸಿಕವಾಗಿ ಪರಿಗ್ರಹಿಸಿದರು. ಆತುರಸನ್ಯಾಸವನ್ನೂ ಹೀಗೆ ಸ್ವೀಕರಿಸಬಹುದು. ಆಕೂಡಲೆ ಮರಣವು ಸಂಭವಿಸಿದರೆ ಸರಿ; ಇಲ್ಲವಾದರೆ, ಕ್ರಮಸನ್ಯಾಸಾಶ್ರಮವನ್ನು ಪಡೆಯಲೇಬೇಕು. ಸನ್ಯಾಸಿಯು ಮತ್ತೆ ಮನೆ-

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ಪ್ರವೇಶಿಸಬಾರದು. ಹೀಗೆ ಶ್ರೀಶಂಕರರು ಕ್ರಮಸನ್ಯಾಸಸ್ವೀಕಾರಕ್ಕಾಗಿ ಸದ್ಗುರುಗಳನ್ನು ಹುಡುಕಿಕೊಂಡು ಹೋಗಬೇಕಾಗಿ ಬಂತು. ಮಹಾಕ್ಲೇಶದಿಂದ ತಪಸ್ಸನ್ನು ಮಾಡಿ ಪಡೆದ ಏಕಮಾತ್ರಪುತ್ರನೂ ಈಗ ಕಣ್ಣಿಗೂ ಕಾಣದಂತೆ ದೂರ-ಹೋಗುವನಲ್ಲ; ಮೊಸಳೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಸನ್ಯಾಸಿಯಾದರೂ ಮಗನ ಮುಖವನ್ನಾದರೂ ನೋಡಿಕೊಂಡಿರಬಹುದಾಗುವುದೆಂಬ ಆಸೆಯಿಂದ ಸನ್ಯಾಸಸ್ವೀಕಾರಕ್ಕೆ ಅನುಮತಿಯನ್ನು ಕೊಟ್ಟದ್ದಾಯಿತು; ಆದರೆ ಈಗ ಅದೂ ಇಲ್ಲವಾಯಿತು. ಪತಿದೇವ-ರನ್ನು ಕಳೆದುಕೊಂಡು, ಈ ವೃದ್ಧಾಪ್ಯದಲ್ಲಿ ನನಗೆ ಈಗ ಗತಿಯೇನು?''– ಎಂದು ಮುಂತಾಗಿ ಅತಿಯಾಗಿಗೋಳಾಡುತ್ತಿದ್ದ ತಾಯಿಯವರನ್ನು ಸಂತೈಸುತ್ತ, ತಮ್ಮ ಮಾತೃಶ್ರೀಯವರ ಯೋಗಕ್ಷೇಮವನ್ನು ತಮ್ಮ ಸಕಲಲೌಕಿಕಸಂಪತ್ತುಗಳೊಡನೆ ತಮ್ಮ ಬಂಧುವರ್ಗದವರಿಗೆ ಒಪ್ಪಿಸಿ, ಮಾತೃಶ್ರೀಯವರನ್ನು ಹೀಗೆ ಸಮಾಧಾನಮಾಡಿದರು–

ಅಹ್ನ್ಯಂಬ ರಾತ್ರಿಸಮಯೇ ಸಮಯಾಂತರೇ ವಾ
ಸಂಚಿಂತಯಸ್ಯವಶಗಾ ವಶಗಾಥವಾ ಮಾಂ ।
ಏಷ್ಯಾಮಿ ತತ್ರ ಸಮಯೇ ಸಕಲಂ ವಿಹಾಯ
ವಿಶ್ವಾಸಮಾಪ್ನುಹಿ ಮೃತಾವಪಿ ಸಂಸ್ಕರಿಷ್ಯೇ ॥೬೧॥

ಅಮ್ಮ, ರಾತ್ರಿಯಲ್ಲಾಗಲಿ, ಹಗಲಿನಲ್ಲಾಗಲಿ, ಯಾವ ಸಮಯದಲ್ಲಿಯೇ ಆಗ ' ತಿಳಿದೇ ಆಗಲಿ, ತಿಳಿಯದಯೇ ಆಗಲಿ, ನನ್ನನ್ನು ನೀನು ಸ್ಮರಿಸಿದಮಾತ್ರ-ದಿಂದಲೇ, ಸರ್ವಕಾರ್ಯಗಳನ್ನೂ ತ್ಯಜಿಸಿ, ಕೂಡಲೆ ನಿಮ್ಮ ಸಮೀಪಕ್ಕೆ ಬರುತ್ತೇನೆ; ಮತ್ತು, ನಿಮಗೆ ಅಂತ್ಯಸಂಸ್ಕಾರವನ್ನೂ ನಾನೇ ಮಾಡುತ್ತೇನೆ; ಇದನ್ನು ನಂಬಿರಿ, ಇದರಲ್ಲಿ ಸಂಶಯವಿಲ್ಲ"– ಎಂದು.

[ಸರ್ವಜ್ಞನಾದ ಶ್ರೀಪರಮೇಶ್ವರನಿಂದ ಅಲ್ಲದೆ, ಬೇರೆ ಯಾರಿಂದ ತಾನೆ, ಇಂಥ ಪ್ರತಿಜ್ಞಾಪೂರ್ವಕವಾದ ಮಾತುಕೊಡಲಾದೀತು?]

ಇತ್ಥಂ ಸ ಮಾತರಮನುಗ್ರಹಣೇಚ್ಛಯೋಕ್ತ್ವಾ ಸಂಸ್ಥಾಪ್ಯ ಬಂಧುಷು ಚ ತಾಂ ವಿಗತಾತಿಚಿಂತಾಂ ।
ಲಬ್ಧ್ವಾ ಸ್ವಮಾತು ರಥ ಭಕ್ತಿವಶಾದನುಜ್ಞಾಂ ಗಂತುಂಮನೋವ್ಯಥಿತ ಸನ್ನ್ಯಸನಾಯ ದೂರಂ ॥೬೨॥

ಮಾತೃಶ್ರೀಯವರಿಗೆ ಅನುಗ್ರಹಮಾಡುವ ಆದರದಿಂದ ಹೀಗೆ ಅವರಿಗೆ ಮಾತು-ಕೊಟ್ಟು, ಇದರಿಂದ ಸಮಾಧಾನಹೊಂದಿ ಚಿಂತಾರಹಿತರಾಗಿದ್ದ ಅವರನ್ನು ಬಂಧುಗಳಲ್ಲಿ ಇಟ್ಟು ಮಾತೃಶ್ರೀಯವರಲ್ಲಿನ ಅತಿಶಯಭಕ್ತಿಯ ಫಲವಾಗಿ ಅವರ ಅನುಜ್ಞೆಯನ್ನು ಪಡೆದು, ಕ್ರಮಸನ್ನ್ಯಾಸವನ್ನು ಪಡೆಯುವುದಕ್ಕಾಗಿ, ಮನೆಯನ್ನೂ, ಊರನ್ನೂ ದೇಶ-ವನ್ನೂ ಬಿಟ್ಟು ಹೊರಟರು

Sri Vidyabharathi Book Centre, Sringeri

CC-O. In Public Domain. Digitized by eGangotri

[ಸನ್ಯಾಸಾಶ್ರಮವನ್ನು ಸ್ವೀಕರಿಸಬೇಕಾದರೆ ಬಂಧುವರ್ಗದವರ, ಗ್ರಾಮದ ಮತ್ತು ಎಲ್ಲಗುರು ಹಿರಿಯರ ಅನುಜ್ಞೆಯನ್ನೂ ಪಡೆಯಬೇಕು; ಇಲ್ಲವಾದರೆ ಆ ಸನ್ಯಾಸದಫಲವು ಸಿದ್ಧಿಸುವುದಿಲ್ಲ]

೯. ಶ್ರೀಶಂಕರರಿಗೆ ಸದ್ಗುರುಲಾಭ–ಸನ್ಯಾಸಸ್ವೀಕಾರ

ಗಚ್ಛನ್ವನಾನಿ ಸರಿತೋ ನಗರಾಣಿ ಲೋಕಾನ್ ಗ್ರಾಮಾನ್ ಜನಾನಥ
ಪಶೂನ್ ಪಥಿ ಸೋಽಥ ಪಶ್ಯನ್ ।
ಗೋವಿಂದನಾಥವನಮಿಂದುಭವಾತಟಸ್ಥಂ ತೇನ ಪ್ರವಿಷ್ಟನುಜನಿಷ್ಟ–
ದಿನಾವಸಾನೇ ॥೬೩॥

ಹೀಗೆ ಹೋಗುತ್ತ, ಶ್ರೀಶಂಕರರು ದಾರಿಯಲ್ಲಿ ಅನೇಕವಿಧಗಳಾದ ವನಗಳನ್ನೂ, ನದಿಗಳನ್ನೂ ಲೋಕಗಳನ್ನೂ. ಗ್ರಾಮಗಳನ್ನೂ, ಜನಗಳನ್ನೂ, ಪಶ್ವಾದಿಗಳನ್ನೂ ಸಹ ಕಾಣುತ್ತ, ಒಂದು ದಿನ ಸಾಯಂಕಾಲದ ವೇಳೆಗೆ, ನರ್ಮದಾನದಿಯ ತೀರದಲ್ಲಿದ್ದ ಶ್ರೀ–ಗೋವಿಂದಭಗವತ್ಪಾದರವರ ಆಶ್ರಮವು ಅವರಿಂದ ಪ್ರವೇಶಿಸಲ್ಪಟ್ಟಿತು.

ತಸ್ಯ ಪ್ರಪನ್ನಪರಿತೋಷದುಹೋ ಗುಹಾಯಾಃ ಸ ತ್ರಿಪ್ರದಕ್ಷಿಣಂ ಪರಿ-
ಕ್ರಮಣಂ ವಿಧಾಯ ।
ದ್ವಾರಂ ಪ್ರತಿ ಪ್ರಣಿಪತನ್ ಜನತಾಪುರೋಗಂ ತುಷ್ಟಾವ ತುಷ್ಟ–
ಹೃದಯಸ್ತ ಮಪಾಸ್ತಶೋಕಂ ॥೬೪॥

ಶರಣಾಬಂದವರಿಗೆ ಪರಮಾನಂದವನ್ನು ಕರೆಯುವ ಶ್ರೀಗೋವಿಂದಭಗವತ್ಪಾದ-ರವರ ಗುಹೆಗೆ ಮೂರುಪ್ರದಕ್ಷಿಣೆಬಂದು, ಎಲ್ಲರ ಎದುರಿನಲ್ಲಿಯೇ, ಗುಹೆಯ ಬಾಗಿಲಿನಲ್ಲಿ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಸಕಲಸಂಸಾರದುಃಖವನ್ನೂ ದೂರಮಾಡಿಕೊಂಡು ಜೀವನ್ಮುಕ್ತರಾಗಿದ್ದ ಅವರನ್ನು ಕುರಿತು ಪರಮಸಂತೋಷದಿಂದ ಸ್ತುತಿಸಿದರು

ತಮಖಿಲಗುಣಪೂರ್ಣಂ ವ್ಯಾಸಪುತ್ರಸ್ಯ ಪುತ್ರಾದಧಿಗತಪರಮಾರ್ಥಂ
ಗೌಡಪಾದಾನ್ಮಹರ್ಷೇಃ ।
ಅಧಿಜಿಗಮಿಷುರೇಷ ಬ್ರಹ್ಮಸಂಸ್ಥಾಮಹಂ ತ್ವಾಂ ಪ್ರಸೃಮರಮಹಿಮಾ-
ನಂ ಪ್ರಾಪಮೇಕಾಂತಭಕ್ತ್ಯಾ ॥೬೫॥

"ಪ್ರಸ್ಥಾನತ್ರಯಪ್ರವರ್ತಕರಾದ ಶ್ರೀಬಾದರಾಯಣವ್ಯಾಸರ ಪುತ್ರರಾದ ಶ್ರೀ–ಶುಕಮುನಿಗಳಿಂದ ವೇದಾಂತಗಳ ಪರಮಾರ್ಥತತ್ತ್ವವನ್ನು ಪಡೆದಿರುವ ಶ್ರೀಗೌಡಪಾದ-ಮಹರ್ಷಿಗಳಿಂದ ಆ ತತ್ತ್ವವನ್ನು ಹೊಂದಿರುವ, ಸರ್ವಗುಣಸಂಪನ್ನರಾಗಿರುವ, ತಮ್ಮಿಂದ ಬ್ರಹ್ಮಾತ್ಮತತ್ತ್ವವನ್ನು ಹೊಂದುವ ಆಸೆಯುಳ್ಳವನಾಗಿ, ಸಕಲದಿಕ್ಕುಗಳ-ಲ್ಲಿಯೂ ಹರಡಿರುವ, ಮಹಿಮಶಾಲಿಗಳಾಗಿರುವ ತಮ್ಮನ್ನೇ ನಿಶ್ಚಿತಬುದ್ಧಿಯಿಂದ ಆಶ್ರ-ಯಿಸಿದ್ದೇನೆ"– ಎಂದು.

Sri Vidyabharathi Book Centre, Sringeri

CC-O. In Public Domain. Digitized by eGangotri

[ಶ್ರೀಶಂಕರಭಗವತ್ಪಾದರು ಅವತರಿಸಿದ ಆ ಕಾಲದಲ್ಲಿ ಊರುಕೇರಿಗ್ರಾಮನಗರಗಳ ದಿಕ್ಕುಮಾರ್ಗಗಳ, ಪರಿಚಯವಾಗಲಿ, ಸಂಚಾರಸೌಲಭ್ಯಗಳಾಗಲಿ, ಜತೆಗಾರರ ಸಹಾಯ ಸಂಪತ್ತಾಗಲಿ ಅತ್ಯಂತ ದುರ್ಲಭವೇ ಆಗಿತ್ತು. ಹೀಗಿರುವಲ್ಲಿ, ಎಂಟುವರ್ಷದ ಬಾಲ್ಯದ ಅವರು, ಏಕಾಕಿಗಳಾಗಿ ಮನೆಯನ್ನು ಬಿಟ್ಟು ಹೊರಟುಬಂದು,– ಕೇರಳವೆಲ್ಲಿ ನರ್ಮದಾ-ತೀರವೆಲ್ಲಿ?– ಅಲ್ಲಿಗೆ ಬಂದು, ವೇದಾಂತಸಿದ್ಧಾಂತವನ್ನು ತಾತ್ಪರ್ಯವನ್ನು ಸಾಂಪ್ರ-ದಾಯಿಕವಾಗಿ ಬಲ್ಲವರಾಗಿದ್ದ ಶ್ರೀಗೋವಿಂದಭಗವತ್ಪಾದರನ್ನು ಆಶ್ರಯಿಸಿದುದು– ಊಹೆಗೂ ನಿಲುಕದ ಮಹತ್ವದ್ದೇ ಸರಿ. ಸರ್ವಜ್ಞರ ವಿಷಯದಲ್ಲಿ ಹೇಳತಕ್ಕದ್ದೇನು?]

ಭಕ್ತಿಪೂರ್ವಕೃತತತ್ಪರಿಚರ್ಯಾತೋಷಿತೋಽಧಿಕತರಂ ಯತಿವರ್ಯಃ।
ಬ್ರಹ್ಮತಾಮುಪದಿದೇಶ ಚತುರ್ಭಿರ್ವೇದಶೇಖರವಚೋಭಿರಮುಷ್ಮೈ ॥೯೨॥

ಭಕ್ತಿಪೂರ್ವಕವಾಗಿ ಶ್ರೀಶಂಕರರು ಮಾಡಿದ ಶುಶ್ರೂಷೆಗಳಿಂದ ಅತ್ಯಂತವಾಗಿ ಸಂತುಷ್ಟರಾದ ಶ್ರೀಗೋವಿಂದಯತಿವರ್ಯರು ಅವರಿಗೆ ಸನ್ನ್ಯಾಸದೀಕ್ಷೆಯನ್ನು ಅನು-ಗ್ರಹಿಸಿ, ನಾಲ್ಕು ವೇದಗಳ ಉಪನಿಷತ್ತುಗಳ ಸಾರಗಳಾದ ನಾಲ್ಕು ಮಹಾವಾಕ್ಯಗಳ ಮೂಲಕ ಅವರ ವಾಸ್ತವವಾದ ಬ್ರಹ್ಮತತ್ತ್ವಸ್ವರೂಪವನ್ನು ಉಪದೇಶಿಸಿದರು.

[ಸಾಕ್ಷಾಚ್ಛ್ರೀಶಂಕರಸ್ವರೂಪರೇ ಆಗಿದ್ದುದರಿಂದ- ಶ್ರೀಶಂಕರರಿಗೆ ಶ್ರೀಶಂಕರರೆಂಬೇ ಸನ್ನ್ಯಾಸಾಶ್ರಮದ ದಟ್ಟನಾಮದಿಂದ ಅವರಿಗೆ ನಾಮಕರಣಮಾಡಿದರು.]

ಸೋಽಧಿಗಮ್ಯ ಚರಮಾಶ್ರಮಮಾರ್ಯಃ ಪೂರ್ವಪುಣ್ಯನಿಚಯೈರಧಿ-ಗಮ್ಯಂ ।
ಸ್ಥಾನಮುಚ್ಚ್ಯಮಪಿ ಹಂಸಪುರೋಗೈರುನ್ನತಂ ಧ್ರುವ ಇವೈತ್ಯ ಚಕಾಶೇ ॥೯೭॥

ಅನಂತಜನ್ಮಗಳ ಪುಣ್ಯಗಳ ಪರಿಪಾಕದಿಂದ ಲಭಿಸುವಂಥ ಸನ್ನ್ಯಾಸಾಶ್ರಮವನ್ನು ಸಾಂಪ್ರದಾಯಿಕವಿಧಿವತ್ತಾಗಿ ಪಡೆದು ಶ್ರೀಶಂಕರಾರ್ಯರು, ಪರಮಹಂಸರಿಂದ ಪೂಜಿತ ವಾದ ಅತ್ಯುನ್ನತವಾದ ಜೀವನ್ಮುಕ್ತಿಪದವನ್ನು, ಧ್ರುವನಂತೆ. ಅಲಂಕರಿಸಿ ಬೆಳಗಿದರು.

ಬ್ರಹ್ಮವಿದ್ಯಾಲಾಭದ ಪರಮಫಲವಿದು–

ಕ್ಷೀರಂ ಬ್ರಹ್ಮ ಜಗಚ್ಚ ನೀರಮುಭಯಂ ಸದ್ಯೋಗಮಭ್ಯಾಗತಂ
ದುರ್ಭೇದಂ ತ್ವಿತರೇತರಂ ಚಿರತರಂಸಮ್ಯಗ್ವಿಭಕ್ತೀಕೃತಂ ।
ಯೇನಾಶೇಷವಿಶೇಷದೋಷಲಹರೀಮಾಸೇದುಷೀಂ ಶೇಮುಷೀಂ
ಸೋಽಯಂ ಶೀಲವತಾಂ ಪುನಾತಿ ಪರಮೋ ಹಂಸೋ ದ್ವಿಜಾ-ತ್ಯಗ್ರಣೀಃ ॥೯೮॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮವೆಂಬ ಹಾಲೂ ಜಗತ್ತೆಂಬ ನೀರೂ– ಇವೆರಡೂ, ಭೇದವು ತಿಳಿದುಬರದಂತೆ ಅನಾದಿಕಾಲದಿಂದಲೂ ಒಂದಕ್ಕೊಂದು ಬೆರೆತುಹೋಗಿರುತ್ತ, ಸಕಲಸಂಸಾರದುಃಖಕ್ಕೆ ಕಾರಣವಾಗಿರುವಲ್ಲಿ, ಪರಮಹಂಸರಲ್ಲಿ ಶ್ರೇಷ್ಠರಾದ ಶ್ರೀಭಗವತ್ಪಾದರು ಪಕ್ಷಿಶ್ರೇಷ್ಠವಾದ ಹಂಸದಂತೆ, ಇವೆರಡರ ಭೇದವನ್ನು ಸ್ಪಷ್ಟವಾಗಿ ಬೇರೆಮಾಡಿ ತಿಳಿಸಿ, ಅನೇಕ ದುಷ್ಟ ದೋಷಗಳ ಪರಂಪರೆಯಿಂದ ಅತ್ಯಂತಮಲಿನವೂ ಆಗಿದ್ದ, ಸದ್ಧರ್ಮನಿಷ್ಠರಾದ ಶಿಷ್ಯರ ಬುದ್ಧಿಯನ್ನು ಪವಿತ್ರಗೊಳಿಸಿದರು,

[ಕ್ಷೀರನೀರ ವಿವೇಕಜ್ಞೋ ಹಂಸ ಏವ ನ ಚೇತರಃ ।
ಆತ್ಮಾನಾತ್ಮ ವಿವೇಕಜ್ಞೋ ಯತಿರೇವ ನ ಸಂಶಯಃ॥]

ಗಚ್ಛ ವತ್ಸ ನಗರಂ ಶಶಿಮೌಲೇಃ ಸ್ವಚ್ಛದೇವತಟನೀಕಮನೀಯಂ ।
ಬ್ರಹ್ಮಸೂತ್ರಶ್ರುತಿಮೌಲಿಮುಖಾನಾಂ ಭಾಷ್ಯಮದ್ಯ ವಿತನುಷ್ಟ-
ಸದರ್ಥಂ ॥೧೯॥

"ಶಿಷ್ಯೋತ್ತಮನೆ, ದೇವನದಿಯಾದ ಗಂಗಾತಟದಲ್ಲಿ ವಿರಾಜಿಸುತ್ತಿರುವ. ಶ್ರೀ ಚಂದ್ರಶೇಖರನಾದ ಪರಮಶಿವನ ರಾಜಧಾನಿಯಾಗಿರುವ ಶ್ರೀಕಾಶೀಕ್ಷೇತ್ರಕ್ಕೆ ಹೋಗು; ಮತ್ತು, ಬ್ರಹ್ಮಸೂತ್ರಗಳಿಗೂ ಶ್ರುತಿಶಿರಸ್ಸುಗಳಾಗಿರುವ ಉಪನಿಷತ್ತುಗಳಿಗೂ ಸಹ ಸತ್ಸಂಪ್ರದಾಯಸಿದ್ಧವಾಗಿ ಸದರ್ಥಸಂಪನ್ನವಾಗುವ ಭಾಷ್ಯಗಳನ್ನು ವಿರಚಿಸು:"

ಏವಮೇನಮನುಶಾಸ್ಯ ದಯಾಲುಃ ಪಾವಯನ್ನಿಜದೃಶಾ ವಿಸರ್ಜ ।
ಪ್ರಾಪ ತಾಪಸವರಃ ಸ ಚ ಕಾಶೀಂ ಪೂಜಯಾಂ ಹಿ ಶಿವಮಾಸ
ತುಭಕ್ತ್ಯಾ ॥೨೦॥

ಈ ಪ್ರಕಾರವಾಗಿ ಶಿಷ್ಯೋತ್ತಮರಾದ ಶ್ರೀಶಂಕರಭಗವತ್ಪಾದರಿಗೆ ಆಜ್ಞೆಯನ್ನಿತ್ತು ತಮ್ಮ ಕರುಣಾಕಟಾಕ್ಷಗಳಿಂದ ಅನುಗ್ರಹಿಸಿ ಅವರನ್ನು ಕಳುಹಿಸಿಕೊಟ್ಟರು. ಶ್ರೀಭಗವತ್ಪಾದರೂ ಸಹ ಶ್ರೀಗುರುಗಳ ಆದೇಶವನ್ನು ಶಿರಸಾಸ್ವೀಕರಿಸಿ, ಶ್ರೀಕಾಶೀಕ್ಷೇತ್ರಕ್ಕೆ ಬಂದು, ಶ್ರೀವಿಶ್ವೇಶ್ವರನನ್ನು ಭಕ್ತಿಯಿಂದ ಆರಾಧಿಸುತ್ತಿದ್ದರು.

೧೦. ಈಶ್ವರಾನುಗ್ರಹಲಾಭ– ಭಾಷ್ಯವಿರಚನೆ.

ಅಥಾಗಮದ್ಬ್ರಾಹ್ಮಣಸೂನುರಾದರಾದಧೀತವೇದೋ ವಿಕಸತ್ಸ್ವಭಾಸಾ ।
ಪ್ರಾಹುರ್ಮಹಾಂತಂ ಪ್ರಥಮಂ ವಿನೇಯಂ ತಂ ದೇಶಿಕೇಂದ್ರಸ್ಯ
ಸನಂದನಾಖ್ಯಂ ॥೨೧॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಶ್ರೀಕಾಶೀಕ್ಷೇತ್ರದಲ್ಲಿ ಶ್ರೀವಿಶ್ವೇಶ್ವರಸೇವಾನಿರತರಾಗಿ ಶ್ರೀಭಗವತ್ಪಾದರು ಇರುತ್ತಿರುವಲ್ಲಿ, ವಿಧಿವತ್ತಾಗಿ ವೇದಾಧ್ಯಯನವನ್ನು ಮಾಡಿ, ಸದಾಚಾರಸಂಪನ್ನನಾಗಿ, ಹತ್ತುದಿಕ್ಕುಗಳನ್ನೂ ಬೆಳಗುತ್ತಿದ್ದ, ಒಬ್ಬ ಬಡಬ್ರಾಹ್ಮಣಕುಮಾರನು, ಅವರನ್ನು ಆಶ್ರಯಿಸಿಬಂದನು. ಸನಂದನನೆಂಬ ಈತನನ್ನು ಶ್ರೀಭಗವತ್ಪಾದದೇಶಿಕೇಂದ್ರರ ಪ್ರಥಮ ಶಿಷ್ಯನೆಂದು ಹೇಳುವರು.

ಯೇಽಪ್ಯನ್ಯೇಽಮುಂ ಸೇವಿತುಂ ದೇವತಾಂಶಾ ಯಾತಾಸ್ತೇಽಪಿ ಪ್ರಾಯ ಏವಂ ವಿರಕ್ತಾಃ।
ಕ್ಷೇತ್ರೇ ತಸ್ಮಿನ್ನೇವ ಶಿಷ್ಯತ್ವಮಸ್ಯ ಪ್ರಾಪುಃ ಸ್ಪಷ್ಟಂ ಲೋಕರೀತ್ಯಾಪಿ । ಗಂತುಂ ॥೭೨॥

ಶ್ರೀಶಂಕರಭಗವತ್ಪಾದರ ಅವತಾರಕಾರ್ಯದ ಸಹಾಯಕ್ಕೆಂದು ಶ್ರೀಪರಮೇಶ್ವರರಿಂದ ಆಜ್ಞಪ್ತರಾದ ದೇವತಾಂಶದವರೆಲ್ಲರೂ ಸಹ, ಈ ಕಾಶೀಕ್ಷೇತ್ರದಲ್ಲಿಯೇ, ವಿರಕ್ತ್ಯಾದಿ ಗುಣಸಂಪನ್ನರಾಗಿ ಲೋಕರೀತಿಯನ್ನನುಸರಿಸಿ ಶಿಷ್ಯರಾಗಿ ಬಂದು ಸೇರಿದರು.

ಸೋಽನ್ತ್ಯಜಂ ಪಥಿ ವಿಲೋಕ್ಯ ಕದಾಚಿದ್ಗಚ್ಛ ದೂರಮಿತಿ ತಂ ನಿಜಗಾದ
ಪ್ರತ್ಯುವಾಚ ಚ ಸ ಚಾದ್ವಯತತ್ತ್ವೇ ಕುತ್ರ ಭೇದಕಲನಾ ತವ ಚಿತ್ರಂ ॥೭೩॥

ಒಂದುದಿನ ಎಂದಿನಂತೆ ಶ್ರೀಭಗವತ್ಪಾದರು ಶಿಷ್ಯರೊಡನೆ ಶ್ರೀಭಾಗೀರಥೀಸ್ನಾನ-ಕ್ಕಾಗಿ ಮಣಿಕರ್ಣಿಕಾಘಟ್ಟದಲ್ಲಿ ಬರುತ್ತಿರುವಲ್ಲಿ ಕಿರಿದಾದ ಆ ದಾರಿಯಲ್ಲಿ ಎದುರಾಗಿ ಬರುತಿದ್ದ ಒಬ್ಬ ಅಸ್ಪೃಶ್ಯಚಂಡಾಲಜಾತಿಯವನನ್ನು ಕಂಡು– 'ದೂರ ಹೋಗು'-ಎಂದು ಅವನನ್ನು ಕುರಿತು ಹೇಳಿದರು. ಅದಕ್ಕೆ ಅವನು– "ಪಾರಮಾರ್ಥಿಕವಾದ ವೇದಪ್ರಮಾಣಕ-ವಾದ ಅದ್ವೈತತತ್ತ್ವದಲ್ಲಿ, ನಿಮ್ಮ ಈ ಭೇದದ ಕಲ್ಪನೆಯು ಆಶ್ಚರ್ಯವಾಗಿದೆ;

ಬ್ರಾಹ್ಮಣಶ್ವಪಚಭೇದವಿಚಾರಃ ಪ್ರತ್ಯಗಾತ್ಮನಿ ಕಥಂ ತವ ಯುಕ್ತಃ।
ಬಿಂಬಿತೇಽಮ್ಬರಮಣೌ ಸುರನದ್ಯಾಮಂತರಂ ಕಿಮಿವ ಚಾಂತ್ಯಜಕೂಪೇ ॥೭೪॥

"ಬ್ರಾಹ್ಮಣ-ಚಂಡಾಲ-ಎಂಬ ಈ ಭೇದವಿಚಾರವು ಪ್ರತ್ಯಗಾತ್ಮನಲ್ಲಿ ತಮಗೆ ಹೇಗೆ ಯುಕ್ತವು? ದೇವನದಿಯಾದ ಗಂಗೆಯಲ್ಲಿಯೂ, ಚಂಡಾಲರ ಬಾವಿಯಲ್ಲಿಯೂ, ಇರುವ ಸೂರ್ಯನ ಪ್ರತಿಬಿಂಬದಲ್ಲಿ ಯಾವ ಭೇದವಿದೆ?"– ಎಂದು ಆಕ್ಷೇಪಿಸಿದನು

[ವೇದಾಂತಸಿದ್ಧಾಂತದ ರೀತಿಯಲ್ಲಿ ಪ್ರತಿಬಿಂಬವಾದ ಮತ್ತು ಅವಚ್ಛೇದವಾದ ಎಂದು ಎರಡು ವಾದಗಳು ಪ್ರಸಿದ್ಧವಿದೆ. ನಿರ್ವಿಶೇಷಾಖಂಡಾದ್ವಿತೀಯಚಿನ್ಮಾತ್ರ-ಸ್ವರೂಪನಾದ ಪರಮಾತ್ಮನ ಅಂತಃಕರಣದಲ್ಲಿನ ಅಥವಾ ಆ ವಿದ್ಯೆಯಲ್ಲಿನ ಪ್ರತಿಬಿಂಬವೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವನೆಂದು ಪ್ರತಿಬಿಂಬವಾದವು. ಅಖಂಡವಾಗಿ ಸರ್ವವ್ಯಾಪಕವಾಗಿರುವ ಆಕಾಶವು ಘಟಮಠಉಪಾಧಿಗಳಿಂದ ಅವಚ್ಛಿನ್ನನಾಗಿರುವಂತೆ ಅಂತಃಕರಣ ಅಥವಾ ಅವಿದ್ಯೆಯಲ್ಲಿ ಅವಚ್ಛಿನ್ನನಾಗಿರುವ ಪರಮಾತ್ಮನೇ ಜೀವನೆಂಬುದು ಅವಚ್ಛೇದವಾದವು. ಪ್ರತಿಬಿಂಬರೂಪನೆಂದಾದರೂ ಅವಚ್ಛಿನ್ನರೂಪನೆಂದಾದರೂ,- ಗಂಗಾಜಲ-ಚಂಡಾಲಕೂಪಜಲಗಳಲ್ಲಿ ಭೇದವಿರುವುದಾದರೂ, ಹಾಗೆಯೇ ಘಟಮಠಗಳ ಉಪಾಧಿಗಳಲ್ಲಿ ಭೇದವಿರುವುದಾದರೂ,– ಅವುಗಳಲ್ಲಿ ಪ್ರತಿಬಿಂಬಿಸುವ ಸೂರ್ಯನ ಪ್ರತಿಬಿಂಬಗಳಲ್ಲಾಗಲಿ, ಅವಚ್ಛಿನ್ನವಾಗಿರುವ ಆಕಾಶಗಳಲ್ಲಾಗಲಿ ಯಾವ ಭೇದವೂ ಇರುವುದಿಲ್ಲವಲ್ಲವೆ? ಇವರಂತೆ- ಬ್ರಾಹ್ಮಣ ಮತ್ತು ಚಂಡಾಲದೇಹಗಳಲ್ಲಿ ಭೇದವಿದ್ದರೂ, ಈ ದೇಹಗಳಲ್ಲಿ ಪ್ರತಿಬಿಂಬಿತನಾಗಿ ಅಥವಾ ಅವಚ್ಛಿನ್ನನಾಗಿ ಇರುವ ಪ್ರತ್ಯಗಾತ್ಮ [ಜೀವ]ನಲ್ಲಿ ಭೇದವೆಲ್ಲಿಂದ ಬಂತು? 'ದೂರಹೋಗೆಂದು'– ನೀವು ಯಾರನ್ನು ದೂರಮಾಡುವ ಉದ್ದೇಶದಿಂದ ಹೇಳಿದ್ದು– ದೇಹವನ್ನೋ ಈ ದೇಹದಲ್ಲಿರುವ ಪ್ರತ್ಯಗಾತ್ಮನನ್ನೋ? ಎಲ್ಲರ ದೇಹವೂ ಪಾಂಚಭೌತಿಕವಾದ್ದರಿಂದ, ಮಣ್ಣಿನಿಂದಾದ ಘಟಗಳಲ್ಲಿ ಹೇಗೋ ಹಾಗೆ, ಬ್ರಾಹ್ಮಣಚಂಡಾಲದೇಹಗಳಲ್ಲಿ ಭೇದವಿಲ್ಲ; ಪ್ರತ್ಯಗಾತ್ಮನಲ್ಲಿಯೂ ಭೇದವಿಲ್ಲವೆಂದಾದಮೇಲೆ, ನಿಮ್ಮ ಈಮಾತು ಅರ್ಥವಿಲ್ಲದ್ದೇ ಸರಿ"– ಎಂದು ಈ ಚಂಡಾಲನ ಅಭಿಪ್ರಾಯವು.]

ಪ್ರತ್ಯುವಾಚ ಸ ವಿಸ್ಮಿತಚೇತಾಃ ಸತ್ಯಮೇವ ಭವದುಕ್ತಮಿದಾನೀಂ ।
ಯಸ್ಯ ಭಾತಿ ಜಗದಾತ್ಮತಯೈವ ವಂದನೀಯ ಇತಿ ಮೇ ದೃಢನಿಷ್ಠಾ ॥೭೫॥

ಚಂಡಾಲನ ಈ ಮಾತನ್ನು ಕೇಳಿ ಆಶ್ಚರ್ಯತುಂಬಿದ ಮನಸ್ಸುಳ್ಳವರಾಗಿ ಶ್ರೀಭಗವತ್ಪಾದರು ಅವನಿಗೆ ಉತ್ತರ ಹೇಳಿದರು–"ನೀನು ಈಗ ಹೇಳಿದುದು ಯಥಾರ್ಥತತ್ತ್ವವೇ ಆಗಿದೆ; ಹೀಗೆ ಯಾರಿಗೆ ಜಗತ್ತೆಲ್ಲ ಆತ್ಮಮಾತ್ರವಾಗಿಯೇ ಕಾಣಬರುವುದೋ, ಅಂಥ ತತ್ತ್ವಜ್ಞಾನಿಯು ವಂದ್ಯನೇ ಸರಿಯೆಂದು ನನ್ನ ದೃಢನಿಶ್ಚಯವು"– ಎಂದು.

[ಈ ಚಂಡಾಲನ ಆಕ್ಷೇಪಕ್ಕೆ ಶ್ರೀಭಗವತ್ಪಾದರ ಸಮಾಧಾನದ ತಾತ್ಪರ್ಯವಿಷ್ಟೇ– ಪ್ರಪಂಚವೆಲ್ಲ ಚೇತನ ಮತ್ತು ಅಚೇತನ– ಎಂದು ಎರಡುವಿಧವಾಗಿರುವುದು. ಚೇತನವು ಜ್ಞಾನಸ್ವರೂಪವದ್ದು; ಅಚೇತನವು ಜಡಸ್ವರೂಪವದ್ದು. ಚೇತನವು ಆತ್ಮನು; ಅಚೇತನವು ಅನಾತ್ಮವು ಚೇತನವು ಜ್ಞಾನಸ್ವರೂಪವಾದ್ದಾಗಿ ನಿತ್ಯನಿರವಯವನಿರ್ವಿಕಾರಾಖಂಡವ್ಯಾಪಕಸ್ವರೂಪವು; ಅಚೇತನವು ಪರಿಚ್ಛಿನ್ನವೂ, ಅನೇಕವೂ, ಸಾವಯವವೂ ವಿಕಾರಿಯೂ, ನಶ್ವರವೂ ಆಗಿರುತ್ತದೆ. ಹೀಗೆ ಆತ್ಮಾನಾತ್ಮಗಳು ಒಂದಕ್ಕೊಂದು ಅತ್ಯಂತ ಭಿನ್ನ ಮತ್ತು ವಿರುದ್ಧಸ್ವಭಾವದವುಗಳಾಗಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಚೇತನ-ಅನಾತ್ಮಜಗತ್ತೆಲ್ಲ ಪಂಚಭೂತಗಳ ಕಾರ್ಯವಾಗಿ ಪಾಂಚಭೌತಿಕವಾಗಿದೆ. ಪ್ರಪಂಚದಲ್ಲಿರುವ ದೇವತಿರ್ಯಙ್ಮನುಷ್ಯರೂಪವಾಗಿರುವ ಲಕ್ಷ ಲಕ್ಷ ವಿಧ ಪ್ರಾಣಿಸಮೂಹದ ಶರೀರಗಳೂ ಪಾಂಚಭೌತಿಕಗಳೇ ಆಗಿವೆ. ಹೀಗೆ ಇವೆಲ್ಲ ಪಾಂಚಭೌತಿಕಗಳೆಂಬ ಅಂಶದಿಂದ ಭೇದವಿಲ್ಲದವುಗಳಾಗಿದ್ದರೂ, ಇವುಗಳಲ್ಲಿ ಪ್ರತಿಯೊಂದೂ ಪರಸ್ಪರಭಿನ್ನಗಳೂ, ಉತ್ತಮಮಧ್ಯಮಾಧಮಗಳೆಂಬ ತಾರತಮ್ಯವುಳ್ಳವುಗಳೂ, ಆಗಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇದರಂತೆಯೇ, ಉತ್ತಮಪುಣ್ಯದ ಫಲವಾಗಿ ಬಂದಿರುವ ಬ್ರಾಹ್ಮಣದೇಹಕ್ಕೂ ದುರಿತದ ಫಲವಾಗಿರುವ ಚಂಡಾಲದೇಹಕ್ಕೂ ಭೇದವು ಅಪರಿಹಾರ್ಯವೇ ಆಗಿರುತ್ತದೆ. ವ್ಯವಹಾರದಲ್ಲಿ ಈ ತಾರತಮ್ಯ ನಿಮಿತ್ತವಾಗಿ ಫಲಭೇದವೂ ಇದ್ದೇ ಇರುತ್ತದೆ–ಇವುಗಳ ಸಾಂಕರ್ಯವು ಉತ್ತಮವಸ್ತುವಿಗೆ ಹಾನಿಕರವಾಗುವುದರಲ್ಲಿ ಸಂದೇಹವೇ ಇಲ್ಲ. ಹೀಗಿರುವಲ್ಲಿ– "ಎಲ್ಲರ ದೇಹವೂ ಮಾಂಸಾಸ್ಥಿಮಜ್ಜಾಮಲಮೂತ್ರಮಯವಾಗಿರುತ್ತ, ಇವುಗಳಲ್ಲಿ ಉತ್ಕೃಷ್ಟನಿಕೃಷ್ಟಗಳೆಂಬ ಭೇದಕ್ಕೆ ಕಾರಣವಿರುವುದಿಲ್ಲ"– ಎಂಬ ನಾಗರಿಕಾಭಿಪ್ರಾಯವು ವಿಚಾರಕುಶಲರಿಗೆ ತಿರಸ್ಕಾರಾಸ್ಪದವೇ ಆಗಿರುತ್ತದೆ.

ಅಸಂಗವಾಗಿರುವ ಚೇತನಾತ್ಮನಲ್ಲಿ ವಸ್ತುತಃ ಯಾವಭೇಧಕ್ಕೂ ಅವಕಾಶವಿಲ್ಲವೆಂದಾದರೂ, ವ್ಯವಹಾರದಲ್ಲಿ ಉತ್ತಮಾಧಮ–ಉಪಾಧಿಗಳ ನಿಮಿತ್ತವಾದ ಭೇದವು ಅಪರಿಹಾರ್ಯವೇ ಆಗಿರುತ್ತದೆ–ಮೊಸರನ್ನಿಟ್ಟಿರುವ ಪಾತ್ರೆಗೆ ಹಾಲನ್ನು ಹಾಕಿದರೆ, ಆ ಹಾಲು ಕೆಡದೆ ಇರುವುದಿಲ್ಲ. ಪಾರಮಾರ್ಥಿಕವಾಗಿ ಭೇದವೆಂಬುದೇ ಇಲ್ಲವೆಂದಾದರೂ, ವ್ಯವಹಾರದ ಸ್ಥಿತಿಯಲ್ಲಿ ಎಲ್ಲ ಭೇದವೂ ಇರುತ್ತ, ಅದಕ್ಕನುಗುಣವಾಗಿಯೇ ವ್ಯವಹರಿಸತಕ್ಕದ್ದು–ಪಾರ್ಥಿವವೆಂದಮಾತ್ರಕ್ಕೆ ಅನ್ನದಂತೆ ಮನುಷ್ಯನು ಮಣ್ಣನ್ನು ತಿನ್ನಲಾಗುವುದಿಲ್ಲ!

ಚರಾಚರಾತ್ಮಕವಾಗಿರುವ ಸಮಸ್ತಪ್ರಪಂಚವೂ ವಿಕಾರಿಯಾಗಿ ಕಾರ್ಯವಾಗಿರುತ್ತದೆ ಇದಕ್ಕೊಂದು ಮೂಲಕಾರಣವನ್ನು ಅವಶ್ಯವಾಗಿ ಒಪ್ಪಬೇಕು–ಕಾರಣವಿಲ್ಲದೆಯೇ ಕಾರ್ಯವು ಉಂಟಾಗದು. ಮೂಲಕಾರಣವಾದ ಈ ವಸ್ತುವು ಕಾರ್ಯವಲ್ಲ–ಜನ್ಯ–ಹುಟ್ಟಿದುದಲ್ಲವಾಗಿ, ಅದು ನಿತ್ಯವಾಗಿರಬೇಕೆಂದು ನಿಶ್ಚಿತವಾಗುವುದು. ಆದ್ದರಿಂದ ಇದು ನಿರ್ವಿಕಾರಸ್ವರೂಪದ್ದೆಂದೂ ಸಿದ್ಧವು–ವಿಕಾರಿಯಾದದ್ದು ನಿತ್ಯವಾಗಲಾರದು. ಹೀಗೆ ನಿತ್ಯನಿರ್ವಿಕಾರವಾಗಿರುವ ಇಂಥ ಕಾರಣವಸ್ತುವಿನಿಂದ ಯಾವಕಾರ್ಯವು ತಾನೇ ವಾಸ್ತವವಾಗಿ ಹುಟ್ಟಲಾದೀತು? ಆದ್ದರಿಂದ, ಈ ಮೂಲಕಾರಣವು, ತಾನು ಯಾವವಿಕಾರವನ್ನೂ ಪಡೆಯದೆ, ತನ್ನ ಸ್ವರೂಪದಲ್ಲಿಯೇ ಇದ್ದುಕೊಂಡು–ಹಗ್ಗವು ಹಾವಾಗಿಯೂ, ಕಪ್ಪೆಚಿಪ್ಪು ಬೆಳ್ಳಿಯಾಗಿಯೂ ಆಗುವಂತೆ,–ಪ್ರಪಂಚರೂಪವಾಗಿದೆಯೆಂದು ತಿಳಿಯಬೇಕು– **'ಅಜಾಯಮಾನೋ ಬಹುಧಾ ವಿಜಾಯತೇ'**–"ಹುಟ್ಟದ್ದೇ ಆಗಿದ್ದು–ಬಹುವಾಗಿ ಹುಟ್ಟುತ್ತದೆ"–ಎಂದು ಶ್ರುತಿಯು ಇದನ್ನೇ ವಿಶದಪಡಿಸಿರುತ್ತದೆ. ಆದ್ದರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಗ್ಗದಹಾವು ಭಗ್ಗನೇ ಎಂಬಂತೆಯೂ, ಕಪ್ಪೆಚಿಪ್ಪಿನಬೆಳ್ಳಿಯು ಕಪ್ಪೆಚಿಪ್ಪೇ-ಎಂಬಂತೆಯೂ,-ಪ್ರಪಂಚವೆಲ್ಲ ವಸ್ತುತಃ ನಿತ್ಯಸಿದ್ಧಪರಬ್ರಹ್ಮನೇ ಆಗಿರುತ್ತದೆ. ಈ ತತ್ತ್ವಜ್ಞಾನವು ಅನುಭವಸಿದ್ಧನಾದವನು-'ಬ್ರಹ್ಮವಿದ್ಬ್ರಹ್ಮೈವ ಭವತಿ'-ಎಂಬ ಶ್ರುತಿಯಂತೆ, ಸಾಕ್ಷಾತ್ಪರಮಾತ್ಮನೇ ಆಗಿ, ಸರ್ವರಿಗೂ ವಂದ್ಯನೇ ಆಗುವನು. ಆದರೂ, ವ್ಯವಹಾರದ ಸ್ಥಿತಿಯಲ್ಲಿ, ತಾರತಮ್ಯವು ಅಪರಿಹಾರ್ಯವೇ ಆಗಿರುತ್ತ, ಶಾಸ್ತ್ರೀಯನಿಯಮಗಳಿಗೆ ಬದ್ಧರಾಗಿಯೇ ಇರತಕ್ಕದ್ದು. ಜ್ಞಾನಿಗಳೇ ಆಗಿದ್ದರೂ, ವಿದುರನಾಗಲಿ ಧರ್ಮವ್ಯಾಧನಾಗಲಿ, ತನ್ನ ಜನ್ಮದ ಸ್ಥಿತಿಯನ್ನು ಮೀರಿ, ಸ್ವೇಚ್ಛೆಯಾಗಿ ನಡೆದಿಲ್ಲ. ಪಾರಮಾರ್ಥಿಕಸ್ಥಿತಿಯನ್ನು ವ್ಯವಹಾರಸ್ಥಿತಿಗೆ ಅನ್ವಯಿಸಿಕೊಂಡು ನಡೆಯುವುದು. ಬಲ್ಲವರಿಗೆ ಉಚಿತವಲ್ಲವಷ್ಟೇ ಅಲ್ಲ ಸರ್ವರಿಗೂ ಹಾನಿಕರವೇ ಸರಿ. ಆದ್ದರಿಂದ, ಚಂಡಾಲ ಜನ್ಮದಲ್ಲಿರುವ ಇವನು, ಬ್ರಾಹ್ಮಣಜನ್ಮದ ಶ್ರೀಭಗವತ್ಪಾದರಿಂದ, ಶಾಸ್ತ್ರವಿಧಿಗನುಸಾರವಾಗಿ, ದೂರವಾಗಿರತಕ್ಕದ್ದೇ ಯುಕ್ತವು.]

ಭಾಷಮಾಣ ಇತಿ ತೇನ ಕಲಾಪಾನೇಷ ನೈಕ್ಷತ ತಮಂತ್ಯಜಮಗ್ರೇ ।
ಧೂರ್ಜಟಿಂ ತು ಸಮುದೈಕ್ಷತ ಮೌಲಿಸ್ಫೂರ್ಜದೈಂದವಕಲಂ ಸಹ ವೇದೈಃ ॥೨೬॥

ಹೀಗೆ ಹೇಳುತ್ತಿರುವಷ್ಟರಲ್ಲಿ, ಶ್ರೀಭಗವತ್ಪಾದರು ತಮ್ಮ ಎದುರಿನಲ್ಲಿ ಆ ಚಂಡಾಲನನ್ನು ಕಾಣದೆ, ನಾಲ್ಕು ವೇದಗಳಿಂದಲೂ ಸ್ತುತಿಸಲ್ಪಡುತ್ತಿದ್ದ, ಚಂದ್ರಕಲಾಲಂಕೃತನಾದ ಶ್ರೀಪರಮೇಶ್ವರನನ್ನು ಸಾಕ್ಷಾತ್ಕರಿಸಿದರು.

[ಪರಮಪ್ರಮಾಣವಾಗಿ ಸರ್ವಶ್ರೇಯಸ್ಕರವಾಗಿರುವ ಸನಾತನ ವೈದಿಕಸಿದ್ಧಾಂತವನ್ನು ಲೋಕದಲ್ಲಿ ಪ್ರಚಾರಮಾಡುವುದಕ್ಕಾಗಿ ಪ್ರವೃತ್ತರಾಗಿರುವ ಶ್ರೀಭಗವತ್ಪಾದರು-ಶಾಸ್ತ್ರಾರ್ಥವನ್ನು ಯಥಾವತ್ತಾಗಿ ಪ್ರತಿಪಾದಿಸುವರೋ ಇಲ್ಲವೋ-ಎಂಬುದನ್ನು ಪರೀಕ್ಷಿಸುವುದಕ್ಕಾಗಿಯೇ ಶ್ರೀಪರಮೇಶ್ವರನು ಅವರನ್ನು ಈ ರೀತಿಯಾಗಿ ಪರೀಕ್ಷಿಸಿರುತ್ತಾನೆ.

ಯದ್ಯಪಿ ಶ್ರೀಭಗವತ್ಪಾದರು ಶ್ರೀಪರಮೇಶ್ವರನ ಅವತಾರಪುರುಷರೇ ಆಗಿದ್ದಾರೆ ಅವತಾರವೆಂದರೆ, ಶ್ರೀಪರಮೇಶ್ವರನ ಅಂಶದಿಂದ ಜನಿಸಿದವರೆಂದು ತಾತ್ಪರ್ಯವು. ಅವತಾರಗಳೆಲ್ಲ ಶ್ರೀಭಗವಂತನ ಅನುಗ್ರಹಬಲದಿಂದ ಬಂದ ವಿಶೇಷರೂಪಗಳು-ಮಾಯಿಕರೂಪಗಳು **'ಸಂಭವಾಮ್ಯಾತ್ಮಮಾಯಯಾ'** ಎಂದು ಶ್ರೀಕೃಷ್ಣಪರಮಾತ್ಮನು ತಿಳಿಸಿರುತ್ತಾನೆ; **'ವಿಷ್ಣೋರಂಶಾವತಾರಾ ಭುವನಹಿತಕರಾ ಧರ್ಮಸಂಸ್ಥಾಪನಾರ್ಥಾಃ।** ಎಂದು ಶ್ರೀಭಗವತ್ಪಾದರೂ ಹೇಳಿದ್ದಾರೆ. **ಭಗವನ್ನಾರಾಯಣೋ-ವಸುದೇವಾದಂಶೇನ ಕೃಷ್ಣಃ ಕಿಲ ಸಂಬಭೂವ**- ಎಂದು ಶ್ರೀಗೀತಾಭಾಷ್ಯದಲ್ಲಿಯೂ ತಿಳಿಸಿದ್ಧಾರೆ. ಹೀಗಿರುವಲ್ಲಿ ರಾಮ ಮತ್ತು ಕೃಷ್ಣಾವತಾರಗಳೆರಡೂ ಶ್ರೀಮಹಾವಿಷ್ಣು-

Sri Vidyabharathi Book Centre, Sringeri

CC-O. In Public Domain. Digitized by eGangotri

ವಿನ ಪೂರ್ಣಾವತಾರಗಳು– ಎಂಬ ಕೆಲವರ ಮಾತು ಅಪ್ರಾಮಾಣಿಕಗಳೇ ಸರಿ.– 'ಪೂರ್ಣಾವತಾರ ಎಂದರೆ ಅರ್ಥವೇನೋ ತಿಳಿಯದು! ಇರಲಿ. ಶ್ರೀಭಗವತ್ಪಾದರು ಶ್ರೀಪರಮೇಶ್ವರನ ಅಂಶಾವತಾರರಾದ್ದರಿಂದ–"ವೇದಶಾಸ್ತ್ರಾರ್ಥವನ್ನು ಯಥಾವತ್ತಾಗಿ ನಿರೂಪಿಸುವರೋ ಇಲ್ಲವೋ"– ಎಂದು ಪರೀಕ್ಷಿಸಬೇಕಾದ್ದು ಯುಕ್ತವೇ ಆಗಿದೆ. ಶ್ರೀರಾಮರೂ ಶ್ರೀಪರಶುರಾಮರೂ ಶ್ರೀಮಹಾವಿಷ್ಣುವಿನ ಅಂಶಾವತಾರರಾಗಿದ್ದರೂ, ಅವರಲ್ಲಿ ಪರಸ್ಪರನಿರೋಧವೂ, ಭಿನ್ನಾಭಿಪ್ರಾಯಗಳೂ, ವಿರೋಧವೂ ಸಹ ದೃಷ್ಟವಾಗಿದೆ. ಇದಲ್ಲದೆ, ಈ ಸಂದರ್ಭವು– ಶ್ರೀಭಗವತ್ಪಾದರವರು ಪ್ರತಿಪಾದಿಸಿರುವ ಶಾಸ್ತ್ರಾರ್ಥವು ಪಾರಮಾರ್ಥಿಕಯಥಾರ್ಥಸಿದ್ಧಾಂತವೇ ಆಗಿರುತ್ತದೆ; ಇತರರು ಪ್ರತಿಪಾದಿಸಿರುವಂತೆ ಸ್ವಕಪೋಲಕಲ್ಪಿತಾರ್ಥವಲ್ಲ''– ಎಂಬುದನ್ನು ವಿಶದಪಡಿಸುತ್ತದೆಯೆಂಬುದನ್ನು ಗಮನಿಸ ತಕ್ಕದ್ದು.]

ಭಯೇನ ಭಕ್ತ್ಯಾ ವಿನಯೇನ ಧೃತ್ಯಾ ಯುಕ್ತಃ ಸ ಹರ್ಷೇಣ ಚ–
ವಿಸ್ಮಯೇನ ।
ತುಷ್ಟಾವ ಶಿಷ್ಟಾನುಮತಸ್ತನ್ಮಯಸ್ತಂ ದೃಷ್ಟ್ವಾ ದೃಶೋರ್ಗೋಚರ–
ಮಷ್ಟಮೂರ್ತಿಂ ॥೭೭॥

ಅಷ್ಟಮೂರ್ತಿಯಾಗಿ ಜಗನ್ಮಯನಾಗಿರುವ ಶ್ರೀಪರಮೇಶ್ವರನನ್ನು ಕಣ್ಣೆದುರಿನಲ್ಲಿ ಸಾಕ್ಷಾತ್ತಾಗಿ ಕಂಡು, ಶಿಷ್ಟಸಮ್ಮತರಾದ ಶ್ರೀಭಗವತ್ಪಾದರು ಅತ್ಯಂತಹರ್ಷದಿಂದಲೂ, ಆಶ್ಚರ್ಯದಿಂದಲೂ ಕೂಡಿ, ಭಯದಿಂದಲೂ, ಭಕ್ತಿಯಿಂದಲೂ, ವಿನಯದಿಂದಲೂ ಧೈರ್ಯದಿಂದಲೂ ಕೂಡಿದವರಾಗಿ, ಶ್ರೀಪರಶಿವನನ್ನು ಹೃತ್ಪೂರ್ವಕವಾಗಿ ಸ್ತುತಿಸಿದರು.

ದಾಸಸ್ತೇಽಹಂ ದೇಹದೃಷ್ಟ್ಯಾಸ್ಮಿ ಶಂಭೋ ಜಾತಸ್ತೇಽಂಶೋ ಜೀವ–
ದೃಷ್ಟ್ಯಾ ತ್ರಿದೃಷ್ಟೇ ।
ಸರ್ವಸ್ಯಾತ್ಮನ್ನಾತ್ಮದೃಷ್ಟ್ಯಾ ತ್ವಮೇವೇತ್ಯೇವಂ ಮೇ ಧೀರ್ನಿಶ್ಚಿತಾ
ಸರ್ವಶಾಸ್ತ್ರೈಃ ॥೭೮॥

"ದೃಷ್ಟಿತ್ರಯಸಂಪನ್ನನಾಗಿರುವ ಹೇ ಸರ್ವಾತ್ಮ ಪರಮಾತ್ಮ– ದೇಹದ ದೃಷ್ಟಿಯಿಂದ ನೋಡಿದರೆ ನಾನು ನಿನ್ನ ದಾಸನಾಗಿದ್ದೇನೆ; ನಿನ್ನ ಅಂಶದಿಂದ ಜನಿಸಿರುವ ನಾನು ಆ ದೃಷ್ಟಿಯಿಂದ ಜೀವನಾಗಿದ್ದೇನೆ; ಈ ಉಪಾಧಿಗಳನ್ನೆಲ್ಲ ನಿರಾಕರಿಸಿ ಪಾರಮಾರ್ಥಿಕ ಸ್ವರೂಪದಿಂದ ನಾನು ನೀನೇ ಆಗಿರುತ್ತೇನೆ– ಇದೇ ಸರ್ವಶಾಸ್ತ್ರಗಳ ಪಾರಮಾರ್ಥಿಕ ಸಿದ್ಧಾಂತತತ್ತ್ವಾರ್ಥವು'' ಎಂದು ನಾನು ನಿಶ್ಚಯವುಳ್ಳವನಾಗಿದ್ದೇನೆ''– ಎಂದು ಸ್ತುತಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

["ಗುಣಿನಿಷ್ಠಗುಣಾಭಿಧಾನಂ ಸ್ತೋತ್ರಂ"- ಸ್ತೋತ್ರವೆಂದರೆ ಗುಣವಂತವಾಗಿರುವ ವಸ್ತುವಿನ ಗುಣಗಳನ್ನು ಹೇಳುವಿಕೆಯು" ಇದು ಯಥಾರ್ಥವೇ ಆಗಿರುತ್ತದೆ **"ದೇಹ ದೃಷ್ಟ್ಯಾಸ್ಮಿ ದಾಸೋಽಹಂ, ಜೀವದೃಷ್ಟ್ಯಾ ತ್ವದಂಶಕಃ। ಆತ್ಮದೃಷ್ಟ್ಯಾ ತ್ವಮೇವಾಹಂ ಇತಿ ಮೇ ನಿಶ್ಚಿತಾ ಮತಿಃ॥" 'ಅಂಶೋ ನಾನಾವ್ಯಪದೇಶಾತ್'** ಎಂದು ಶ್ರೀಬ್ರಹ್ಮಸೂತ್ರವು ಜೀವನನ್ನು ಪರಮಾತ್ಮನ ಅಂಶವೆಂದು ಪ್ರತಿಪಾದಿಸುತ್ತದೆ. **ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ।'**- ಎಂದು ಶ್ರೀಗೀತೆಯೂ ಜೀವನನ್ನು ಪರಮಾತ್ಮನ ಅಂಶವೆಂದು ತಿಳಿಸುತ್ತದೆ. ನಿರಂಶನಾದ ಪರಮಾತ್ಮನಿಗೆ ವಾಸ್ತವವಾಗಿ ಅಂಶವು ಸಂಭಾವಿತವಲ್ಲವಾಗಿ, ಘಟಾಕಾಶವು ಮಹಾಕಾಶದ ಅಂಶ- ವೆಂಬಂತೆ, ಔಪಾಧಿಕರೂಪವನ್ನೇ ಅಂಶವೆಂದು ತಿಳಿಯಬೇಕು. ಘಟಉಪಾದಿಯ ಸಂಬಂಧವನ್ನು ತಿರಸ್ಕರಿಸಿ, ಎಣಿಸದೆ ನೋಡಿದರೆ, ಆ ಘಟಾಕಾಶವು ಮಹಾಕಾಶವೇ ಆಗಿರುವುದು ತಿಳಿಯಬರುವುದು; ಇದರಂತೆಯೇ ದೇಹೇಂದ್ರಿಯಾದ್ಯುಪಾಧಿಗಳ ಸಂಬಂಧ ವ್ಯತಿರೇಕಣ ಪರಿಗಣಿಸಲಾಗಿ, ಜೀವನು ವಸ್ತುತಃ ಪರಮಾತ್ಮನೇ ಎಂಬುದು ವ್ಯಕ್ತವಾಗುವುದು. ಇದೇ "ಜೀವೋ ಬ್ರಹ್ಮೈವ ನಾಪರಃ।- ಎಂಬ ಪಾರಮಾರ್ಥಿಕವೇದಾಂತ ಸಿದ್ಧಾಂತವು.]

ಸಂಸ್ತುವಂತಮಿತಿ ತಂ ಪ್ರಣಮಂತಂ ಶಂಕರಂ ಸಬಹುಮಾನಮುವಾಚ।
ಬಾದರಾಯಣಮುನಿಃ ಶ್ರುತಿಜಾತೇ ಬ್ರಹ್ಮಸೂತ್ರಮಕರೋದ್ವಿಮ-
ಲಾರ್ಥಂ ॥೭೯॥
ತತ್ರ ಮೂಢಮತಯಃ ಕಲಿದೋಷಾದ್ದೂಷಿತಾರ್ಥಮವದನ್-
ಬಹುಧಾ ಹಿ ।
ತದ್ಭವಾನ್ವಿದಿತವೇದಶಿಖಾರ್ಥಃ ಸೂತ್ರಭಾಷ್ಯಮಧುನಾ ವಿದಧಾತು॥೮೦॥

ಈ ಪ್ರಕಾರವಾಗಿ ಸ್ತುತಿಸುತ್ತ, ಬಾರಿಬಾರಿಗೂ ನಮಸ್ಕರಿಸುತ್ತ ಇದ್ದ ಶ್ರೀಶಂಕರ- ಭಗವತ್ಪಾದರನ್ನು ಅಭಿಮಾನಪುರಃಸರವಾಗಿ ಶ್ಲಾಘಿಸಿ, ಶ್ರೀಪರಮೇಶ್ವರನು ಅವರನ್ನು ಕುರಿತು ಹೇಳಿದನು- "ಬಾದರಾಯಣಮುನಿಗಳು ಶ್ರುತಿಗಳ ಪರಮತಾತ್ಪರ್ಯಾರ್ಥ- ವನ್ನು ಪ್ರತಿಪಾದಿಸುತ್ತ, ಶುದ್ಧವಾದ ಅರ್ಥಗಳನ್ನುಳ್ಳ ಬ್ರಹ್ಮಸೂತ್ರಗಳನ್ನು ಪ್ರಚಾರ ಮಾಡಿರುತ್ತಾರೆ.

"ಆದರೆ, ಕಲಿಯ ದೋಷಗಳಿಂದ ಮೂಢಮತಿಗಳಾದವರು, ಅವುಗಳಿಗೆ ಬಹು- ವಾಗಿ ದುಷ್ಟವಾಗಿರುವ ಅರ್ಥವನ್ನು ಹೇಳುತ್ತಾರೆ; ವೇದಾಂತಗಳ ಯಥಾರ್ಥವನ್ನು ಬಲ್ಲ ನೀನು, ಈ ಸೂತ್ರಗಳಿಗೆ ಯಥಾರ್ಥವಾದ ಭಾಷ್ಯವನ್ನು ರಚಿಸು;

Sri Vidyabharathi Book Centre, Sringeri

CC-O. In Public Domain. Digitized by eGangotri

ಮೋಹಸಂತಮಸವಾಸರನಾಥಾಂಸ್ತತ್ರ ತತ್ರ ವಿನಿವೇಶ್ಯ ವಿನೇಯಾನ್ ।
ಪಾಲನಾಯ ಪರತತ್ತ್ವಸರಣ್ಯಾ ಮಾಮುಪೈಷ್ಯ ತತಃ ಕೃತಕೃತ್ಯಃ ॥
॥೮೧॥

"ಪಾರಮಾರ್ಥಿಕಾದ್ವೈತತತ್ತ್ವಮಾರ್ಗದ ರಕ್ಷಣೆಗಾಗಿ, ಅಜ್ಞಾನಾಂಧಕಾರವನ್ನು ನೀಗಿಸುವ ಸೂರ್ಯನಂತಿರುವ ಶಿಷ್ಯರನ್ನು ಅಲ್ಲಲ್ಲಿ ಸ್ಥಿರವಾಗಿರುವಂತೆ ನಿಲ್ಲಿಸಿ ಏರ್ಪಡಿಸಿ, ಹೀಗೆ ಕೃತಕೃತ್ಯನಾಗಿ, ಅನಂತರ ನನ್ನನ್ನು ಹೊಂದುವಿಯಂತೆ"–ಎಂದು.

[ಶ್ರೀಭಗವತ್ಪಾದರ ಅವತಾರಕ್ಕೆ ಪೂರ್ವದಲ್ಲಿಯೂ ಶ್ರೀಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು ರಚಿಸಿದವರಿದ್ದರು; ಅನಂತರವೂ ಅನೇಕಭಾಷ್ಯಗಳು ಪ್ರಚಾರಕ್ಕೆ ಬಂದಿವೆ. ಶ್ರೀಭಗವತ್ಪಾದರವರ ಹಿಂದಿನವರೆಲ್ಲರೂ ಅದ್ವೈತತತ್ತ್ವವನ್ನೇ ಒಪ್ಪಿದವರಾಗಿದ್ದರು; ಆದರೆ, ಕರ್ಮಪ್ರಧಾನರಾಗಿಯೋ ಜ್ಞಾನಕರ್ಮಸಮುಚ್ಚಯಪ್ರಧಾನರಾಗಿಯೋ ಭೇದಾಭೇದವಾದಿಗಳಾಗಿದ್ದರು–ಶುದ್ಧಾದ್ವೈತಪರರಾಗಿರಲಿಲ್ಲ. ಈಚಿನವರು ವಿಶಿಷ್ಟಾದ್ವೈತದ್ವೈತಾದಿಸಿದ್ಧಾಂತಗಳನ್ನು ವಾದಿಸುವವರಾಗಿದ್ದಾರೆ. ಸರ್ವಜ್ಞನಾದ ಶ್ರೀಪರಮೇಶ್ವರನು ಇವನ್ನೆಲ್ಲ ತಿಳಿದೇ ಶ್ರೀಭಗವತ್ಪಾದರಿಗೆ ಯಥಾರ್ಥಾದ್ವೈತಸಿದ್ಧಾಂತವನ್ನು ಪ್ರತಿಪಾದಿಸಬೇಕೆಂದು ನಿರೂಪವನ್ನಿತ್ತನು; ಮತ್ತು ಈ ಸಿದ್ಧಾಂತವು ಲೋಕದಲ್ಲಿ ಅಳಿಯದೆ ಯಾವಾಗಲೂ ಜಾಗರೂಕವಾಗಿರುವಂತೆ ಶಿಷ್ಯರಮೂಲಕ ಸತ್ಸಂಪ್ರದಾಯವನ್ನು ಪ್ರಚಾರಮಾಡಬೇಕೆಂದೂ ತಿಳಿಸಿರುತ್ತಾನೆ. ವೈದಿಕವರ್ಣಾಶ್ರಮಧರ್ಮದ ಸ್ಥಾಪನೆಗಾಗಿಯೇ ದೇವತೆಗಳ ಪ್ರಾರ್ಥನೆಯಂತೆ ಶ್ರೀಪರಮೇಶ್ವರನು ಅವತರಿಸಿಬಂದದ್ದು. ಅದ್ವೈತಸಿದ್ಧಾಂತದ ಪ್ರಚಾರದಿಂದಲೇ ಇದು ಸಿದ್ಧಿಸುವದು. ಯದ್ಯಪಿ ಶ್ರೀಕುಮಾರಿಲಭಟ್ಟಪಾದರೇ ವೇದಪ್ರಾಮಾಣ್ಯವನ್ನೂ, ವೈದಿಕವರ್ಣಾಶ್ರಮಧರ್ಮದ ಆವಶ್ಯಕತೆಯನ್ನೂ ಪ್ರತಿಪಾದಿಸಿದ್ದಾರೆ. ಆದರೆ, ಇಷ್ಟರಿಂದಲೇ ವರ್ಣಾಶ್ರಮಧರ್ಮವು ಲೋಕದಲ್ಲಿ ಪ್ರಚಾರವಾಗುವಂತಿರಲಿಲ್ಲ. ಕಲಿಯ ಪ್ರಬಲವಾದ ದುರಿತದೋಷದಿಂದ, ಜನರಿಗೆಕ್ಲೇಶಕರಗಳಾದ ವೈದಿಕವರ್ಣಾಶ್ರಮಧರ್ಮನಿಯಮಗಳಲ್ಲಿ ಶ್ರದ್ಧೆಯುದುರ್ಲಭವೇ ಆಗುವುದು ಸಹಜ–ಇದು ಇವತ್ತು ಪ್ರತ್ಯಕ್ಷವೇ ಇದೆಯಷ್ಟೆ ನಾವು ವಸ್ತುತಃ ನಿತ್ಯಮುಕ್ತಾದ್ವಿತೀಯಪರಮಾತ್ಮಸ್ವರೂಪರೇ ಆಗಿದ್ದೇವೆ; **'ಸ್ವಗೃಹೇ ನಿಧಿಮಜ್ಞಾತ್ವಾ ಭಿಕ್ಷಾಮಟತಿ ದುರ್ಮತಿಃ ।'**" "ತನ್ನ ಮನೆಯಲ್ಲಿಯೇ ಮಹಾಸಂಪತ್ತಿರುವುದನ್ನು ತಿಳಿಯದೆ, ದಿನದಿನವೂ ಭಿಕ್ಷೆಗೆ ಅಲೆಯುವ ದುರ್ಮತಿ"ಯಂತೆ, ತನ್ನ ಈ ವಾಸ್ತವಸ್ವರೂಪವನ್ನು ಅರಿಯದೆ ದುರಂತಸಂಸಾರಸಾಗರದಲ್ಲಿ ಬಿದ್ದು ಕ್ಲೇಶಪಡುತ್ತಿರುವುದು ನಾಚಿಕೆಗೇಡಾದದ್ದೇ ಸರಿ; ಈ ವಾಸ್ತವಸ್ವರೂಪದ ಅನುಭವವಿಲ್ಲದೆ ಕ್ಷೇಮಲಾಭವಿಲ್ಲ; ಇದರ ಅನುಭವಕ್ಕೆ ನಿಷ್ಕಾಮಸ್ವಸ್ವವರ್ಣಾಶ್ರಮಧರ್ಮನಿಷ್ಠೆಯೊಂದೇ ಉಪಾಯವು'–ಎಂಬುದನ್ನು ಪ್ರತಿಪಾದಿಸಿಕೊಡುತ್ತ, ಅದ್ವೈತಸಿದ್ಧಾಂತವೇ ವೈದಿಕವರ್ಣಾಶ್ರಮಧರ್ಮನಿಯಮಪ್ರಚಾ-

Sri Vidyabharathi Book Centre, Sringeri

CC-O. In Public Domain. Digitized by eGangotri

ರಕ್ಕೆ ಮಾರ್ಗವಾಗಿದೆ. ಶರಣಾಗತಿಯನ್ನೋ ಭಜನೆಯನ್ನೋ ಮುಕ್ತಿಗೆ ಸಾಧನವೆಂಬ ಇತರವಾದಗಳಲ್ಲಿ ವರ್ಣಾಶ್ರಮಧರ್ಮಕ್ಕೆ ಪ್ರಾಧಾನ್ಯವೇ ಇಲ್ಲವೆಂಬುದು ಪ್ರಸಿದ್ಧವೇ ಇದೆ. "ಗಜೇಂದ್ರ, ಶಬರಿ, ಕಾಕಾಸುರ, ಗೃಧ್ರಜಟಾಯು, ಸುಗ್ರೀವ, ವಿಭೀಷಣ–ಇವರೇ ಮೊದಲಾದ ಪುರಾಣಪ್ರಸಿದ್ಧರೂ, ಈಚಿನ ಜ್ಞಾನದೇವ, ತುಕಾರಾಮ, ಕನಕದಾಸ–ಮುಂತಾದವರೂ ಯಾವಜಾತಿಕುಲದವರು?–ಇವರೆಲ್ಲರೂ ಭಗವದ್ಭಕ್ತಿಮಾತ್ರದಿಂದಲೇ ಮುಕ್ತರಾದರೆಂದು ಪ್ರಸಿದ್ಧಿಯಿಲ್ಲವೆ?"–ಎಂದು ಪರಿಗಣಿಸುವ ಭಕ್ತಿಪ್ರಧಾನದ ಈ ಮತಗಳಲ್ಲಿ ವೈದಿಕವರ್ಣಾಶ್ರಮಧರ್ಮಗಳಿಗೆ ಸ್ಥಾನವೆಲ್ಲಿ? ವಸ್ತುತಃ ವೈದಿಕವರ್ಣಾಶ್ರಮಧರ್ಮನಿಷ್ಠೆಯೇ ಭಕ್ತಿಯು– **'ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನಾರಾಧ್ಯತೇ; ನ ಚಲತಿ ನಿಜವರ್ಣ ಧರ್ಮತೋ ಯಃ ಸಿತಮನಸಂ ತಮವೇಹಿ ವಿಷ್ಣುಭಕ್ತಂ!''**– ಎಂದು ಪುರಾಣಗಳು ಸಾರುತ್ತವೆ. **''ಚಿತ್ತಸ್ಯ ಶುದ್ಧಯೇ ಕರ್ಮ; ಯೋಗಿನಃ ಕರ್ಮ ಕುರ್ವಂತಿ ಸಂಗತ್ಯಕ್ತ್ವಾತ್ಮಶುದ್ಧಯೇ;** ಎಂಬ ಪ್ರಮಾಣಗಳಂತೆ, ವೈದಿಕವರ್ಣಾಶ್ರಮಧರ್ಮಾನುಷ್ಠಾನಗಳಿಂದ ಶುದ್ಧಚಿತ್ತನಾದವನಿಗೇ ಶ್ರೀಗುರೂಪದೇಶದಿಂದ ತತ್ತ್ವಜ್ಞಾನವುಲಭಿಸಿ, ನಿತ್ಯಸಿದ್ಧವಾಗಿರುವ ಮುಕ್ತಿಯು ಲಭಿಸುವುದು. ಕರ್ಮಸಾಧ್ಯವಾಗಿ ಆಗಂತುಕವಾದುದು ನಿತ್ಯವಾಗಲಾರದು ಇತ್ಯಾದಿವಿಚಾರದಿಂದ ಅದ್ವೈತಸಿದ್ಧಾಂತವೇ ಪರಮಾರ್ಥವೆಂದು ನಿಶ್ಚಿತವಾಗುವುದು.]

ಕರತಲಕಲಿತಾದ್ವಯಾತ್ಮತತ್ತ್ವಂ ಕುಮತಿವಚೋನಿಚಯೈರದೂಷಿತಾರ್ಥಂ ।
ಸಮರಚಯದಸೌ ಹಿ ಭಾಷ್ಯಜಾತಂ ಹ್ಯುಪನಿಷದಾಂ ಚ ತಥಾನ್ಯಬಂಧನಾನಾಂ ॥೮೨॥

ಶ್ರೀಪರಮೇಶ್ವರನ ಆದೇಶದಂತೆ ಶ್ರೀಭಗವತ್ಪಾದರು, ಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ತತ್ತ್ವಜ್ಞರಾಗಿದ್ದ ಮಹರ್ಷಿಗಳೊಡನೆ ವಿಚಾರಮಾಡಿ, ಅದ್ವಯಾತ್ಮತತ್ತ್ವವನ್ನು ಹಸ್ತಗತವಾಗಿ ಮಾಡುವಂಥ, ಕುಮತಿಗಳ ಮಾತುಗಳಿಂದ ದೂಷಿತಗಳಾಗದಂಥ, ಶ್ರೀ ಬ್ರಹ್ಮಸೂತ್ರಗಳಿಗೂ, ಉಪನಿಷತ್ತುಗಳಿಗೂ, ಶ್ರೀಮದ್ಭಗವದ್ಗೀತೆಗೂ, ಹಾಗೆಯೇ ವಿಷ್ಣು ಸಹಸ್ರನಾಮಸ್ತೋತ್ರ, ಸನತ್ಸುಜಾತೀಯ ಮುಂತಾದನಿಬಂಧಗಳಿಗೂ ಸಹ, ಯಥಾರ್ಥ ತತ್ತ್ವಬೋಧಕಗಳಾದ ಸದ್ಭಾಷ್ಯಗಳನ್ನು ವಿರಚಿಸಿದರು.

[೩೮, ೪೨ನೇ ಪದ್ಯಗಳಲ್ಲಿಯೇ ಶ್ರೀಭಗವತ್ಪಾದರ ವಿದ್ವತ್ತು ವರ್ಣಿತವಾಗಿದೆ.]

೧೧. ಶ್ರೀಭಗವತ್ಪಾದರ ಸಿದ್ಧಾಂತದ ವೈಶಿಷ್ಟ್ಯ.

Sri Vidyabharathi Book Centre, Sringeri

ಶೇಷಃ ಸಾಧುಭಿರೇವ ತೋಷಯತಿ ನ್ಯೂನಸ್ ಶಬ್ದೈ ಪುಮರ್ಥಾರ್ಥಿನೋ
ವಾಲ್ಮೀಕಿಃ ಕವಿರಾಜ ಏಷ ವಿತಥೈರರ್ಥೈರ್ಮಹುಃ ಕಲ್ಪಿತೈಃ।

CC-O. In Public Domain. Digitized by eGangotri

ವ್ಯಾಚಷ್ಟೇ ಕಿಲ ದೀರ್ಘಸೂತ್ರಸರಣಿರ್ವ್ಯಾಚಂ ಚಿರಾದರ್ಥಕಾಂ
ವ್ಯಾಸಃ ಶಂಕರದೇಶಿಕಸ್ತು ಕುರುತೇ ಸದ್ಯಃ ಕೃತಾರ್ಥಾನಹೋ ||೪೩||

"ಜಗದೇವ ದುಃಖಃಪಂಕಮಗ್ನಮುದ್ಧಿಧೀರ್ಷವಃ।"– ಎಂಬಂತೆ ಅನಾದ್ಯ-ನಂತವಾದ್ದ(ಜನ್ಮಮರಣಪರಂಪರಾಪ್ರಾಪ್ತಿಯ ಮೂಲಕವಾಗಿ ನಿರಂತರವೂಸುಖದುಃಖಗಳ ಅನುಭವಿಸುತ್ತಿರುವಂಥ ದುಃಖಮಯಸಂಸಾರದಿಂದ ಜನತೆಯನ್ನು ಉದ್ಧರಿಸುವ ಪರ-ಮೋದ್ದೇಶದಿಂದಲೇ ಲೋಕದಲ್ಲಿನ ಎಲ್ಲ ಮಹಾತ್ಮರೂ ಅನಾದಿಕಾಲದಿಂದಲೂ ಪ್ರಯತ್ನ-ಪರರಾಗಿರುವುದು ಸ್ಪಷ್ಟವೇ ಇದೆ. ಆದರೆ, ಅತೀಂದ್ರಿಯವಾಗಿರುವ ಈ ವಿಷಯದಲ್ಲಿ ಅಪೌರುಷೇಯವಾಗಿ ನಿರ್ದುಷ್ಟಪ್ರಮಾಣವಾಗಿರುವ ವೇದಶಾಸ್ತ್ರವೊಂದೇ ಬೋಧಕವಾಗಿ-ರುವುದು. ಇದನ್ನು ಮನಗಂಡ ಮಹರ್ಷಿಗಳೆಲ್ಲರೂ ವೇದಾರ್ಥವನ್ನು ವಿವರಿಸುವುದ ಕ್ಕಾಗಿ ಶ್ರಮಪಟ್ಟಿರುತ್ತಾರೆ. ಆದಿಶೇಷನ ಅವತಾರರಾದ ಶ್ರೀಪತಂಜಲಿಮಹರ್ಷಿಗಳು ಕಾಯವಾಙ್ಮನಸ್ಸುಗಳ ಶುದ್ಧಿಗಾಗಿ ಆಯುರ್ವೇದಶಾಸ್ತ್ರ, ಯೋಗಶಾಸ್ತ್ರ ಮತ್ತು ಶಬ್ದ ಶಾಸ್ತ್ರಗಳನ್ನು ಪ್ರಚಾರಮಾಡಿದರು. ಇದರಲ್ಲಿ ವೇದಾರ್ಥವಿವರಣೆಗೆ ಉಪಯುಕ್ತವಾದ-ಶಬ್ದ(ವ್ಯಾಕರಣ) ಶಾಸ್ತ್ರರೂಪವಾಗಿರುವ ಶ್ರೀಪಾಣಿನಿಮಹರ್ಷಿಗಳ ವ್ಯಾಕರಣಸೂತ್ರಗಳಿಗೆ ಅಮೋಘವಾದ ವ್ಯಾಕರಣಮಹಾಭಾಷ್ಯವನ್ನು ವಿರಚಿಸಿದರು. ಸಂಸ್ಕೃತವಾಙ್ಮಯದಲ್ಲಿ **"ಮಹಾಭಾಷ್ಯ"**–ವೆಂಬ ಹೆಸರಿಗೆ ತಕ್ಕದ್ದಾಗಿರುವ ಇದು ಅಸದೃಶವಾಗಿದೆ; ಆದರೆ, ಇದು–ಸಾಧುಶಬ್ದವಾವುದು, ಅಸಾಧುಶಬ್ದವು ಯಾವುದು – ಎಂದಿಷ್ಟರ್ಥವನ್ನು ಮಾತ್ರವೇ ನಿರೂಪಿಸುವುದರಲ್ಲಿ ಮುಕ್ತಾಯವಾಗಿದೆ.

"ಶೈಲೈಃಸಂಧಯತಿ ಸ್ಮ ವಾನರಹೃತೈರ್ವಾಲ್ಮೀಕಿರಂಭೋನಿಧಿಂ।"– ಕಪಿ ಗಳು ಹೊತ್ತುತಂದ ಪರ್ವತಗಳ ಕಲ್ಲುಬಂಡೆಗಳಿಂದ ವಾಲ್ಮೀಕಿಗಳು ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿಸುತ್ತ- ಇಂಥ ಕಲ್ಪಿತಾರ್ಥಗಳನ್ನೇ ವರ್ಣಿಸುವುದರಲ್ಲಿಯೇ ಚರಿತಾ-ರ್ಥರಾಗಿದ್ದಾರೆ.

ವ್ಯಾಸಃ ಪಾರ್ಥಶರೈರ್ಭುವಂ ಸುರಗಜಂ ನೇತುಂ ಚ ನಿಃಶ್ರೇಣಿಕಾಂ ।

ವ್ಯಾಸರು ಅರ್ಜುನನ ಬಾಣಗಳಿಂದ ಸ್ವರ್ಗಕ್ಕೆ ಏಣಿಯನ್ನು ಕಟ್ಟಿಸಿ ದೇವಲೋಕದ ಐರಾವತವೆಂಬ ಇಂದ್ರನ ಆನೆಯನ್ನು ಭೂಮಿಗೆ ತರಿಸುತ್ತ," ಇಂಥ ಅರ್ಥಗಳನ್ನೇ ನಿರೂಪಿಸಿರುತ್ತಾರೆ.

ಶ್ರೀಬಾದರಾಯಣವ್ಯಾಸರು, ವೇದದ ಪರಮತಾತ್ಪರ್ಯವನ್ನು ಪ್ರತಿಪಾದಿಸು-ತ್ತೇವೆಂದು 'ಅಥತೋ ಬ್ರಹ್ಮಜಿಜ್ಞಾಸಾ'– ಎಂದು ಮಹಾರ್ಥವನ್ನು ಆರಂಭಿಸಿ, ಯಾವ ಅರ್ಥವೂ ಸ್ಪಷ್ಟವಾಗಿ ತಿಳಿದುಬರಲಾರದಂಥ, ಮತ್ತು –**'ವಾದಿವಿನೋಧಾರ್ಥ'**– ಎಂಬಂತೆ, "ಈ ಸೂತ್ರಕ್ಕೆ ಹೀಗೆ ಅರ್ಥ"– ಎಂದು ವಾದಿಗಳು ಪರಸ್ಪರವಾಗಿ ನಿರಂತರವೂ ವಾದಮಾಡುವುದಕ್ಕೆ ಅವಕಾಶವಾಗಿರುವ, ಸೂತ್ರಗಳನ್ನೇ ಪ್ರಚಾರಮಾಡಿರುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಯಾವ ಶಾಸ್ತ್ರಕಾರರೂ ವೇದಗಳ ಪುರುಷಾರ್ಥ ಸಾಧನವಾಗಿರುವ ನಿಶ್ಚಿತವಾದ ತಾತ್ಪರ್ಯಾರ್ಥವನ್ನು ನಿರೂಪಿಸಲಾರದೆ ಹೋಗಿರುವಲ್ಲಿ, ಶ್ರೀಭಗವತ್ಪಾದರು ಪ್ರಮಾಣಯುಕ್ತ್ಯನುಭವಗಳ ಪರಮಸಾಮರಸ್ಯದಿಂದ ಅದ್ವಿತೀಯಬ್ರಹ್ಮಾತ್ಮತತ್ತ್ವವನ್ನು ವಿಶದವಾಗಿ ಬೋಧಿಸಿ, ಎಲ್ಲ ವಿವೇಕಿಮುಮುಕ್ಷುಗಳನ್ನೂ ಕೃತಾರ್ಥರನ್ನಾಗಿ ಮಾಡಿರುತ್ತಾರೆ.

ಹಂತುಂ ಬೌದ್ಧೋಽನ್ವಧಾವತ್ತದಸು ಕಥಮಪಿ ಸ್ವಾತ್ಮಲಾಭಃ ಕಣಾದಾತ್
ಜಾತಃ ಕೌಮಾರಿಲಾರ್ಯೈರ್ನಿಜಪದಗಮನೇ ದರ್ಶಿತಂ ಮಾರ್ಗಮಾತ್ರಂ ।
ಸಾಂಖ್ಯೈರ್ದುಃಖಂ ವಿನೀತಂ ಪರಮಥ ರಚಿತಾ ಪ್ರಾಣಧೃತ್ಯರ್ಹತಾನ್ಯೈಃ
ಇತ್ಥಂ ಖಿನ್ನಂ ಪುಮಾಂಸಂ ವ್ಯಧಿತ ಕರುಣಯಾ ಶಂಕರಾರ್ಯಃ ಪರೇಶಂ ॥೪೪॥

ಎಲ್ಲವನ್ನೂ ಶೂನ್ಯವೆಂದು ವಾದಿಸುವ ಬುದ್ಧನು ಆತ್ಮನನ್ನು ನಾಶಮಾಡುವುದಕ್ಕೇ ಅಟ್ಟಿಸಿಕೊಂಡುಬಂದನು; ದೇಹಾದಿವ್ಯತಿರಿಕ್ತನಾಗಿ ಆತ್ಮನು ಇರುವನೆಂಬುದನ್ನು ಪ್ರತಿಪಾದಿಸುತ್ತ, ವೈಶೇಷಿಕಶಾಸ್ತ್ರಪ್ರವರ್ತಕರಾದ ಕಣಾದರಿಂದ, ಆತ್ಮನಿಗೆ ಹೇಗೋ ಸ್ವರೂಪಮಾತ್ರ ಉಳಿಯಿತು. ಶ್ರೀಕುಮಾರಿಲಭಟ್ಟಪಾದರಿಂದ ವೇದಪ್ರಾಮಾಣ್ಯವನ್ನು ಪ್ರತಿಪಾದಿಸಿ, ಶ್ರೇಯಃಪ್ರಾಪ್ತಿಗೆ ವೈದಿಕಧರ್ಮಾನುಷ್ಠಾನರೂಪವಾದ ಮಾರ್ಗಮಾತ್ರವು ತೋರಿಸಲ್ಪಟ್ಟಿತು; ಆತ್ಮನು ಕರ್ತೃರೂಪನಲ್ಲವೆಂದು ಪ್ರತಿಪಾದಿಸುತ್ತ, ಸಾಂಖ್ಯಶಾಸ್ತ್ರಕಾರರು ಆತ್ಮನಿಗೆ ದುಃಖವು ದೂರಮಾಡಲ್ಪಟ್ಟಿದೆ; ಹೀಗೆಯೇ ಇತರ ಎಲ್ಲರಿಂದಲೂ ಆತ್ಮನನ್ನು ಜೀವನೆಂದೇ ಪ್ರತಿಪಾದಿತವಾಗಿರುವುದು. ಹೀಗಿರುವಲ್ಲಿ, ಯಾರಿಂದಲೂ ವಾಸ್ತವಸ್ಥಿತಿಯು ದೊರೆಯದೆ ಖಿನ್ನನಾಗಿದ್ದ ಆತ್ಮನನ್ನು, ಶ್ರೀಭಗವತ್ಪಾದರೊಬ್ಬರೇ ಪರಮಾತ್ಮನನ್ನಾಗಿ ಮಾಡಿ ಶಾಶ್ವತವಾಗಿ ಉದ್ಧರಿಸಿದ್ದಾರೆ.

ಮಿಥ್ಯಾವಕ್ತ್ರೀತಿ ಕೈಶ್ಚಿತ್ಪುರುಷಮುಪನಿಷದ್ದೂರಮುತ್ಸಾರಿತಾಭೂತ್
ಅನ್ಯೈರಸ್ಮಿನ್ನಿಯೋಜ್ಯಂ ಪರಿಚರಿತುಮಸಾವರ್ಹತೀತಿ ಪ್ರಣುನ್ನಾ
ಅರ್ಥಾಭಾಸಪ್ರಥಾನ್ಯೈರ್ಮೃದುಭಿರಿವ ಪರೈರ್ವಂಚಿತಾ ಚೋರಿತಾರ್ಥೈಃ
ವಿಂದತ್ಯಾನಂದಮೇಷಾ ಸುಚಿರಮಶರಣಾ ಶಂಕರಾರ್ಯಂ ಪ್ರಪನ್ನಾ ॥೪೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಮಾಣಿಕವಾಗಿರುವ ಶ್ರುತಿಯು,– "ಲೋಕೋದ್ಧಾರಕ್ಕಾಗಿ ತನ್ನ ಯಥಾರ್ಥತತ್ತ್ವವನ್ನು ಪ್ರತಿಪಾದಿಸಿಕೊಡಿ"– ಎಂದು ಪಂಡಿತಂಮನ್ಯರೆಂದು ಆಶ್ರಯಿ-ಸಲಾಗಿ- 'ಸತ್ಯವಾಗಿರುವ ದ್ವೈತಪ್ರಪಂಚವನ್ನು ಮಿಥ್ಯಾ– ಎಂದು ಹೇಳುತ್ತ'ದೆಂದು ಹೇಳುತ್ತ, ಉಪನಿಷತ್ತನ್ನು ನಾಸ್ತಿಕರೂ ದ್ವೈತಿಗಳೂ ನಿಷ್ಠುರವಾಗಿ ದೂರಮಾಡಿದರು; ವೇದಪ್ರಾಮಾಣಿಕರಾದ ಮೀಮಾಂಸಕರು–ವೇದಕ್ಕೆಲ್ಲ ಅಲ್ಲಿ ವಿಧಿಸಿರುವ ಕರ್ಮದಲ್ಲಿಯೇ ಪರಮತಾತ್ಪರ್ಯವಿರುವುದು ಕರ್ತೃವೇ ಇಲ್ಲದೆ ಕರ್ಮವು ಸಿದ್ಧಿಸುವುದಿಲ್ಲವಾಗಿ ಉಪನಿಷತ್ತುಗಳು ಪ್ರತಿಪಾದಿಸುವದೇಹಾದ್ಯತಿರಿಕ್ತನಾದ ಆತ್ಮನುವೈದಿಕಕರ್ಮಗಳಿಗೆಕರ್ತೃವಾಗಿ ಅಧಿನನೆ ಸರಿ ಎಂದು ಪ್ರೇರಿಸಿದರು ಇತರತಾರ್ಕಿಕವಾದಿಗಳು ವೇದಾರ್ಥಗಳನ್ನು ಕದ್ದು ವೇದವಾಕ್ಯ ತಮತಮಗೆ ಅನುಕೂಲವಾಗುವಂತೆ ಅರ್ಥಾಭ್ಯಾಸಗಳನ್ನು ಕಲ್ಪಿಸುತ್ತ, ವೇದಕ್ಕೆ ವಂಚನೆ (ಮೋಸ) ಮಾಡಿದರು. ಹೀಗಿರುವಲ್ಲಿ ಶ್ರುತಿಯು ಶ್ರೀಶಂಕರಭಗವತ್ಪಾದಾಚಾರ್ಯ-ರನ್ನು ಶರಣುಹೊಂದಿ ತನ್ನ ವಾಸ್ತವಾರ್ಥವು ಪ್ರಕಟವಾಗಲಾಗಿ, ಈಗ ತಾನು ಸಾರ್ಥಕ-ಳಾಗಿ ಕೃತಾರ್ಥಳಾದೆನೆಂದು ಸಂತೋಷದಿಂದ ಇರುತ್ತಿದೆ.

[ಶ್ರೀಭಗವತ್ಪಾದರಲ್ಲದೆ ಬೇರೆ ಯಾವಶಾಸ್ತ್ರಕಾರರೂ ಯಥಾರ್ಥತತ್ತ್ವವನ್ನು ಪ್ರತಿಪಾದಿಸಿರವುದಿಲ್ಲವೆಂಬುದು ೮೩ನೇ ಪದ್ಯದ ತಾತ್ಪರ್ಯವು. ಆತ್ಮನು ಸಂಸಾರದಿಂದ ಖಿನ್ನನಾಗಿ, ತನ್ನ ಕ್ಷೇಮವನ್ನು ಬಯಸಿ ಇತರ ಶಾಸ್ತ್ರಕಾರರನ್ನು ಶರಣುಹೊಂದಲಾಗಿ, ಅವರಾರಿಂದಲೂ ನೆಮ್ಮದಿಯು ದೊರೆಯದೆ ಹೋಗಲಾಗಿ, ಶ್ರೀಭಗವತ್ಪಾದರನ್ನೇ ಆಶ್ರ-ಯಿಸಿಯೇ ಕೃತಾರ್ಥನಾದನೆಂಬುದು ೮೪ನೇ ಪದ್ಯದ ಅಭಿಪ್ರಾಯವು.

ಪ್ರಾಮಾಣಿಕವಾದ ಶ್ರುತಿಯು ತನ್ನ ಯಥಾರ್ಥವಾದ ಅರ್ಥವನ್ನು ಲೋಕಹಿತಕ್ಕಾಗಿ ಪ್ರಕಟಮಾಡಿರೆಂದು ಶಾಸ್ತ್ರಕಾರರೆಂದೆನಿಸಿರುವವರನ್ನೆಲ್ಲ ಪ್ರಾರ್ಥಿಸಲು, ಎಲ್ಲರೂ ಶ್ರುತಿಗೆ ಅಪಾರ್ಥವನ್ನೇ ಹೇಳಲಾಗಿ, ಶ್ರೀಭಗವತ್ಪಾದರೊಬ್ಬರಿಂದಲೇ ಶ್ರುತಿಯು ತನ್ನ ಯಥಾರ್ಥವನ್ನು ಪಡೆದು ಧನ್ಯವಾಯಿತೆಂಬುದು ೮೫ ನೇ ಪದ್ಯದ ಸಾರಾರ್ಥವು.]

೧೨. ಶ್ರೀವೇದವ್ಯಾಸರ ಸಮಾಗಮ.

ಸ ಜಾತು ಶಾರೀರಕಸೂತ್ರಭಾಷ್ಯಮಧ್ಯಾಪಯನ್ನಭ್ರಸರಿತ್ಸಮೀಪೇ।
ಉವಾಸ ತಾವದ್ದ್ವಿಜ ಏಕ ಏತ್ಯ ಕಸ್ತ್ವಂ ಕಿಮಧ್ಯಾಪಯಸೀತ್ಯ-
ಪೃಚ್ಛತ್ ॥೮೬॥

ದೇವನದಿಯಾದ ಶ್ರೀಗಂಗೆಯತೀರದಲ್ಲಿ ಎಂದಿನಂತೆ ಶ್ರೀಭಗವತ್ಪಾದರು ತಮ್ಮ ಶಾರೀರಿಕಸೂತ್ರ (ಬ್ರಹ್ಮಸೂತ್ರ) ಭಾಷ್ಯವನ್ನು ಶಿಷ್ಯರಿಗೆ ಪ್ರವಚನಮಾಡುತ್ತಿದ್ದಾಗ, ಒಬ್ಬ ಬ್ರಾಹ್ಮಣನು ಬಂದು–'ನೀವು ಯಾರು; ನೀವು ಪ್ರವಚನಮಾಡುತ್ತಿರುವುದೇನು?'-ಎಂದು ಪ್ರಶ್ನೆಮಾಡಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಪದ್ಮಪಾದರು ಶ್ರೀಭಗವತ್ಪಾದರ ಪರಿಚಯವನ್ನು ಅವರಿಗೆ ಮಾಡಿಕೊಟ್ಟು,– "ಇವರು ತಾವು ರಚಿಸಿರುವ ಶ್ರೀಬಾದರಾಯಣರ ಬ್ರಹ್ಮಸೂತ್ರಗಳ ಮೇಲಿನ ಅಮೋಘವಾದ ಭಾಷ್ಯವನ್ನು ನಮಗೆ ಪ್ರವಚನಮಾಡುತ್ತಿದ್ದಾರೆಂದು ತಿಳಿಸಿದರು. ಆಗ ಆ ಬ್ರಾಹ್ಮಣನು– "ಬ್ರಹ್ಮಸೂತ್ರಗಳ ಅರ್ಥವನ್ನು ನೀವು ಸರಿಯಾಗಿ ತಿಳಿದಿರುವಿರಾ?' ನಿಮಗೆ ಚೆನ್ನಾಗಿತಿಳಿದಿರುವ ಯಾವುದಾದರೊಂದು ಸೂತ್ರವನ್ನು ವ್ಯಾಖ್ಯಾನಮಾಡಿಹೇಳಿ, ನೋಡೋಣ"– ಎಂದು ಕೇಳಿದನು. ಆಗ ಶ್ರೀಭಗವತ್ಪಾದರು–"ನನಗೆ ಬ್ರಹ್ಮಸೂತ್ರಗಳ ಅರ್ಥವನ್ನು ಬರೆದಿರುವೆನೆಂಬ ಹೆಮ್ಮೆಯೇನೂ ಇಲ್ಲ; ಯಾವ ಸೂತ್ರದ ಅರ್ಥವನ್ನು ತಿಳಿಯಬೇಕೆಂದು ನೀವು ಬಯಸಿದರೆ, ಅದನ್ನು ತಿಳಿದಮಟ್ಟಿಗೆ ವಿವರಿಸುತ್ತೇನೆ"– ಎಂದು ವಿನಯದಿಂದ ಉತ್ತರಿಸಿದರು. ಆಗ–

ಪಪ್ರಚ್ಛ ಸೋಽಧ್ಯಾಯಮಥಾಧಿಕೃತ್ಯ ತೃತೀಯಮಾರಭ್ಯಗತಂ ಯತೀಶಂ ।
ತಯೋಃ ಸುರಾಚಾರ್ಯಫಣೀಂದ್ರವಾಚೋರ್ದಿನಾಷ್ಟಕಂ ವಾಕ್ಕಲಹೋ ಜಜೃಂಭೇ ॥೬೭॥

ಆಗ ಆ ಬ್ರಾಹ್ಮಣನು–ಶ್ರೀಬ್ರಹ್ಮಸೂತ್ರಗಳ ಮೂರನೆಯ ಅಧ್ಯಾಯದ ಮೊದಲನೆಯ ಸೂತ್ರದಿಂದ ಆರಂಭನಾಗಿರುವ ವಿಷಯವನ್ನು ಕುರಿತು ಶ್ರೀಭಗವತ್ಪಾದರನ್ನು ಪ್ರಶ್ನೆಮಾಡಿದನು. ದೇವಗುರುವಾದ ಶ್ರೀಬೃಹಸ್ಪತ್ಯಾಚಾರ್ಯರಿಗೂ, ಆದಿಶೇಷನಿಗೂ ಸಮರಾಗಿದ್ದ ಅವರೀರ್ವರಿಗೂ ಈ ವಿಷಯದಲ್ಲಿ ಎಂಟುದಿನಗಳಕಾಲ ವಾದವು ಜರುಗಿತು.

[ಜೀವನು ತನ್ನ ಕರ್ಮಾನುಸಾರವಾಗಿ ಈ ಲೋಕದಲ್ಲಿ ಸುಖದುಃಖಫಲಗಳನ್ನು ಅನುಭವಿಸಿ, ಇತರಕರ್ಮಗಳ ಫಲಾನುಭವಕ್ಕಾಗಿ ಇತರ ಸ್ವರ್ಗಾದಿಲೋಕಗಳಿಗೆ ಹೋಗುವನು. ದೇಹವಿಲ್ಲದೆ ಆ ಫಲಗಳ ಅನುಭವವು ಸಂಭವಿಸಲಾರದುದರಿಂದ, ಅಲ್ಲಿಗೆ ಬೇಕಾದ ದೇಹವು ಉಂಟಾಗುವುದಕ್ಕೆ ಅವಶ್ಯಗಳಾಗಿರುವ ಇಹಲೋಕದ ಸಾಮಗ್ರಿಗಳೊಡನೆಯೇ ಅಲ್ಲಿಗೆ ಹೋಗುತ್ತಾನೆಂಬುದು ಇಲ್ಲಿನ ವಿಷಯವು. ಇದನ್ನು ತಿಳಿಸುವ ಶ್ರುತಿವಾಕ್ಯಗಳ ವಿಚಾರದಲ್ಲಿ ವಾದವು ನಡೆಯಿತೆಂದು ಭಾವವು.

ಶ್ರೀಭಗವತ್ಪಾದರು ವಿವರಿಸಿದ ಅರ್ಥದ ಮೇಲೆ ಆ ಬ್ರಾಹ್ಮಣನು ಅನೇಕವಿಧವಾಗಿ ಆಕ್ಷೇಪಮಾಡಲು, ಶ್ರೀಭಗವತ್ಪಾದರು ಅವಕ್ಕೆಲ್ಲ ಸರಿಯಾದ ಸಮಾಧಾನಗಳನ್ನು ಹೇಳಿ, ತಮ್ಮಸಿದ್ಧಾಂತವನ್ನೇ ಸಮರ್ಥಿಸಿ ಅವನನ್ನು ಒಪ್ಪಿಸಿದರು.]

ಸೂತ್ರಾನುಕಾರಿ ಮೃದುವಾಕ್ಯನಿವೇದಿತಾರ್ಥಂ ಸ್ವೀಯೈಃ ಪದ್ಯೈಃ ಸಹ ನಿರಾಕೃತಪೂರ್ವಪಕ್ಷಂ ।
ಸಿದ್ಧಾಂತಯುಕ್ತಿವಿನಿವೇಶಿತತತ್ತ್ವರೂಪಂ ದೃಷ್ಟ್ವಾ ಪರಾಶರಿರಮುಷ್ಯ ಮುದಂ ಶಸ್ತುತೋಷ ॥೬೮॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಪದ್ಮಪಾದರು ಆ ಬ್ರಾಹ್ಮಣನನ್ನು ಶ್ರೀವೇದವ್ಯಾಸರೇ ಎಂದು ಗುರ್ತಿಸಿ ಶ್ರೀಭಗವತ್ಪಾದರಿಗೆ ಸೂಚಿಸಿದರು. ಆಗ ಶ್ರೀವ್ಯಾಸರು ಸ್ವಸ್ವರೂಪದಿಂದ ಪ್ರಕಟರಾಗಿ, ಶ್ರೀಭಗವತ್ಪಾದರ ಶ್ರೀಬ್ರಹ್ಮಸೂತ್ರಭಾಷ್ಯವನ್ನು ಆಮೂಲಾಗ್ರವಾಗಿ ಪರಿಶೀಲಿಸಿನೋಡಿ ಸೂತ್ರವನ್ನೇ ಅನುಸರಿಸಿ ಮೃದುಮಧುರಪಿಶದನಿರ್ದುಷ್ಟಮಾತುಗಳಿಂದ ಯಥಾವತ್ತಾಗಿ ಅರ್ಥವನ್ನು ವಿವರಿಸಿ, ತನ್ನ ಮಾತುಗಳಿಂದಲೂ ಪರಪಕ್ಷಗಳ ಆಕ್ಷೇಪಗಳನ್ನು ನಿರಾಕರಿಸಿ, ಸಿದ್ಧಾಂತಕ್ಕೆ ತಕ್ಕ ಯುಕ್ತಿಗಳಿಂದ ತತ್ತ್ವಾರ್ಥವನ್ನು ಪ್ರತಿಪಾದಿಸಿರುವುದನ್ನು ಮನಗಂಡು, ಶ್ರೀಪರಾಶರಮಹರ್ಷಿಗಳ ಪುತ್ರರಾದ ಶ್ರೀವೇದವ್ಯಾಸರು, ವಿಶೇಷವಾಗಿ ಹೊಗಳುತ್ತ, ಸಂತೋಷಿಸಿದರು.

> ಭಾವಂ ಮದೀಯಮವಬುಧ್ಯ ಯಥಾವದೇವಂ ಭಾಷ್ಯಂ ಪ್ರಣೇತು
> ಮಮಲಂ ನ ಪರಃ ಸಮರ್ಥಃ ।
> ಬ್ರಹ್ಮಾದಿಭಿಶ್ಚ ನ ನಿರಾಕರಣೀಯಮೇತಚ್ಛಕ್ಯೋ ನ ವರ್ಣಯಿತುಂ ತು
> ಮದ್ಭುತಶಂಕರಸ್ತ್ವಂ ॥೮೯॥

'ಸೂತ್ರಗಳ ನನ್ನ ಅಭಿಪ್ರಾಯವನ್ನು ಯಥಾವತ್ತಾಗಿ ತಿಳಿದು, ಈ ಪ್ರಕಾರವಾಗಿ ಭಾಷ್ಯವನ್ನು ಬರೆಯಲು ನೀವಲ್ಲದೆ ಬೇರೆಯಾರೂ ಸಮರ್ಥರಲ್ಲ; ಬ್ರಹ್ಮಾದಿಗಳೂ ಇದನ್ನು ನಿರಾಕರಿಸಲು ಶಕ್ತರಲ್ಲ,–ಮತ್ತೆ ಇದನ್ನು ಹೊಗಳುವುದೇನು? ನೀವು ಸಾಕ್ಷಾದದ್ಭುತಶಂಕರರೇ ಸರಿ'–ಎಂದು ಬಿಚ್ಚಿದ ಹೃದಯದಿಂದ ಪ್ರಶಂಸಿಸಿದರು.

[ರಾಮಾನುಜಾಚಾರ್ಯರು ಶ್ರೀವ್ಯಾಸರನ್ನು ಸಂಧಿಸಿದ್ದರೋ ಇಲ್ಲವೋ ತಿಳಿಯದು; ಅವರ ಸಂಪ್ರದಾಯದಲ್ಲಿ ಶ್ರೀವ್ಯಾಸರು ಸೇರಿಲ್ಲದಿರುವುದು ಗಮನಾರ್ಹ. ಮಧ್ವಾಚಾರ್ಯರು ಶ್ರೀವ್ಯಾಸರಿಂದಲೇ ಶ್ರೀಬ್ರಹ್ಮಸೂತ್ರಗಳನ್ನು ಅಧ್ಯಯನಮಾಡಿ, ತಮ್ಮ ಭಾಷ್ಯಕ್ಕೆ ಅವರ ಅನುಮೋದನೆಯನ್ನು ಪಡೆದರೆಂದು ಹೇಳಿಕೊಳ್ಳುತ್ತಾರೆ. "ಶ್ರೀಭಗವತ್ಪಾದರ ಭಾಷ್ಯವನ್ನೂ ಅನುಮೋದಿಸಿದ್ದೀರಿ; ಅದಕ್ಕೆ ವಿರುದ್ಧಾರ್ಥದ ನನ್ನ ಭಾಷ್ಯವನ್ನೂ ಅನುಮೋದಿಸುತ್ತಿದ್ದೀರಿ; ನಿಮಗೆ ಬುದ್ಧಿ ಸರಿಯಾಗಿಲ್ಲವೇ"– ಎಂದು ಮಧ್ವಾಚಾರ್ಯರು ವ್ಯಾಸರನ್ನು ಪ್ರಶ್ನೆಮಾಡಲಿಲ್ಲವೆ? ಆಶ್ಚರ್ಯ!

'ಸ್ವತಂತ್ರಂ ಪರತಂತ್ರಂ ಚ'– ಎಂದು ತತ್ತ್ವವನ್ನು ಎರಡಾಗಿ ವಿಭಾಗಿಸಿ, ವಿಷ್ಣುವನ್ನು ಸ್ವತಂತ್ರತತ್ತ್ವವೆಂದೂ ಜೀವರನ್ನು ಪರತಂತ್ರರೆಂದೂ ಪರಿಗಣಿಸುವ ಮಾಧ್ವಮತದಲ್ಲಿ– 'ಸ್ವತಂತ್ರಃ ಕರ್ತಾ; ಕರ್ತಗಾಮಿ ಫಲಂ'– ಎಂಬ ಪ್ರಾಮಾಣಿಕನ್ಯಾಯಾನುಸಾರವಾಗಿ, ಧರ್ಮಾಧರ್ಮಕರ್ಮಗಳಿಗೆ ಕರ್ತೃವೂ, ತತ್ಫಲಭೋಗಿಯೂ ಇವರ ವಿಷ್ಣುವೇ ಆಗಿ ಪರಮಾರ್ಥವಾಗಿ ಪೂರ್ಣಸಂಸಾರಿಯಾಗುವನು. ಸ್ವತಂತ್ರಕರ್ತೃವಲ್ಲವಾಗಿ, ಸ್ವತಂತ್ರಭೋಕ್ತೃವೂ ಆಗದ ಜೀವನು, ಪೂರ್ಣವಾಗಿ ಅಸಂಸಾರಿಯಾಗಿ ನಿತ್ಯಮುಕ್ತಸ್ವರೂಪನಾಗುವನು; ಇದು ಪೂರ್ಣಪ್ರಜ್ಞದರ್ಶನದ ಪರಮಾರ್ಥ;]

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು–

ವ್ಯಾಖ್ಯಾಹಿ ಭೂಯೋ ನಿಗಮಾಂತವಿದ್ಯಾಂ ವಿಭೇದವಾದಾನ್ವಿದಷೋ–
ವಿಜಿತ್ಯ ।

ಗ್ರಂಥಾನ್ಬವಿ ಖ್ಯಾಪಯ ಸಾನುಬಂಧಾನ್ ಕ್ಷೇಮಾಯ ಲೋಕಸ್ಯ
ಚಿರಾಯ ಭೂಯಾತ್ ॥೯೦॥

"ಇದರಂತೆಯೇ ವೇದಾಂತಶಾಸ್ತ್ರದ ಶ್ರುತಿಸ್ಮೃತಿಪ್ರಸ್ಥಾನಗಳಿಗೂ ಭಾಷ್ಯಗಳನ್ನು ವಿರಚಿಸು; ಭೇದವಾದಿಗಳನ್ನೆಲ್ಲ ಜಯಿಸಿ, ಸಮ್ಯಗ್ದರ್ಶನಪರಗಳಾದ ಹಲವಾರು ಗ್ರಂಥಗಳನ್ನೂ ರಚಿಸು; ಇವೆಲ್ಲ ಲೋಕದ ಚಿರಕಾಲದ ಕ್ಷೇಮಕ್ಕೆ ಉಪಯುಕ್ತಗಳಾಗುವುವು"– ಎಂದು ಅನುಗ್ರಹಿಸಿ ಅಂತರ್ಹಿತರಾದರು.

೧೫- ವೇದಾಂತಸಿದ್ಧಾಂತ ಪ್ರಚಾರ–ಶ್ರೀಕುಮಾರಿಲಸಮಾಗಮ

ಭಾಷ್ಯಸ್ಯ ವಾರ್ತಿಕಮುಥೈಷ ಕುಮಾರಿಲೇನ ಭಟ್ಟೇನ ಕಾರಯಿತು
ಮಾದರವಾನ್ಮುನೀಂದ್ರಃ ।

ಪ್ರಾಯಾತ್ಪ್ರಯಾಗಮಥ ತತ್ರ ತದೀಯ ವಹ್ನಿಜ್ವಾಲಾಪ್ರವೇಶಮ–
ಶೃಣೋದ್ಗುರು ಪಾಪಶಾಂತ್ಯೈ ॥೯೧॥

ಲೋಕದ ಕ್ಷೇಮಕ್ಕಾಗಿ ಭಾಷ್ಯವನ್ನು ಪ್ರಚಾರಮಾಡಬೇಕೆಂಬ ಶ್ರೀಗೋವಿಂದ-ಭಗವತ್ಪಾದಗುರುಗಳ ಶ್ರೀವಿಶ್ವೇಶ್ವರನ ಮತ್ತು ಶ್ರೀವೇದವ್ಯಾಸರ ಆಜ್ಞಾನುಸಾರವಾಗಿ, ಇದನ್ನು ಹೇಗೆ ಮಾಡಬೇಕೆಂಬುದನ್ನು ಪರ್ಯಾಲೋಚಿಸಿ– **ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ।**– ಎಂಬ ನ್ಯಾಯದಂತೆ, ದೊಡ್ಡವರೆಂದು ಪ್ರಸಿದ್ಧರಾದವರು ಪರಿಗ್ರಹಿಸಿದರೆ ಇತರರೂ ಅದನ್ನು ಸ್ವೀಕರಿಸುವರೆಂದು ಭಾವಿಸಿದರು. ಪೂರ್ವಮೀಮಾಂಸಾ ಭಾಷ್ಯಕ್ಕೆ ಅಸಾಧಾರಣವಾದ ವಾರ್ತಿಕವನ್ನು ವಿರಚಿಸಿ ವೈದಿಕಾಕರ್ಮಕಾಂಡವನ್ನು ಪ್ರಚಾರಮಾಡಿರುವ ಶ್ರೀಕುಮಾರಿಲಭಟ್ಟಪಾದರಿಂದಲೇ ತಮ್ಮ ಭಾಷ್ಯಕ್ಕೂ ವಾರ್ತಿಕವನ್ನು ಬರೆಯಿಸಬೇಕೆಂದು ನಿಶ್ಚಯಿಸಿಕೊಂಡು, ಅವರು ಇದ್ದ ಪ್ರಯಾಗಕ್ಷೇತ್ರಕ್ಕೆ ಬಂದರು. ಅಲ್ಲಿಗೆ ಬಂದು, ಗುರುತರವಾದ ಪಾಪಕ್ಕೆ ಪ್ರಾಯಶ್ಚಿತ್ತಶಾಂತಿಗಾಗಿ ಅವರು ತುಷಾಗ್ನಿಜ್ವಾಲೆಯನ್ನು ಪ್ರವೇಶಮಾಡಿರುವರೆಂಬ ವರ್ತಮಾನವನ್ನು ಕೇಳಿತಿಳಿದರು.

[**"ಪದವಾಕ್ಯಪ್ರಮಾಣಜ್ಞೋ ಭಟ್ಟಃ"**–ಎಂಬ ನ್ಯಾಯದಂತ, ಪದವೆಂದರೆ ವ್ಯಾಕರಣಶಾಸ್ತ್ರ, ವಾಕ್ಯವೆಂದರೆ ಮೀಮಾಂಸಾಶಾಸ್ತ್ರ, ಪ್ರಮಾಣವೆಂದರೆ ನ್ಯಾಯಶಾಸ್ತ್ರ. ಈ ಮೂರುಶಾಸ್ತ್ರಗಳಲ್ಲಿಯೂ ಪ್ರವೀಣರಾದವರು 'ಭಟ್ಟ'–ಎಂಬ ಬಿರುದಿಗೆ ಪಾತ್ರರು.

Sri Vidyabharathi Book Centre, Sringeri

CC-O. In Public Domain. Digitized by eGangotri

ವೈದಿಕ ಕರ್ಮಕಾಂಡದ ಪ್ರಚಾರಕ್ಕಾಗಿ ಅವತರಿಸಿಬಂದಿದ್ದ ಶ್ರೀಕುಮಾರಿಲ ಭಟ್ಟಪಾದರು, ಆಗ ಪ್ರಾಬಲ್ಯದಲ್ಲಿದ್ದ ಬೌದ್ಧಮತವನ್ನು ನಿರಾಕರಿಸಬೇಕಾಯಿತು, ಆ ಮತದ ರಹಸ್ಯವನ್ನು ತಿಳಿಯದೆ ನಿರಾಕರಿಸುವುದು ಕಷ್ಟವಾಗಿದ್ದುದರಿಂದ ಶ್ರೀಭಟ್ಟಪಾದರು ಬೌದ್ಧಗುರುವೊಬ್ಬರಲ್ಲಿ ಕಪಟದಿಂದ ಶಿಷ್ಯವೃತ್ತಿಯನ್ನವಲಂಬಿಸಿಕೊಂಡು. ಆ ಮತದ ರಹಸ್ಯವನ್ನು ಅರಿತರು. ಮತ್ತೆ ಆ ಮತವನ್ನು ಪೂರ್ಣವಾಗಿ ಖಂಡಿಸಿದರು. **ವರ್ಣಮಾತ್ರಂ ಗುರುಃ; ನದ್ರುಹ್ಯೇತ ಕದಾಚನ** ಎಂದು ಶಾಸ್ತ್ರವು ಒಂದಕ್ಷರವನು ಬೋಧಿಸಿದವನೂ ಗುರುವೆಂದೂ' ಗುರುದ್ರೋಹವನ್ನು ಎಂದೂ ಮಾಡಬಾರದೆಂದೂ ತಿಳಿಸುತ್ತದೆ, ಆದರೆ, ಉಪಾಯಾಂತರವಿಲ್ಲದೆ, ತಮ್ಮ ಅವತಾರದ ಮುಖ್ಯೋದ್ದೇಶ್ಯ ಪೂರಣಕ್ಕಾಗಿ ಮಾಡಬೇಕಾಗಿಬಂದ ಗುರುದ್ರೋಹಕ್ಕೆ ಪರಿಹಾರವಾಗಿ ಶ್ರೀಕುಮಾರಿಲ-ಭಟ್ಟಪಾದರು ತಮ್ಮಕಾರ್ಯವು ಪೂರ್ಣವಾಗಲಾಗಿ ತುಷಾನಲಪ್ರವೇಶರೂಪವಾದ ಪ್ರಾಯಶ್ಚಿತ್ತವನ್ನು ಪರಿಗ್ರಹಿಸಿದರು. **ಪಾದ**ಶಬ್ದವು ಪೂಜಾರ್ಥಕವಾದದ್ದು.

ದ್ವೈತವಿಶಿಷ್ಟಾದ್ವೈತಮತಗಳು, ಆ ಮತದ ಪ್ರವರ್ತಕರಿಗೆ ಹಿಂದೆ, ಎಲ್ಲಿಯೂ ಪ್ರಚಾರದಲ್ಲಿ ಇರಲಿಲ್ಲ. ಅವರು ಅದ್ವೈತಮತದ ವಿದ್ವಾಂಸರುಗಳಿಂದಲೇ ಅದ್ವೈತ ಸಿದ್ಧಾಂತವನ್ನೇ ಅಧ್ಯಯನಮಾಡಿ ಅದು ಅವರಿಗೆ ಸಮ್ಮತವಾಗಿ ಕಂಡುಬರದಿದ್ದುದರಿಂದ ಅದನ್ನು ಪರಿತ್ಯಜಿಸಿ, ಹೊಸಮಾರ್ಗವನ್ನು ಅವಲಂಬಿಸಿದರೆಂದು ಆಮತಾನುಯಾಯಿಗಳೇ ಹೇಳುತ್ತಾರೆ. ಶ್ರೀಭಗವತ್ಪಾದರಾಗಲಿ, ಇತರಮತದವರೇ ಆಗಲಿ ಖಂಡಿಸುವ ದ್ವೈತಮತವು, ಪ್ರಚಾರದಲ್ಲಿರುವ ಸಾಂಖ್ಯವೈಶೇಷಿಕಾದಿದ್ವೈತಮತಗಳೇ ಹೊರತು, ಈ ಮತಗಳಲ್ಲ –ಅವುಗಳು ಸಾಂಪ್ರದಾಯಿಕಮತಗಳಲ್ಲ.]

ಶ್ರುತ್ವೇತಿ ತಾಂ ಸತ್ವರನೋಷ್ಯ ಗತ್ವಾ ವ್ಯಾಲೋಕಯತ್ತಂತುಷರಾಶಿ-
ಸಂಸ್ಥಂ ।

ಅದೃಷ್ಟಪೂರ್ವಂ ಶ್ರುತಪೂರ್ವವೃತ್ತಂ ದೃಷ್ಟ್ವಾತಿಮೋದಂ ಸ ಜಗಾಮ
ಭಟ್ಟಃ ॥೯೨॥

ಶ್ರೀಭಟ್ಟಪಾದರು ಹೀಗೆ ಅಗ್ನಿಪ್ರವೇಶಮಾಡಿರುವರೆಂಬುದನ್ನು ಕೇಳಿ, ಶ್ರೀಭಗ-ವತ್ಪಾದರರು ತ್ವರೆಯಿಂದ ಅವರಲ್ಲಿಗೆ ಬಂದು, ಬೆಂಕಿಯಿಂದ ಉರಿಯುತ್ತಿದ್ದ ಹೊಟ್ಟಿನ ರಾಶಿಯ ಮಧ್ಯದಲ್ಲಿ ಕುಳಿತಿದ್ದ ಅವರನ್ನು ಕಂಡರು. ಶ್ರೀಭಗವತ್ಪಾದರ ವಿಷಯವನ್ನು ಕೇಳಿತಿಳಿದಿದ್ದು, ಇನ್ನೂ ಅವರನ್ನು ನೋಡಿರದಿದ್ದ ಶ್ರೀಭಟ್ಟಪಾದರು, ಈಗ ಅವರನ್ನು ಕಂಡು ಪರಮಹರ್ಷವನ್ನು ಹೊಂದಿದರು.

ಮತ್ತು ಅವರನ್ನು ಕುರಿತು

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಷ್ಯಂ ಪ್ರಣೀತಂ ಭವತೇತಿ ಯೋಗಿನ್ನಾಕರ್ಣ್ಯ ತತ್ರಾಪಿ ವಿಧಾಯ ವೃತ್ತಿಂ ।

ಧನ್ಯೋ ಭವೇಯಂ ತ್ವಿತಿ ಮೇಽಭಿಲಾಷಃ ಸ್ಥಿತಃ ಪುರಾ, ಸಂಪ್ರತಿ ಕಿಂ-ತದುಕ್ತ್ಯಾ ॥೯೩॥

"ಜ್ಞಾನಕಾಂಡಪ್ರತಿಪಾದಕಗಳಾಗಿರುವ ಶ್ರೀಬ್ರಹ್ಮಸೂತ್ರಗಳಿಗೆ ತಮ್ಮಿಂದ ಭಾಷ್ಯವು ರಚಿತವಾಗಿರುವುದೆಂಬುದನ್ನು ಕೇಳಿ ಅದಕ್ಕೂ ವ್ಯಾಖ್ಯಾನವನ್ನು ಮಾಡಿ ಧನ್ಯನಾಗಬೇಕೆಂಬ ಇಚ್ಛೆಯು ನನಗೆ ಇತ್ತು. ಆದರೆ, ಕಾರಣಾಂತರದಿಂದ ಅದಕ್ಕೆ ಅವ-ಕಾಶವೊದಗಲಿಲ್ಲವಾಗಿ ಈಗ ಅದನ್ನು ಹೇಳಿ ಏನು ಪ್ರಯೋಜನ?"– ಎಂದು ಹೇಳಿ ಪರಿತಾಪಪಟ್ಟರು.

ಆಗ ಶ್ರೀಭಗವತ್ಪಾದರು, ತಮ್ಮ ಅಭಿಮಂತ್ರಿತವಾದ ಕಮಂಡಲೂದಕದಿಂದ ಅಗ್ನಿಬಾಧೆಯನ್ನು ಶಮನಮಾಡುವುದಾಗಿಯೂ, ತಮ್ಮ ಭಾಷ್ಯಕ್ಕೆ ವಾರ್ತಿಕವನ್ನು ರಚಿಸಬೇಕೆಂದೂ ತಿಳಿಸಿದರು.ಅದಕ್ಕೆ ಶ್ರೀಭಟ್ಟಪಾದರು–

ನಾಭ್ಯುತ್ಸಹೇ ಕಿಂ ತು ಯತಿಕ್ಷಿತೀಂದ್ರ ಸಂಕಲ್ಪಿತಂ ಹಾತುಮಿದಂ ವ್ರತಾಗ್ರ್ಯಂ ।

ಅಯಂ ಚ ಪಂಥಾ ಯದಿ ತೇ ಪ್ರಕಾಶ್ಯಃ ಸುಧೀಶ್ವರೋ ಮಂಡನ-ಮಿಶ್ರ ಆಸ್ತೇ ॥೯೪॥

ಪ್ರವೃತ್ತಿಶಾಸ್ತ್ರೇ ನಿರತಃ ಸುಕರ್ಮಠಃ ಸ ವಿಶ್ವರೂಪಃ ಪ್ರಥಿತೋ ಮಹೀತಲೇ ।

ಮತ್ತೋಽಧಿಕಸ್ತೇನ ವಿಧಾಸ್ಯತಾಮಿದಂ ವದನ್ನಿತಿ ತ್ಯಕ್ತಕಲೇಬರೋಽ-ಭೂತ್ ॥೯೫॥

"ತಾವು ಹೇಳಿದುದು ಸರಿಯೆ? ಆದರೆ ವೈದಿಕಧರ್ಮದ ಸ್ಥಾಪನೆಗಾಗಿಯೇ ಸಾಹಸಮಾಡಿರುವ ನಾನೇ ಅದರ ನಿಯಮವನ್ನು ಮೀರುವುದು ಉಚಿತವಲ್ಲವಾಗಿ, ನಾನು ಈಗ ಕೈಗೊಂಡಿರುವ ಈ ಪ್ರಾಯಶ್ಚಿತ್ತವ್ರತವನ್ನು ತ್ಯಜಿಸಲು ನಾನು ಉತ್ಸಾಹ ಪಡಲಾರೆ! ವೈದಿಕತತ್ತ್ವಮಾರ್ಗವನ್ನು ಪ್ರಕಾಶಮಾಡಬೇಕೆಂದು ತಮ್ಮ ಅಭಿಪ್ರಾಯ ವಿರುವುದಾದರೆ, ವಿದ್ವದಗ್ರೇಸರನಾಗಿರುವ ವಿಶ್ವರೂಪನೆಂಬ ನನ್ನ ಶಿಷ್ಯನಿದ್ದಾನೆ?

"ಪಾಂಡಿತ್ಯದಲ್ಲಿಯೂ ಗ್ರಂಥರಚನೆಯಲ್ಲಿಯೂ ನನಗಿಂತಲೂ ಮೇಲಾಗಿದ್ದಾನೆ;

"ಲೋಕದಲ್ಲಿ ಅತ್ಯಂತಪ್ರಸಿದ್ಧನಾಗಿರುವ ಆತನು ಪ್ರವೃತ್ತಿಶಾಸ್ತ್ರದಲ್ಲಿ ನಿರತನಾಗಿ ಮಹಾಕರ್ಮನಿಷ್ಠನಾಗಿದ್ದಾನೆ; ಅವನನ್ನು ನಿಮ್ಮ ಮಾರ್ಗಕ್ಕೆ ಒಲಿಸಿಕೊಂಡು,

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನಿಂದ ಈ ಕಾರ್ಯವನ್ನು ಮಾಡಿಸಿಕೊಳ್ಳಿ"–ಎಂದು ಹೇಳುತ್ತಲೇ ಅಂತ್ಯಕಾಲದಲ್ಲಿ ಶ್ರೀಭಗವತ್ಪಾದರಿಂದ ಪರತತ್ತ್ವೋಪದೇಶವನ್ನು ಹೊಂದಿ, ಶ್ರೀಭಟ್ಟಪಾದರು ದೇಹ-ತ್ಯಾಗವಮಾಡಿ ಸ್ವಸ್ಥಾನವನ್ನೈದಿದರು. [ಗುರುದ್ರೋಹಿಗಳು ಶ್ರೀಭಟ್ಟಪಾದರ ಮಾರ್ಗ ವನ್ನನಸರಿಸಿ ದೋಷಮುಕ್ತರಾಗತಕ್ಕದ್ದು.]

೧೪. ಮಂಡನಸಮಾಗಮ– ಮಂಡನಪರಾಜಯ

ಅಥಪ್ರತಸ್ಥೇ ಭಗವಾನ್ಪ್ರಯಾಗಾತ್ತಂ ಮಂಡನಂ ಪಂಡಿತಮಾಶು ಜೇತುಂ ಪ್ರವಿಶ್ಯ ತದ್ವೇಶ್ಮ ಕವಾಟಗುಪ್ತಂ ದದರ್ಶತಂ ಪೈತೃಕಕರ್ಮವ್ಯಗ್ರಂ ॥೯೬॥

ಶ್ರೀಭಗವತ್ಪಾದರು ಅನಂತರ ಮಂಡನ ಪಂಡಿತರನ್ನು ಜಯಿಸುವ ಉದ್ದೇಶದಿಂದ ಪ್ರಯಾಗಕ್ಷೇತ್ರದಿಂದ ಹೊರಟು, ಮಂಡನರು ಇದ್ದ ಮಹಿಷ್ಮತೀಪಟ್ಟಣಕ್ಕೆ ಬೇಗ ಬಂದರು. ಅವರು ಮಂಡನರ ಮನೆಗೆ ಬಂದ ಮಧ್ಯಾಹ್ನದ ಸಮಯದಲ್ಲಿ ಮಂಡನರು ತಮ್ಮ ಪಿತೃಕರ್ಮದಲ್ಲಿ ನಿರತರಾಗಿದ್ದು, ಅವರ ಮನೆಯ ಬಾಗಿಲುಗಳೆಲ್ಲವೂ ಭದ್ರವಾಗಿ ಮುಚ್ಚಲ್ಪಟ್ಟದ್ದುವು. ಮಂಡನರನ್ನು ವಶಮಾಡಿಕೊಳ್ಳುವುದಕ್ಕೆ ಇದೇ ಸುಸಮಯ-ವೆಂದು ಬಗೆದು ಶ್ರೀಭಗವತ್ಪಾದರು, ಆಕಾಶಮಾರ್ಗದಿಂದ ಅವರ ಮನೆಯ ಅಂಗಳದಲ್ಲಿ ಬಂದಿಳಿ-ದರು.

[ಜ್ಞಾನಸಿದ್ಧರಾಗಿದ್ದಂತೆ ಶ್ರೀಭಗವತ್ಪಾದರು ಯೋಗಸಿದ್ಧರೂ ಆಗಿದ್ದರು. ಸಾಮರ್ಥ್ಯವಿದ್ದರೂ, ಅನವಶ್ಯಕವಾಗಿ ತಮ್ಮ ಸಾಮರ್ಥ್ಯವನ್ನೆಲ್ಲ ಉಪಯೋಗಿಸಿಕೊಳ್ಳು-ವುದು ಯುಕ್ತವಲ್ಲ– ಉಪಾಯಾಂತರವಿಲ್ಲದಿರುವ ಸಂದರ್ಭದಲ್ಲಿಯೇ ತಮ್ಮ ವಿಶೇಷ ಸಾಮರ್ಥ್ಯವನ್ನು ಪ್ರಕಟಮಾಡುವುದು ಉಚಿತವು. . ಹಾಗಿಲ್ಲವಾದರೆ,– **'ವಿದ್ಯಾ ವಿವಾದಾಯ ಧನಂ ಮದಾಯ ಶಕ್ತಿಃ ಪರೇಷಾಂ ಪರಿಪೀಡನಾಯ ।ದುಷ್ಟಸ್ಯ ಸಾಧೋರ್ವಿಪರೀತಮೇತಜ್ಜ್ಞಾನಾಯ ದಾನಾಯ ಚ ರಕ್ಷಣಾಯ'' ॥** ದುಷ್ಟನಿಗೆ ವಿದ್ಯೆಯು ವಿವಾದಕ್ಕೂ, ಧನವು ಅಹಂಕಾರಕ್ಕೂ, ಶಕ್ತಿಯು ಪರರಹಿಂಸೆಗೂ ಉಪಯುಕ್ತವಾಗುತ್ತದೆ; ಆದರೆ ಸತ್ಪುರುಷರಿಗೆ ಇವು ಕ್ರಮವಾಗಿ ಜಾನಕ್ಕೂ ದಾನಕ್ಕೂ ಪರರ ರಕ್ಷಣೆಗೂ ಉಪಯೋಗವಾಗುವುದು. ಎಂಬ ನ್ಯಾಯವಾಗುವುದು. ಇದರಂತೆ ಶ್ರೀಭಗವತ್ಪಾದರವರು ಮೂರುಸಲ ಆಸೇತುಶೀತಾಚಲಪರ್ಯಂತವಾದ ಭರತಖಂಡವನ್ನು ಸಂಚರಿಸಿದರೂ, ಪಾದಚಾರಿಗಳಾಗಿಯೇ ಸಂಚರಿಸಿರುತ್ತಾರೆ.ತಮ್ಮ ಯೋಗಸಾಮರ್ಥ್ಯ-ವನ್ನು ಮಂಡನರ ಗೃಹಪ್ರವೇಶ, ಅಮರುಕರಾಜನ ಪರಕಾಯಪ್ರವೇಶ, ಮಾತೃಶ್ರೀಯವರ ಅಂತ್ಯಕಾಲದಲ್ಲಿ ಅವರ ಸಮೀಪಗಮನ– ಈ ಮೂರು ಸಂದರ್ಭಗಳಲ್ಲಿಯೇ ಅನಿವಾರ್ಯವಾಗಿ ಯೋಗಸಾಮರ್ಥ್ಯವನ್ನು ಪ್ರಯೋಗಿಸಿಕೊಂಡಿರುತ್ತಾರೆ;]

Sri Vidyabharathi Book Centre, Sringeri

CC-O. In Public Domain. Digitized by eGangotri

**ತತೋಽತಿರುಷ್ಟೋ ಗೃಹಧರ್ಮನಿಷ್ಠೋ ಯತೀಶ್ವರಂ ನಿಂದಿತುಮು-
ದ್ಯಯೌ ಚ ।
ನಿಮಂತ್ರಿತೌ ಜೈಮಿನಿತದ್ಗುರೂ ತಂ ನಿವಾರ್ಯ ತಸ್ಯಾಪ್ಯನುಯುಂಜ-
ತುರ್ಹ್ಯಯೋ ॥೯೭॥**

ಗೃಹಸ್ಥಾಶ್ರಮಧರ್ಮವೇ ವೇದೋಕ್ತಮುಖ್ಯಧರ್ಮವೆಂದೂ, ಅದನ್ನು ತ್ಯಜಿಸುವ ಸನ್ಯಾಸಾಶ್ರಮವು ಧರ್ಮವೇ ಅಲ್ಲವೆಂದೂ ನಿಶ್ಚಯವನ್ನು ಹೊಂದಿದ್ದ ಮಂಡನರು, ಮಹತ್ತರವಾದ ಪಿತೃಕರ್ಮದ ಸಂದರ್ಭದಲ್ಲಿ ಕರ್ಮಸನ್ಯಾಸಿಗಳಾಗಿದ್ದ ಶ್ರೀಭಗವತ್ಪಾದರು ಅಲ್ಲಿಗೆ ಬಂದದ್ದನ್ನು ಕಂಡು ಅವರಿಗೆ ಮಿತಿಮೀರಿದ ಕೋಪವುಂಟಾಯಿತು; ಮತ್ತು ಅವರನ್ನು ಅವಾಚ್ಯವಾಗಿ ನಿಂದಿಸಲು ಉದ್ಯುಕ್ತರಾದರು. ಆಗ ನಿಮಂತ್ರಿತರಾಗಿದ್ದ ಶ್ರೀಜೈಮಿನಿಮುನಿಗಳೂ ಮತ್ತು ಅವರ ಗುರುಗಳಾದ ಶ್ರೀವೇದವ್ಯಾಸರೂ ಸಹ, ಅವರಿಗೆ ಸಮಾಧಾನವನ್ನುಹೇಳಿ ಅವರನ್ನು ವಿಷ್ಣುಸ್ಥಾನದಲ್ಲಿ ನಿಮಂತ್ರಿಸುವಂತೆ ಸೂಚಿಸಿದರು.

[ಶ್ರೀವ್ಯಾಸಜೈಮಿನಿಗಳನ್ನು ಶ್ರಾದ್ಧಕರ್ಮದಲ್ಲಿ ನಿಮಂತ್ರಿಸಿರುವ ಶ್ರೀಮಂಡನರ ಮಹತ್ವವು ವ್ಯಕ್ತವೇ.

"**ಆಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯಮತದರ್ಥಾನಾಂ।**"- ವೇದಗಳಿಗೆಲ್ಲ ಧರ್ಮಕರ್ಮದಲ್ಲಿಯೇ ತಾತ್ಪರ್ಯವಿರುವುದರಿಂದ. ಕ್ರಿಯೆಯನ್ನು ಹೇಳದಿರುವ ವಾಕ್ಯಗಳು ಅಪ್ರಮಾಣಗಳು-ಎಂದು ಶ್ರೀಜೈಮಿನಿಮುನಿಗಳಧರ್ಮಮೀಮಾಂಸಾಶಾಸ್ತ್ರ-ದಲ್ಲಿ ಪ್ರತಿಪಾದಿತವಾಗಿರುತ್ತದೆ. ಇದನ್ನು ಕರ್ಮಕಾಂಡದ ತಾತ್ಪರ್ಯಮಾತ್ರದ್ದೆಂದು ತಿಳಿಯದೆ ಯಥಾರ್ಥವೆಂದೇ ನಂಬಿದ್ದ ಶ್ರೀಮಂಡನರು, ವೇದಾಂತಗಳೆಂಬ ಉಪನಿಷತ್ತುಗಳಿಗೆ ಪ್ರಾಮಾಣ್ಯವಿಲ್ಲವೆಂದೇ ನಂಬಿದ್ದು, ಕರ್ಮಸನ್ಯಾಸಾಶ್ರಮವನ್ನು ಭ್ರಷ್ಟತೆ-ಯೆಂದೇ ದೃಢವಾಗಿ ತಿಳಿದಿದ್ದರು, ಆದ್ದರಿಂದ ಉತ್ತಮವಾಗಿದ್ದ ಪಿತೃಕರ್ಮದ ಮಧ್ಯದಲ್ಲಿ ಸನ್ಯಾಸಿಗಳು ಬಂದದ್ದು ಅವರಿಗೆ ಸಹನೆಯಾಗಲಿಲ್ಲವಾಗಿ, ಅವರನ್ನು ನಿಂದಿಸಲು ಉಪಕ್ರಮಿಸಿದರು. ವಿದ್ವಚ್ಛ್ರೇಷ್ಠರಾಗಿದ್ದ ಅವರು ಅವಾಚ್ಯವಾದಗಳಿಂದವಿ ವಾದಮಾಡಿದರೆಂದು ಶ್ರೀಶಂಕರವಿಜಯದಲ್ಲಿ ತಿಳಿಸಿರುತ್ತದೆ; ಇದು ಅಸಂಗತವೆಂದು ಕೆಲವರು ಅಶಂಕಿಸುವರು. ಮಂಡನರನ್ನು ವಾದದಲ್ಲಿ ಜಯಿಸುವುದು ಶ್ರೀಭಗವತ್ಪಾದರಿಗೆ ಅನಾಯಾಸವೇ ಆಗಿತ್ತು. ಅವರನ್ನು ವಾದದಲ್ಲಿ ನಿರಾಕರಿಸುವುದು ಮಾತ್ರವೇ ಅವರ ಉದ್ದೇಶವಾಗಿರಲಿಲ್ಲ. ಶ್ರೀಭಟ್ಟಪಾದರವರ ಸಲಹೆಯಂತೆ, ಆಕಾಲದ ವಿದ್ವಚ್ಛ್ರೇಷ್ಠರಾಗಿ, ವಾರ್ತಿಕರಚನೆಯಲ್ಲಿ ಸಮರ್ಥರಾಗಿರುವ ಅವರನ್ನು ತಮ್ಮ ಮತಕ್ಕೆ ಒಲಿಸಿಕೊಂಡು ವಾರ್ತಿಕವನ್ನು ರಚನೆಮಾಡಿಸುವುದೇ ಅವರ ಪರಮೋದ್ದೇಶವಾಗಿತ್ತು. ಪಾಂಡಿತ್ಯೋತ್ಕರ್ಷದ ಅಹಂಕಾರದಲ್ಲಿ ಮೆರೆಯುತ್ತಿದ್ದ ಅವರ ಅಹಂಕಾರವನ್ನು ಮುರಿಯದೆ ಈ ಕಾರ್ಯವು ಆಗುತ್ತಿರಲಿಲ್ಲ. ಆದಕಾರಣ ಈಸನ್ನಿವೇಶವನ್ನು ಸಂಗತವೆಂದೇತಿಳಿಯತಕ್ಕದ್ದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಥೋಪಸಂಸ್ಪೃಶ್ಯ ಜಲಂ ಸ ಶಾಂತಃ ಸಸಂಭ್ರಮಂ ಮಂಡನ-
ಪಂಡಿತೋಽಸೌ ।
ವ್ಯಾಸಾಜ್ಞಯಾ ಶಾಸ್ತ್ರವಿದರ್ಚಯಿತ್ವಾ ನ್ಯಮಂತ್ರಯದ್ಭೈಕ್ಷ್ಯಕೃತೇ
ಯತೀಶಂ ॥೯೮॥

"ಅಕ್ರೋಧನೈಃ ಶೌಚಪರೈಃ ಸತತಂ ಬ್ರಹ್ಮವಾದಿಭಿಃ। ಭವಿತವ್ಯಂ ಭವದ್ಭಿಶ್ಚ ಮಯಾ ಚ ಶ್ರಾದ್ಧಕರ್ಮಣಿ"– ಎಂಬ ಪ್ರಮಾಣಾನುಸಾರವಾಗಿ, ಶ್ರಾದ್ಧಕರ್ಮದಲ್ಲಿ ಕ್ರೋಧಾದಿರಹಿತರಾಗಿರುವುದು ಅವಶ್ಯವೆಂದು ನಿಮಂತ್ರಿತರಾಗಿದ್ದ ಶ್ರೀವ್ಯಾಸಜೈಮಿನಿಗಳು ಬೋಧಿಸಲಾಗಿ, ಮಂಡನರು ಕೂಡಲೆ ಶುಚಿರ್ಭೂತರಾದರು. 'ಸನ್ನ್ಯಾಸಿಯು ಸಾಕ್ಷಾದ್ವಿಷ್ಣುಸ್ವರೂಪರೆಂದೂ, ನಿನ್ನ ಕರ್ಮದ ಸಮಯದಲ್ಲಿ ಅನಿರೀಕ್ಷಿತವಾಗಿ ಇವರು ಬಂದೊದಗಿರುವುದು ನಿನ್ನ ಭಾಗ್ಯವೆಂದೂ, ಆದ್ದರಿಂದ ಇವರನ್ನು ವಿಷ್ಣುಸ್ಥಾನದಲ್ಲಿ ನಿಮಂತ್ರಿಸುವುದು ಯುಕ್ತವೆಂದೂ ಅವರು ತಿಳಿಸಲು, ಮಂಡನರು ಶ್ರೀಭಗವತ್ಪಾದರನ್ನು ಶ್ರಾದ್ಧರಕ್ಷಕವಿಷ್ಣುಸ್ಥಾನಕ್ಕೆ ನಿಮಂತ್ರಿಸಿದರು.

['ಮಂಡನ'ರೆಂಬುವರೊಬ್ಬರು 'ಬ್ರಹ್ಮಸಿದ್ಧಿ-'ಯೆಂಬ ವೇದಾಂತಸಿದ್ಧಾಂತದ ಗ್ರಂಥವನ್ನು ವಿರಚಿಸಿರುತ್ತಾರೆ. "ಈ ಮಂಡನರೂ, ಬ್ರಹ್ಮಸಿದ್ಧಿಕಾರರಾದ ಮಂಡನರೂ, ಒಬ್ಬರೇ, ಅಥವಾ ಇವರೀರ್ವರೂ ಬೇರೆಬೇರೆಯವರೇ"–ಎಂಬಲ್ಲಿ ಆಧುನಿಕವಿಚಾರಕುಶಲರಲ್ಲಿ ವಿಶೇಷವಾದ ವಾದವಿವಾದಚರ್ಚೆಗಳು ಇವತ್ತಿಗೂ ನಡೆಯುತ್ತಿವೆ. "ಈ ಮಂಡನರು ಸನ್ನ್ಯಾಸಸ್ವೀಕಾರಾನಂತರ ಶ್ರೀಸುರೇಶ್ವರರೆಂದು ಪ್ರಸಿದ್ಧರಾದರು. ಇವರೇ ಪೂರ್ವಾಶ್ರಮದಲ್ಲಿ ಮಂಡನರೆಂದು ಪ್ರಸಿದ್ಧರಾಗಿದ್ದು, ಬ್ರಹ್ಮಸಿದ್ಧಿಯೆಂಬ ವೇದಾಂತಸಿದ್ಧಾಂತದ ವಿಷಯವಾದ ಗ್ರಂಥವನ್ನು ರಚಿಸಿದ್ದರು"– ಎಂದು ಹಲವರು ಅಭಿಪ್ರಾಯಪಡುತ್ತಾರೆ. ಪೂರ್ವಾಶ್ರಮದಲ್ಲಿ ಮಂಡನರಾಗಿದ್ದ ಶ್ರೀಸುರೇಶ್ವರರು, ಪೂರ್ವಾಶ್ರಮದಲ್ಲಿದ್ದಾಗ ವೇದಾಂತಗಳ ಪ್ರಾಮಾಣ್ಯವನ್ನೇ ಒಪ್ಪದೆ; ಸನ್ನ್ಯಾಸಿದ್ವೇಷಿಗಳಾಗಿದ್ದರೆಂಬ ಅಂಶವೂ ಇವರುಗಳಿಗೆ ತಿಳಿದುಬರದಿರುವುದು ಇವರವಿಚಾರಕೌಶಲ್ಯಕ್ಕೆ ಸಾಕ್ಷಿಯಾಗಿದೆ! ಆದ್ದರಿಂದ, ಬ್ರಹ್ಮಸಿದ್ಧಿಕಾರರಾದ ಮಂಡನರು ಬೇರೆವಿದ್ವಾಂಸರೆಂಬುದು ಸುನಿಶ್ಚಿತವಾಗುವುದು. ಶ್ರೀಸುರೇಶ್ವರರೂ ತಮ್ಮ ಬೃಹದ್ವಾರ್ತಿಕದಲ್ಲಿ ಬ್ರಹ್ಮಸಿದ್ಧಿಕಾರರ ಅಭಿಪ್ರಾಯವನ್ನೂ ಅನುಮೋದಿಸಿರುವುದು ಕಂಡುಬರುತ್ತದೆ.]

ವಿವಾದಭಿಕ್ಷಾಮಭಿವಾಂಛತೇಽಸ್ಮೈ ಹೃಷ್ಟಃ ಪ್ರತಿಶ್ರುತ್ಯ ತಮಾದರೇಣ
ವಿಷ್ಣೋಃ ಪದೇಽವಾಹ್ಯ ಯಥಾವಿಧಾನಂ ಸಮಾಪಯಾಮಾಸ ಸ
ಪೈತೃಮೇಧಂ ॥೯೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ತಾವು ಅವರೊಡನೆ ವಾದಭಿಕ್ಷೆಗಾಗಿ ಬಂದಿರುವುದಾಗಿಯೂ,ಅನ್ನಭಿಕ್ಷೆಗಲ್ಲವೆಂದೂ ಶ್ರೀಭಗವತ್ಪಾದರು ಅವರಿಗೆ ತಿಳಿಸಿದರು. ಆಗ ಮಂಡನರು– "ಅಹೋ, ನನ್ನೊಡನೆ ಶಾಸ್ತ್ರಾರ್ಥದಲ್ಲಿ ವಾದಮಾಡುತ್ತೇನೆಂದು ಹೇಳುವವರನ್ನೇ ಕಾಣದೆ ಬಹುಕಾಲವಾಗಿದೆ. ವಾದಕ್ಕೆ ನಾನು ಯಾವಾಗಲೂ ಉತ್ಸುಕನಾಗಿ ಸಿದ್ಧನಾಗಿದ್ದೇನೆ. ಪ್ರಕೃತ ಈ ಪಿತೃಕಾರ್ಯವು ನೆರವೇರಲಿ; ಅನಂತರ ವಾದವು ನಡೆಯಲಿ; ಎಂದು– ತಿಳಿಸಿ, ವಿಷ್ಣುಸ್ಥಾನದಲ್ಲಿ ಅವರನ್ನು ಆವಾಹಿಸಿ, ಶ್ರಾದ್ಧಕರ್ಮವನ್ನು ಸಾಂಗವಾಗಿ ಮುಗಿಸಿದರು.

ತತಃ ಸಮಾದಿಶ್ಯ ಸದಸ್ಯತಾಯಾಂ ಸಧರ್ಮಿಣೀಂ ಮಂಡನಪಂಡಿತಸ್ಯ ।
ಸ ಶಾರದಾಂ ನಾಮ ಸಮಸ್ತವಿದ್ಯಾವಿಶಾರದಾಂ ವಾದಸಮುತ್ಸುಕೋऽಭೂತ್ ॥೧೦೦॥

ಮಾರನೆಯ ದಿನದಿಂದ ಆರಂಭವಾದ ಅವರೀರ್ವರ ವಾದದಲ್ಲಿ ಅಧ್ಯಕ್ಷತೆಯನ್ನು ವಹಿಸಬೇಕೆಂದು ಶ್ರೀವ್ಯಾಸರನ್ನು ಪ್ರಾರ್ಥಿಸಲಾಗಿ, ಕಾರ್ಯಾಂತರದ ನಿಮಿತ್ತದಿಂದ ಅವರು ಅದಕ್ಕೆ ಸಮ್ಮತಿಸದಿರಲು ಅವರ ಸಲಹೆಯಂತೆ, ಸಮಸ್ತಶಾಸ್ತ್ರವಿಶಾರದೆಯಾಗಿದ್ದ ಮಂಡನರ ಸಹಧರ್ಮಚಾರಿಣಿಯಾಗಿದ್ದ ಶ್ರೀಶಾರದಾದೇವಿಯನ್ನು ಅಧ್ಯಕ್ಷಳನ್ನಾಗಿ ನಿಯಮಿಸಿಕೊಂಡು, ಅವರೀರ್ವರ ವಾದವು ಆರಂಭವಾಯಿತು. ವಿದ್ವದಗ್ರೇಸರರ ಈ ವಾದವನ್ನು ಮಹಾಸಮಾಜವೇನಿರೀಕ್ಷಿಸುತ್ತಿತ್ತು; ದೇವಮುನಿಗಳೂ ಅಂತರಿಕ್ಷದಲ್ಲಿ ಬಂದುನಿಂತು ಗಮನಿಸುತ್ತಿದ್ದರು.

ವಾದದ ಆರಂಭದಲ್ಲಿ ಶ್ರೀಭಗವತ್ಪಾದರು ತಮ್ಮ ಪ್ರತಿಜ್ಞೆಯನ್ನು ಈ ಪ್ರಕಾರವಾಗಿ ಮಂಡಿಸಿದರು–

ಬ್ರಹ್ಮೈಕಂ ಪರಮಾರ್ಥಸಚ್ಚಿದಮಲಂ ವಿಶ್ವಪ್ರಪಂಚಾತ್ಮನಾ
ಶುಕ್ತೀ ರೂಪ್ಯಪರಾತ್ಮನೇವ ಬಹಲಾಜ್ಞಾನಾವೃತಂ ಭಾಸತೇ ।
ತಜ್ಜ್ಞಾನಾನ್ನಿಖಿಲಪ್ರಪಂಚವಿಲಯಾತ್ ಸ್ವಾತ್ಮನ್ಯವಸ್ಥಾ ಪರಂ
ನಿರ್ವಾಣಂ ಜನಿಮುಕ್ತಮಭ್ಯುಪಗತಂ ಮಾನಂ ಶ್ರುತೀರ್ಮಸ್ತಕಂ ॥೧೦೧॥

ಬಾಢಂ ಜಯೇ, ಯದಿ ಪರಾಜಯಭಾಗಹಂ ಸ್ಯಾಂ
ಸನ್ನ್ಯಾಸಮಂಗ ಪರಿಹೃತ್ಯ ಕಷಾಯಚೇಲಂ
ಶುಕ್ಲಂ ವಸೀಯ ವಸನಂ ದ್ವಯಭಾರತೀಯಂ
ವಾದೇ ಜಯ ಪರಾಜಯಫಲಪ್ರತಿದೀಪಿಕಾಸ್ತು ॥೧೦೨॥

Sri Vidyabharathi Book Centre, Sringeri

CC-O. In Public Domain. Digitized by eGangotri

"ಅಜ್ಞಾನದಿಂದ ಆವೃತವಾಗಿರುವ ಶುಕ್ತಿಯು [ಕಪ್ಪೆಚಿಪ್ಪು], ಶುಕ್ತಿಯೆಂದು ತಿಳಿದುಬರದೆ, ಅದಕ್ಕೆ ಬದಲಾಗಿ' ರಜತ (ಬೆಳ್ಳಿ)ಯೆಂದು ಭ್ರಾಂತಿಯಿಂದ ಕಂಡುಬರುವಂತೆ, ಪರಮಾರ್ಥವಾಗಿ ಅದ್ವಿತೀಯಸಚ್ಚಿದಾನಂದ ಸ್ವರೂಪವಾಗಿರುವ ಪರಬ್ರಹ್ಮವು, ಅನಾದ್ಯನಂತವಾಗಿರುವ ಅಜ್ಞಾನದಿಂದ ಆವೃತವಾಗಿ, ತನ್ನ ವಾಸ್ತವಸ್ವರೂಪದಿಂದ ಕಾಣಬರದೆ; ದ್ವೈತಪ್ರಪಂಚದ ರೂಪವಾಗಿ ತೋರಿಬರುತ್ತಿದೆ. ಶುಕ್ತಿಯೆಂದು ತಿಳಿದುಬರಲು ಅದರಲ್ಲಿ ಭ್ರಾಂತಿಯಿಂದ ಕಲ್ಪಿತವಾಗಿರುವ ರಜತವು ನಿಃಶೇಷವಾಗಿ ಬಾಧಿತವಾಗುವಂತೆ– ಎಂದರೆ, ಭೂತಭವಿಷ್ಯದ್ವರ್ತಮಾನಗಳೆಂಬ ಮೂರುಕಾಲಗಳಲ್ಲಿಯೂ ವಾಸ್ತವವಾಗಿ ಇರುವಂಥದ್ದಲ್ಲವೆಂದು ನಿಶ್ಚಿತವಾಗುವಂತೆ– ಬ್ರಹ್ಮಸ್ವಸ್ವರೂಪದ ಸಾಕ್ಷಾತ್ಕಾರದಿಂದ ಸರ್ವದ್ವೈತಪ್ರಪಂಚವೂ ಬಾಧಿತವಾಗಿ, ಬ್ರಹ್ಮಾತ್ಮವಸ್ತುವು ಸ್ವಸ್ವರೂಪದಲ್ಲಿದ್ದು, ಮೋಕ್ಷವೆಂಬ ಪರಮಪುರುಷಾರ್ಥವು ಕೈಗೂಡುವುದು; ಪರಮಾರ್ಥವಾಗಿರುವ ಈ ಸಿದ್ಧಾಂತಾರ್ಥದಲ್ಲಿ ವೇದಾಂತಗಳು ಪ್ರಮಾಣಗಳಾಗಿವೆ;

"ಇದು ನನ್ನ ಪಕ್ಷವಾಗಿದೆ. ಇದನ್ನು ಸಮರ್ಥಿಸಿ ನಾನು ಈ ವಾದದಲ್ಲಿ ಜಯಶೀಲನಾಗುವುದು ನಿಶ್ಚಯ. ಒಂದು ವೇಳೆ ನಾನು ಇದನ್ನು ಸ್ಥಾಪಿಸಲಾರದೆಹೋಗಿ, ಪರಾಜಯವನ್ನು ಹೊಂದುವುದಾದರೆ, ಆಗ ನಾನು ಸನ್ಯಾಸಾಶ್ರಮಕ್ಕೆ ಗುರುತಾಗಿರುವ ಈ ಕಷಾಯವಸ್ತ್ರವನ್ನು ತ್ಯಜಿಸಿ, ಬಿಳಿಯವಸ್ತ್ರವನ್ನು ಧರಿಸುತ್ತೇನೆ. ಈ ನಮ್ಮೀರ್ವರ ವಾದದಲ್ಲಿ ಜಯಪರಾಜಯಗಳನ್ನು ಪ್ರಕಾಶಪಡಿಸಲು ಈ ಉಭಯಭಾರತಿಯೇ ಸಮರ್ಥಳೆಂದು ನಾನು ಒಪ್ಪುತ್ತೇನೆ"– ಎಂದು.

["ಶ್ರೀಭಗವತ್ಪಾದರು ಈ ವಾದದಲ್ಲಿ ಮಂಡನರ ಪತ್ನಿಯಾದ ಉಭಯಭಾರತಿಯ ತೀರ್ಪಿಗೆ ಸಮ್ಮತಿಸಿರುವುದನ್ನು ನೋಡಿದರೆ, ಅವರೀರ್ವರಿಗೂ ಸ್ನೇಹವಿತ್ತೆಂದು ತಿಳಿದುಬರುತ್ತದೆಂದು –ದುರಿತಪರಿಪಾಕಭರಿತರಾದ ಭ್ರಷ್ಟರು ಕೆಲವರು ಹೇಳುವರು– ಅವರ ವಕ್ತ್ರದಲ್ಲಿ ಹುಳುಬೀಳದಿರದು. ವಾದದಲ್ಲಿ ಸೋತವರು ಗೆದ್ದವರ ಆಶ್ರಮವನ್ನು ಸ್ವೀಕರಿಸತಕ್ಕದ್ದೆಂದು ವಾದದ ನಿಯಮವನ್ನು ಸೂಚಿಸಿದುದು, ಮಂಡನರನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಳ್ಳುವ ಉಪಾಯವಾಗಿದೆ.]

ಇತ್ಥಂ ಪ್ರತಿಜ್ಞಾಂ ಕೃತವತ್ಯುದಾರಾಂ ಶ್ರೀಶಂಕರೇ ಭಿಕ್ಷುವರೇ ಸ್ವಕೀಯಾಂ ।
ಸ ವಿಶ್ವರೂಪೋ ಗೃಹಮೇಧಿವರ್ಯಶ್ಚಕ್ರೇ ಪ್ರತಿಜ್ಞಾಂ ಸ್ವಮತಪ್ರತಿಷ್ಠಾಂ ॥೧೦೪॥

ಶ್ರೀಭಗವತ್ಪಾದರು ತಮ್ಮ ಪಕ್ಷವನ್ನು ಪ್ರತಿಜ್ಞೆಮಾಡಲಾಗಿ, ಮಂಡನರೂ ತಮ್ಮ ಪಕ್ಷವನ್ನೂ ಪ್ರಕಟಪಡಿಸಿದರು–

Sri Vidyabharathi Book Centre, Sringeri

CC-O. In Public Domain. Digitized by eGangotri

ವೇದಾಂತಾ ನ ಪ್ರಮಾಣಂ ಚಿತಿವಪುಷಿ ಪದೇ ತತ್ರ ಸಂಗತ್ಯಯೋಗಾತ್
ಪೂರ್ವೋ ಭಾಗಃ ಪ್ರಮಾಣಂ ಪದಚಯಗಮಿತೇ ಕಾರ್ಯ-
ವಸ್ತುನ್ಯಶೇಷೇ ।
ಶಬ್ದಾನಾಂ ಕಾರ್ಯಮಾತ್ರಂ ಪ್ರತಿ ಸಮಧಿಗತಾ ಶಕ್ತಿರಭ್ಯುನ್ನತಾನಾಂ
ಕರ್ಮಭ್ಯೋ ಮುಕ್ತಿರಿಷ್ಟಾ ತದಿಹ ತನುಭೃತಾಮಾಯುಷಃ
ಸ್ಯಾತ್ಸಮಾಪ್ತೇಃ ॥೧೦೪॥

ವಾದೇ ಕೃತೇಽಸ್ಮಿನ್ಯದಿ ಮೇ ಪರಾಜಯಸ್ತ್ವಯೋದಿತಾತ್ಸ್ಯಾದ್ವಿಪರೀತ-
ಭಾವಃ ।
ಕೃತ್ವಾ ಪ್ರತಿಜ್ಞಾಮಿತಿ ದಾರುಣಂ ತೌ ವಿತೇನತುರ್ವಾದಮಥಾದ್ಭು-
ತಾರ್ಥಂ ॥೧೦೫॥

"ಈ ವಾದದಲ್ಲಿ, ನಾನು ನನ್ನ ಈ ಪಕ್ಷವನ್ನು ಸಾಧಿಸಲಾರದೆ, ನನಗೆ ಪರಾಜಯ-ವಾಗುವ ಪಕ್ಷದಲ್ಲಿ, ನೀವು ಹೇಳಿದುದಕ್ಕೆ ವಿರುದ್ಧವಾದುದೇ ಆಗಲಿ– ಎಂದರೆ, ನಾನು ಗೃಹಸ್ಥಾಶ್ರಮದ ಚಿಹ್ನೆಯನ್ನು ಪರಿತ್ಯಜಿಸಿ, ಕಷಾಯವಸ್ತ್ರಗ್ರಹಣರೂಪವಾದ ಸನ್ನ್ಯಾಸಾಶ್ರಮವನ್ನು ಸ್ವೀಕರಿಸುತ್ತೇನೆ. ಈ ಪ್ರಕಾರವಾಗಿ ಕಠಿಣವಾದ ಪ್ರತಿಜ್ಞೆಗಳನ್ನು ಉದ್ಘೋಷಿಸಿ, ಅವರೀರ್ವರೂ ಅದ್ಭುತವಾದ ವಾದವನ್ನು ಮಾಡಿದರು.

ಏವಂ ವಿಜೇತುಮನಸೋರುಪವಿಷ್ಟಯೋಶ್ಚ ಮಾಲಾಂ ವ್ಯಧಿತ ಸೋ
ಭಯಭಾರತೀಯಂ ।
ಮಾಲಾ ಯದಾ ಮಲಿನಭಾವಮುಪೈತಿ ಕಂಠೇ ಯಸ್ಯಾಪಿ ತಸ್ಯ ವಿಜ-
ಯೇತರನಿಶ್ಚಯಃ ಸ್ಯಾತ್ ॥೧೦೬॥

ಪರಸ್ಪರಜಯಾಕಾಂಕ್ಷಿಗಳಾಗಿ ವಾದಕ್ಕೆ ಪ್ರವೃತ್ತರಾಗಿರುವ ಅವರೀರ್ವರ ಕೊರಳಿನಲ್ಲಿಯೂ ಒಂದೊಂದು ಹೂಮಾಲೆಯನ್ನು ಅಲಂಕಾರಮಾಡಿಸಿ,–'ಯಾರ ಮಾಲೆಯು ಬಾಡುವುದೋ ಅವರಿಗೆ ಜಯವಿರುದ್ಧಫಲವು ನಿಶ್ಚಯವು'– ಎಂದು ಸಂಕೇತಮಾಡಿ, ಆಕೆಯು ಗೃಹಕೃತ್ಯನಿರತಳಾಗಿದ್ದಳು.

[ಇದೂ ಈಕೆಯ ದಿವ್ಯಮಹತ್ವವನ್ನು ಸೂಚಿಸುವಂಥದ್ದು ಪ್ರತಿದಿವಸವೂ ಅವರವರ ದೈನಂದಿನದ ಕರ್ತವ್ಯಗಳು ನೆರವೇರಿದ ಅನಂತರ ವಾದವು ಮಧ್ಯಾಹ್ನದವರೆಗೂ ನಡೆಯುತ್ತಿತ್ತು. ಅನಂತರ ಮಧ್ಯಾಹ್ನಕಾಲದ ಕೃತ್ಯಗಳು ಮುಗಿದು ಎಲ್ಲರ ಭೋಜನವೂ ಶ್ರೀಭಗವತ್ಪಾದರ ಭಿಕ್ಷೆಯೂ ಆದಮೇಲೆ, ವಾದವು ಸಾಯಂಕಾಲದವರೆಗೂ ನಡೆಯುತ್ತಿತ್ತು. ಹೀಗೆ ಏಳು ದಿವಸಗಳು ಕಳೆದುವು.]

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದೇ ಯತಿಕ್ಷಿತಿಪತೇರನುಮೋದ್ಯ ಯುಕ್ತಿಂ ಮಾಲಾಂ ಚ ಮಂಡ-
ನಗಲೇ ಮಲಿನಾಮವೇಕ್ಷ್ಯ ।

ಭಿಕ್ಷಾರ್ಥಮುಚ್ಚಲತಮದ್ಯ ಯುವಾಮಿತೀ ಮಾಮಾಚಷ್ಟ ವಾಚ-
ಮನಘಾಂ ದ್ವಯಭಾರತೀ ಸಾ ॥೧೦೭॥

ಎಂಟನೆಯ ದಿವಸದ ಮಧ್ಯಾಹ್ನಸಮಯದಲ್ಲಿ ಶ್ರೀಭಗವತ್ಪಾದರ ವಾದದ ಯುಕ್ತಿಯನ್ನು ಸಮಂಜಸವೆಂದು ಅನುಮೋದಿಸಿ; ಮತ್ತು ಮಂಡನರ ಕಂಠದಲ್ಲಿದ್ದ ಹೂವಿನಾಲೆಯು ಬಾಡಿರುವುದನ್ನೂ ಗಮನಿಸಿ; ಚತುರಳಾದ ಉಭಯಭಾರತೀದೇವಿಯು—"ನೀವೀರ್ವರೂ ಇನ್ನು ಭಿಕ್ಷೆಗೆ ದಯಮಾಡಿರಿ"— ಎಂದು ಆಹ್ವಾನಿಸಿದಳು.

[ಮಂಡನರು ವಾದದಲ್ಲಿ ಹೀಗೆ ಪರಾಜಿತರಾಗಿ, ವಾದದ ನಿಯಮಾನುಸಾರವಾಗಿ ಸನ್ನ್ಯಾಸಾಶ್ರಮವನ್ನು ಸ್ವೀಕರಿಸಲೇಬೇಕಾಗಿಬಂದ ಸನ್ನಿವೇಶವನ್ನು ಗಮನಿಸಿ, ಉಭಯಭಾರತೀದೇವಿಯು ಮಂಡನರನ್ನು ಶ್ರೀಭಗವತ್ಪಾದರೊಡನೆ ಭಿಕ್ಷೆಗೂ ಇತರರನ್ನು ಎಂದಿನಂತೆ ಭೋಜನಕ್ಕೂ ಆಹ್ವಾನಿಸಿದಳು. ಶ್ರೀಭಗವತ್ಪಾದರಿಗೂ ಮಂಡನಮಿಶ್ರರಿಗೂ ನಡೆದ ಶಾಸ್ತ್ರಾರ್ಥವಾದದ ವಿವರವು ಶ್ರೀಸುರೇಶ್ವರರ ಚರಿತ್ರೆಯಲ್ಲಿ ಮುಂದೆ ವಿಶದವಾಗುವುದು]

೧೫. ಉಭಯಭಾರತೀಸರಸವಾಣಿಯ ಸ್ವಸ್ಥಾನಗಮನ.

ದುರ್ವಾಸಶಾಪಮಿಷತೋ ಧರಣೀಂ ಗತಾಸೌ ಮುಕ್ತ್ವಾ ತತೋ ಯತಿ-
ವರಸ್ಯ ಸಮಾಗಮೇನ ।

ಸ್ವಸ್ಥಾನಮೇವ ತ್ವರಿತಂ ಚಕಮೇಽಧಿಗಂತುಂ ತಾಂ ಸನ್ನಿರುಧ್ಯ ಯತಿ-
ರಾಡ್ವಚನಂ ಬಭಾಷೇ ॥೧೦೮॥

ದುರ್ವಾಸಮಹರ್ಷಿಗಳ ಶಾಪದ ನೆಪದಿಂದ ಭೂಮಿಯಲ್ಲಿ ಅವತರಿಸಿಬಂದಿದ್ದ ಶ್ರೀಸರಸ್ವತೀದೇವಿಯು ಮಂಡನಪಂಡಿತರ ಮಡದಿಯಾಗಿಜನಿಸಿದ್ದು, ಶಾಪವಿಮೋಚನೆಯ ನಿಯಮದಂತೆ ಶ್ರೀಭಗವತ್ಪಾದರ ಸಮಾಗಮದಿಂದ ಈ ಶಾಪವು ನಿವಾರಿತವಾಗಲು; ತನ್ನ ಸ್ವಸ್ಥಾನವಾದ ಬ್ರಹ್ಮಲೋಕಕ್ಕೆ ಹಿಂತಿರುಗಲು ಸಿದ್ಧಳಾದಳು. ಇದನ್ನು ತಿಳಿದ ಶ್ರೀಭಗವತ್ಪಾದರು ತಮ್ಮ ಉತ್ತರೋತ್ತರಕಾರ್ಯದ ಸಿದ್ಧಿಗಾಗಿ ಆಕೆಯ ಅನುಗ್ರಹವನ್ನು ಪಡೆಯುವ ಉದ್ದೇಶದಿಂದ, ಆಕೆಯನ್ನು ವನದುರ್ಗಾಮಂತ್ರದಿಂದ ತಡೆದು ಪ್ರಾರ್ಥಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

[ಸತ್ಯಲೋಕದ ಶ್ರೀಬ್ರಹ್ಮದೇವನ ಸಭೆಯಲ್ಲಿ ಒಂದು ಕಾಲದಲ್ಲಿ ಮಹರ್ಷಿಗಳ ವೇದಘೋಷವು ನಡೆಯುತ್ತಿದ್ದಾಗ, ದುರ್ವಾಸಮಹರ್ಷಿಗಳು ಸ್ವರದಲ್ಲಿ ತಪ್ಪಾಗಿ ಹೇಳಿದ್ದನ್ನು ಕಂಡು, ಸಭೆಯನ್ನಲಂಕರಿಸಿದ್ದ ಶ್ರೀಸರಸ್ವತೀದೇವಿಯು ನಕ್ಕಳು. ಅಕಾರಣ-ಕೋಪಮೂರ್ತಿಗಳೆಂದು ಪ್ರಸಿದ್ಧರಾದ ದುರ್ವಾಸರು ಇದನ್ನು ಸಹಿಸಲಾರದೆ– 'ಭೂಮಿಯಲ್ಲಿ ಜನಿಸು'– ಎಂದು ಶಾಪವಿತ್ತರು ಆಕೆಯ ಅವಿನಯವನ್ನು ಕ್ಷಮಿಸಿ ವಿಶಾಪ-ಳನ್ನಾಗಿ ಮಾಡಬೇಕೆಂಬ ಬಹ್ಮಾದಿಗಳ ಪ್ರಾರ್ಥನೆಯಂತೆ, ದುರ್ವಾಸರು ಶಾಂತರಾಗಿ,– "ಧರ್ಮರಕ್ಷಣೆಗಾಗಿ ಶ್ರೀಪರಶಿವನು ಭೂಮಿಯಲ್ಲಿ ಅವತರಿಸಿಬಂದಾಗ, ಅವರ ಸಮಾ-ಗಮವು ಲಭಿಸಿ ಶಾಪವಿಮುಕ್ತಳಾಗುವಳು"– ಎಂದು ಹೇಳಿದ್ದರು ಈ ಸನ್ನಿವೇಶವು ಒದಗಿಬಂದು ಈಗ ಶ್ರೀಸರಸವಾಣಿಯು ಬ್ರಹ್ಮಲೋಕಕ್ಕೆ ಹಿಂತಿರುಗಲು ಅನುವಾದಳು.]

ಜಾನಾಮಿ ದೇವೀಂ ಭವತೀಂ ವಿಧಾತುಃ ಗುಪ್ತ್ಯೈ ಪ್ರಪಂಚಸ್ಯ ಕೃತಾವ-ತಾರಾಂ ।

ಶ್ರೌತಾ ಧ್ವವಿಸ್ತಾರಕೃತೇ ಕೃಪಾಬ್ಧೇ ಸಾನ್ನಿಧ್ಯಮಂಬಾನುಗೃಹಾಣ ಭೂತವಾ ॥೧೦೯॥

'ದೇವಿ, ಜಗದ್ರಕ್ಷಣೆಗಾಗಿ ಅವತರಿಸಿಬಂದಿರುವ ಶ್ರೀಬ್ರಹ್ಮದೇವನ ರಾಣಿಯಾದ ಶ್ರೀಶಾರದಾದೇವಿಯೇ ನೀನೆಂದು ನಾನು ಬಲ್ಲೆ. ವೈದಿಕಸನ್ಮಾರ್ಗದ ಪ್ರಚಾರಕಾರ್ಯ-ದಲ್ಲಿ, ದಯಾಮಯಿಯಾದ ಹೇ ದೇವಿ, ಭೂಲೋಕದಲ್ಲಿ ನಿನ್ನ ಸಾನ್ನಿಧ್ಯವನ್ನು ಅನು-ಗ್ರಹಿಸಬೇಕು"– ಎಂದು ಪ್ರಾರ್ಥಿಸಿದರು.

ಅಧಿಗಮ್ಯ ತತಸ್ತದನುಗ್ರಹಂ ಯತಿಪತಿರ್ಮುಮುದೇ ಕೃತಕಾರ್ಯಕಃ

ಶಾರದಾ ಚ ಶರದಭ್ರಚಯಾಭಾ ಪ್ರಾಪ ಧಾಮ ಚ ಪಿತಾಮಹಜುಷ್ಟಂ ॥೧೧೦॥

ಶ್ರೀಶಾರದಾದೇವಿಯ ಅನುಗ್ರಹವನ್ನು ಪಡೆದು, ಧರ್ಮಪ್ರಚಾರದ ತಮ್ಮ ಕಾರ್ಯವು ನಿರರ್ಗಳವಾಗಿ ನೆರವೇರಿತೆಂದು ಶ್ರೀಭಗವತ್ಪಾದರು ಅತ್ಯಂತವಾಗಿ ಸಂತಸ-ಗೊಂಡರು. ಶರತ್ಕಾಲದ ಮೇಘಗಳ ಸಮೂಹದಂತೆ ಒಳಹೊರಗೂ ಪರಮಶುದ್ಧ ಸ್ವರೂಪಳಾದ ಶ್ರೀಶಾರದಾದೇವಿಯು, ಅನಂತರ ಶ್ರೀಪಿತಾಮಹದೇವನ ಸ್ಥಾನವನ್ನು ಹೊಂದಿದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

[ಶ್ರೀಶೃಂಗಗಿರಿ–ಮುಂತಾದ ಸ್ಥಳಗಳಲ್ಲಿ ತಾವು ಮಠಗಳನ್ನು ಧರ್ಮಪ್ರಸಾರಕ್ಕಾಗಿ ಸ್ಥಾಪಿಸುವುದಾಗಿಯೂ, ಅಲ್ಲಿ ಶ್ರೀಶಾರದಾದೇವಿಯು ಸಾನ್ನಿಧ್ಯವನ್ನು ಅನುಗ್ರಹಿಸ-ಬೇಕೆಂದೂ ಪ್ರಾರ್ಥಿಸಿರುವುದನ್ನು ನೋಡಿದರೆ, ಶ್ರೀಶೃಂಗಗಿರಿಯಲ್ಲಿ ಮಠವನ್ನು ಸ್ಥಾಪಿಸುವ ಉದ್ದೇಶವು ಶ್ರೀಭಗವತ್ಪಾದರಿಗೆ ಮೊದಲೇ ಇದ್ದದ್ದು ತಿಳಿದುಬರುವುದು.]

೧೬. ಮಂಡನರ ಸನ್ನ್ಯಾಸಸ್ವೀಕಾರ– ಮಂಡನರಿಗೆ ಉಪದೇಶ.

ಮಂಡನಮಿಶ್ರೋಽಪ್ಯಥ ವಿಧಿಪೂರ್ವಂ ದತ್ವಾ ಯಾಗೇ ವಿತ್ತಂ ಸರ್ವಂ
ಆತ್ಮನ್ಯಾರೋಪಿತಶೋಚಿಷ್ಕೇಶೋ ಭೇಜೇ ಶಂಕರಮಸ್ತಮಿತಾಶಃ
॥೧೧೧॥

ಅನಂತರ ಮಂಡನಮಿಶ್ರರು ಪರಮವಿರಕ್ತಿಸಂಪನ್ನರಾಗಿ, ಶಾಸ್ತ್ರವಿಧಿಗನುಸಾರ-ವಾಗಿ ಪ್ರಾಜಾಪತ್ಯೇಷ್ಟಿಯನ್ನು ಮಾಡಿ, ತಮ್ಮ ಸರ್ವಸ್ವವನ್ನೂ ಸತ್ಪಾತ್ರಗಳಲ್ಲಿ ದಾನ ಮಾಡಿ ಆತ್ಮನಲ್ಲಿ ಅಗ್ನಿಯನ್ನು ಸಮಾರೋಪಮಾಡಿಕೊಂಡು, ಸನ್ನ್ಯಾಸಾಶ್ರಮವನ್ನು ಪರಿಗ್ರಹಿಸಲು ಸಿದ್ಧರಾಗಿ, ಶ್ರೀಭಗವತ್ಪಾದರಲ್ಲಿ ಉಪಸದನಮಾಡಿದರು.

[ಶಾಸ್ತ್ರೋಕ್ತಸಕಲಸ್ವಸ್ವವರ್ಣಾಶ್ರಮಧರ್ಮಗಳನ್ನು ಯಥಾವತ್ತಾಗಿ ನೆರವೇರಿಸಿ ಶ್ರೀಪರಮೇಶ್ವರನ ಅನುಗ್ರಹಕ್ಕೆ ಪಾತ್ರನಾಗಿ ಸಕಲದುರಿತಗಳನ್ನೂ ಕಳೆದುಕೊಂಡು,– ಅತ್ಯಂತವಾಗಿಶುದ್ಧವಾದ ಅಂತಃಕರಣವುಳ್ಳವನಿಗೇ ಇಹಪರಗಳ ಸಮಸ್ತಸಾಂಸಾರಿಕ ಭೋಗಗಳಲ್ಲಿಯೂ ತೀವ್ರವಾದ ವಿರಕ್ತಿಯು ಮೂಡುವುದು. ಇಂಥ ಮುಖ್ಯಾಧಿ-ಕಾರಿಯೇ ಸರ್ವಕರ್ಮಸನ್ನ್ಯಾಸರೂಪವಾದ ಪಾರಿವ್ರಾಜ್ಯಾಶ್ರಮಸ್ವೀಕಾರಕ್ಕೆ ತಕ ಯೋಗ್ಯನಾದ ಅಧಿಕಾರಿಯು ಶ್ರೀಮಂಡನಪಂಡಿತರು ಇಂಥ ಉತ್ತಮೋತ್ತಮಾಧಿಕಾರಿ-ಗಳಾಗಿದ್ದರು. ಶ್ರೀಭಗವತ್ಪಾದರೊಡನೆ ವಾದಮಾಡಿದ್ದರಲ್ಲಿ, ಅವರು ಪ್ರತಿಪಾದಿಸಿದ ಅರ್ಥದಲ್ಲಿ ದೃಢವಾದ ನಿಶ್ಚಯವೂ ಅವರಿಗೆ ಉಂಟಾಗಿತ್ತು. "ಪರಮಪುರುಷಾರ್ಥವಾದ ಮೋಕ್ಷವನ್ನು ಗಳಿಸಿಕೊಳ್ಳುವುದೇ ಪುರುಷನ ಪರಮಕರ್ತವ್ಯವೆಂಬುದೂ, ಅದಕ್ಕೆ ಸನ್ನ್ಯಾಸಾಶ್ರಮದ ಸ್ವೀಕಾರಪೂರ್ವಕವಾಗಿ ಆತ್ಮತತ್ತ್ವೋಪದೇಶಗ್ರಹಣವೇಸಾಧನವೆಂದೂ ಸುನಿಶ್ಚಿತವಾಗಿತ್ತು. ಶ್ರೀಭಗವತ್ಪಾದರಂಥ ಗುರೂತ್ತಮರು ದೊರೆತಿರುವಾಗ, ಅವ-ರಿಂದಲೇ ತತ್ತ್ವೋಪದೇಶವನ್ನು ಪಡೆಯುವುದಕ್ಕಿಂತಲೂ ಬೇರೆ ಏನಿದೆ?"– ಎಂದು ಪರ್ಯಾಲೋಚಿಸಿ,– **"ಪ್ರಾಜಪತ್ಯಾಂ ನಿರೂಪ್ಯೇಷ್ಟಿಂ ಸರ್ವಸ್ವದಕ್ಷಿಣಾಂ । ಆತ್ಮನ್ಯಗ್ನಿಂ ಸಮಾರೋಪ್ಯ ಬ್ರಾಹ್ಮಣಃ ಪ್ರವ್ರಜೇದ್ಗೃಹಾತ್॥"**– ಎಂಬ ಪ್ರಮಾಣಾನುಸಾರವಾಗಿ, ಶ್ರೀಭಗವತ್ಪಾದರನ್ನು ಸನ್ನ್ಯಾಸಪೂರ್ವಕಾತ್ಮತತ್ತ್ವೋ-ಪದೇಶಕ್ಕಾಗಿ ಶರಣುಹೊಂದಿದರು.]

Sri Vidyabharathi Book Centre, Sringeri

CC-O. In Public Domain. Digitized by eGangotri

ಸನ್ನ್ಯಾಸದೀಕ್ಷಾಂ ವಿಧಿವಚ್ಚ ದತ್ವಾ ಹ್ಯಾಚಾರ್ಯವರ್ಯಃ ಶ್ರುತಿ-
ಮಸ್ತಕಸ್ಥಂ ।
ತದಾದಿವಾಕ್ಯಂ ಸಮುಪಾದಿದೇಶ ಪಶ್ಚಾದುಪಾದಿಕ್ಷದುತಾತ್ಮ ತತ್ತ್ವಂ
॥೧೧೨॥

ಮುಖ್ಯಾಧಿಕಾರಸಂಪತ್ಸಂಪನ್ನರಾಗಿದ್ದ ಶ್ರೀಮಂಡನರಿಗೆ ವಿಧಿವತ್ತಾಗಿ ಸನ್ನ್ಯಾಸ-ದೀಕ್ಷೆಯನ್ನು ಅನುಗ್ರಹಿಸಿ, ಆಚಾರ್ಯವರ್ಯರಾಗಿದ್ದ ಶ್ರೀಭಗವತ್ಪಾದರು ವೇದಾಂತ-ಗಳಲ್ಲಿ ಉಪದೇಶವಾಕ್ಯವಾದ ತತ್ತ್ವಮಸಿ– ಮಹಾವಾಕ್ಯವನ್ನು ಅವರಿಗೆ ಉಪದೇಶ ಮಾಡಿ, ಅನಂತರ, ಅದರ ಪರಮತಾತ್ಪರ್ಯಾರ್ಥವಾದ ಅದ್ವಿತೀಯಬ್ರಹ್ಮಾತ್ಮ ತತ್ತ್ವ ವನ್ನೂ ಉಪದೇಶಿಸಿದರು. ಮತ್ತು **ಶ್ರೀಸುರೇಶ್ವರರು**– ಎಂಬ ಅನ್ವರ್ಥವಾದ ದೀಕ್ಷಾ ನಾಮವನ್ನು ಅವರಿಗೆ ಅನುಗ್ರಹಿಸಿದರು.

ವೇದಾಂತಸಿದ್ಧಾಂತತತ್ತ್ವೋಪದೇಶವು ಇದು–

ದೃಗ್ದೃಶ್ಯೇ ವಸ್ತುನೀ ದ್ವೇ ಇಹ ಸಮಧಿಗತೇಽನ್ಯೋಽನ್ಯಭಿನ್ನಸ್ವಭಾವೇ
ನೈಕಂ ಸ್ಯಾದನ್ಯರೂಪಂ ನ ಚ ಭವತಿ ತಯೋರ್ಧರ್ಮಯೋ–
ರ್ನಾನ್ಯಭಾವಃ ।
ಸ್ವಸ್ಮೈ ಸ್ವಂ ವಾ ಸ್ವಧರ್ಮೋ ನ ಭವತಿ ವಿಷಯಃ ಸ್ವಸ್ವರೂಪಂ ಚ
ನಾನ್ಯಾಧೀನಂ ತದ್ದೃಕ್ತು ಶುದ್ಧಂ ನಿರತಿಶಯಸುಖಂ ನಿತ್ಯಮೇವಾತ್ಮ-
ರೂಪಂ ॥೧೧೩॥

ಪ್ರಪಂಚವೆಲ್ಲ ದೃಕ್ ಮತ್ತು ದೃಶ್ಯ ಎಂದು ಎರಡುವಿಧವಾಗಿದೆ. ದೃಕ್ ಎಂದರೆ ತಿಳಿಯುವ ಆತ್ಮನು; ತಿಳಿದುಬರುವುದು ದೃಶ್ಯವು–ಅನಾತ್ಮವು. ಇವೆರಡೂ ಪರಸ್ಪರವಾಗಿ ಅತ್ಯಂತಭಿನ್ನಸ್ವಭಾವದವುಗಳಾಗಿವೆ. ತಿಳಿಯುವ ಆತ್ಮನು ಜ್ಞಾನಸ್ವರೂಪನೂ, ಅವಿ ಕಾರಿಯೂ, ಅಸಂಗನೂ, ಅಖಂಡವ್ಯಾಪಕಸ್ವರೂಪನೂ ಆಗಿರುತ್ತಾನೆ; ದೃಶ್ಯವಾದ ಅನಾತ್ಮವು ಜಡವೂ, ಸಾವಯವವೂ, ವಿಕಾರಿಯೂ, ಸಂಗವುಳ್ಳದ್ದೂ. ಅನೇಕವೂ, ಪರಿ ಚ್ಛಿನ್ನವೂ ಆಗಿರುತ್ತದೆ. ಆದ್ದರಿಂದ, ಕತ್ತಲೆಯನ್ನು ಬೆಳಕೆಂದೂ, ಬೆಳಕನ್ನು ಕತ್ತಲೆ-ಯೆಂದೂ ತಿಳಿಯಲಾಗದಂತೆ,– ಆತ್ಮನನ್ನು ಅನಾತ್ಮವೆಂದಾಗಲಿ, ಅನಾತ್ಮವನ್ನು ಆತ್ಮ ನೆಂದಾಗಲಿ ತಿಳಿಯಲಾಗುವುದಿಲ್ಲ. ಮತ್ತು ಆಯಾವಸ್ತುವಿನ ಧರ್ಮಗಳು ಆಯಾವಸ್ತು ಗಳಿಗೇ ಮೀಸಲಾಗಿರುತ್ತ, ಒಂದರ ಧರ್ಮವನ್ನು ಮತ್ತೊಂದರದ್ದೆಂದೂ ತಿಳಿಯಲಾಗು-ವುದಿಲ್ಲ ದೃಕ್ ಎಂದೂ ದೃಕ್ಕೇ ಹೊರತು, ಎಂದೂ ಅದು ದೃಶ್ಯವಲ್ಲ; ಹಾಗೆಯೇ ದೃಶ್ಯವೂ ಯಾವಾಗಲೂ ದೃಶ್ಯವೇ ಹೊರತು, ಎಂದೂ ದೃಕ್ಕಾಗುವುದಿ.ಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

"ನಾನು, ನಾನು"– ಎಂದು ವ್ಯವಹಾರದಲ್ಲಿ ಪ್ರಸಿದ್ಧನಾಗಿರುವವನೇ ಆತ್ಮನು. ಆತ್ಮನಿಗೆ ಸಕಲವೂ ದೃಶ್ಯವಾಗಿರುತ್ತದೆ. ಪರಲೋಕಾದಿಗಳಲ್ಲಿರುವ ವಸ್ತುಗಳೂ ಸಹ, ತೋರಿಬರುವಂಥವುಗಳೇ ಆಗಿ, ದೃಶ್ಯಗಳೇ ಆಗಿವೆ. ಆಧಿದೈವಿಕ ಮತ್ತು ಆಧಿಭೌತಿಕಗಳಂತೆ, ದೇಹಪ್ರಾಣೇಂದ್ರಿಯಮನೋಬುದ್ಧಿಗಳೆಂಬ ಆಧ್ಯಾತ್ಮಿಕವಸ್ತುಗಳೂ ಸಹ, ಆತ್ಮನಿಗೆ ದೃಶ್ಯಗಳೇ ಆಗಿವೆ. ಜಾಗ್ರತ್ತು, ಸ್ವಪ್ನ ಮತ್ತು ಸುಷುಪ್ತಿ–ಎಂಬ ಮೂರು ಅವಸ್ಥೆಗಳು ಅನುಭವಸಿದ್ಧಗಳಿವೆ; ಈ ಮೂರು ಅವಸ್ಥೆಗಳೂ, ಇವುಗಳಲ್ಲಿನ ಅನುಭವಗಳೂ ಸಹ, ಆತ್ಮನಿಗೆ ದೃಶ್ಯಗಳಾಗಿವೆ. ಬಂದುಹೋಗತಕ್ಕ ಇವುಗಳಿಗೆಲ್ಲ ಆತ್ಮನು ಬೇರೆಯಾಗಿದ್ದು, ಇವುಗಳಿಗೆ ಸಾಕ್ಷಿಯಾಗಿದ್ದಾನೆ. ದೃಶ್ಯವಸ್ತುವು, ತನಗೆ ಬೇರೆಯಾಗಿರುವ ದೃಕ್ಕಿಗೇ ದೃಶ್ಯವಾಗುವುದು. ದೃಕ್ಕಾಗಿರುವ ಆತ್ಮನು ದೃಶ್ಯಗಳಾದ ಅನಾತ್ಮಗಳಿಗೆಲ್ಲ ಸಾಕ್ಷಿಯಾಗಿ, ಇವುಗಳಲ್ಲಿ ಅನನುಗತನಾಗಿ, ಇವುಗಳ ಸಂಬಂಧಲೇಶವೂ ಇಲ್ಲದವನಾಗಿದ್ದಾನೆ ಸಂಸಾರ ದುಃಖವೆಲ್ಲವೂ ದೃಶ್ಯಗಳಾಗಿರುವ ಈ ಅನಾತ್ಮಗಳ ಧರ್ಮಗಳೇ ಆಗಿವೆ.

ಜನ್ಮ, ಜರಾ, ಮರಣ, ರೋಗ– ಇವುಗಳು ದೇಹದ ಧರ್ಮಗಳು; ನೋಡುವುದು, ಕೇಳುವುದು, ಕುರುಡುತನ, ಕಿವುಡುತನ, ಹೆಳವುತನ, ಗಮನ, ಆಗಮನ, ತೆಗೆದುಕೊಳ್ಳುವುದು, ಬಿಡುವುದು–ಮೊದಲಾದ್ದು ಜ್ಞಾನ ಮತ್ತು ಕರ್ಮೇಂದ್ರಿಯಗಳ ವಿಷಯಗಳು; ಹಸಿವುಬಾಯಾರಿಕೆಗಳು ಪ್ರಾಣದ ಧರ್ಮಗಳು; ಚಿಂತೆ, ಶೋಕ, ಸುಖ, ದುಃಖ, ತಿಳಿವು, ಮರೆವು– ಇವೆಲ್ಲ ಅಂತಃಕರಣದ ಧರ್ಮಗಳು. ಶಾಸ್ತ್ರೀಯಧರ್ಮಾಧರ್ಮರೂಪಕರ್ಮಗಳನ್ನು ಅನುಷ್ಠಿಸಿ, ಅವುಗಳ ಫಲಗಳಾದ ತಕ್ಕ ಸುಖದುಃಖಗಳನ್ನು ಅನುಭವಿಸುವುದಕ್ಕಾಗಿ ಇಹಪರಲೋಕಗಳಲ್ಲಿ ಹಲವಾರು ವಿಧಜನ್ಮಗಳನ್ನು ನಿರಂತರವೂ ಅನುಭವಿಸುತ್ತಿರುವುದೇ ಸಂಸಾರವು. ಇದು ಹೀಗೆ ವಸ್ತುತಃ ಅನಾತ್ಮದ್ದೇ ಆಗಿರುತ್ತದೆ ಇವಕ್ಕೆ ಸಾಕ್ಷಿಯಾಗಿರುವ ಆತ್ಮನಿಗೆ ವಸ್ತುತಃ ಯಾವ ಸಂಸಾರಲೇಶವೂ ಪರಮಾರ್ಥವಾಗಿ ಇರುವುದಿಲ್ಲವಾಗಿ, ಆತ್ಮನು ಯಥಾರ್ಥವಾಗಿ ನಿತ್ಯಮುಕ್ತಾದ್ವಿತೀಯಸಚ್ಚಿದಾನಂದಸ್ವರೂಪನಾಗಿರುವನು.

"ಅನಾತ್ಮಗಳಾದ ದೇಹೇಂದ್ರಿಯಾದಿಗಳ ಸಂಸಾರವು ಇವುಗಳಿಗೆ ಸಾಕ್ಷಿಯಾಗಿರುವ ಆತ್ಮನಿಗೆ ಸಂಭವಿಸುವುದಿಲ್ಲವೆಂಬುದು ಸರಿಯೆ; ಆದರೆ, ಆತ್ಮನಿಗೇ ಸಂಸಾರವಿದ್ದು ಅವನು ಸಂಸಾರಿಯಾಗಬಹುದಲ್ಲವೆ?"– ಎಂದರೆ, ಇದು ಅಸಂಭಾವಿತವೇ ಸರಿ. ಏಕೆಂದರೆ, ತನಗೆ ತಾನು ವಿಷಯನಾಗುವುದಿಲ್ಲ– ತನ್ನನ್ನು ತಾನೇ ವಿಷಯಾಕರಿಸಲಾಗುವುದಿಲ್ಲ. ಒಂದು ಕ್ರಿಯೆಗೆ ತಾನೇ ಕರ್ತೃವೂ ಕರ್ಮವೂ ಆಗುವುದು ಸಂಭಾವಿತವಲ್ಲ– ಕರ್ತೃಕರ್ಮಗಳು ಬೇರೆಬೇರೆಯೇ ಆಗಿರುತ್ತವೆ– ನಮ್ಮ ಹೆಗಲನ್ನು ನಾವೇ ಹತ್ತಲಾಗುವುದಿಲ್ಲ; ನಮ್ಮ ಮುಖವನ್ನು ನಾವೇ ನೋಡಲಾಗುವುದಿಲ್ಲ. ಆದ್ದರಿಂದ ಆತ್ಮನು ಸಂಸಾರಿಯಾಗಿರುವುದಾದರೆ, "ತಾನು ಸಂಸಾರಿ"-ಯೆಂಬುದು ತನಗೆ ತಿಳಿದುಬರಲೇ ಆರದು. ಹಾಗೆಯೇ ತನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮವೂ ತನಗೆ ವಿಷಯವಾಗುವುದಿಲ್ಲ– ಗೋಚರಿಸುವುದಿಲ್ಲ. ಹಾಗಾಗುವ ಪಕ್ಷದಲ್ಲಿ ಅಗ್ನಿಯ ಸುಡುವಿಕೆಯಿಂದ ಅಗ್ನಿಯೇ ಸುಟ್ಟುಹೋಗಬೇಕಾಗುವುದು. ಆತ್ಮನಿಗೆ ಸಂಸಾರಿತ್ವವು ಧರ್ಮವಾಗಿರುವುದಾದರೆ, ತನ್ನ ಸಂಸಾರಿತ್ವವು ತನಗೆ ತಿಳಿಯದೇ ಹೋಗುವುದು. ಸುಖದುಃಖಾನುಭವರೂಪವಾದ ಸಂಸಾರವು ಆತ್ಮನಿಗೆ ಗೋಚರಿಸುತ್ತಿರುವುದರಿಂದ, ಅದು ತಿಳಿದುಬರುವ ಅನಾತ್ಮದ ಧರ್ಮನೇ ಹೊರತು, ಆತ್ಮನದಲ್ಲವೆಂದು ವಿಶದವಾಗುವುದು. ಇದಲ್ಲದೆ ಪ್ರಾಣಿಮಾತ್ರಕ್ಕೂ ತನ್ನಲ್ಲಿ ನಿರತಿಶಯಪ್ರೀತಿಯಿರುವುದು ಸಹಜವಾಗಿರುವುದರಿಂದ, ಆತ್ಮನು ವಸ್ತುತಃ ನಿತ್ಯನಿರತಿಶಯಸುಖಸ್ವರೂಪನೆಂಬುದೇ ಯುಕ್ತವು.

ಪದಾರ್ಥಗಳ ಸ್ವರೂಪವು ಅವುಗಳಿಗೆ ಸ್ವತಃಸಿದ್ಧಗಳೇ ಆಗಿರುತ್ತದೆ; ಅದು ಬೇರೆಯಾವುದಕ್ಕೂ ಅಧೀನವಾಗದೆ, ವಸ್ತುವು ಇರುವವರಿವಿಗೂ ಇರುವಂಥದ್ದು. ಇನ್ನೊಂದರಿಂದ ಆಗುವ ರೂಪವು ಅದಕ್ಕೆ ವಾಸ್ತವವಾದುದಲ್ಲ–ಸ್ಫಟಿಕಕ್ಕೆ ತನ್ನ ಸ್ವಚ್ಛತೆಯೇ ವಾಸ್ತವಸ್ವರೂಪವು; ಜಪಾಕುಸುಮನಿಮಿತ್ತವಾಗುವ ರಕ್ತತೆಯು ಅದರ ಸ್ವರೂಪವಲ್ಲ. ಒಂದುಕಾಲದಲ್ಲಿದ್ದು ಮತ್ತೆ ಇಲ್ಲವಾಗುವಂಥದ್ದು ವಸ್ತುವಿನ ತತ್ತ್ವವಲ್ಲ. ಜಾಗ್ರತ್ಸ್ವಪ್ನಸುಷುಪ್ತ್ಯವಸ್ಥೆಗಳು ಒಂದೊಂದುಕಾಲದಲ್ಲಿದ್ದು ಮತ್ತೆ ಇಲ್ಲವಾಗುವುದರಿಂದ ಇವು ಆತ್ಮನ ವಾಸ್ತವರೂಪಗಳಾಗಲಾರವು. ಜಾಗ್ರತ್ಸ್ವಪ್ನಗಳ ಅನುಭವಗಳು ಪ್ರತಿಯೊಬ್ಬರಿಗೂ ಬೇರೆಬೇರೆಯಾಗಿರುತ್ತವೆ; ಆದರೆ ಸುಷುಪ್ತಿಯ ಅನುಭವವು ಎಲ್ಲರಿಗೂ ಒಂದೇವಿಧವಾಗಿದೆ; ಅಲ್ಲಿ ಯಾವ ನಿಮಿತ್ತವೂ ಇಲ್ಲದುದರಿಂದ, ಸುಷುಪ್ತಿಯ ಸ್ವರೂಪವೇ ಆತ್ಮನ ವಾಸ್ತವವಾದ ತತ್ತ್ವವೆಂದು ಗೊತ್ತುಬರುವುದು. ಆದ್ದರಿಂದ, ಸರ್ವದ್ವೈತಸಂಬಂಧರಹಿತವಾದ ನಿತ್ಯಮುಕ್ತಾದ್ವಿತೀಯಚೈತನ್ಯಮಾತ್ರವೇ ಆತ್ಮನ ಯಥಾರ್ಥತತ್ತ್ವವೆಂದು ನಿಶ್ಚಿತವಾಗುವುದು. ವೇದಪ್ರತಿಪಾದಿತವಾಗಿರುವ ಬ್ರಹ್ಮವು ಇಂಥ ನಿತ್ಯಶುದ್ಧಬುದ್ಧಮುಕ್ತಸ್ವರೂಪವೆಂದು ವಿಶದವಾಗಿರುವುದರಿಂದ, "ಆತ್ಮನು ಇಂಥ ಬ್ರಹ್ಮವೇ"–ಎಂದು ನಿರ್ಧಾರವಾಗುವುದು. ಇದೇ ಪರಮಪುರುಷಾರ್ಥರೂಪವಾದ ಮೋಕ್ಷವು.

ಪಾರಮಾರ್ಥಿಕತತ್ತ್ವವು ಹೀಗೆ ನಿಶ್ಚಿತವಾದ ಮೇಲೆ ಇದನ್ನು ಸಾಧಿಸಿಕೊಳ್ಳುವುದಕ್ಕೆ ಅವಶ್ಯವಾದ ಸಾಧನೆಯೂ ಸಿದ್ಧವಾಗುವುದು. ಆತ್ಮನು ನಿತ್ಯಮುಕ್ತಾದ್ವಿತೀಯ ಬ್ರಹ್ಮಸ್ವರೂಪನಾಗಿರುವನಾದರೂ, ಈಗ ಈ ಅನುಭವವು ಇಲ್ಲದಿರುವುದು ಕೇವಲ ಭ್ರಾಂತಿಯೆಂದೇ ವಿಶದವಾಗುವುದು. ಆತ್ಮನ ವಾಸ್ತವಸ್ವರೂಪದ ಅನುಭವವಿಲ್ಲದಿರುವುದೇ ಈ ಸಂಸಾರಭ್ರಾಂತಿಗೆ ಕಾರಣವೆಂದಮೇಲೆ, ಈ ವಾಸ್ತವಸ್ವರೂಪದ ಅನುಭವವೇ ಈ ಭ್ರಾಂತಿಯನ್ನು ಕಳೆದು ಪುರುಷಾರ್ಥವನ್ನು ದೊರಕಿಸುವುದು; ಹೀಗೆ ಆತ್ಮತತ್ತ್ವ-

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನವೇ ಮೋಕ್ಷಸಾಧನೆಯು–**ಜ್ಞಾನಾದೇವ ತು ಕೈವಲ್ಯಂ ;ಜ್ಞಾತ್ವಾ ಮಾಂ ಶಾಂತಿಮೃಚ್ಛತಿ: ದ್ವಿತೀಯಾದ್ವೈಭಯಂ ಭವತಿ; ಜ್ಞಾತೇ ದ್ವೈತಂ ನ ವಿದ್ಯತೇ ಬ್ರಹ್ಮವಿದ್ಬ್ರಹ್ಮೈವ ಭವತಿ; ಬ್ರಹ್ಮವಿದ್ಯಾಪ್ನೋತಿ ಪರಂ; ವಿಮುಕ್ತಶ್ಚ; ವಿಮುಚ್ಯತೇ'**–ಮುಂತಾದ ಸಹಸ್ರಾರುಪ್ರಮಾಣವಚನಗಳು ಇದನ್ನೇ ಸಾರುತ್ತವೆ.

ಹೀಗೆ ಆತ್ಮತತ್ತ್ವಜ್ಞಾನವೇ ಮೋಕ್ಷಸಾಧನವೆಂಬುದು ಸಿದ್ಧವು. ಆದರೆ ಇದುವರೆಗೆ ತಿಳಿಸಿದ ಪ್ರಮಾಣಯುಕ್ತಿಗಳಿಂದ ತಿಳಿದುಬಂದ ಜ್ಞಾನಮಾತ್ರವೇ ಮೋಕ್ಷಸಾಧನವಾಗುವುದಿಲ್ಲ; ಇದು ಕೇವಲ ಪರೋಕ್ಷಜ್ಞಾನವು. ಸಂಸಾರಭ್ರಾಂತಿಯು ಪ್ರತ್ಯಕ್ಷವಾಗಿರುವುದರಿಂದ, ಪ್ರತ್ಯಕ್ಷಭ್ರಾಂತಿಯು ಪರೋಕ್ಷವಾದ ತತ್ತ್ವಜ್ಞಾನದಿಂದ ನಿವರ್ತಿಸುವುದಿಲ್ಲ. ಅನುಭವಾತ್ಮಕವಾದ ಪ್ರತ್ಯಕ್ಷತತ್ತ್ವಜ್ಞಾನವೇ ಪ್ರತ್ಯಕ್ಷಭ್ರಾಂತಿಯನ್ನು ಕಳೆಯುವುದು. ಇದನ್ನೇ ತಿಳಿಸುತ್ತಾರೆ–

ಜ್ಞಾನಂ ಯದ್ಯಪಿ ನಿತ್ಯಮುಕ್ತಿಜನನೇ ಸತ್ಯಂ ಸಮರ್ಥಂ ತಥಾ-
ಪ್ಯೇತಜ್ಜ್ಞಾನಮಪೇಕ್ಷತೇ ಸ್ವಜನನೇ ಪ್ರತ್ಯೂಹವೃಂದಕ್ಷಯಂ ।

ಪ್ರಾಚೀನಂ ದುರಿತಂ ಪರಂ ಸ ಇತಿ ತಚ್ಛಾಂತಿರ್ನ ಧರ್ಮಾದೃತೇ
ಚೇತ್ಥಂ ಧರ್ಮವಿಶುದ್ಧಚೇತಸಿ ಸಮುದ್ಭೂತಂ ಭವೇತ್ಸಿದ್ಧಯೇ।
॥೧೧॥

ಆತ್ಮತತ್ತ್ವಜ್ಞಾನವೇ ಮೋಕ್ಷವನ್ನು ಸಾಧಿಸಿಕೊಡುವುದರಲ್ಲಿ ಸಮರ್ಥವಾದುದಾದರೂ, ಈ ಅನುಭವಾತ್ಮಕಜ್ಞಾನಕ್ಕೆ, ಅನಾದಿಕಾಲದಿಂದ ಕೂಡಿಹಾಕಿಕೊಂಡು ಬಂದಿರುವ ದುರಿತಸಂಸ್ಕಾರಗಳೇ ಅಡ್ಡಿಯಾಗಿರುತ್ತವೆ. **"ಕಷಾಯೇ ಕರ್ಮಭಿಃ" ಪಕ್ವೇ ತತೋ ಜ್ಞಾನಂ ಪ್ರವರ್ತತೇ; ಕಷಾಯಪಕ್ತಿಃ; ಕರ್ಮಾಣಿ: ಧರ್ಮೇಣ ಪಾಪಮಪನುದತಿ!"**– ಮುಂತಾದಪ್ರಮಾಣಗಳಿಂದ, ಶಾಸ್ತ್ರವಿಹಿತಗಳಾಗಿರುವ ಅವರವರ ಸ್ವಧರ್ಮಗಳ ಯಥಾವತ್ತಾದ ಅನುಷ್ಠಾನಗಳಿಂದಲೇ ಈ ದುರಿತಪ್ರತಿಬಂಧವು ಕಳೆದು, ಆತ್ಮತತ್ತ್ವವು ಅನುಭವಸಿದ್ಧವಾಗುವುದು. ಆಕೂಡಲೆ ಭ್ರಾಂತಿಯು ನಿಃಶೇಷವಾಗಿ ಕಳೆದು, ಆತ್ಮನು ತನ್ನ ಪಾರಮಾರ್ಥಿಕಾದ್ವಿತೀಯನಿತ್ಯಮುಕ್ತಸ್ವರೂಪಸಿದ್ಧನಾಗುವನು. ಈ ಪ್ರಕಾರವಾಗಿ ವೈದಿಕಕರ್ಮಕಾಂಡವು ತತ್ತ್ವಜ್ಞಾನಸಿದ್ಧಿಗೆ ಅತ್ಯಂತ ಅವಶ್ಯವಾಗಿ, ಸಕಲವೇದವೂ ಪುರುಷಾರ್ಥಪರವಾಗಿ ಪ್ರಾಮಾಣಿಕವಾಗಿರುತ್ತದೆ.

ಶ್ರೀಭಗವತ್ಪಾದರು ಪ್ರತಿಪಾದಿಸಿದ ಈ ತತ್ತ್ವಾರ್ಥವು ಮುಖ್ಯಾಧಿಕಾರಿಗಳಾಗಿದ್ದ ಶ್ರೀಸುರೇಶ್ವರರಿಗೆ ಕೂಡಲೆ ಅನುಭವಗಮ್ಯವಾಗಿ, ಜೀವನ್ಮುಕ್ತಸ್ಥಿತಿಯನ್ನು ಪಡೆದರು.

Sri Vidyabharathi Book Centre, Sringeri

CC-O. In Public Domain. Digitized by eGangotri

೧೭. ಶ್ರೀಭಗವತ್ಪಾದರ ದಿಗ್ವಿಜಯಕೌತುಕಂ!—
ಚತುರಾಮ್ನಾಯ ಪೀಠ ಸ್ಥಾಪನಂ ।

ಸುರೇಶಪದ್ಮಾಂಘ್ರಿಕರಾತ್ತತತ್ತ್ವಶ್ರೀತೋಟಕೇತಿ ಪ್ರಥಿತೈರ್ವಿನೇಯೈಃ।
ತಚ್ಛಿಷ್ಯವರ್ಗೈಶ್ಚ ಸಮಂ ಧರಿತ್ರೀಂ ಚಚಾರ ಕೃತ್ಸ್ನಾಮಭಿತಃ ಪುನಾನಃ ॥೧೧೫॥

ಪಾರಮಾರ್ಥಿಕತತ್ತ್ವಾನುಭವಶಾಲಿಗಳಾಗಿ ಜೀವನ್ಮುಕ್ತರಾಗಿದ್ದ ಶ್ರೀಸುರೇಶ್ವರಾಚಾರ್ಯರು, ಶ್ರೀಪದ್ಮಪಾದಾಚಾರ್ಯರು, ಶ್ರೀಹಸ್ತಾಮಲಕಾಚಾರ್ಯರು, ಶ್ರೀ ತೋಟಕಾಚಾರ್ಯರು, ಮತ್ತು ಇವರುಗಳ ಶಿಷ್ಯವರ್ಗದವರು— ಇವರೆಲ್ಲರೊಡನೆ ಭರತಭೂಮಂಡಲವನ್ನೆಲ್ಲ ಪವಿತ್ರಗೊಳಿಸುತ್ತ ಶ್ರೀಭಗವತ್ಪಾದರು ಸಂಚರಿಸಿದರು.

ತೇ ಸರ್ವೇಽಪ್ಯನುಮತಿಮಾಪ್ಯ ದೇಶಿಕೇಂದ್ರಾ ದಾನಂದಾ ಚಲಮುಖರಾ ಮಹಾನುಭಾವಾಃ ।
ಆತೇನುರ್ಜಗತಿ ಯಥಾಸ್ವಮಾತ್ಮತತ್ತ್ವಾಂಭೋಜಾರ್ಕಾನ್ವಿಶದತರಾನ್ಮಹೂನ್ನಿ ಬಂಧಾನ್ ॥೧೧೬॥

ಶ್ರೀಭಗವತ್ಪಾದರವರ ಆದೇಶವನ್ನು ಪಡೆದು, ಈ ಶಿಷ್ಯೋತ್ತಮರೂ ಆತ್ಮತತ್ತ್ವ ಪ್ರತಿಪಾದಕಗಳಾದ ಹಲವಾರುನಿಬಂಧಗ್ರಂಥಗಳನ್ನು ರಚಿಸಿ, ಶ್ರೀಭಗವತ್ಪಾದರ ತತ್ತ್ವ ಪ್ರಚಾರಕಾರ್ಯದಲ್ಲಿ ಯಥಾಶಕ್ತಿ ಸೇವೆಗೈದರು.

ಶಿಷ್ಯೋತ್ತಮೈಃ ಪರಿವೃತಃ ಸ ಗುರೂತ್ತಮೋಽಸೌ ನಾನಾವಿಧಾನ್ಸ್ವಜನಪದಾನ್ಪರಿಪಾವಯಂಶ್ಚ ।
ಪಾಂಡಿತ್ಯದರ್ಪಮತನುಂ ದಲಯಂಶ್ಚವಾದೇ ಹ್ಯಶ್ರೌತಮಾರ್ಗಗಮಿನಾಂ ಪ್ರತಿಬೋಧಕೋಽಭೂತ್ ॥೧೧೭॥

ಶ್ರೀಭಗವತ್ಪಾದರು ತಮ್ಮ ಅಪಾರಶಿಷ್ಯೋತ್ತಮಪರಿವಾರಸಮೇತರಾಗಿ ನಾನಾದೇಶಗಳಲ್ಲಿ ಸಂಚರಿಸುತ್ತ, ತಮ್ಮ ಭಾಷ್ಯಾದಿಗ್ರಂಥಗಳ ಪ್ರವಚನವನ್ನು ಮಾಡುತ್ತಿದ್ದರು ಆ ಸಮಯಗಳಲ್ಲಿ, ತಮ್ಮ ತಮ್ಮ ಮತಗಳ ಮೇಲಿನದುರಭಿಮಾನದಿಂದ, ವೈದಿಕಸಮ್ಮತವನ್ನು ಸಮ್ಮತಿಸದ ಇತರಮತಾನುಯಾಯಿಗಳು, ದುರಾಗ್ರಹದಿಂದ ವೈದಿಕಸಿದ್ಧಾಂತ ವನ್ನು ಆಕ್ಷೇಪಿಸಿ ದೂಷಿಸಲಾರಂಭಿಸುತ್ತಿದ್ದರು. ಆಗ ಶ್ರೀಭಗವತ್ಪಾದರು ಅವರುಗಳವಾದಗಳನ್ನು ನಿರಾಕರಿಸುತ್ತ ಅವರ ದುರಹಂಕಾರಗಳನ್ನು ಮುರಿದು, ಅವರಿಗೆ ಸದ್ಬೋಧೆಯನ್ನು ನೀಡಿದರು. [ಶ್ರೀಭಗವತ್ಪಾದರು ಶ್ರೀಮಂಡನಪಂಡಿತರನ್ನಲ್ಲದೆ ಬೇರೆ ಯಾರೊಡನೆಯೂತಾವಾಗಿಯೆ ವಾದಕ್ಕೆ ಹೋಗಲಿಲ್ಲ. ಅಲ್ಲಲ್ಲಿ ತಮ್ಮ ಶಿಷ್ಯರಿಗೆ ತಮ್ಮ ಭಾಷ್ಯಗಳನ್ನು ಪ್ರವಚನಮಾಡುತ್ತಿದ್ದಾಗ

Sri Vidyabharathi Book Centre Sringeri

CC-O. In Public Domain. Digitized by eGangotri

ಶೈವವೈಷ್ಣವಶಾಕ್ತಭೈರವಕಾಪಾಲಿಕಾದಿಮತದವರು ವಾದಮಾಡಲು ಬಂದರು ಆಗ ಶ್ರೀಭಗವತ್ಪಾದರು ಅವರಿಗೆ ಸರಿಯಾದ ಸಮಾಧಾನಗಳನ್ನು ತಿಳಿಸಿ, ಸನ್ಮಾರ್ಗದ ಬೋಧೆಯನ್ನು ಅನುಗ್ರಹಿಸಿದರು. **'ತತ್ತ್ವಜ್ಞಾನಾನ್ನಿಃಶ್ರೇಯಸಾಧಿಗಮಃ'**– "ತತ್ತ್ವಜ್ಞಾನದಿಂದಲೇ ನಿಃಶ್ರೇಯಸ್ಸೆಂಬ ಪರಮಪುರುಷಾರ್ಥಸಿದ್ಧಿಯು"– ಎಂಬುದನ್ನು ಅರಿತೇ ಪ್ರಪಂಚದಲ್ಲಿ ನಾನಾಮೇಧಾವಿಗಳು ಅನಾದಿಕಾಲದಿಂದಲೂ ಈ ತತ್ತ್ವಾನ್ವೇಷಣೆಯಲ್ಲಿ ನಿರತರಾಗಿದ್ದಾರೆ. ಆದರೆ, ಯಾರಿಗೂ ತತ್ತ್ವನಿಶ್ಚಯವು ಸಿಲುಕಿರುವುದಿಲ್ಲ. ತತ್ತ್ವವು ಅತೀಂದ್ರಿಯವಾಗಿರುವುದೇ ಇದಕ್ಕೆ ಕಾರಣವು. ಅತೀಂದ್ರಿಯವಾಗಿರುವ ತತ್ತ್ವದ ವಿಷಯದಲ್ಲಿ ಅಪೌರುಷೇಯವಾಗಿ ನಿರ್ದುಷ್ಟವಾಗಿರುವ ಶ್ರುತಿಯೊಂದೇ ಪ್ರಮಾಣವಾಗಿರುತ್ತದೆ. ಶ್ರುತಿಯಸಿದ್ಧಾಂತಾನುಸಾರವಾಗಿ"–ನಿರ್ವಿಶೇಷವಾದ ಅದ್ವಿತೀಯಚಿನ್ಮಾತ್ರ ಬ್ರಹ್ಮವೇ ಪರಮಾರ್ಥಸತ್ಯವಸ್ತುವು; ಅನಾದ್ಯನಿರ್ವಚನೀಯಮಾಯೋಪಾಧಿಯಿಂದ ಇದೇ ಸಗುಣಬ್ರಹ್ಮರೂಪನಾದ ಈಶ್ವರನೆಂದೆನಿಸಿ, ಆಯಾ ಅಧಿಕಾರಿಗಳ ಅನುಗ್ರಹಕ್ಕಾಗಿ ಶಿವ, ವಿಷ್ಣು, ದೇವೀ– ಮುಂತಾದ ಹಲವಾರುಮಾಯಿಕಗಳಾದ ದೇವತಾರೂಪಗಳನ್ನು ತಾಳುತ್ತದೆ; ಆಯಾ ಅಧಿಕಾರಿಗಳು, ತಮತಮಗೆ ಸಮ್ಮತಗಳಾದ ಈ ದೇವತೆಗಳ ಆರಾಧನೆಗಳಿಂದ, ಮುಂದೆಮುಂದೆ ಉತ್ತರೋತ್ತರಾಧಿಕಾರಸಂಪತ್ತನ್ನು ಪಡೆಯುತ್ತ, ಕಡೆಯಲ್ಲಿ ವೈದಿಕಸನಾತನವರ್ಣಾಶ್ರಮಧರ್ಮಗಳಿಗೆ ಅಧಿಕಾರಿಗಳಾಗುವರು; ನಿಷ್ಕಾಮಸ್ವಧರ್ಮಾನುಷ್ಠಾನದಿಂದ ಚಿತ್ತಶುದ್ಧಿಜ್ಞಾನಪ್ರಾಪ್ತಿಯ ಮೂಲಕ ಸಂಸಾರಕಾರಣವಾದ ಅನಾದ್ಯಜ್ಞಾನವನ್ನು ನಾಶಪಡಿಸಿಕೊಂಡು, ಸ್ವತಃಸಿದ್ಧಾದ್ವಿತೀಯಾಖಂಡನಿರತಿಶಯಾನಂದಪರಬ್ರಹ್ಮಸ್ವರೂಪರಾಗಿ ಕೃತಕೃತ್ಯರಾಗುವರು. ಇದೇ ಪ್ರಾಮಾಣಿಕಯಥಾರ್ಥವಸ್ತುಸ್ಥಿತಿ ಎಂದು ಬೋಧಿಸಿದರು;

ಆಯಾ ಮತಾನುಯಾಯಿಗಳು– "ತಮತಮಗೆ ಅಭಿಮತರಾದ ಶಿವವಿಷ್ಣು-ಮುಂತಾದದೇವತೆಗಳ ಚಿಹ್ನೆಗಳನ್ನು ಧರಿಸಿಕೊಂಡು, ಆದೇವತೆಗಳ ಆರಾಧನೆಯಿಂದ ಆ ದೇವತೆಗಳ ಅನುಗ್ರಹವು ಲಭಿಸಿ, ಮೋಕ್ಷವು ದೊರೆಯುವುದೆಂದು"–ನಂಬುತ್ತಾರೆ. ಶ್ರೀ-ಭಗವತ್ಪಾದರರು ಇದರಲ್ಲಿ ಪ್ರಮಾಣವಿಲ್ಲವೆಂದು ತಿಳಿಸಿದರು. ಆಯಾದೇವತೆಗಳನ್ನು ಅನುಕರಣೆಮಾಡುವುದೆಂದಾದರೆ,– "ಶೈವರು ಶಿವನಂತೆ ವಿಷಪಾನಮಾಡಿ, ಸರ್ಪಾಭರಣ-ರಾಗಬೇಕಾಗುವುದು; ವೈಷ್ಣವರು ಗರುಡನನ್ನೇರಿ ಸಂಚರಿಸುತ್ತ. ಸಮುದ್ರದಲ್ಲಿ ಸರ್ಪ-ಶಾಯಿಗಳಾಗಬೇಕಾಗುವುದು; ಹಾಗಿಲ್ಲದೆ, "ಎಷ್ಟು ಸಾಧ್ಯವೋ ಅಷ್ಟನ್ನುಮಾತ್ರ ಅನುಕರಣೆಮಾಡುತ್ತೇವೆಂಬುದು, ಅಶಕ್ತತೆಯ ಅಜ್ಞಾನದ ವಿಲಸಿತವೇ ಆಗುವುದು"– ಎಂದು ವ್ಯಕ್ತಪಡಿಸಿದರು. ಆಗ ಕೆಲವರು– 'ಶ್ರೀಪರಮೇಶ್ವರನ ಆರಾಧಕರಾಗಿರುವ ನೀವು, ಈಶ್ವರನಂತೆ ಭಸ್ಮರುದ್ರಾಕ್ಷಿಗಳನ್ನು ಧರಿಸುತ್ತಿಲ್ಲವೆ? ಎಂದು ಆಕ್ಷೇಪಿಸಿದರು. ಶ್ರೀಭಗವತ್ಪಾದರು– 'ನಾವು ಭಸ್ಮರುದ್ರಾಕ್ಷಿಗಳನ್ನು ಧರಿಸುವುದು ಶಾಸ್ತ್ರವಿಧಿಯನ್ನನುಸರಿಸಿಯೇ ಹೊರತು, ಈಶ್ವರನು ಹೀಗೆ ಧರಿಸಿರುವನೆಂಬ ಕಾರಣದಿಂದ ಅಲ್ಲವೇ ಅಲ್ಲವೆಂದು" ವಿಶದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಡಿಸಿದರು. ಇಂಥ ಅನಾಚಾರದುರಾಚಾರಗಳನ್ನು ಪರಿತ್ಯಜಿಸಿ, ತಮ್ಮ ತಮ್ಮ ಅನಾದಿ ಸಂಪ್ರದಾಯರೀತಿಯಿಂದ ಬಂದಿರುವಂತೆ ಸಾತ್ವಿಕತನದ ನಿಮ್ಮ ನಿಮ್ಮ ದೇವತಾಸೇವೆಯನ್ನು ಎಸಗಿ ಶ್ರೇಯೋಭಾಗಿಗಳಾಗಿರೆಂದು ಅವರೆಲ್ಲರಿಗೂ ಬೋಧಿಸಿದರು. ಹೀಗಾಗಿ ಅವರು **ಷಣ್ಮತಸ್ಥಾಪನಾಚಾರ್ಯ**ರೆಂಬ ಬಿರುದಿಗೆ ಅನ್ವರ್ಥವಾಗಿ ಪಾತ್ರರಾದರು. ಇದಕ್ಕಾಗಿ ಶ್ರೀಭಗವತ್ಪಾದರು ಪಂಚಾಯತನಪೂಜಾಪದ್ಧತಿಯನ್ನು ಸಂಪ್ರದಾಯಕ್ಕೆ ತಂದರೆಂದು ಕೆಲವರು ಹೇಳುವರು; ಧರ್ಮಶಾಸ್ತ್ರನಿಯಮಿತವಾಗಿರುವ ಇದು ಶ್ರೀಭಗವತ್ಪಾದರಿಗೆ ಪೂರ್ವದಲ್ಲಿ ಆಚರಣೆಯಲ್ಲಿರಲಿಲ್ಲವೆ?

ಲೋಕದಲ್ಲಿ ಹಲವಾರುಮತಪ್ರವರ್ತಕರಿರುವುದು ಪ್ರತ್ಯಕ್ಷವೇ ಇದೆ. ಆದರೆ, ತಮ್ಮ ತಮ್ಮ ಮತದ ಅನುಸರಣೆಯೇ ಸರ್ವರಿಗೂ ಶ್ರೇಯಸ್ಕರವೆಂದು ವಾದಿಸುವ ಇವರಲ್ಲಿ,–ಕ್ರಿಸ್ತನು ಕ್ರೈಸ್ತರಿಗೆ ಮಾತ್ರವೇ ಗುರುವು; ಮಹಮ್ಮದನು ಮಹಮ್ಮದರಿಗೆ ಮಾತ್ರ ಗುರುವು; ಬುದ್ಧನು ಬೌದ್ಧರಿಗೆ ಮಾತ್ರ; ಜಿನನು ಜೈನರಿಗೆ ಮಾತ್ರ; ಬಸವಣ್ಣನವರು ಲಿಂಗಾಯತರಿಗೆ ಮಾತ್ರ; ರಾಮಾನುಜರು ಶ್ರೀವೈಷ್ಣವರಿಗೆ ಮಾತ್ರ; ಮಧ್ವರು ಮಾಧ್ವರಿಗೆ ಮಾತ್ರ; ಹೀಗೆ ಇತರರೂ ಸಹ ತಮ್ಮ ತಮ್ಮ ಪರಿಮಿತಾನುಯಾಯಿಗಳಿಗೆ ಮಾತ್ರವೇ ಗುರುಗಳು. **"ಸ್ವಧರ್ಮೇ ನಿಧನಂ ಶ್ರೇಯಃ"** ಎಂದ ಶ್ರೀಕೃಷ್ಣಪರಮಾತ್ಮನಂತೆ ಬೋಧಿಸಿರುವ ಶ್ರೀಭಗವತ್ಪಾದರೇ **ಸರ್ವಲೋಕಪರಮ-ಜಗದ್ಗುರುಸಾರ್ವಭೌಮರು!** ಇತರರು ಜಗದ್ಗುರುಗಳೆಂದು ಹೇಳಿಕೊಳ್ಳುವುದು, ಚಕ್ರವರ್ತಿಯೆಂದು ಹೆಸರಿಟ್ಟುಕೊಳ್ಳುವ ಭಿಕಾರಿಗೆ ಸಮರೇ ಸರಿಯೆಂದು ಹೇಳತಕ್ಕದ್ದಾಗುವುದು.]

ಉನ್ಮೂಲ್ಯ ದುರ್ಮತಚಯಂ ಸಕಲಾಸು ದಿಕ್ಷು ನಿಷ್ಕಂಟಕಂ ಚ
ಸುವಿಧಾಯ ತು ವೇದವರ್ತ್ಮ ।
ಸಂಸ್ಥಾಪ್ಯ ರಕ್ಷಣಕೃತೇಽಸ್ಯ ವಿನೇಯಸಿಂಹಾನ್ ಶ್ರೀಶೃಂಗಶೈಲಮಭಿ-
ಲಕ್ಷ್ಯ ಗುರುಃ ಪ್ರತಸ್ಥೇ ॥೧೧॥

ಶ್ರೀಭಗವತ್ಪಾದಜಗದ್ಗುರುಸಾರ್ವಭೌಮರು ಈ ಪ್ರಕಾರವಾಗಿ ಎಲ್ಲ ಅವೈದಿಕದುರ್ಮತಗಳನ್ನೂ ನಾಶಮಾಡಿ ವೈದಿಕಸನ್ಮಾರ್ಗವನ್ನು ಎಲ್ಲ ದಿಕ್ಕುಗಳಲ್ಲಿಯೂ ನಿರಾತಂಕವಾಗಿ ಪ್ರಚಾರಕ್ಕೆ ಬರುವಂತೆ ಮಾಡಿ, ಅದರ ರಕ್ಷಣೆಗಾಗಿ ಭರತಖಂಡದ ನಾಲ್ಕು ದಿಕ್ಕುಗಳಲ್ಲಿಯೂ ತಮ್ಮ ಮುಖ್ಯ ನಾಲ್ಕುಜನ ಶಿಷ್ಯೋತ್ತಮರ ಮೂಲಕವಾಗಿ ಸದ್ಗುರುಸಂಪ್ರದಾಯದ ಮಠಗಳನ್ನು ಸ್ಥಾಪಿಸಿ, ಶ್ರೀಶೃಂಗಗಿರಿಕ್ಷೇತ್ರಕ್ಕೆ ದಯಮಾಡಿಸಿದರು.

[ಅವೈದಿಕಮತಗಳ ನಾಶವೆಂದರೆ, ಆ ಮತದವರಲ್ಲಿ ಆಚರಣೆಯಲ್ಲಿ ಬಂದಿದ್ದ ಆವರವರ ಸಂಪ್ರದಾಯವಿರುದ್ಧಾಚಾರಗಳನ್ನು ತಿದ್ದಿದ್ದು. ನಾಲ್ಕುದಿಕ್ಕುಗಳಲ್ಲಿ ಮಠಸ್ಥಾಪನೆಯು ಅನಂತರದ ... ಅನ್ನು ಹೇಳಿರುತ್ತದೆ.]

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ



ಶಾರದಾಂ ತತ್ತ್ವನಿಜ್ಞಾನವರದಾಂ ಸಾದರಂಭಜೇ ।
ಯದನು ಗ್ರಹಹೀನಾಸ್ತು ಹ್ಯಂಧಕೂಪೇಪತಂತಿ ವೈ ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಲ್ಪ್ಯ ತತ್ರೇಂದ್ರವಿಮಾನಕಲ್ಪಂ ಪ್ರಾಸಾದಮಾವಿಷ್ಕೃತಸರ್ವಶಿಲ್ಪಂ।
ಪ್ರವರ್ತಯಾಮಾಸ ಸ ದೇವತಾಯಾಃ ಪೂಜಾಮಜಾದ್ಯೈರಭಿ-
ಪೂಜಿತಾಯಾಃ ॥೧೯॥

ತ್ರೇತಾಯುಗದ ಶ್ರೀವಿಭಾಂಡಕಮಹರ್ಷಿಗಳ ಮತ್ತು ಶ್ರೀಋಷ್ಯಶೃಂಗಮುನೀಶ್ವರರ ತಪಃಸಿದ್ಧಿಕ್ಷೇತ್ರವೂ ಶ್ರೀಮಲಹಾನಿಕರೇಶ್ವರನ ಆವಿರ್ಭಾವಕ್ಷೇತ್ರವೂ, ಶ್ರೀತುಂಗಾತಟನೀಪವಿತ್ರಿತಕ್ಷೇತ್ರವೂ ಆಗಿ ಪ್ರಸಿದ್ಧವಾಗಿರುವ ಶ್ರೀಶೃಂಗಗಿರಿಕ್ಷೇತ್ರದಲ್ಲಿ, ಇಂದ್ರವಿಮಾನಸದೃಶವಾಗಿರುವ, ಮತ್ತು ದಿವ್ಯಶಿಲ್ಪಕಲೆಯಿಂದ ವಿರಾಜಿಸುವ ದೇವಾಲಯವನ್ನು ನಿರ್ಮಿಸಿ, ವೈದಿಕಸನ್ಮಾರ್ಗದ ಪ್ರಸಾರಕ್ಕಾಗಿ ಒಲಿಸಿಕೊಂಡಿದ್ದ, ಬ್ರಹ್ಮಾದಿಪೂಜ್ಯಳಾದ, ಶ್ರೀಶಾರದಾದೇವಿಯನ್ನು ಅಲ್ಲಿ ಪ್ರತಿಷ್ಠೆ ಮಾಡಿದರು.

ಯಾ ಶಾರದಾಂಬೇತ್ಯಭಿಧಾಂ ವಹಂತೀ ಕೃತಾಂ ಪ್ರತಿಜ್ಞಾಂ ಪರಿಪಾಲ-
ಯಂತೀ ।
ಅದ್ಯಾಪಿ ಶೃಂಗೇರಿಪುರೇ ವಸಂತೀ ವಿದ್ಯೋತತೇಽಭೀಷ್ಟವರಾನ್ ದಿಶಂತೀ
॥೧೨೦॥

ಶ್ರೀಶಂಕರಭಗವತ್ಪಾದರವರ ಕರಕಮಲಪ್ರತಿಷ್ಠಿತಳಾಗಿ ಅರ್ಚಿತಳಾಗಿರುವ, **ಶ್ರೀಶಾರದಾಂಬಾ**- ಎಂಬ ದಿವ್ಯನಾಮದಿಂದ ವಿರಾಜಿಸುತ್ತಿರುವ, ಬ್ರಹ್ಮವಿದ್ಯಾಸ್ವರೂಪಿಣಿಯಾಗಿರುವ ಶ್ರೀಶಾರದಾದೇವಿಯು, ಇಲ್ಲಿ ನಿತ್ಯಸನ್ನಿಹಿತಳಾಗಿರುತ್ತ, ಭಕ್ತರ ಐಹಿಕಾಮುಷ್ಮಿಕಸಕಲೇಷ್ಟಾರ್ಥಗಳನ್ನೂ ಅನುಗ್ರಹಿಸುತ್ತಿರುವುದು ಸರ್ವಪ್ರತ್ಯಕ್ಷವೇ ಇದೆ.

ಶ್ರೀಚಂದ್ರಮೌಳೀಶ್ವರರತ್ನಗರ್ಭಗಣೇಶಮುಖ್ಯಾ ದಿವಿಜಾಧಿ-
ಪಾಶ್ಚ ।
ಶ್ರೀಶೃಂಗಪೀಠಾಧಿಪಪೂಜ್ಯಮಾನಾ ಭಕ್ತ್ಯಾನುಕಂಪಾವಶಗಾ ಜಯಂತಿ
॥೧೨೧॥

ಹಾಗೆಯೇ ಶ್ರೀಶೃಂಗಗಿರಿಕ್ಷೇತ್ರದಲ್ಲಿ ಶ್ರೀಚಂದ್ರಮೌಳೀಶ್ವರ, ರತ್ನಗರ್ಭಗಣಪತಿಮುಂತಾದ ಹಲವುದೇವತೆಗಳೂ ಸನ್ನಿಹಿತರಾಗಿದ್ದು, ಶ್ರೀಶೃಂಗಗಿರಿ ಶ್ರೀಶಾರದಾಜಗದ್ಗುರುಪೀಠದಲ್ಲಿ ಪರಂಪರಾಗತರಾಗಿಬಂದಿರುವ ಜಗದ್ಗುರುವರ್ಯರಿಂದ ಆರಾಧಿತರಾಗಿರುತ್ತ ಭಕ್ತವೃಂದವನ್ನು ಕರುಣೆಯಿಂದ ಅನುಗ್ರಹಿಸುತ್ತಿರುವರು.

ತತ್ರ ಪ್ರತಿಷ್ಠಾಪ್ಯ ಸುರೇಶ್ವರಂ ತಂ ವೇದಾಧ್ವನೀರಕ್ಷಣ ಕೃತ್ಯ ವಿಷಃ ।
ಶ್ರೀ ದೇಶಿಕೇಂದ್ರೋ ಮುಮುದೇ ಶ್ವಮಂದಂ ಮೇನೇ ಕೃತಪ್ರಾಯ-
ಮಥಾತ್ಮಕೃತ್ಯಂ ॥೧೨೨॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಾರದಾಪೀಠದಲ್ಲಿ ಶ್ರೀಸುರೇಶ್ವರಾಚಾರ್ಯರನ್ನು ವೈದಿಕಧರ್ಮರಕ್ಷಣೆಗಾಗಿ ಪ್ರಥಮಾಚಾರ್ಯರನ್ನಾಗಿ ಪಟ್ಟಗಟ್ಟಿ ತಮ್ಮ ಕಾರ್ಯವು ಸಮಗ್ರವಾಗಿ ಪೂರ್ಣವಾಯಿತೆಂದು ಬಗೆದು, ವಿಶೇಷವಾಗಿ ಸಂತುಷ್ಟರಾದರು.

ತಸ್ಮಾದಸ್ಮತ್ಕಲ್ಪಿತೇಷ್ವರ್ಚ್ಯಮಾನಾ ಸ್ಥಾನೇಷು ತ್ವಂ ಶಾರದಾಖ್ಯಾ ದಿಶಂತೀ।
ಇಷ್ಟಾನರ್ಥಾನ್ ಋಷ್ಯಶೃಂಗಾದಿಕೇಷು ಕ್ಷೇತ್ರೇಷ್ವಾಸ್ಸ್ವ ಪ್ರಾಪ್ತಸತ್ಸನ್ನಿಧಾನಾ॥

ಶ್ರೀಸರಸವಾಣಿಯು ದುರ್ವಾಸಶಾಪವಿಮುಕ್ತಳಾಗಿ ಬ್ರಹ್ಮಲೋಕಕ್ಕೆ ಹೋಗಲು ಸಿದ್ಧಳಾದಾಗ ಶ್ರೀಭಗವತಾದರು ಆಕೆಯನ್ನು ಹೀಗೆ ಪ್ರಾರ್ಥಿಸಿದ್ದನ್ನು ನೋಡಿದರೆ, ಶ್ರೀಶೃಂಗಗಿರಿ– ಮುಂತಾದ ಕ್ಷೇತ್ರಗಳಲ್ಲಿ ಮಠಗಳನ್ನು ಸ್ಥಾಪಿಸುವ ಉದ್ದೇಶವು ಅವರಿಗೆ ಮೊದಲೇ ಇದ್ದದ್ದು ತಿಳಿದುಬರುವುದು. ಇದೂ ಇವರ ಮಹತ್ವಕ್ಕೆ ಸಾಕ್ಷಿಯಾಗಿದೆ. ಇವುಗಳ ಪರಿಚಯವು ಇವರಿಗೆ ಆಗ ಇರುವ ಪ್ರಸಂಗವೇ ಇರಲಿಲ್ಲ.

ಶ್ರೀಭಗವತ್ಪಾದರಿಂದ ಪ್ರವರ್ತಿತಗಳಾಗಿರುವ ಪ್ರಧಾನಮಠಗಳಲ್ಲಿಯೂ, ಇವುಗಳ ಶಾಖಾಮಠಗಳಲ್ಲಿಯೂ ಶ್ರೀಶಾರದಾದೇವಿಯ ಆರಾಧನೆಯು ಇರುವುದನ್ನು ಕಂಡು, "ಶ್ರೀಭಗವತ್ಪಾದರೂ ಇವರ ಶಿಷ್ಯರುಗಳೂ ಸಹ ಶಕ್ತಿದೇವತಾಉಪಾಸಕರೆಂದು ಅನೇಕರು ಭಾವಿಸಿರುವರು. ಶ್ರೀಭಗವತ್ಪಾದರು ನಿರ್ಗುಣನಿರ್ವಿಶೇಷಾಖಂಡಾದ್ವಯಚಿನ್ಮಾತ್ರ ಪರತತ್ತ್ವಪ್ರತಿಪಾದಕರೆಂಬ ಸರ್ವಜಗತ್ಪ್ರಸಿದ್ಧವಾದ ಇವರ ಅಸಾಧಾರಣಮಹತ್ವವೂ ಇವರಿಗೆ ತಿಳಿಯದಿರುವುದು ಆಶ್ಚರ್ಯವೇ ಸರಿ!

ಶ್ರೌತಯಾಗಕರ್ಮಗಳಲ್ಲಿ ಋಗ್ಯಜುಃಸಾಮಾಥರ್ವವೇದಿಗಳು ಕ್ರಮವಾಗಿ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರದಿಕ್ಕುಗಳಲ್ಲಿ ಇದ್ದು ಕಾರ್ಯಕರ್ತೃಗಳಾಗುವರು. ಕರ್ಮಭೂಮಿಯಾಗಿರುವ ಭರತಖಂಡದಲ್ಲಿ ಶ್ರೀಭಗವತ್ಪಾದರು ಇದರಂತೆಯೇ ಪೂರ್ವದಿಕ್ಕಿನ ಜಗನ್ನಾಥಕ್ಷೇತ್ರದ ಗೋವರ್ಧನಪೀಠದಲ್ಲಿ ಋಕ್ಶಾಖಿಗಳಾದ ಶ್ರೀಹಸ್ತಾಮಲಕಾಚಾರ್ಯರನ್ನೂ, ದಕ್ಷಿಣದ ಶ್ರೀಶೃಂಗಗಿರಿಕ್ಷೇತ್ರದ ಶ್ರೀಶಾರದಾಪೀಠದಲ್ಲಿ ಯಜುಃಶಾಖಿಗಳಾದ ಶ್ರೀಸುರೇಶ್ವರಾಚಾರ್ಯರನ್ನೂ, ಪಶ್ಚಿಮದ ಶ್ರೀದ್ವಾರಕಾಪೀಠದಲ್ಲಿ ಸಾಮಶಾಖೀಯ ಶ್ರೀಪದ್ಮಪಾದಾಚಾರ್ಯರನ್ನೂ, ಉತ್ತರದ ಬದರಿಕಾಶ್ರಮದಲ್ಲಿ ಅಥರ್ವಶಾಖೆಯವರಾದ ಶ್ರೀತೋಟಾಚಾರ್ಯರನ್ನೂ ಪ್ರಥಮಾಚಾರ್ಯರುಗಳನ್ನಾಗಿ ಪಟ್ಟಗಟ್ಟಿ ಸದ್ಗುರುಸಂಪ್ರದಾಯವನ್ನು ಪ್ರವರ್ತಿಸಿರುತ್ತಾರೆ.

ಯಾಗಾದಿಗಳಲ್ಲಿ ಪ್ರಧಾನಕರ್ಮವಾಗಿರುವ ಹವಿಃಪ್ರದಾನವು ಪ್ರಮುಖವಾಗಿದ್ದು ಇದು ಯಜುರ್ಮಂತ್ರದಿಂದಲೇ ಆಗುತ್ತ ಯಜುರ್ವೇದವೇ ಇತರ ವೇದಗಳಿಗಿಂತ ಪ್ರಧಾ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದುದೆಂದು ಶ್ರೀಮತ್ಸಾಯಣಾಚಾರ್ಯರು ಪ್ರತಿಪಾದಿಸಿರುತ್ತಾರೆ. ಇದರಂತೆ ಯಜುಃ ಪ್ರಧಾನವಾದ ಶ್ರೀಶೃಂಗಗಿರಿಶ್ರೀಶಾರದಾಜಗದ್ಗುರುಪೀಠವೇ ಈ ನಾಲ್ಕು ಮಠಗಳಲ್ಲಿ ಪ್ರಥಮವೂ ಪ್ರಧಾನವೂ ಆಗಿ ಶೋಭಿಸುತ್ತಿದೆ. ಶ್ರೀಭಗವತ್ಪಾದರವರ ಪರಮಾನುಗ್ರಹದ ಬಲದಿಂದ ಶ್ರೀಶೃಂಗಗಿರಿಪೀಠದಲ್ಲಿ ಅವಿಚ್ಛಿನ್ನವಾದ ಸತ್ಸಂಪ್ರದಾಯದ ಆಚಾರ್ಯ ಪರಂಪರೆಯು ಶ್ರೀಸುರೇಶ್ವರಾಚಾರ್ಯರಿಂದ ಆರಂಭವಾಗಿ ಇವತ್ತಿನವರೆಗೂ ನಡೆದುಬರುತ್ತಿರುವುದು. ಶ್ರೀಸುರೇಶ್ವರಾಚಾರ್ಯರ ಸಮಾಧಿಯು ಶ್ರೀಶೃಂಗಗಿರಿಯಲ್ಲಿ ವಿರಾಜಮಾನವಾಗಿರುತ್ತದೆ. "ಶಾಸ್ತ್ರನಿಯಮಬದ್ಧವಾಗಿ ನಡೆಯುವುದು ಎಲ್ಲರಿಗೂ ಶ್ರೇಯಸ್ಕರವಾಗಿರುತ್ತ ಇದು ಸಾಧ್ಯವೂ ಆಗಿದೆಯೆಂಬುವನ್ನು ಆದರ್ಶಪ್ರಾಯವಾಗಿ ತೋರಿಸಿಕೊಡುವುದು ಈ ಪರಂಪರೆಯ ಪ್ರವರ್ತನೆಯ ಪರಮಪ್ರಯೋಜನವಾಗಿರುತ್ತದೆ.

ತಮ್ಮ ಜನ್ಮಸ್ಥಳವಾದ ಕಾಲಟಿಯನ್ನು ಬಿಟ್ಟು ಶ್ರೀಶೃಂಗಗಿರಿಯಲ್ಲಿ ಪ್ರಧಾನವಾದ ಆಮ್ನಾಯ ಪೀಠವನ್ನು ಸ್ಥಾಪಿಸಿ, ಅಲ್ಲಿ ಯಾವ ಈತಿಬಾಧೆಗಳೂ ಬರದಂತೆ ರಕ್ಷಣೆಗಾಗಿ ಪೂರ್ವದಲ್ಲಿ ಶ್ರೀಕಾಲಭೈರವ, ದಕ್ಷಿಣದಲ್ಲಿ ಶ್ರೀದುರ್ಗಾದೇವಿ, ಪಶ್ಚಿಮದಲ್ಲಿ ಶ್ರೀಆಂಜನೇಯ ಉತ್ತರದಲ್ಲಿ ಶ್ರೀಕಾಳಿಕಾದೇವಿ–ಈ ದೇವತೆಗಳನ್ನು ಶ್ರೀಭಗವತ್ಪಾದರೇ ಸ್ಥಾಪಿಸಿದ್ದಾರೆ. ಇದರಿಂದ ಇವರಿಗೆ ಇದರಲ್ಲಿಯೇ ವಿಶೇಷಾದರವಿರುವುದು ತಿಳಿದುಬರುವುದು.

ಶ್ರೀಭಗವತ್ಪಾದರು ಕೃಷ್ಣಯಜುಃಶಾಖಿಗಳಾಗಿದ್ದು ಅವರೇ ಶ್ರೀಶೃಂಗಗಿರಿಪೀಠವನ್ನು ಅಲಂಕರಿಸಬೇಕಾಗಿತ್ತು. ಇದಕ್ಕೆ ಬದಲಾಗಿ ಶುಕ್ಲಯಜುಃಶಾಖಿಗಳಾದ ಶ್ರೀಸುರೇಶ್ವರರನ್ನು ಈ ಪೀಠಕ್ಕೆ ಅಧಿಪತಿಗಳನ್ನಾಗಿ ನಿಯಮಿಸಿದ್ದುದನ್ನು ಪರಿಶೀಲಿಸಿದರೆ, ಅವರು ಯಾವಪೀಠವನ್ನೂ ಅಲಂಕರಿಸಲಿಲ್ಲವೆಂದು ತಿಳಿದುಬರುವುದು.

೧೮. ಮಾತೃಸೇವಾ ।

> ಅಧಿಗಮ್ಯ ತದಾತ್ಮಯೋಗಶಕ್ತೇರನುಭಾವೇನ ನಿವೇದ್ಯ ಚಾಶ್ರವೇಭ್ಯಃ ।
> ಅನಲಂಬಿತತಾರಕಾಪಥೋಽಸಾವಚಿರಾದಂತಿಕಮಾಸಸಾದ ಮಾತುಃ
> ॥೧೨೩॥

ಶ್ರೀಭಗವತ್ಪಾದರು ಶೃಂಗಗಿರಿಯಲ್ಲಿ ವೇದಾಂತಪ್ರವಚನಮಾಡುತ್ತ ಹನ್ನೆರಡು ವರ್ಷಗಳಕಾಲ ವಾಸಮಾಡಿದರು. ಈ ಸಮಯದಲ್ಲಿಯೇ ಅವರು ಅನೇಕಪ್ರಕರಣಾದಿ–ಗ್ರಂಥಗಳ ರಚನೆಯನ್ನು ಮಾಡಿದ್ದಲ್ಲದೆ, ತಮ್ಮ ಶಿಷ್ಯರುಗಳಿಂದಲೂ ಮಾಡಿಸಿದರು. ನಿಷ್ಕಲ್ಮಷಬುದ್ಧಿಯಿಂದ ತಮ್ಮ ಸೇವೆಮಾಡುತ್ತಿದ್ದ, ಮಂದಬುದ್ಧಿಯ ಗಿರಿಯೆಂಬ ಶಿಷ್ಯನಿಗೆ ದಿವ್ಯಜ್ಞಾನವನ್ನು ಅನುಗ್ರಹಿಸಿ, ತಮ್ಮ ಮುಖ್ಯಶಿಷ್ಯರಲ್ಲಿ ಒಬ್ಬರನ್ನಾಗಿ ಶ್ರೀತೋಟಕಾಚಾರ್ಯರನ್ನಾಗಿ ಬೆಳಗಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸಂದರ್ಭದಲ್ಲಿ ತಮ್ಮ ಮಾತೃಶ್ರೀಯವರ ಅಂತ್ಯಕಾಲವುಸಮೀಪಿಸಿದುದು ದಿವ್ಯ ದೃಷ್ಟಿಯು ಅವರಿಗೆ ಗೋಚರಿಸಿತು. ಅವರಿಗೆ ಮಾತುಕೊಟ್ಟಿದ್ದಂತೆ, ಅವರ ಅಂತ್ಯ-ಸಂಸ್ಕಾರಕಾರ್ಯವನ್ನು ನಿರ್ವಹಿಸುವುದಕ್ಕಾಗಿ, ಈ ವಿಷಯವನ್ನು ಶಿಷ್ಯರಿಗೆ ತಿಳಿಯ ಪಡಿಸಿ, ಕೂಡಲೆ ಯೋಗಶಕ್ತಿಯಿಂದ ಆಕಾಶಮಾರ್ಗವಾಗಿ ಮಾತೃಶ್ರೀಯವರ ಸಮೀ-ಪಕ್ಕೆ ಧಾವಿಸಿಬಂದರು.

ತತ್ರಾತುರಾಂ ಮಾತರಮೈಕ್ಷತಾಸೌ ನನಾಮ ತಸ್ಯಾಶ್ಚರಣೌ ಕೃತಾತ್ಮಾ।
ಸಾ ಚೈನಮುದ್ವೀಕ್ಷ್ಯ ಶರೀರತಾಪಂ ಜಹೌ ನಿದಾಘಾರ್ತ ಇವಾಂಬುದೇನ ॥೧೨೪॥

ಮರಣೋನ್ಮುಖರಾಗಿದ್ದ ಮಾತೃಶ್ರೀಯವರನ್ನು ಕಂಡು, ಅವರ ಚರಣಕಮಲ-ಗಳನ್ನು ನಮಸ್ಕರಿಸಿದರು. ಶ್ರೀಭಗವತ್ಪಾದರನ್ನು ನೋಡಿದಮಾತ್ರದಿಂದಲೇ ಶ್ರೀ-ಆರ್ಯಾಂಬೆಯವರ ತಾಪವೆಲ್ಲ, ಬೇಸಿಗೆಯ ತಾಪವು ಮೇಘದಿಂದ ಹೇಗೋ ಹಾಗೆ, ನೀಗಿತು.

ಗುರುಶ್ಚ ತಸ್ಯೈ ಸುಖರೂಪಮೇಕಂ ಮಾಯಾಮಯಾಶೇಷ ವಿಶೇಷ-ಹೀನಂ ।
ಮಾನಾತಿಗಂ ಸ್ವಪ್ರಭಮದ್ವಿತೀಯಮುಪಾದಿಶದ್ಬ್ರಹ್ಮ ಪರಂ ಪ್ರತೀಚಂ ॥೧೨೫॥

ಶ್ರೀಭಗವತ್ಪಾದರು ಮಾತೃಶ್ರೀಯವರಿಗೆ, ಮಾಯಾಮಯಸರ್ವವಿಶೇಷರಹಿತವೂ, ಯಾವಪ್ರಮಾಣಕ್ಕೂ ಗೋಚರವಾಗದೆ ಸರ್ವಸಾಕ್ಷಿಯಾಗಿ ಪ್ರತ್ಯಗಾತ್ಮರೂಪವೂ, ಅದ್ವಿತೀಯಾನಂದರೂಪವೂ, ಸ್ವಪ್ರಕಾಶವೂ ಆಗಿರುವ ಪಾರಮಾರ್ಥಿಕಬ್ರಹ್ಮತತ್ತ್ವವನ್ನು ಉಪದೇಶಿಸಿದರು.

ಶಾಸ್ತ್ರಸಂಸ್ಕಾರವಿಲ್ಲದಿದ್ದ ಅವರಿಗೆ ನಿರ್ವಿಶೇಷತತ್ತ್ವವು ಬುದ್ಧಿಗೆ ಗೋಚರವಾಗ-ದೆಲ್ಲವಾಗಿ, ಅನಂತರ ರಮ್ಯವಾದ ಸಗುಣಶ್ರೀಮಹಾವಿಷ್ಣುಸ್ವರೂಪವನ್ನು ವರ್ಣಿಸಿ ಬೋಧಿಸಿದರು. ಆಗ–

ತತ್ತಾದೃಶಂ ನಿಜಸುತೋದಿತಮಂಜುಜಾಕ್ಷಂ ಚಿತ್ತೇ ದಧಾರ ಮೃತಿಕಾಲ ಉಪಾಗತೇ ಸಾ ।
ತತ್ಯಾಜ ದೇಹಮಬಲಂ ಚ ಸುಖೇನ ಪಶ್ಚಾದ್ವೈಕುಂಠಲೋಕಮಮಲಂ ಚ ಜಿಗಾಯ ನಿತ್ಯಂ ॥೧೨೬॥

ಅಂಥ ಪರಮಾನಂದಕರವಾಗಿದ್ದ ಶ್ರೀಮಹಾವಿಷ್ಣುವಿನ ದಿವ್ಯರೂಪವನ್ನೇ ಪೃಥ-ಕ್ಕಾಗಿ ಧ್ಯಾನಿಸುತ್ತ, ಜೀರ್ಣವಾಗಿದ್ದ ದೇಹವನ್ನು ತ್ಯಜಿಸಿ, ನಿರ್ಮಲವಾದ ವೈಕುಂಠ-

Sri Vidyabharathi Book Centre, Sringeri

CC-O. In Public Domain. Digitized by eGangotri

ಲೋಕವನ್ನು ಜಯಿಸಿ ಕೃತಾರ್ಥರಾದರು. ಈ ರೀತಿಯಾಗಿ ಶ್ರೀಭಗವತ್ಪಾದರು ತಮ್ಮ ಮಾತೃಶ್ರೀಯವರಿಗೆ ಸದ್ಗತಿಯನ್ನು ಹೊಂದಿಸಿಕೊಟ್ಟು ಕೃತಾರ್ಥರಾದರು.

[ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಂ। ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತ ।"–ಎಂಬ ಶ್ರೀಗೀತಾವಚನದಂತೆ ಮರಣಕಾಲದಲ್ಲಿ ಲಭಿಸುವ ಭಾವನೆಯಂತೆ ಮುಂದಿನ ಫಲವು ಲಭಿಸುವುದು. ಶ್ರೀ-ಆರ್ಯಾಂಬೆಯವರು ಶ್ರೀಮಹಾವಿಷ್ಣುವಿನ ಸ್ವರೂಪವನ್ನು ಧ್ಯಾನಿಸುತ್ತ ದೇಹತ್ಯಾಗ ಮಾಡಿ ಶ್ರೀವಿಷ್ಣುಸಾಯುಜ್ಯವನ್ನೇ ಪಡೆದರು.]

ಸ್ವಯಮೇವ ಚಿಕೀರ್ಷುರಾತ್ಮಮಾತುಶ್ಚರಮಂ ಕರ್ಮ ಸಮಾಜುಹಾವ ಬಂಧೂನ್ ।
ವಿಮುಖಾಂಸ್ತು ತದಾ ವಿಲೋಕ್ಯ ಸರ್ವಾನ್ ಕೃತವಾಂಸ್ತತ್ಸಕಲಂ ಸ್ವಯೋಗಶಕ್ತ್ಯಾ ॥೧೨೭॥

ಸನ್ನ್ಯಾಸಸ್ವೀಕಾರಕ್ಕಾಗಿ ತಮ್ಮ ಮನೆಯಿಂದ ಹೊರಟುಬಂದಾಗ ಅದರ ಅಂತ್ಯ-ಕರ್ಮವನ್ನು ತಾವೇ ಮಾಡುವುದಾಗಿ ಮಾತೃಶ್ರೀಯವರಿಗೆ ಮಾತುಕೊಟ್ಟದ್ದಂತೆ, ಅದನ್ನು ನೆರವೇರಿಸಲು ಉದ್ಯುಕ್ತರಾಗಿ, ತಮ್ಮ ಬಂಧುಜನರನ್ನು ಸಹಾಯಕ್ಕಾಗಿ ಕರೆ-ದರು. ಆದರೆ, ಅವರು ಆಗ ಸಹಕರಿಸದೆ ವಿಮುಖರಾಗಲಾಗಿ, ತಮ್ಮ ಯೋಗಶಕ್ತಿಯಿಂದ ತಾವೇ ಸರ್ವವನ್ನೂ ನೆರವೇರಿಸಿದರು.

ನ ಯಾಚಿತಾ ವಹ್ನಿಮದುರ್ಯದಾಸ್ಮೈ ಶಶಾಪ ತಾನ್ ಸ್ವೀಯಜನಾನ್ ಸರೋಷಂ ।
ತತಃ ಪರಂ ವೇದಬಹಿಷ್ಕೃತಾಸ್ತೇ ಮಹದ್ವಿರೋಧೋ ಸುಮಹಾ-ನನರ್ಥಃ ॥೧೨೮॥

ಬಂಧುಗಳು ಯಾರೂ, ಕೇಳಿದರೂ, ಅಗ್ನಿಯನ್ನು ಸಹ ಕೊಡದೆಹೋದುದರಿಂದ ಶ್ರೀಭಗವತ್ಪಾದರು ಕೋಪದಿಂದ, ವೈದಿಕಧರ್ಮದಿಂದ ಬಹಿಷ್ಕೃತರಾಗಿರೆಂದು ಅವರನ್ನು ಶಪಿಸಿದರು. ಮಹಾತ್ಮರೊಡನೆ ವಿರೋಧಮಾಡಿಕೊಳ್ಳುವುದು ಮಹತ್ತಾದ ಅನರ್ಥವೇ ಸರಿ.

ಶಾಂತಃ ಪುಮಾನಿತಿ ನ ಪೀಡನಮಸ್ಯ ಕಾರ್ಯಂ ಶಾಂತಾಚ್ಚ ಪೀಡನ-ವಶಾದ್ಭವತೀಹ ಹಾನಿಃ ।
ಶೀತಃ ಸುಖೋಽಪಿ ಮಥಿತಃ ಕಿಲ ಚಂದನದ್ರುರ್ಜ್ವಾಲಾಜಟಾಲಮನಲಂ ಜನಯೇತ್ಕ್ಷಣೇನ ॥೧೨೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಂತಸ್ವಭಾವದವರಾದಮಾತ್ರಕ್ಕೆ ಮಹಾತ್ಮರಿಗೆ ಅಹಿತವನ್ನು ಉಂಟುಮಾಡ-ಲಾಗದು; ಸ್ವತಃ ಶಾಂತಸ್ವಭಾವದವರಾಗಿದ್ದರೂ, ಅವರಿಗೆ ಮಾಡುವ ಅಹಿತಕಾರ್ಯವೇ ನಮಗೆ ಹಾನಿಕರವಾಗುವುದು. ಶೀತಲವೂ ಸುಗಂಧಮಯವೂ ಆಗಿರುವುದಾದರೂ, ಶ್ರೀಗಂಧದಮರವು, ಅತಿಯಾಗಿ ಮಥನಮಾಡಿದರೆ ತೀಕ್ಷ್ಣವಾದ ಅಗ್ನಿಯನ್ನು ಉಂಟು-ಮಾಡಿ ದಾಹಕವಾಗುವುದು.

[ದೇವಾಲಯಗಳಲ್ಲಿ ಪ್ರತಿಷ್ಠಿತಗಳಾಗಿರುವ ಆಯಾದೇವತೆಗಳಿಗೆ ಅಪಚಾರವನ್ನೆ-ಸಗಿದರೆ, ಈ ಅಪಚಾರವೇ ಅಂಥವರಿಗೆ ಹಾನಿಕರವಾಗುವುದೇ ಹೊರತು, ಆ ದೇವತೆಗಳೇ ಬಂದು ಹಾನಿಯನ್ನುಂಟುಮಾಡುವುದಿಲ್ಲ–ಇದನ್ನೇ ಆ ದೇವತೆಯಿಂದ ಆದುದೆಂದು ಹೇಳುವಂತೆ, ಶ್ರೀಭಗವತ್ಪಾದರಿಗೆ ಮಾಡಿದ ವಿರೋಧವೇ ಅವರ ಬಂಧುಗಳಿಗೆ ಅಹಿತ-ಕರವಾಯಿತು–ಇದನ್ನೇ ಶ್ರೀಭಗವತ್ಪಾದರ ಶಾಪವೆಂದು ಹೇಳಿರುತ್ತದೆಂದು ತಿಳಿಯ-ಬೇಕು–ಉಪಶಾಂತಸ್ವಭಾವದ ಅವರಿಗೆ ಕೋಪತಾಪಗಳ ಪ್ರಸಕ್ತಿಯೆಲ್ಲಿ?]

೧೯. ಕಾಶ್ಮೀರದಲ್ಲಿ ಸರ್ವಜ್ಞಪೀಠಾರೋಹಣಂ ।

ಕಾಶ್ಮೀರದೇಶಸ್ಥಮಥೋಪಶ್ರುತ್ಯ ಸರ್ವಜ್ಞಪೀಠಮುದಾಕ್ಷಿಣಾತ್ಯೈಃ ।
ಅಧ್ಯಾಸಿತಂ ನೈವ ತು ದಾಕ್ಷಿಣಾತ್ಯೈರಿಯೇಷ ತದ್ದುರ್ಯಶಮಾರ್ಜ-
ನಾಯ ॥೧೩೦॥

ಶ್ರೀಭಗವತ್ಪಾದರು ಮಾತೃಕಾರ್ಯವನ್ನು ನಿರ್ವಹಿಸಿ, ಶಿಷ್ಯಪರಿವಾರಸಮಾವೃತ-ರಾಗಿ ಮತ್ತೆ ವೈದಿಕಸನ್ಮಾರ್ಗಪ್ರಚಾರಕ್ಕಾಗಿ ಹೊರಟರು. ಅಷ್ಟರಲ್ಲಿ ಕಾಶ್ಮೀರದೇಶದ ವೃತ್ತಾಂತವು ಅವರಿಗೆ ತಿಳಿದುಬಂದಿತು. "ಕಾಶ್ಮೀರದಲ್ಲಿ ಸರ್ವಜ್ಞಪೀಠವಿರುವುದೆಂದೂ, ಅದರ ಮಂದಿರಕ್ಕೆ ನಾಲ್ಕುದಿಕ್ಕುಗಳಿಗಭಿಮುಖವಾಗಿ ನಾಲ್ಕುದ್ವಾರಗಳಿರುವುದೆಂದೂ, ಅದನ್ನು ಪ್ರವೇಶಿಸಲು, ಅಲ್ಲಿರುವ ಸಕಲಶಾಸ್ತ್ರಪರಿಣತರಾದ ವಿದ್ವಾಂಸರುಗಳನ್ನು ವಾದದಲ್ಲಿ ಜಯಿಸುವವರೇ ಸಮರ್ಥರೆಂದೂ, ಇತರ ದಿಕ್ಕಿನ ವಿದ್ವಾಂಸರುಗಳು ಹೀಗೆ ಜಯಶೀಲರಾಗಿದ್ದರೂ, ದಕ್ಷಿಣದಿಕ್ಕಿನವರು ಇದುವರೆವಿಗೂ ಇಂಥ ವಿದ್ವಾಂಸರು ಯಾರೂ ಬರದೇ ಇರುವುದರಿಂದ, ದಕ್ಷಿಣದ್ವಾರವು ತೆರೆದೇ ಇಲ್ಲವೆಂದೂ"–ಈ ವಿಷಯವು ಶ್ರೀಭಗವತ್ಪಾದರಿಗೆ ಕೇಳಿಬಂತು. ದಕ್ಷಿಣದೇಶದವರಿಗೆ ಪ್ರಾಪ್ತವಾಗಿರುವ ಈ ಅಪಯಶ-ಸ್ಸನ್ನು ಪರಿಹರಿಸಬೇಕೆಂದು ಬಯಸಿ, ಶ್ರೀಭಗವತ್ಪಾದರು ಕಾಶ್ಮೀರದೇಶವನ್ನು ಕುರಿತು ಶಿಷ್ಯಸಮೇತರಾಗಿ ಹೊರಟರು.

[ಪ್ರತಿಭಟಿಸಿನಿಂತಿರುವ ಎಲ್ಲ ವಾದಿಗಳನ್ನೂ ಜಯಿಸಲು ಇದೊಂದು ಸದವಕಾಶ-ವೆಂಬುದೇ ಅವರ ಪರಮಾಶಯವೇ ಹೊರತು, ನಿರಭಿಮಾನಿಗಳಾಗಿದ್ದ ಅವರಿಗೆ ತಾವು ಸರ್ವಜ್ಞರೆನಿಸಿಕೊಳ್ಳಬೇಕೆಂಬ ಚಾಪಲ್ಯವೇನೂ ಇರಲಿಲ್ಲ.]

Sri Vidyabharathi Book Centre, Sringeri

CC-O. In Public Domain. Digitized by eGangotri

ನೀತ್ವಾ ನಿರುತ್ತರಪದಂ ಸ ತು ವಾದಿಸಂಘಂ ಸರ್ವಜ್ಞಪೀಠಮಧಿರುಹ್ಯ
ನನಂದ ಸಭ್ಯೈಃ ।
ಸಮ್ಮಾನಿತೋಽಭವದಸೌ ವಿಬುಧೈಶ್ಚ ಸರ್ವೈರಾನಂದಮಂಥರತರೈಶ್ಚ
ನಿಜಾಂತರಂಗೈಃ ॥೧೩೧॥

ದಕ್ಷಿಣದ್ವಾರದಿಂದ ಆ ಸರ್ವಜ್ಞಪೀಠಮಂದಿರವನ್ನು ಪ್ರವೇಶಿಸಲು ಶ್ರೀಭಗವತ್ಪಾದರು ಬರಲು, ಎಲ್ಲ ಮತಗಳ ವಿದ್ವಾಂಸರುಗಳೂ ಸಹ ಅವರನ್ನು ತಡೆದು–ತಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಹೇಳದೆ ಅದನ್ನು ಪ್ರವೇಶಿಸಲಾಗದೆಂದು”– ಪ್ರತಿಭಟಿಸಿದರು. ಶ್ರೀ ಭಗವತ್ಪಾದರು ಅವರ ಪ್ರಶ್ನೆಗಳಿಗೆಲ್ಲ ಸಮಂಜಸಗಳಾದ ಪ್ರಮಾಣಿಕಸಮಾಧಾನಗಳನ್ನು ಹೇಳಿದ್ದಲ್ಲದೆ, ವೈದಿಕಪ್ರತ್ಯಗಭಿನ್ನಾದ್ವಿತೀಯಬ್ರಹ್ಮಾತ್ಮತತ್ವಸಿದ್ಧಾಂತವನ್ನು ಅವರ ಆಕ್ಷೇಪಗಳನ್ನೆಲ್ಲ ಪರಿಹರಿಸಿ ಪ್ರತಿಪಾದಿಸಿದರು. ಮತ್ತು ಅವೈದಿಕಕರ್ಮಗಳಲ್ಲಿ ನ ದೋಷಗಳನ್ನು ಎತ್ತಿತೋರಿಸಲಾಗಿ, ಅವರುಗಳು ಅದನ್ನು ಪರಿಹರಿಸಿಕೊಳ್ಳಲಾರದೆ ಮೂಕತ್ವವನ್ನನುಭವಿಸಿದರು. ಆಗ ಅವರೆಲ್ಲರಿಂದಲೂ ಸರ್ವಜ್ಞಮೂರ್ತಿಗಳೆಂದು ಶ್ಲಾಘಿತರಾಗಿ, ಸರ್ವಜ್ಞಪೀಠವನ್ನಲಂಕರಿಸಿದರು. ಅಲ್ಲಿ ನೆರೆದಿದ್ದ ವಿದ್ವಾಂಸರೆಲ್ಲರೂ ಶ್ರೀಭಗವತ್ಪಾದಾಚಾರ್ಯವರ್ಯರ ಸರ್ವಜ್ಞಪೀಠಾಲಂಕರಣಮಹೋತ್ಸವವನ್ನು ನಡೆಯಿಸಿದರು.

[ಶ್ರೀ ಭಗವತ್ಪಾದರು ಸರ್ವಜ್ಞಪೀಠವನ್ನಲಂಕರಿಸಲು ಬಂದಾಗ ಶ್ರೀಶಾರದಾದೇವಿಯು ಪ್ರತ್ಯಕ್ಷಳಾಗಿ ಬಂದು– “ಸರ್ವಜ್ಞತೆಮಾತ್ರವೇ ಈ ಪೀಠವನ್ನು ಏರಲು ಕಾರಣವಲ್ಲ; ಶುದ್ಧತೆಯೂ ಇರಬೇಕು; ನೀನು ಅಮರುಕರಾಜನ ರಾಣಿಯವರ ಸಂಪರ್ಕವನ್ನು ಹೊಂದಿರುತ್ತ ಶುದ್ಧನಲ್ಲ”– ಎಂದು ಆಕ್ಷೇಪಿಸಿ ತಡೆದಳು. ಆಗ ಶ್ರೀಭಗವತ್ಪಾದರು– ‘ದೇಹಾಂತರದ ಸಂಬಂಧವು ದೇಹಾಂತರಕ್ಕೆ ಇರುವುದಿಲ್ಲ; ನನ್ನ ದೇಹದಲ್ಲಿ ಯಾವ ಅಶುದ್ಧಿಗೂ ಪ್ರಸಕ್ತಿಯಿಲ್ಲ’– ಎಂದು ಹೇಳಲು ಶ್ರೀಶಾರದಾದೇವಿಯು, ಸಮಾಧಾನಹೊಂದಿ, ಸರ್ವಜ್ಞಪೀಠಾರೋಹಣವನ್ನು ಅನುಮೋದಿಸಿದಳು. ಈ ತತ್ತ್ವವನ್ನು ತಿಳಿಸುವುದು ಈ ಪ್ರಕರಣದಉದ್ದೇಶವು.]

೨೦. ಅವತಾರಕಾರ್ಯಪರಿಸಮಾಪ್ತಿಃ; ಕೈಲಾಸಪ್ರತಿನಿವರ್ತನಂ ।

ಭಾಷ್ಯಂ ಭೂಷ್ಯಂ ಸುಶೀತ್ಯೈಕಕಲಿ ಕಲಿಮಲಧ್ವಂಸಿ ಕೈವಲ್ಯಮೂಲ್ಯಂ
ಹಂತಾಹಂತಾ ಸಮಂತಾತ್ಕುಮತಿಮತಿಕೃತಾ ಖಂಡಿತಾ ಪಂಡಿ–
ತಾನಾಂ ।
ಸದ್ಯೋ ವಿದ್ಯೋತಿತಾಸೌ ವಿಪಥನಿಮಥನೈರ್ಮುಕ್ತಿಪದ್ಯಾನವದ್ಯಾ
ಶ್ರೇಯೋ ಭೂಯೋ ಬುಧಾನಾಮಧಿಕತರಮಿತಃ ಶಂಕರಃ ಕಿಂ
ಕರೋತು! ॥೧೩೨॥

Sri Vidyabharathi Book Centre, Sringeri

CC-O. In Public Domain. Digitized by eGangotri

೧. ಸಕಲ ದೋಷಗಳನ್ನು ಪರಿಹರಿಸಿ, ಕೈವಲ್ಯವನ್ನು ದೊರಕಿಸುವ ಮುಖ್ಯ-ವಾದ ಅಮೋಘವೂ, ಅಮೂಲ್ಯವೂ ಆಗಿ, ಸಕಲಸತ್ಪುರುಷರಿಂದಲೂ, ಶ್ಲಾಘಿಸಲ್ಪಡು-ವಂಥ ಪ್ರಸ್ಥಾನತ್ರಯಭಾಷ್ಯಾದಿಗ್ರಂಥಸಂದೋಹವು ರಚಿಸಿಕೊಡಲ್ಪಟ್ಟಿದೆ;

೨ ದುರ್ಮತಿಗಳಾದ ಎಲ್ಲ ಪಂಡಿತರುಗಳ ದುರಹಂಕಾರವು ಎಲ್ಲೆಡೆಯಲ್ಲಿಯೂ ನಾಶಮಾಡಲ್ಪಟ್ಟಿದೆ.

೩. ಅಪ್ರಾಮಾಣಿಕಮತಗಳನ್ನೆಲ್ಲ ನಿರಾಕರಿಸಿ, ನಿರ್ದುಷ್ಟವಾದ ವೈದಿಕಮುಕ್ತಿ ಮಾರ್ಗವು ವಿಶದಮಾಡಲ್ಪಟ್ಟಿದೆ;

೪. ಶ್ರೀಶಂಕರಭಗವತ್ಪೂಜ್ಯಪಾದರವರು ಶ್ರೇಯಸ್ಸ್ವಾಮಿಗಳಾದ ಸನ್ಮತಿಗಳಿಗೆ ಇನ್ನು ಯಾವ ಶ್ರೇಯಸ್ಸನ್ನು ತಾನೆ ಮಾಡುವುದಿದೆ?

ಇತಿಕೃತಸುರಕಾರ್ಯಂ ನೇತುಮಾಜಗ್ಮುರೇನಂ ರಜತಶಿಖರಶೃಂಗಂ
ತುಂಗಮೀಶಾವತಾರಂ ।
ವಿಧಿಶತಮುಖಚಂದ್ರೋಪೇಂದ್ರವಾಯ್ವಗ್ನಿಪೂರ್ವಾಃ ಸುರನಿಕರ-
ಪರೇಣ್ಯಾ ಸರ್ಷಿಸಂಘಾಃ ಸಸಿದ್ಧಾಃ ॥೧೩॥

ವೈದಿಕಸನಾತನವರ್ಣಾಶ್ರಮಧರ್ಮೋದ್ಧಾರರೂಪವಾದ ದೇವತಾಕಾರ್ಯವನ್ನು ಈ ಪ್ರಕಾರವಾಗಿ ಪೂರ್ಣವಾಗಿ ನೆರವೇರಿಸಿ, ಶ್ರೀಭಗವತ್ಪಾದರು ಹಿಮವತ್ಕೇದಾರಕ್ಕೆ ಬಂದರು. ಆ ಕೂಡಲೆ ಎಲ್ಲ ಮಹರ್ಷಿಗಳೂ ಸಿದ್ಧರೂ—ಮುಂತಾದವರೊಡನೆ ಸಕಲ ದೇವತಾಗಣಗಳೂ ಶ್ರೀಭಗವತ್ಪಾದರನ್ನು ಶ್ರೀಕೈಲಾಸಕ್ಕೆ ಕರೆದುಕೊಂಡುಹೋಗಲು ಎದುರುಗೊಳ್ಳಲು ಬಂದು ಪ್ರಾರ್ಥಿಸಿದರು.

ಭವಾನಾದ್ಯೋ ದೇವಃ ಕಬಲಿತವಿಷಃ ಕಾಮದಹನಃ
ಪುರಾರಾತಿರ್ವಿಶ್ವಪ್ರಭವಲಯಹೇತುಸ್ತ್ರಿನಯನಃ ।
ಯದರ್ಥಂ ಗಾಂ ಪ್ರಾಪ್ತೋ ಭವಮಥನ ವೃತ್ತಂ ತದಧುನಾ
ಸಮಾಯಾಹಿ ಸ್ವರ್ಗಂ ಸಪದಿ ಗಿರಿಶಾಸ್ಮತ್ಪ್ರಿಯಕೃತೇ ॥೧೪॥

"ಹೇ ಮಹಾದೇವ,

೧. ಶ್ರೀಮಹಾವಿಷ್ಣುವಿನ ಆದೇಶದಂತೆ ದೇವಾಸುರರು ಕ್ಷೀರಸಮುದ್ರವನ್ನು ಮಥನಮಾಡಲಾಗಿ, ಅಲ್ಲಿ ಹುಟ್ಟಿಬಂದು ಜಗತ್ಸಂಹಾರಕವಾಗಿದ್ದ ಕಾಲಕೂಟವಿಷವನ್ನು ಪಾನಮಾಡಿ ಜಗತ್ತನ್ನು ರಕ್ಷಿಸಿದ ಮಹಾಮಹಿಮನು ನೀನು;

Sri Vidyabharathi Book Centre, Sringeri

CC-O. In Public Domain. Digitized by eGangotri

೨. "ಸುರಾಸುರನರಾದಿಸಮಸ್ತಜಗತ್ತನ್ನೂ ವಶಮಾಡಿಕೊಂಡು, ಇವರಂತೆ ನಿನ್ನನ್ನೂ ಜಯಿಸಿಯೇನೆಂಬ ದುರಹಂಕಾರದಿಂದ ಬಂದ ಕಾಮನನ್ನು, ಕ್ಷಣಮಾತ್ರದಲ್ಲಿ ದಹಿಸಿದ ಜಿತಕಾಮನು ನೀನು;

೩. "ಜಗತ್ತ್ರಯವನ್ನು ಬಾಧಿಸುತ್ತಿದ್ದ ತ್ರಿಪುರಾಸುರನನ್ನು ಜಗದ್ರಕ್ಷಣೆಗಾಗಿ ಸಂಹರಿಸುವುದಕ್ಕಾಗಿ–ಭೂಮಿಯನ್ನೇ ರಥವನ್ನಾಗಿಯೂ, ಸೂರ್ಯಚಂದ್ರರನ್ನೇ ರಥದ ಚಕ್ರಗಳನ್ನಾಗಿಯೂ, ಜಗತ್ಸ್ರಷ್ಟೃವಾದ ಚತುರ್ಮುಖಬ್ರಹ್ಮನನ್ನೇ ಸಾರಥಿಯನ್ನಾಗಿಯೂ, ನಾಲ್ಕುವೇದಗಳನ್ನೇ ರಥದ ಕುದುರೆಗಳನ್ನಾಗಿಯೂ, ಮೇರುಪರ್ವತವನ್ನೇ ಧನುಸ್ಸನ್ನಾಗಿಯೂ, ವಾಸುಕಿಯನ್ನೇ ಧನುಸ್ಸಿನ ಹದೆಯನ್ನಾಗಿಯೂ, ಶ್ರೀಮಹಾವಿಷ್ಣುವನ್ನೇ ಬಾಣವನ್ನಾಗಿಯೂ ಮಾಡಿಕೊಂಡು, ಅದ್ಭುತಲೀಲೆಯನ್ನು ಪ್ರದರ್ಶಿಸಿದ ಪುರಮಥನನೇ ನೀನು;

೪. "ಸಮಸ್ತಪ್ರಪಂಚದ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣನಾಗಿ ನಿಷ್ಪ್ರಪಂಚಾದ್ವಿತೀಯಸರ್ವಜ್ಞಪರಬ್ರಹ್ಮಸ್ವರೂಪನೇ ನೀನು;

೫. "ಇತರರು ಯಾರಿಂದಲೂ ಪರಿಹರಿಸಲು ಅಶಕ್ಯವಾದ ವಿಪತ್ತು ಒದಗಿದಾಗಲೆಲ್ಲ ಮುಂದೆಬಂದು ಲೋಕವನ್ನು ಸಂರಕ್ಷಿಸುವ ಪರಮಸಮರ್ಥನೂ ಪುರಮಕರುಣಾಳುವೂ ಆದ ದೇವನೇ ನೀನು;

೬. "ಈಗಲೂ ನಾಸ್ತಿಕ್ಯದ ಬಾಯಿಗೆ ತುತ್ತಾಗಿ ಪಾರಗಾಣದೆ ತಲ್ಲಣಿಸುತ್ತಿದ್ದ ಜಗತ್ತನ್ನು, ಸನಾತನವೈದಿಕವರ್ಣಾಶ್ರಮಧರ್ಮರೂಪವಾದ ಸನ್ಮಾರ್ಗವನ್ನು ಲೋಕಕ್ಕೆ ತೋರಿಸಿಕೊಟ್ಟು ಉದ್ಧಾರಮಾಡಿದ್ದೀಯೆ! ನಮಗೋಸ್ಕರವೇ, ಈ ಮಹತ್ಕಾರ್ಯವನ್ನು ನೆರವೇರಿಸುವುದಕ್ಕಾಗಿಯೇ, ಅವತರಿಸಿಬಂದ ಈ ಕಾರ್ಯವು ಪೂರ್ಣವಾಗಿ ನೆರವೇರಿರುತ್ತದೆ. ಆದ್ದರಿಂದ ಈಗ ತಾವು ಕೈಲಾಸಕ್ಕೆ ವಿಜಯಂಗೈದು ನಮ್ಮನ್ನು ಸಂತೋಷಗೊಳಿಸೋಣವಾಗಲಿ"–ಎಂದು ಪ್ರಾರ್ಥಿಸಿಕೊಂಡರು.

[ವೈದಿಕಸನಾತನವರ್ಣಾಶ್ರಮಧರ್ಮಗಳ ನಿಯಮಗಳ ಹಾನಿಯೇ ಲೋಕದ ನೆಮ್ಮದಿಗೆಹಾನಿಕರವೆಂದೂ ವರ್ಣಾಶ್ರಮಧರ್ಮನಿಯಮಗಳ ವ್ಯವಸ್ಥೆಯೇ ಲೋಕಕ್ಷೇಮಕರವೆಂದೂ ಇದರಿಂದ ಸ್ಪಷ್ಟವಾಗಿದೆ. ಪ್ರಕೃತದಲ್ಲಿ ಅಪರಿಹಾರ್ಯವಾಗಿರುವ ಹಲವಾರು ಸಮಸ್ಯೆಗಳಿಂದ ತಲ್ಲಣಿಸುತ್ತಿರುವ ಈಗಿನ ನಾಗರಿಕಪ್ರಪಂಚವು ಈ ಪಾಠವನ್ನು ದೂರದೃಷ್ಟಿಯಿಂದ ಕಲಿತು ನಡೆಯುವುದು ಅವಶ್ಯವು.]

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂದ್ರೋಪೇಂದ್ರಪ್ರಧಾನೈಸ್ತ್ರಿದಶಪರಿವೃಢೈಃ ಸ್ತೂಯಮಾನಃ
ಪ್ರಸೂನೈಃ
ದಿವ್ಯೈರಭ್ಯರ್ಚ್ಯಮಾನಃ ಸರಸಿರುಹಭುವಾ ದತ್ತಹಸ್ತಾವಲಂಬಃ।
ಆರುಹ್ಯೋಕ್ಷಾಣಮಗ್ರ್ಯಂ ಪ್ರಕಟಿತಸುಜಟಾಜೂಟಚಂದ್ರಾವತಂಸಃ
ಶೃಣ್ವನ್ನಾಲೋಕಶಬ್ದಂ ಸಮುದಿತಮೃಷಿಭಿರ್ಧಾಮ ನೈಜಂ
ಪ್ರತಸ್ಥೇ ॥೧೩೫॥

ಇಂದ್ರ, ವಿಷ್ಣು ಮುಂತಾದ ದೇವೋತ್ತಮರು ದಿವ್ಯಕುಸುಮಗಳಿಂದ ಪೂಜಿಸುತ್ತ ಸ್ತುತಿಸುತ್ತಿರಲು; ಶ್ರೀಭಗವತ್ಪಾದರು ಜಟಾಜೂಟದಲ್ಲಿ ಚಂದ್ರಕಲಾಲಂಕೃತವಾದ ತನ್ನ ಸಹಜವಾದ ಶ್ರೀಪರಮೇಶ್ವರನ ರೂಪದಿಂದ ಪ್ರತ್ಯಕ್ಷರಾಗಿ, ಬ್ರಹ್ಮದೇವನ ಹಸ್ತಲಾಘವನ್ನವಲಂಬಿಸಿಕೊಂಡು, ಧರ್ಮಸ್ವರೂಪನಾದ ನಂದಿಯನ್ನೇರಿ, ದೇವರ್ಷಿಗಳ ಪರಾಕುಗಳನ್ನು ಕೇಳುತ್ತ, ಪರಮಾನಂದಮಯವಾದ ಸ್ವಸ್ಥಾನವಾದ ಕೈಲಾಸಕ್ಕೆ ಬಿಜಯಂಗೈದರು!

[ಶ್ರೀಭಗವತ್ಪಾದರು ಕಂಚಿಯಲ್ಲಿ ಸಮಾಧಿಸ್ಥಿತರಾದರೆಂದೂ, ಹಿಮಾಲಯ-ಕೇದಾರದಲ್ಲಿ ಶ್ರೀದತ್ತಾತ್ರೇಯರೊಡನೆ ಗುಹಾಪ್ರವೇಶಮಾಡಿದರೆಂದೂ ಮುಂತಾಗಿ ಪ್ರವಾದಗಳಿವೆ; ಇವೆಲ್ಲ ಅಪ್ರಾಮಾಣಿಕಗಳೆಂದು ಇದರಿಂದ ಸಿದ್ಧವು.]

ನಿರ್ವರ್ತ್ಯೈರ್ವಂ ನಿಖಿಲಜಗತೀಕ್ಷೇಮಕೃತ್ಯಂ ಯಥಾವತ್
ಧರ್ಮಂ ವರ್ಣಾಶ್ರಮನಿಯಮಿತಂ ಶ್ರೌತಮಾಸ್ಥಾಪಯಿತ್ವಾ।
ಕೀರ್ತಿಸ್ತಂಭಾನಿವ ಚ ಸುಮಠಾ ದಿಕ್ಷು ಸಂಸ್ಥಾಪ್ಯ ಶಶ್ವತ್
ನೈಜಂ ಧಾಮ ಪ್ರಪೇದೇ ಸುರನರವಿನುತಃ ಶಂಕರಾರ್ಯೋ
ಮಹೇಶಃ ॥೧೩೬॥

ಶ್ರುತಿಪ್ರಾಮಾಣಿಕವಾಗಿ ಸರ್ವಜಗತ್ಕ್ಷೇಮಕರವಾಗಿರುವ ವೈದಿಕವರ್ಣಾಶ್ರಮ ಧರ್ಮಗಳ ನಿಯಮವನ್ನು ಲೋಕದಲ್ಲಿ ವ್ಯವಸ್ಥೆಗೊಳಿಸಿ; ಇದು ನಿರಂತರವೂ ಪ್ರಪಂಚದಲ್ಲಿ ಪ್ರಚಾರದಲ್ಲಿ ಇರುವಂತೆ ಕರ್ಮಭೂಮಿಯಾಗಿರುವ ಭರತಖಂಡದನಾಲ್ಕು ದಿಕ್ಕುಗಳಲ್ಲಿಯೂ, 'ತಮ್ಮ ಈ ವಿಜಯಯಾತ್ರೆಯ ಕೀರ್ತಿಸ್ತಂಭಗಳೇ'– ಎಂಬಂತೆ ಸದ್ಗುರುಪರಂಪರೆಯ ನಾಲು ಪ್ರಧಾನಮಠಗಳನ್ನು ಪ್ರವರ್ತಿಸಿ, ಶ್ರೀಪರಮೇಶ್ವರನ ಪರಾವತಾರಾದ ಶ್ರೀಮಚ್ಛಂಕರ ಭಗವತ್ಪೂಜ್ಯಪಾದ ಜಗದ್ಗುರುಸಾರ್ವಭೌಮರು ಮತ್ತೆ ಸ್ವಸ್ಥಾನವಾದ ಶ್ರೀಕೈಲಾಸ ಗಿರಿಗೆ ವಿಜಯಗೈದರು!

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಯಂ ಚೈಕೋ ಬಾಲಃ ಪರಿಕಲಿತಕರ್ಮಂದಿಚರಿತಃ
ಪರಿತ್ಯಕ್ತಾನ್ಯಸ್ವಃ ಶ್ರುತಿಶಿಖರವಾಙ್ಮಾತ್ರವಿಭವಃ ।
ಬುಧವ್ರಾತಂ ಜಿಗ್ಯೇ ಭಗವದಭಿಧಾನೋ ಯತಿಪತಿಃ
ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಂ ನೋಪಕರಣೇ ॥೧೩೭॥

ಶ್ರೀ ಭಗವತ್ಪಾದರ ಮಹಿಮೆಯು ಅನಿತರಸಾಧಾರಣವಾದುದು. ಅತ್ಯಂತ ಬಾಲ್ಯದ ಎಂಟನೇ ವಯಸ್ಸಿನಲ್ಲಿಯೇ, ಭಾರತದ ಅತ್ಯಂತದಕ್ಷಿಣಭಾಗದ ಕೇರಳದೇಶದ ಶ್ರೀಕಾಲಟೀಕ್ಷೇತ್ರದಿಂದ ಮನೆಬಿಟ್ಟು ಒಬ್ಬಂಟಿಗರಾಗಿ ಹೊರಟುಬಂದು; ಸರ್ವಸ್ವವನ್ನೂ ಪರಿತ್ಯಜಿಸಿ ಪರಮಹಂಸಪಾರಿವ್ರಾಜ್ಯಾಶ್ರಮವನ್ನು ಸ್ವೀಕರಿಸಿದರು; ವೇದಾಂತವಾಕ್ಯಗಳ ಹೊರತು ಬೇರೆ ಯಾವ ಸಹಾಯಸಂಪತ್ತೂ ಇಲ್ಲದವರಾಗಿದ್ದೂ, ಪ್ರಪಂಚದ ಭೂತ-ಭವಿಷ್ಯದ್ವರ್ತಮಾನಕಾಲದ ಅವೈದಿಕರಾದ ಸಮಸ್ತವಿದ್ವಾಂಸರುಗಳನ್ನೂ ಉಸಿರೆತ್ತಲಾರದಂತೆ ಜಯಿಸಿದ್ದಾರೆ! ಮಹಾತ್ಮರ ವಿಜಯಕಾರ್ಯಸಿದ್ಧಿಯು, ಸಹಜಸಿದ್ಧವೇ ಆಗಿರುವ ಅವರ ಮಹಿಮೆಯಿಂದಲೇ ಆಗುವುದು; ಅದಕ್ಕೆ ಯಾವ ಉಪಕರಣಗಳ ಸಹಾಯದ ಅಪೇಕ್ಷೆಯೂ ಇರುವುದಿಲ್ಲ;

॥ ಜಯ ಶಂಕರಸದ್ಗುರುಭಗವನ್! ॥

ಜಯತು ಜಯತು ನಿತ್ಯಂ ಶಂಕರಾಚಾರ್ಯವರ್ಯೋ
ಜಯತು ಜಯತು ತಸ್ಯಾದ್ವೈತವಿದ್ಯಾನವದ್ಯಾ ।
ಜಯತು ಜಯತು ನಿತ್ಯಂ ತಚ್ಚರಿತಂ ಪವಿತ್ರಂ
ಜಯತು ಜಯತು ಭಕ್ತಿಸ್ತತ್ಪದಾಬ್ಜೇ ಜನಾನಾಂ ॥೧೩೮॥

ಕವಿನಾ ನರಸಿಂಹಶರ್ಮಣಾ ತಚ್ಚರಿತ್ರಂ ಲೋಕಗುರೋಃ ಸುಪಾವನಂ।
ಕಲಿತಂ ಖಲು ಮಾಧವೀಯಕೈರ್ವಚನಾಬ್ಜೈರ್ಗುರುತುಷ್ಟಯೇಽಸ್ತು
ತತ್ ॥೧೩೯॥

ಶ್ರೀಶೃಂಗಗಿರ್ಯಭಿಜನ-ಕವಿವಂಶಾವತಂಸ-ನರಸಿಂಹಶರ್ಮನು ಶ್ರೀಮಾಧವೀಯ-ಸಂಕ್ಷೇಪಶಂಕರವಿಜಯಕಾವ್ಯದ ವಚನಪದ್ಮಗಳಿಂದಲೇ, ಶ್ರೀಮಚ್ಛಂಕರಭಗವತ್ಪಾದ-ಜಗದ್ಗುರುವರ್ಯರ ಪಾದಪದ್ಮಗಳನ್ನು ಅರ್ಚಿಸಿ ಕೃತಾರ್ಥನಾಗಿದ್ದೇನೆ!

॥ ಇತಿ ಸರ್ವಂ ಶುಭಂ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತರ್ಧ್ವಾಂತನಿವಾರಣೈಕತರಣಿಸ್ತಾಪತ್ರಯೋಗ್ರಾನಲ-
ಜ್ವಾಲಾತ್ಯಂತಿಕಶಾಮನೈಕಜಲದೋ ದುಃಖಾಂಬುಧೇರ್ಬಾಡಬಃ।
ಪ್ರಜ್ಞಾನಂದಸುಧಾಂಬುಧೇರುದಯಭಾಗ್ರಾಕಾಸುಧಾದೀಧಿತಿಃ
ನಿತ್ಯಂ ಶಂಕರದೇಶಿಕೇಂದ್ರಯತಿರಾಟ್ ಹೃದ್ವ್ಯೋಮ್ನಿ ವಿದ್ಯೋ-
ತತಾಂ ॥೧೪೦॥

ಶ್ರೀಮಚ್ಛಂಕರಭಗವತ್ಪೂಜ್ಯಪಾದಾಚಾರ್ಯಯತಿಚಂದ್ರರು;

೧. ದುರಂತಸಂಸಾರದುಃಖಕ್ಕೆ ಕಾರಣವಾಗಿ ಹೃದಂತರ್ಗತವಾಗಿ ದುರ್ನಿರೋಧ್ಯ-ಜ್ಞಾನವಾಗಿರುವಗಾಢಾಂಧಕಾರವನ್ನು ನಿವಾರಿಸುವ ಪ್ರಚಂಡಸೂರ್ಯರಾಗಿರುವರು;

೨. ಆಧ್ಯಾತ್ಮಿಕಾಧಿದೈವಿಕಾಧಿಭೌತಿಕಗಳೆಂಬ ತಾಪತ್ರಯಗಳೆಂಬ ತೀವ್ರವಾದ ಅಗ್ನಿಜ್ವಾಲೆಯನ್ನು ನಿಃಶೇಷವಾಗಿ ಶಮನಗೊಳಿಸುವ ಜಲಭರಿತಮೇಘರಾಗಿರುವರು;

೩. ತತ್ತ್ವಜ್ಞಾನಾನಂದವೆಂಬ ಅಮೃತಸಾಗರವನ್ನು ಉಕ್ಕಿಸುವ ಉದಯಿಸು-ತ್ತಿರುವ ಶರತ್ಕಾಲದ ಪೂರ್ಣಚಂದ್ರರಾಗಿರುವರು;

೪. ಇಂಥ ಮಹಾಮಹಿಮಾಶಾಲಿಗಳಾಗಿರುವ ಶ್ರೀಭಗವತ್ಪಾದಚಂದ್ರರು ನಮ ಹೃದಯಾಕಾಶದಲ್ಲಿ ನಿರಂತರವೂ ಬೆಳಗುತ್ತಿರಲಿ!

ತತ್ತ್ವಾವೇದಕಮಾನಕಾ ಶ್ರುತಿತತೇಸ್ತದಜ್ಞಗದ್ಯೋನಿತಾ
ಚಿನ್ಮಾತ್ರಸ್ಯ ಪರಾತ್ಮನಶ್ಚ ಜಗತಃ ಸತ್ಯತ್ವಮಿಥ್ಯಾತ್ಮತೇ ।
ಐಕ್ಯಂ ಜೀವಪರಾತ್ಮನೋರದಿತಥಂ ಮುಕ್ತಿಶ್ಚ ತಜ್ಜ್ಞಾನತಃ
ಶ್ರೌತಂ ಕರ್ಮ ಚ ತತ್ರ ಸಾಧನಮಿತಿ ಹ್ಯಾಚಾರ್ಯಲೀಲಾಯಿತಂ
॥೧೪೧॥

೧. ಅತೀಂದ್ರಿಯವಾದ ಪಾರಮಾರ್ಥಿಕತತ್ತ್ವದ ವಿಷಯದಲ್ಲಿ, ಅಪೌರುಷೇಯ-ವಾಗಿ ನಿರ್ದುಷ್ಟವಾಗಿರುವ ಶ್ರುತಿಯೊಂದೇ ಪ್ರಮಾಣವು;

೨. ಇಂಥ ಶ್ರುತಿಪ್ರಾಮಾಣಿಕವಾಗಿ. ಅಖಂಡಸಚ್ಚಿದಾನಂದರೂಪವಾಗಿರುವ ಪರಬ್ರಹ್ಮವೇ ಸಕಲಜಡದ್ವೈತಪ್ರಪಂಚಕ್ಕೂ ಮೂಲಭೂತವಾಗಿ ಅಭಿನ್ನನಿಮಿತ್ತೋ-ಪಾದಾನಕಾರಣವು;

೩. ಉಪಾದಾನಕಾರಣಾತಿರಿಕ್ತಸತ್ತಾಶೂನ್ಯವಾದ ಜಗತ್ತೆಲ್ಲ ಮಿಥ್ಯಾಭೂತವಾಗಿ-ರುತ್ತ ಮೂಲಕಾರಣವಾಗಿರುವ ಚಿನ್ಮಾತ್ರಬ್ರಹ್ಮವೇ ಅದ್ವಿತೀಯಸತ್ಯವಸ್ತುವು,

Sri Vidyabharathi Book Centre, Sringeri

CC-O. In Public Domain. Digitized by eGangotri

೪. ಅದ್ವಿತೀಯಬ್ರಹ್ಮಚೈತನ್ಯವೊಂದೇ ಪಾರಮಾರ್ಥಿಕಸತ್ಯವಸ್ತುವಾಗಿ, ಇದಕ್ಕೆ ಬೇರೆಯಾದ ಚೈತನ್ಯವಸ್ತುವಾವುದೂ ಇಲ್ಲದಿರುವುದರಿಂದ, ಚೇತನನಾಗಿರುವ ಜೀವನು ಈ ಪರಮಾತ್ಮನೇ ಆಗಿರುವನು;

೫. ಈ ಜೀವನು ಹೀಗೆ ಪರಮಾತ್ಮನೇ ಆಗಿರುವನೆಂಬ ಅನುಭವರೂಪವಾದ ತತ್ತ್ವಜ್ಞಾನವೇ ಪರಮಪುರುಷಾರ್ಥವಾದ ಮೋಕ್ಷಕ್ಕೆ ಸಾಧನವು;

೬. ಇಂಥ ತತ್ತ್ವಾನುಭವವು ಶಾಸ್ತ್ರವಿಹಿತವಾಗಿರುವ ಸ್ವಸ್ವವರ್ಣಾಶ್ರಮಧರ್ಮಗಳ ನಿಷ್ಕಾಮಾನುಷ್ಠಾನದಿಂದ ಲಭಿಸುವ ಚಿತ್ತಶುದ್ಧಿಯ ಮೂಲಕವಾಗಿ, ಶ್ರೀಗುರುಮೂಲಕವಾದ ವೇದಾಂತಗಳ ಶ್ರವಣಮನನನಿದಿಧ್ಯಾಸನಗಳ ಪರಿಪಾಕದಿಂದ ಸಿದ್ಧಿಸುವುದು;

ಈ ಆರೂ ಶ್ರೀಭಗದತ್ಪಾದಾಚಾರ್ಯರ ಅಸಾಧಾರಣವಾದ ಲೀಲಾವೈಭವವು !

ಶ್ರುತಿಪ್ರಮಾಣೈಕಮತೇಃ ಸ್ವಧರ್ಮನಿಷ್ಠಾ ತಯೈವಾತ್ಮವಿಶುದ್ಧಿರಸ್ಯ !
ವಿಶುದ್ಧಬುದ್ಧೇಃ ಪರಮಾತ್ಮವೇದನಂ ತೇನೈವ ಸಂಸಾರಸಮೂಲನಾಶಃ ||
(ವಿವೇಕಚೂಡಾಮಣಿಃ–೧೫೦)

ಇದು ಶ್ರೀಭಗವತ್ಪಾದರ ಪರಮೋಪದೇಶಸಾರವು.

[೧೩ನೇ ಪದ್ಯವು ಜೀವಾತ್ಮತತ್ತ್ವಪ್ರಧಾನವಾದುದು; ೧೪೧ನೇ ಪದ್ಯವು ಪರಮಾತ್ಮತತ್ತ್ವಪ್ರಧಾನವಾಗಿದೆ ಇವರ ಸಂಕ್ಷೇಪವು–

ದೇಹಪ್ರಾಣೇಂದ್ರಿಯಮನೋಬುದ್ಧಿಸಾಕ್ಷೀ ಚಿದವ್ಯಯಃ ।
ಅಕರ್ತಾಹಮಭೋಕ್ತಾಹಮಸಂಗೋಽಹಮಹಂ ಶಿವಃ ||೧೪೨||

ಅಹಂಪದಾರ್ಥವು–ದೇಹ, ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ–ಇವುಗಳ ವ್ಯಾಪಾರಗಳಿಗೆಲ್ಲ ಸಾಕ್ಷಿಯಾಗಿದೆ; ಆದ್ದರಿಂದ ಇದು ಚೇತನವು–ಎಂದರೆ, ಜ್ಞಾನಸ್ವರೂಪದ್ದು, ಆದ್ದರಿಂದಲೇ ಇದು ನಿರವಯವಾಗಿ; ನಿರ್ವಿಕಾರಸ್ವರೂಪದ್ದು; ಆದಕಾರಣವೇ ಅಸಂಗಸ್ವರೂಪದ್ದಾಗಿ, ಕರ್ತೃತ್ವ ಭೋಕ್ತೃತ್ವರೂಪಸಂಸಾರರಹಿತವಾಗಿ, ನಿತ್ಯಮುಕ್ತಪರಮಾನಂದಪರಮಾತ್ಮತತ್ತ್ವಸ್ವರೂಪವಾಗಿದೆ.

ಸರ್ವಸ್ಯ ಬ್ರಹ್ಮಜನ್ಯತ್ವಾನ್ನಾಬ್ರಹ್ಮಾಸ್ತೀಹ ಕಿಂಚನ ।
ದ್ರಷ್ಟುರನ್ಯಸ್ಯ ಚಾಭಾವಾದ್ದ್ರಷ್ಟಾಹಂ ಬ್ರಹ್ಮ ಕೇವಲಂ ||೧೪೩||

ಯತೋ ವೇತ್ಯಾದಿವಚನೈರ್ನಾನ್ಯೋಽಸ್ತೀತಿವಾಕ್ಯತಃ ।
ತತ್ತ್ವಮಸ್ಯಾದಿವಾಕ್ಯೈಶ್ಚ ಸೋಽಯಮರ್ಥೋಽವಸೀಯತೇ ||೧೪೪||

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮಕ್ಕೆ ಜಗದುಪಾದಾನಕಾರಣತ್ವವನ್ನು ಬೋಧಿಸುವ 'ಯತೋವಾ' ಮುಂತಾದ ಶ್ರುತಿವಚನಗಳಿಂದಲೂ, ಬ್ರಹ್ಮಕ್ಕೆ ಬೇರೆಯಾದ ಚೇತನವು ಯಾವುದೂ ಇಲ್ಲವೆಂದು ತಿಳಿಸುವ 'ನಾನ್ಯೋಽತೋಽಸ್ತಿ' ಎಂಬ ಶ್ರುತಿವಾಕ್ಯದಿಂದಲೂ; 'ನೀನು ಬ್ರಹ್ಮವೇ ಆಗಿದ್ದೀಯೆ'– ಎಂದು ಮುಂತಾದ ತತ್ತ್ವಬೋಧಕಗಳಾದ "ತತ್ತ್ವಮಸಿ" ಮುಂತಾದ ವೇದಾಂತಮಹಾವಾಕ್ಯಗಳಿಂದಲೂ, ಜೀವನು ಅದ್ವಿತೀಯ ಪರಬ್ರಹ್ಮಸ್ವರೂಪನೇ–ಎಂಬ ಪಾರಮಾರ್ಥಿಕತತ್ತ್ವಾರ್ಥವು ಪ್ರಾಮಾಣಿಕವಾಗಿ ಸಿದ್ಧಿಸುವುದು.

ಅದ್ವೈತೇಂದು ಕಲಾವತಂಸರುಚಿರೋ ವಿಜ್ಞಾನಗಂಗಾಧರೋ
ಹಸ್ತಾಬ್ಜಾದೃತದಂಡಖಂಡಪರಶೂ ರುದ್ರಾಕ್ಷ ಭೂಷೋಜ್ಜ್ವಲಃ।
ಕಾಷಾಯಾಮಲಕೃತ್ತಿವಾಸಸುಭಗೋ ಸಂಸಾರಮೃತ್ಯುಂಜಯೋ
ದ್ವೈತಾಬ್ಧ್ಯುಗ್ರ ಹಲಾಹಲಾಶನಪಟುಃ ಜೀಯಾತ್ ಗುರುಃ ಶಿವಃ
॥೧೪೫॥

ಶ್ರೀಕೈಲಾಸಾಧಿಪತಿಯಾಗಿರುವ ಶ್ರೀ ಶಂಕರನೇ ಬೇರೆ ರೂಪದಿಂದ ಕಾಣಬರುವ ಶ್ರೀ ಭಗವತ್ಪಾದಶಂಕರರು:–

೧. ಶ್ರೀಕೈಲಾಸ ಶಂಕರನು ಚಂದ್ರಕಲಾಲಂಕೃತನು; ಶ್ರೀಭಗವತ್ಪಾದರು ಅದ್ವೈತ ಚಂದ್ರಕಲಾಲಂಕೃತರು–ಅದ್ವೈತತತ್ತ್ವವು ಚಂದ್ರನಂತೆ ಲೋಕಾನಂದಕರವಾದುದು;

೨. ಶ್ರೀ ಶಂಕರನು ಪವಿತ್ರವಾದ ಗಂಗಾಧರನು; ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ'– ಎಂಬಂತೆ ಪವಿತ್ರೋತ್ತಮವಾದ ಪಾರಮಾರ್ಥಿಕತತ್ತ್ವ ಜ್ಞಾನಗಂಗಾಧರರು ಶ್ರೀಭಗವತ್ಪಾದರು;

೩. ಶ್ರೀ ಶಂಕರನು ಖಂಡಪರಶುಧಾರಿಯು; ಶ್ರೀಭಗವತ್ಪಾದರು ದಂಡಖಂಡಪರಶುಧಾರಿಗಳು; ಕಾಷಾಯದಂಡಮಾತ್ರೇಣ ಯತಿಃ ಪೂಜ್ಯಃ। ಎಂಬಂತೆ ದಂಡಧಾರಣೆಯು ಪವಿತ್ರಾಶ್ರಮದ ಸೂಚಕವು;

೪. ರುದ್ರಾಕ್ಷಭೂಷಿತರಾಗಿರುವುದು; ಈರ್ವರೂ ಸಮಾನರು;

೫. ಶ್ರೀಶಂಕರನು ಕೃತ್ತಿವಾಸಸುಭಗ (ಮನೋಹರನು; ಶ್ರೀಭಗವತ್ಪಾದರು ಕಾಷಾಯಮಲಕೃತ್ತಿವಾಸಸುಭಗರು, ಕಾಷಾಯವಸ್ತ್ರಧಾರಣೆಯೂ ಸನ್ನ್ಯಾಸಿಗಳ ಚಿಹ್ನೆಯು;

೬. ಶ್ರೀಕೈಲಾಸಶಂಕರನು ಮೃತ್ಯುಂಜಯನು; ಶ್ರೀಭಗವತ್ಪಾದರೊ ಸಂಸಾರಮೃತ್ಯುಂಜಯರು;

೭. ಶ್ರೀಕೈಲಾಸೇಶ್ವರನು ಸಮುದ್ರಮಥನದಿಂದ ಉದ್ಭವಿಸಿದ, ಜಗನ್ನಾಶೋನ್ಮುಖವಾಗಿದ್ದ ಹಲಾಹಲವೆಂಬ ವಿಷವನ್ನು ಪಾನಮಾಡಿ ಜಗತ್ತನ್ನು ರಕ್ಷಿಸಿದವನು.

Sri Vidyabharathi Book Centre, Sringeri

CC-O. In Public Domain. Digitized by eGangotri

'ದ್ವಿತೀಯಾದ್ವೈ ಭಯಂ ಭವತಿ' ಎಂಬ ಶ್ರುತಿಯಂತೆ, ಸಂಸಾರಭಯಕ್ಕೆ ಕಾರಣವಾಗಿರುವ ಸರ್ವದ್ವೈತ ವಿಷಯವನ್ನೂ ಪರಿಹರಿಸುವ ಮಹಾತ್ಮರು, ಶ್ರೀಭಗವತ್ಪಾದರು

೮. ಶ್ರೀಪರಶಿವನು ಜಗತ್ಕಂಟಕನಾಗಿದ್ದ ತ್ರಿಪುರಾಸುರನನ್ನು ಸಂಹರಿಸಿ ಲೋಕರಕ್ಷಣೆಯನ್ನು ಮಾಡಿದನು; ಶ್ರೀಭಗವತ್ಪಾದರು ಸಂಸಾರಕಾರಣವಾಗಿರುವ ತ್ರಿಪುರವನ್ನು- ಎಂದರೆ, ಸ್ಥೂಲಸೂಕ್ಷ್ಮಕಾರಣಗಳಾಗಿರುವ ತ್ರಿಪುರಗಳನ್ನು-ನಾಶಗೊಳಿಸಿ, ಮೋಕ್ಷಾನಂದಸಾಮ್ರಾಜ್ಯವನ್ನು ಸಿದ್ಧಿಸಿಕೊಡುವ ಮಹಾತ್ಮರು;

ಈ ಮಹಿಮೆಯು ಶ್ರೀಭಗವತ್ಪಾದರ ಚರಿತಾಮೃತೋಪದೇಶಗಳಿಂದ ಸರ್ವಪ್ರಸಿದ್ಧವೇ ಇದೆ!

ದ್ವೈತಧ್ವಾಂತನಿವಾರಣೈಕತರಣಿರ್ದ್ವೈತಾಟವೀಹವ್ಯವಾಟ್
ದ್ವೈತವ್ಯಾಲಕುಲಪ್ರಮತ್ತಗರುಡೋ ದ್ವೈತೇಭಪಂಚಾನನಃ ।
ದ್ವೈತೋತ್ತುಂಗಗಿರಿಪ್ರಭೇದನಪವಿರ್ದ್ವೈತಾಬ್ಧಿಕುಂಭೋದ್ಭವೋ
ದ್ವೈತಾಘೌಘಘನಪ್ರಚಂಡಪವನಃ ಶ್ರೀಶಂಕರಃ ಪಾತು ನಃ ॥೧೪೬॥

"ದ್ವಿತೀಯಾದ್ವೈಭಯಂ ಭವತಿ। ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ । ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ॥ "-ಮುಂತಾದ ಶ್ರುತಿಪ್ರಮಾಣವಚನಗಳಿಂದ ಸಕಲಸಂಸಾರಾನರ್ಥಕ್ಕೂ ದ್ವೈತವೇ ಮೂಲವು; ಮತ್ತು ಈ ದ್ವೈತವು ವಸ್ತುತಃ ಪರಮಾರ್ಥವಲ್ಲ; ಇದನ್ನು ಪರಿಹರಿಸಿಕೊಂಡು ನೆಮ್ಮದಿಯನ್ನು ಪಡೆಯುವುದೇ ವಿವೇಕಿಯಾದ ಪುರುಷನ ಮುಖ್ಯ ಕರ್ತವ್ಯವು. ಇದನ್ನು ಪರಿಹರಿಸಿಕೊಳ್ಳಲು ಶ್ರೀಭಗವತ್ಪಾದರ ಶ್ರುತಿಪ್ರಮಾಣಕವಾದ ಉಪದೇಶಗ್ರಹಣವೊಂದೇ ಸಾಧನವು. ಏಕೆಂದರೆ- ಶ್ರೀ ಭಗವತ್ಪಾದರು ಸಾಂಸಾರ ಭಯಕ್ಕೆ ಕಾರಣವಾಗಿರುವ-ದ್ವೈತವೆಂಬ-

೧. ಅಂಧಕಾರ (ಅಜ್ಞಾನವನ್ನು) ವನ್ನು ನಾಶಪಡಿಸುವ ಸೂರ್ಯರು;

೨. ದಟ್ಟವಾದ ಅರಣ್ಯಕ್ಕೆ ಕಾಡ್ಗಿಚ್ಚು;

೩. ಘಟಸರ್ಪಗಳ ಸಮೂಹಕ್ಕೆ ಕೊಬ್ಬಿದ ಗರುಡರು;

೪. ಮದ್ದಾನೆಗಳಿಗೆ ಮತ್ತಸಿಂಹರು;

೫. ಉನ್ನತವೂ ಕಠಿಣವೂ ಆಗಿರುವ ಪರ್ವತಗಳನ್ನು ಪುಡಿಪುಡಿಮಾಡುವ ವಜ್ರಾಯುಧರು;

Sri Vidyabharathi Book Centre, Sringeri

CC-O. In Public Domain. Digitized by eGangotri

೬. ಅನಂತಾಗಾಧಾಪಾದಸಮುದ್ರವನ್ನು ನಿಃಶೇಷವಾಗಿ ಒಣಗಿಸುವ ಅಗಸ್ತ್ಯರು;

೭. ಸಕಲಜಗತ್ತನ್ನೂ ನಾಶಮಾಡುವ ಪಾಪಮಯವಾದ ಮೇಘಗಳನ್ನು ಚದುರಿಸಿ ನಾಶಮಾಡುವ ಚಂಡಮಾರುತರು.

ಇಂಥ ಮಹಾಮಹಿಮಾಶಾಲಿಗಳಾಗಿ ಪ್ರಾಮಾಣಿಕಾ ಅದ್ವಿತೀಯಪಾರಮಾರ್ಥಿಕ-ತತ್ತ್ವವನ್ನು ಉಪದೇಶಿಸಿ ಸರ್ವಲೋಕವನ್ನೂ ಉದ್ಧರಿಸುವ ಅದ್ವಿತೀಯಜಗದ್ಗುರು. ಸಾರ್ವಭೌಮರನ್ನೇ ಆಶ್ರಯಿಸಿ, ಸರ್ವರೂ ಸಂಸಾರದುರಂತದುಃಖಮಯಸಾಗರದಿಂದ ಉದ್ಧೃತರಾಗಿ ರಕ್ಷಿತರಾಗುವರು.

ಅಜ್ಞಾನಾಂಧಿತಲೋಚನದ್ವಯಮತಃ ಸನ್ಮಾರ್ಗತಃ ಪ್ರಚ್ಯುತಂ
ದುರ್ಮಾರ್ಗಪ್ರವಣಂ ಚ ಶೋಕನಿಲಯಂ ತೂದ್ವೀಕ್ಷ್ಯಕಾರು-
ಣ್ಯಧೀಃ ।

ಸ್ವಾನಂದಾಬ್ಧಿರಯಂ ಸ್ವಯಂ ಜಗದಿದಂ ಸ್ವಾನಂದಭಾವಂ ನಯನ್
ಜ್ಞಾನಾನಂದಶಲಾಕಯಾ ಗುರುವರಃ ಶ್ರೀಶಂಕರಃ ಪಾತು ನಃ
॥೧೪೭॥

ಸಂಸಾರಕಾರಣವಾಗಿರುವ ಅನಾದ್ಯನಿರ್ವಚನೀಯಾಜ್ಞಾನದಿಂದ ಲೌಕಿಕ ಮತ್ತು ಶಾಸ್ತ್ರೀಯದೃಷ್ಟಿಗಳೆರಡನ್ನೂ ಕಳೆದುಕೊಂಡು; ಶ್ರೇಯಸ್ಕರವಾಗಿರುವ ಸನ್ಮಾರ್ಗವನ್ನು ಕಾಣದೆ, ಅದರಿಂದ ತಪ್ಪಿ, ಅನರ್ಥ-ಕರವಾಗಿರುವ ದುರ್ಮಾರ್ಗದಲ್ಲಿ ಬಿದ್ದು; ಆಧ್ಯಾತ್ಮಿಕಾದಿಶೋಕತ್ರಯಸಾಗರದಲ್ಲಿ ಬಿದ್ದಿರುವ ಲೋಕಸಮೂಹವನ್ನು ಕಂಡು; ಪರಮಕರುಣೆಯಿಂದ, ಸಮ್ಯಗ್ಜ್ಞಾನವೆಂಬ ಆನಂದಕರವಾದ ಅಂಜನದಿಂದ ಕಣ್ತೆರೆಯಿಸಲು, ಅದನ್ನು ತಮ್ಮ ಸಹಜವಾದ ನಿರತಿಶಯಾಖಂಡಾನುಭವರೂಪವನ್ನು ಹೊಂದಿಸಲು ಅವತರಿಸಿ ಬಂದಿರುವ; ನಿತ್ಯಾಖಂಡಾದ್ವಿತೀಯಾನಂದಸಾಗರರಾಗಿರುವ ಶ್ರೀಮದ್ಭಗವತ್ಪಾದ ಗುರುವರ್ಯರು ಎಲ್ಲರನ್ನೂ ಉದ್ಧರಿಸಿ ರಕ್ಷಿಸಲಿ.

ಬ್ರಹ್ಮೈವಾಹಮಹಂ ಬ್ರಹ್ಮ ಸಚ್ಚಿದಾನಂದಲಕ್ಷಣಂ ।
ಅದ್ವಿತೀಯಂ ಪರಂ ತತ್ತ್ವಂ ನಾನ್ಯದಸ್ತೀಹ ಕಿಂಚನ ॥೧೪೮॥

"ಸತ್ಯಂ ಜ್ಞಾನಮನಂತಂ ಬ್ರಹ್ಮ ವಿಜ್ಞಾನಮಾನಂದಂ ಬ್ರಹ್ಮ"–ಎಂಬ ಶ್ರುತಿಪ್ರಮಾಣನುಸಾರವಾಗಿ ಬ್ರಹ್ಮವು ಸಚ್ಚಿದಾನಂದಲಕ್ಷಣದ್ದು. ಅಸಾಧಾರಣಸ್ವರೂಪವೆ ಲಕ್ಷಣವು. ಈ ಲಕ್ಷಣವುಳ್ಳದ್ದು ಬ್ರಹ್ಮವೆಂದು ನಿಶ್ಚಿತವು. ಪ್ರತ್ಯಗಾತ್ಮನು ಸಚ್ಚಿದಾನಂದಸ್ವರೂಪನಾಗಿರುವುದರಿಂದ ಪ್ರತ್ಯಗಾತ್ಮನೇ ಈ ಬ್ರಹ್ಮವೆಂದು ವಿಶದವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವರೂಪಾವಸ್ಥಿತಿರ್ಮುಕ್ತಿರ್ಹೇಯೋದೇಯಾ ನ ವಾ ತತಃ ।
ಸ್ವರೂಪಾವ್ಯಭಿಚಾರಿತ್ವಾನ್ನಿತ್ಯಮುಕ್ತೋಽಹಮವ್ಯಯಃ ॥೧೪೯॥

ಕರ್ಮಾಧೀನನಾಗಿ ಆಗುಂತಕವಾದದ್ದು–"ಯತ್ಕೃತಕಂ ತದನಿತ್ಯಂ; ಸಂಯೋಗಾ ವಿಪ್ರಯೋಗಾಂತಾ"–ಎಂಬ ನ್ಯಾಯಗಳಂತೆ ನಿತ್ಯವಾಗುವುದಿಲ್ಲ. "ನಿತ್ಯೋ ಹಿ ಮೋಕ್ಷಃ ಸರ್ವೈರ್ಮೋಕ್ಷವಾದಿಭಿರಭ್ಯುಪಗಮ್ಯತೇ॥"–ಎಂಬ ಶ್ರೀಭಗವತ್ಪಾದರ ಸೂಕ್ತಿಯಂತೆ, ಸರ್ವತೋವಿರಕ್ತನಾದ ಮುಮುಕ್ಷುವಿಗೆ ಮತ್ತೆ ಅನಿತ್ಯವಾದ ಮೋಕ್ಷವು ಅಪೇಕ್ಷಿತವಾಗಲಾರದುದರಿಂದ, ಮೋಕ್ಷವನ್ನು ನಿತ್ಯವೆಂದೇ ಅಂಗೀಕರಿಸಬೇಕು. ಮೋಕ್ಷವು ನಿತ್ಯವಾಗಬೇಕಾದರೆ ಅದು ಮುಮುಕ್ಷುವಿನ ನಿತ್ಯಸ್ವರೂಪಸಿದ್ಧವೇ ಆಗಿರಬೇಕೆಂದೂ ನಿಶ್ಚಿತವಾಗುವುದು. ಆದಕಾರಣ ಮೋಕ್ಷವು ಯಾರಿಗೂ ಕಳೆದುಕೊಳ್ಳಲೂ, ಹೊಸದಾಗಿ ಹೊಂದಲೂ ಬರುವಂಥದ್ದಲ್ಲವಾಗಿ, ಆತ್ಮನು ಯಾವಾಗಲೂ ಪರಮಾರ್ಥವಾಗಿ ನಿತ್ಯಮುಕ್ತಸ್ವರೂಪನೆಂಬುದೇ ವಾಸ್ತವವು.

ಕಲ್ಯಾಣಕಾರಿಷು ವರಾತ್ಮಮನೀಯರೂಪಾ-
ತ್ಕಾರುಣ್ಯಸಾಂದ್ರಹೃದಯಾತ್ಕಲಿಕಲ್ಮಷಘ್ನಾತ್ ।
ಕಾಮಾರಿಸೇವನರತಾತ್ಕಲಿತಾಶ್ರಿತತ್ರಾ-
ಚ್ಛ್ರೀಸದ್ಗುರೋರಿತರದ್ದೈವಮಹಂ ನ ಜಾನೇ ॥೧೫೦॥

ರಾಗದ್ವೇಷಾದಿಸರ್ವದೋಷರಹಿತರಾಗಿ ಪರಮಶಾಂತಸ್ವಭಾವದ ಶ್ರೀಸದ್ಗುರುವರ್ಯರು ಸರ್ವರಿಗೂ ಯಾವಾಗಲೂ ಮಂಗಳವನ್ನೇ ಮಾಡುವರು; ಅವರ ದರ್ಶನಮಾತ್ರವೂ ಶ್ರೇಯಸ್ಕರವಾಗಿ ಮನೋಹರವಾದುದು; ಪರಮದಯಾಳುಗಳಾಗಿ, ಅಪರಾಧಮಾಡುವವರಿಗೂ ಹಿತಕರರಾದವರು; ಸರ್ವರ ದೋಷಗಳನ್ನೂ ಪರಿಹರಿಸುವ ಮಹಾಮಹಿಮರು; ನಿರಂತರವೂ ಜಿತಕಾಮನಾದ ಶ್ರೀಪರಮೇಶ್ವರಾರಾಧಕರಾಗಿರುತ್ತ, ಆಶ್ರಯಿಸಿಬಂದವರನ್ನು ಯಾವಾಗಲೂ ರಕ್ಷಿಸುವವರು; ಇಂಥ ಶ್ರೀಗುರುವರ್ಯರು–'ಬ್ರಹ್ಮವಿದ್ಬ್ರಹ್ಮೈವ ಭವತಿ'– ಎಂಬಂತೆ ಅದ್ವಿತೀಯಬ್ರಹ್ಮಸ್ವರೂಪರೇ ಆಗಿ, "ಆತ್ಮಜ್ಞಂ ಹ್ಯರ್ಚಯೇದ್ಭೂತಿಕಾಮಃ॥"– ಎಂಬ ಶ್ರುತಿಯಂತೆ, ಇಹಪರಗಳ ಶ್ರೇಯೋಽಭ್ಯುದಯಗಳನ್ನು ಆಗಿಸುವ ಸರ್ವರಿಗೂ ಪರಮಪೂಜ್ಯರಾಗಿರುವರು. ಇಂಥವರು ಶ್ರೀಭಗವತ್ಪಾದರು ಮತ್ತು ಅವರ ಪರಂಪರೆಯ ಗುರುವರ್ಯರೇ ಸರಿಯೆಂದು ತಾತ್ಪರ್ಯವು.

ತ್ವಾಮೇಕಂ ಪುರುಷಂ ವಿದುಃ ಶ್ರುತಿಗಣಾಃ ಸರ್ವಂ ತ್ವದನ್ಯಜ್ಜಡಂ
ಯದ್ಯೇವಂ ತ್ವದೃತೇ ಕಥಂ ಚಲನಮಪ್ಯಸ್ಮಿನ್ ಸ್ವತೋಽಚೇತನೇ।
ಮಾಯಾಶಕ್ತಿಯುತ ತ್ವದೇಕಶರಣಂ ತಸ್ಮಾದಹರ್ವಾ ನಿಶಂ
ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಂ
॥೧೫೧॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರುತಿಪ್ರಾಮಾಣಿಕವಾಗಿ ಸರ್ವಜಗನ್ಮೂಲಕಾರಣನಾದ ಪರಮಾತ್ಮನೊಬ್ಬನೇ ಚೇತನನು; ಇವನ ಕಾರ್ಯವಾದ ಅಜ್ಞಾನ ಮತ್ತು ಸರ್ವಜಗತ್ತೂ ಜಡವಸ್ತುವು. ಜಡಕ್ಕೆ ಸ್ವತಃಪ್ರವೃತ್ತಿಯು ಅಸಂಭಾವಿತವಾದ್ದರಿಂದ ಚೇತನಪೂರ್ವಕವೆಂದೇ ಅಂಗೀಕರಿಸಬೇಕು. ನಿರವಯವನಿತ್ಯನಿರ್ವಿಕಾರವಾದ ಚೇತನಕ್ಕೂ ಸ್ವತಃಪ್ರವೃತ್ತಿಯು ಸಂಭಾವಿತವಾಗುವುದಿಲ್ಲವಾಗಿ, ಅದಕ್ಕೆ ಬೇರೊಂದು ಕಾರಣವನ್ನು ಒಪ್ಪಬೇಕಾಗುವುದು ಇದೂ ವಾಸ್ತವವಾಗುವುದಿಲ್ಲವಾಗಿ, ಇದದ್ದೂ ಕಲ್ಪಿತವೆಂದೇ ಸಿದ್ಧವಾಗುವುದು. ಇದನ್ನೇ ಅಜ್ಞಾನ, ಮಾಯೆ–ಎಂದು ಮುಂತಾಗಿ ಹೇಳುವರು. ಹೀಗಾಗಿ, ಇಂಥ ಕಲ್ಪಿತಮಾಯಾಪ್ರಯುಕ್ತವಾಗಿ ಈ ಕಾರ್ಯಕರಣಸಂಘಾತದಲ್ಲಿ ಹಗಲೂ ರಾತ್ರಿಯೂ ಆಗುವ ಎಲ್ಲ ಪ್ರವೃತ್ತಿಯೂ, ಶ್ರೇಯಸ್ಕರವಾದ ಶ್ರೀಭಗವದಾರಾಧನೆಯ ರೂಪದ್ದೇ ಆಗಲಿ; ಹಾಗಾಗದ ಪ್ರವೃತ್ತಿಯಾಗದೆ ಇರಲಿ!

ಪ್ರಾರಬ್ಧಂ ಬಲವತ್ತರಂ ಜನಿಮತಾಂ ಭೋಗಾದೃತೇ ತತ್ಕ್ಷಯೋ
ನ ಜ್ಞಾನೇನ ನ ಚೇತರೇಣ ತದಲಂ ಶೋಕೇನ ತೇ ಮೂಢಧೀಃ।
ಯದ್ಭಾವ್ಯಂ ತದಿಹಾಸ್ತು ಭವ್ಯಮಿತರನ್ನಾ ಕರ್ಮರೋಧೇನ ವೈ
ನಾತ್ಮಾ ಕರ್ಮವಶೋ ನಿರಂತರಚಿದಾನಂದೈಕಸನ್ಮೂರ್ತಿಕಃ
॥೧೫೨॥

ಈಗ ಫಲವನ್ನು ಉಂಟುಮಾಡುವುದಕ್ಕಾಗಿ ಆರಂಭಿಸಿರುವ, ಹಿಂದೆ ಮಾಡಿದ್ದಾದ ಶಾಸ್ತ್ರೀಯಪುಣ್ಯಾಪುಣ್ಯಕರ್ಮಗಳ ವಶದಿಂದ ಸಂಭವಿಸಿರುವ ಈ ಜನ್ಮದಲ್ಲಿ, ಆ ಕರ್ಮಗಳ ಫಲವನ್ನು ಅಪರಿಹಾರ್ಯವಾಗಿ ಅನುಭವಿಸಲೇ ಬೇಕಾಗಿದೆ; ಇದು, ಆತ್ಮತತ್ತ್ವಜ್ಞಾನವು ಸಿದ್ಧಿಸಿದರೂ ತಪ್ಪುವುದಿಲ್ಲವೆಂದಮೇಲೆ, ಇದಕ್ಕೆ ಪರಿಹಾರವು ಬೇರೆ ಏತರಿಂದ ಆದೀತು? ಆದ್ದರಿಂದ ಇದಕ್ಕಾಗಿ ಶೋಕಪಡುವ ಕಾರಣವಿಲ್ಲವಾಗಿ, ಪ್ರಾರಬ್ಧಕರ್ಮಾನುಸಾರವಾಗಿ, ಒಳ್ಳೆಯದೋ ಅಲ್ಲವೋ, ಬಂದದ್ದೆಲ್ಲ ಬರಲಿ; ಆದರೆ, ಪಾರಮಾರ್ಥಿಕವಾಗಿ ನಿತ್ಯನಿರ್ವಿಕಾರಾಖಂಡಸಚ್ಚಿದಾನಂದಸ್ವರೂಪನಾಗಿರುವ ಆತ್ಮನು, ವಸ್ತುತಃ ಕರ್ತೃತ್ವಭೋಕ್ತೃತ್ವರಹಿತನಾಗಿರುವುದರಿಂದ, ಪ್ರಾರಬ್ಧವೇ ಆಗಲಿ ಯಾವ ಕರ್ಮದ ಸಂಬಂಧಲೇಶವೂ ಇಲ್ಲದ ನಿತ್ಯಮುಕ್ತಸ್ವರೂಪನೇ ಆಗಿರುವನು. "ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ!"– ಎಂಬ ಶ್ರೀಭಗವದುಕ್ತಿಯಂತೆ ಕಾಯಿಕವಾಚಿಕಮಾನಸಿಕತ್ರಿಕರಣರೂಪವಾಗಿರುವ ಕಾರ್ಯಕರಣಸಂಘಾತವೇ ಲೌಕಿಕವೈದಿಕ–ಯುಕ್ತಾಯುಕ್ತ ಸಕಲಕರ್ಮಕರ್ತೃವೂ ಭೋಕ್ತೃವೂ ಆಗಿರುತ್ತದೆಯಾಗಿ, ಯಾವ ಪ್ರಾರಬ್ಧಕರ್ಮವು ಈ ಕಾರ್ಯಕರಣಸಂಘಾತವನ್ನು ಉಂಟುಮಾಡಿರುವುದೋ, ಅದರ ಫಲವನ್ನು ಅನುಭವಿಸುವುದೂ ಅದೇ ಆಗಿದೆ; ಈ ಕಾರ್ಯಕರಣಸಂಘಾತವನ್ನೇ ತಾನೆಂದು ಭ್ರಮಿಸಿ– "ಪ್ರಕಾರಾಂತರಾಸಂಭವಾದಭಿಮಾನ ಏವ ಬಂಧಃ"– ಎಂಬಂತೆ, ಈ ಅಭಿಮಾನ ಭ್ರಾಂತಿಯೇ ಆತ್ಮನಿಗೆ ಈ ಸಂಸಾರಾನುಭವಕಾರಣವೇ ಹೊರತು, ಇದು ವಾಸ್ತವವಲ್ಲ!

Sri Vidyabharathi Book Centre, Sringeri

CC-O. In Public Domain. Digitized by eGangotri

ಆಮ್ನಾಯಾಂಬುಧಿಮಂಥನಾದಧಿಗತಂ ಬ್ರಹ್ಮಾತ್ಮತತ್ತ್ವಾಮೃತಂ
ಸಂಸಾರಾಮಯಶಾಮಕಂ ಸುಖಕರಂ ನಿರ್ವಾಣಸೌಖ್ಯಪ್ರದಂ ।
ಸರ್ವಾನುದ್ಧರತೇ ವಿತೀರ್ಯ ಸುಮತೀನ್ಯಃ ಕಾರುಣ್ಯವಾರಾಂನಿಧಿಃ
ಸೋಽಯಂ ಶಂಕರದೇಶಿಕೇಂದ್ರಯತಿರಾಡ್ವಿದ್ಯೋತತೇ ಸರ್ವತಃ
॥೧೫೩॥

ದುರೂಹವೂ ಅಪಾರವೂ ಆಗಿರುವ ವೇದಶಾಸ್ತ್ರಸಮುದ್ರವನ್ನು. ವಿಚಾರಕಡೆಗೋಲಿನಿಂದ ಕಡೆದು, ದೊರೆತ, ಸಕಲಸಂಸಾರರೋಗವನ್ನೂ ಪೂರ್ಣವಾಗಿ ಶಾಂತಗೊಳಿಸಿ, ನಿತ್ಯನಿರತಿಶಯಾಖಂಡಾನಂದಾನುಭವರೂಪವಾದ ಮೋಕ್ಷಸಾಮ್ರಾಜ್ಯವನ್ನೂ ಅನಾಯಾಸವಾಗಿ ದೊರಕಿಸಿಕೊಡುವಂಥ; ಅದ್ವಿತೀಯಬ್ರಹ್ಮಾತ್ಮತತ್ತ್ವಾನುಭವವನ್ನೂ; ಆಶ್ರಯಿಸುವ ವಿವೇಕವಂತರಿಗೆ ಅನುಗ್ರಹಿಸಿ, ಎಲ್ಲರನ್ನೂ ಉದ್ಧರಿಸುವ, ದಯಾಸಾಗರರಾದ, ಶ್ರೀಮಚ್ಛಂಕರಭಗವತ್ಪೂಜ್ಯಪಾದಯತೀಶ್ವರರು ಸರ್ವಲೋಕೋತ್ತಮರಾಗಿ ಬೆಳಗುತ್ತಿರುವರು!

ನೇಂದುರ್ಜಟಾಸು ನ ಸರಿನ್ನ ಕಪಾಲದಾಮ
ನೋ ಕಾಲಕೂಟಮಪಿ ನಾಪಿ ಫಣೀಂದ್ರಹಾರಃ ।
ನೋಕ್ಷಾ ಸುತೌ ನ ದಯಿತೇ ನ ವಿರೂಪನೇವಂ
ಅವ್ಯಕ್ತಶಂಕರಮಹಂ ಕಲಯೇ ನಿತಾಂತಂ ॥೧೫೪॥

ಶ್ರೀಕೈಲಾಸಾಧಿಪತಿಶಂಕರನು ಜ್ಞಾನರೂಪಚಂದ್ರಕಲಾಂಕೃತವಾದ ಜಟಾಧಾರಿಯಾಗಿದ್ದಾನೆ; ಭಗೀರಥನ ಅನುಗ್ರಹಕ್ಕಾಗಿ, ಭೂಮಿಯನ್ನು ಕೊಚ್ಚಿಕೊಂಡುಹೋಗುವ ಅತಿರಭಸದ ದಿವ್ಯಗಂಗಾನದಿಯನ್ನು ಧರಿಸಿದ್ದಾನೆ; ಕಂಠದಲ್ಲಿ ಅಸಂಖ್ಯಾತಬ್ರಹ್ಮಕಪಾಲಗಳ ಮಾಲೆಯಿಂದ ಅಲಂಕೃತನಾಗಿದ್ದಾನೆ; ದೇವಾಸುರರ ಮಥನದಿಂದ ಕ್ಷೀರಸಾಗರದಿಂದ ಉತ್ಪನ್ನವಾಗಿ ಸಕಲಜಗತ್ತನ್ನೂ ನಾಶಮಾಡಲು ಉದ್ಯುಕ್ತವಾಗಿದ್ದ ಕಾಲಕೂಟವೆಂಬ ಅತಿಶಯವಾದ ವಿಷವನ್ನು ಪಾನಮಾಡಿ, ತನ್ನಲ್ಲಿ ಆಶ್ರಯಿಸಿರುವ ಅಂತರ್ಗತವಾಗಿದ್ದ ಜಗತ್ತನ್ನೂ ರಕ್ಷಿಸುವುದಕ್ಕಾಗಿ ಅದನ್ನು ನುಂಗದೆ ಕಂಠದಲ್ಲಿಯೇ ಧರಿಸಿ ನೀಲಕಂಠನಾಗಿದ್ದಾನೆ; ಧರ್ಮರೂಪವೃಷಭವಾಹನನಾಗಿ ಮೆರೆಯುತ್ತಿದ್ದಾನೆ; ಶ್ರೀಗಣೇಶಷಣ್ಮುಖರೆಂಬ ಪುತ್ರದ್ವಯಸಹಿತನಾಗಿದ್ದಾನೆ; ಶ್ರೀಗಂಗಾಗಿರಿಜಾರೂಪಪತ್ನೀದ್ವಯರಂಜಿತನಾಗಿದ್ದಾನೆ; ತ್ರಿಣೇತ್ರನಾಗಿ ವಿರೂಪನಾಗಿದ್ದಾನೆ.

ಲೋಕೋದ್ಧಾರಕ್ಕಾಗಿ ವೈದಿಕಸನಾತನವರ್ಣಾಶ್ರಮಧರ್ಮದ ರಕ್ಷಣೆಗಾಗಿ ಈ ಯಾವ ಬಾಹ್ಯಚಿಹ್ನೆಯೂ ಇಲ್ಲದೆ ಅವತರಿಸಿಬಂದಿರುವ, ಅವ್ಯಕ್ತಶಂಕರರಾದ ಶ್ರೀಮಚ್ಛಂಕರಭಗವತ್ಪೂಜ್ಯಪಾದಾಚಾರ್ಯರನ್ನು ಭಕ್ತಿಶ್ರದ್ಧಾಪೂರ್ಣವಾಗಿ ಆಶ್ರಯಿಸಿ ಸೇವಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೈಲಾಸಗಿರಿಶೋಽಭಾದ್ಯಂ ಶೃಂಗಗಿರ್ಯವತಂಸಕಂ
ಜ್ಞಾನಾನಂದಮಯಂ ದೇವಂ ಪ್ರತ್ಯಗದ್ವಯಮಾಶ್ರಯೇ ||೧೫೫||

ಶ್ರೀಕೈಲಾಸಗಿರಿಯಲ್ಲಿ ಶೋಭಿಸುವ ಶ್ರೀಶಂಕರನೇ ಶ್ರೀಶೃಂಗಗಿರಿಯಲ್ಲಿ ಅಲಂಕರಿಸಿರುವನು; ಇಂಥ ಸಚ್ಚಿದಾನಂದಸ್ವರೂಪನೂ ಪ್ರತ್ಯಗದ್ವಯಾತ್ಮಸ್ವರೂಪನೂ ಆಗಿರುವ ಪರಮಾತ್ಮನನ್ನು ಆಶ್ರಯಿಸುತ್ತೇನೆ.

ವೇದದುಗ್ಧೋದಧೌ ಶ್ರೌತೈರಶ್ರೌತೈರ್ಮಥಿತೇ ಸತಿ ।
ನಿಷ್ಪನ್ನಮದ್ವಿತೀಯಾತ್ಮಪೀಯೂಷಮಮರತ್ವದಮ್ ||೧೫೬||

ಸುರಾಸುರರು ಕ್ಷೀರಸಾಗರವನ್ನು ಕಡೆಯಲು ಲಭಿಸಿದ ಅಮೃತವು ಅದನ್ನು ಸೇವಿಸಿದ ದೇವತೆಗಳಿಗೆ ಅಮರತ್ವವನ್ನು ಉಂಟುಮಾಡಿತು. ಶ್ರೌತರು ತಾರ್ಕಿಕತಾಂತ್ರಿಗಳು ವೇದವೆಂಬ ಕ್ಷೀರಸಮುದ್ರವನ್ನು ವಿಚಾರದಿಂದ ಕಡೆಯಲು, ಅಬಾಧಿತತತ್ತ್ವಸಿದ್ಧಾಂತವಾಗಿ ಲಭಿಸಿದ ಅದ್ವಿತೀಯಬ್ರಹ್ಮಾತ್ಮತತ್ತ್ವವೆಂಬ ಅಮೃತವು, ಇದನ್ನು ಸೇವಿಸುವವರಿಗೆ ನಿತ್ಯಾಮರತ್ತ್ವವಾದ ಮೋಕ್ಷವನ್ನು ಗಳಿಸಿಕೊಡುವುದು.

ಕಲ್ಯಾಣಂ ತನುತಾದಮಂದಮಚಿರಾತ್ಕಾರುಣ್ಯಸೀಮಾವಧಿಃ
ಶ್ರೀಮಚ್ಛಂಕರದೇಶಿಕೇಂದ್ರಕಲಿತಶ್ರೀಚಕ್ರರಾಜಸ್ಥಿತಾ ।
ಶ್ರೀಶೃಂಗಗಿರೌ ಪವಿತ್ರತಟನೀತುಂಗಾತಟೇ ರಾಜತೀ
ಬ್ರಹ್ಮಾದ್ವೈತಸುಧಾರಸಪ್ರಣಯಿನೀ ಶ್ರೀಶಾರದಾ ಸಾದರಾ
||೧೫೭||

ಪರಮಪವಿತ್ರವಾಗಿರುವ ಶ್ರೀತುಂಗಾನದಿಯ ದಡದಲ್ಲಿನ ಶ್ರೀಋಷ್ಯಶೃಂಗಮುನೀಶ್ವರರ ತಪಃಸಿದ್ಧಿಕ್ಷೇತ್ರವಾಗಿರುವ ಶ್ರೀಶೃಂಗಗಿರಿಯಲ್ಲಿ ಶ್ರೀಮಚ್ಛಂಕರಭಗವತ್ಪಾದಾರವರಿಂದ ಸ್ಥಾಪಿತವಾಗಿರುವ ಶ್ರೀಚಕ್ರರಾಜದಲ್ಲಿ ನೆಲೆಸಿರುವ; ಶ್ರೀವೇದಾಂತವೇದ್ಯವಾಗಿರುವ ಬ್ರಹ್ಮಾದ್ವೈತಸುಧಾರಸೈಕರಸಿಕೆಯಾಗಿರುವ, ದಯಾಪರಮಾವಧಿಯಾಗಿರುವ ಶ್ರೀಶಾರದಾದೇವಿಯು, ಆದರದಿಂದ ಅತಿಶಯವಾದ ಮಂಗಳವನ್ನು ಈಗಲೇ ಅನುಗ್ರಹಿಸಲಿ.

ವಿದಿತಾವಿದಿತಾದನ್ಯತ್ಸಾಕ್ಷಾದೇವಾಪರೋಕ್ಷಕಂ ।
ಯತ್ಸರ್ವವ್ಯಾಪಕಂ ಬ್ರಹ್ಮ ಪ್ರತ್ಯಗಾತ್ಮೈವ ನೇತರತ್ ||೧೫೮||

"ಅನ್ಯದೇವ ತದ್ವಿದಿತಾಥೋಽವಿದಿತಾದಧಿ"–ಎಂದು ಬ್ರಹ್ಮವನ್ನು ಶ್ರುತಿಯು ತಿಳಿಸುತ್ತದೆ. "ಅವಿದಿತ–ಎಂದರೆ ತಿಳಿಯದದು; ಇವೆರಡಕ್ಕೂ ಬೇರೆಯಾದುದು ಬ್ರಹ್ಮ" ಎಂದು ಅರ್ಥವು. ತಿಳಿದದ್ದು, ತಿಳಿಯದ್ದು– ಎಂಬುದು ಎಲ್ಲ ಅನಾತ್ಮವಸ್ತುವೇ ಆಗುತ್ತದೆ. ಇದಕ್ಕೆ ಬೇರೆಯಾದುದು ಆತ್ಮವೇ ಆಗಿದೆ. ಆದ್ದರಿಂದ ಆತ್ಮವೇ ಬ್ರಹ್ಮವೆಂದು ಶ್ರುತಿಯು ಕಂಠೋಕ್ತವಾಗಿ ಬೋಧಿಸಿರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಹಾಗೆಯೇ–ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ "ಯಾವುದರ ಅಪೇಕ್ಷೆಯೂ ಇಲ್ಲದೆಯೇ ಯಾವುದು ಅಪರೋಕ್ಷವಾಗಿದೆಯೋ, ಅದೇ ಬ್ರಹ್ಮವೆಂದು ಅರ್ಥವು. ಅನಾತ್ಮವಸ್ತುವು ತಿಳಿದುಬರುವುದಕ್ಕೆ ಇಂದ್ರಿಯಗಳು, ಮನಸ್ಸು, ಬೆಳಕು– ಮುಂತಾದ ಸಾಮಗ್ರಿಗಳ ಅಪೇಕ್ಷೆಯಿದ್ದೇ ಇರುತ್ತದೆ. ಇಂಥ ಬೇರೆ ಯಾವುದರ ಅಪೇಕ್ಷೆಯೂ ಇಲ್ಲದೆ ಯಾವುದು ಸುಪ್ರಸಿದ್ಧವಾಗಿದೆಯೋ ಅದೇ ಬ್ರಹ್ಮವೆಂದು ಶ್ರುತಿಯ ಅಭಿಪ್ರಾಯವು. ಇಂಥ ಪ್ರತ್ಯಗಾತ್ಮನೇ ಪರಮಾರ್ಥವಾಗಿ ಬ್ರಹ್ಮವೆಂದು ಸಿದ್ಧಿಸುವುದು. ಇಂದ್ರಿಯ-ಗಳಿಗೆ ಗೋಚರಿಸುವುದು ಪ್ರತ್ಯಕ್ಷವೆನಿಸುವುದು; ಇಂದ್ರಿಯಗೋಚರವಲ್ಲದುದು ಪರೋಕ್ಷವು. ಆತ್ಮನು ಇಂದ್ರಿಯಗಳಿಗೆಲ್ಲ ಪ್ರೇರಕನಾಗಿ ಸಾಕ್ಷಿಯಾಗಿರುತ್ತ ಇಂದ್ರಿಯ-ಗೋಚರನಲ್ಲವಾಗಿ ಪ್ರತ್ಯಕ್ಷನಲ್ಲ, ಆದರೂ, ಆತ್ಮನಲ್ಲಿ ಯಾರಿಗೂ ಯಾವಾಗಲೂ ಸಂದೇಹಾದಿಗಳಿಲ್ಲದ್ದರಿಂದ, ಆತ್ಮನು ಪರೋಕ್ಷನೂ ಅಲ್ಲ. ಆದ್ದರಿಂದ ಆತ್ಮನು ಅಪ-ರೋಕ್ಷನೆಂದು ಹೇಳಲ್ಪಡುವನು. ಹೀಗೆ ಸ್ವತಃ ಅಪರೋಕ್ಷನಾಗಿರುವ ಸ್ವಪ್ರಕಾಶ ಸ್ವರೂಪದಾದ ಆತ್ಮನೇ ಬ್ರಹ್ಮವೆಂದು ನಿರ್ಧರವಾಗುವುದು.

ಯಚ್ಚ ಕಿಂಚಜಗತ್ಸರ್ವಂದೃಶ್ಯತೇ ಶ್ರೂಯತೇಽಪಿ ವಾ ।

ಅಂತರ್ಬಹಿಶ್ಚ ತತ್ಸರ್ವಂವ್ಯಾಪ್ಯ ನಾರಾಯಣ ಸ್ಥಿತ।"–'ಕಾಣಬರುವ ಕೇಳಿ ಬರುವ ಸರ್ವಜಗತ್ತನ್ನೂ ಶ್ರೀನಾರಾಯಣನು ಒಳಗೂ ಹೊರಗೂ ವ್ಯಾಪಿಸಿಕೊಂಡಿರು-ತ್ತಾನೆ'– ಎಂದು ಶ್ರುತಿಯು ತಿಳಿಸುತ್ತದೆ. ಒಂದು ವಸ್ತುವು ಬೇರೊಂದುವಸ್ತುವನ್ನು ಒಳಹೊರಗೂ ವ್ಯಾಪಿಸಿಕೊಂಡಿರುತ್ತದೆಯೆ? ಕಾರಣವಸ್ತುವೇ ತನ್ನ ಕಾರ್ಯವನ್ನು ಒಳಹೊರಗೂ ವ್ಯಾಪಿಸಿರುವುದು; ಮಣ್ಣೇ ತನ್ನ ಕಾರ್ಯವಾದ ಘಟವನ್ನು ಒಳ-ಹೊರಗೂ ವ್ಯಾಪಿಸಿರುತ್ತದೆ, ತನ್ನ ಕಾರ್ಯವಾದ ಘಟವನ್ನು ವ್ಯಾಪಿಸಿಕೊಂಡಿರುವ ಮೃತ್ತಿಕೆಯು ಆ ಘಟಕ್ಕೆ ಉಪಾದಾನಾಕಾರಣವಾಗಿರುವಂತೆ, ಸಮಸ್ತಜಗತ್ತನ್ನೂ ಒಳ-ಹೊರಗೆ ವ್ಯಾಪಿಸಿಕೊಂಡಿರುವ ಶ್ರೀನಾರಾಯಣನು ಸಕಲಜಗತ್ತಿಗೂ ಉಪಾದಾನಕಾರಣ ನೆಂದು ಇದರಿಂದ ಸ್ಪಷ್ಟವಾಗುವುದು. ಕಾರ್ಯವಸ್ತುವು ತನ್ನ ಉಪಾದಾನಕಾರಣ ವಸ್ತುವಿಗೆ ಬೇರೆಯಾದ ಎಂದರೆ ಸ್ವತಂತ್ರವಾದ ಸತ್ತಾಸ್ವರೂಪವುಳ್ಳ ವಸ್ತುವಲ್ಲ–ಘಟಕ್ಕೆ ಅದರ ಉಪಾದಾನಕಾರಣವಾದ ಮೃತ್ತಿಕೆಯನ್ನು ಬಿಟ್ಟು, ತನ್ನದೇ ಆದ ಸತ್ತೆಯಾಗಲಿ, ಸ್ವರೂಪವಾಗಲಿ ಇರುವುದಿಲ್ಲ. ಆದ್ದರಿಂದ, ಮೃತ್ತಿಕೆಯೇ ಅದು ಹೊರತು, ಘಟ-ವೆಂದು ಬೇರೊಂದು ವಸ್ತುವು ಅಲ್ಲಿ ಇರುವುದಿಲ್ಲ- ಮೃತ್ತಿಕೆಯೇ ಕುಂಬಾರನ ಪ್ರಯತ್ನ ದಿಂದ ಒಂದು ವಿಕಾರವನ್ನು, ಒಂದು ವಿಶೇಷಾಕಾರವನ್ನು ಪಡೆಯಲು ಅದಕ್ಕೆ ಘಟವೆಂದು ವ್ಯವಹಾರವಾಗುವುದು. ಆದ್ದರಿಂದ, ಘಟವೆಂಬುದು ಮೃತ್ತಿಕೆಯ ಬರಿಯ ನಾಮ-ರೂಪಮಾತ್ರವೇ ಹೊರತು, ಬೇರೊಂದು ಸ್ವತಂತ್ರವಾದ ವಸ್ತುವಲ್ಲ– ಅನ್ಯವಸ್ತುವಲ್ಲ. ಇದರಂತೆಯೇ, ಸಮಸ್ತಜಗತ್ತೂ ಸಹ, ಅದಕ್ಕೆ ಉಪಾದಾನಕಾರಣನಾಗಿರುವ ಶ್ರೀ–

Sri Vidyabharathi Book Centre, Sringeri

CC-O. In Public Domain. Digitized by eGangotri

ನಾರಾಯಣನು ಸ್ವತಃ ಯಾವಾಗಲೂ ಅದ್ವಿತೀಯತತ್ತ್ವವೇ ಆಗಿರುತ್ತಾನೆ- ಜಗತ್ತೆಲ್ಲ ಕೇವಲ ನಾಮರೂಪಮಾತ್ರ- ಮಾಯಾಮಯ-ಮಿಥ್ಯಾ-ಕಲ್ಪಿತ-ಅವಾಸ್ತವ-ಅಧ್ಯಸ್ತ.

ಇದಲ್ಲದೆ, ಶ್ರೀಮನ್ನಾರಾಯಣನು ಸಕಲಜಗತ್ತಿಗೂ ಮೂಲಕಾರಣನು,- ಎಲ್ಲವೂ ಅವನಿಂದಲೇ ಉಂಟಾಗಿರುತ್ತದೆ. ಆದ್ದರಿಂದ, ಅವನು ಬೇರೆ ಯಾರಿಂದಲೂ ಉತ್ಪನ್ನನಲ್ಲ- ಕಾರ್ಯರೂಪನಲ್ಲ. ಕಾರ್ಯವೆಲ್ಲ ಉತ್ಪತ್ತ್ಯಾದಿವಿಕಾರವುಳ್ಳದ್ದು. ಕಾರಣನಾಗಿರುವಶ್ರೀನಾರಾಯಣನು ಕಾರ್ಯವಲ್ಲದ ನಿತ್ಯನೂ ನಿರ್ವಿಕಾರನೂ ಆಗಿರುವನು; ಪರಿಚ್ಛಿನ್ನವಾದುದು ವಿಕಾರಿಯೂ ಅನಿತ್ಯವೂ ಆಗುವುದು. ಆದುದರಿಂದ, ಶ್ರೀಮನ್ನಾ-ರಾಯಣನು ನಿತ್ಯನಿರ್ವಿಕಾರನಾಗಿ ಅಖಂಡಾಪರಿಚ್ಛಿನ್ನಸ್ವರೂಪನೆಂದು ಸಿದ್ಧಿಸುವುದು. ಇಂಥ ನಿರ್ವಿಕಾರಸ್ವರೂಪನಾದ ಶ್ರೀನಾರಾಯಣನು, ಜಗತ್ತಿಗೆ ಕಾರಣನಾಗುವುದಾದರೂ ಎಂತು.? **ಅಜಾಯಮಾನೋ ಬಹುಧಾವಿಜಾಯತೇ** "ತಾನು ಜಾಯಮಾನ-ಹುಟ್ಟುವವನು- ಆಗದೆಯೇ ಬಹುಜಗದ್ರೂಪನಾಗಿ ಜನಿಸುತ್ತಾನೆ"- ಎಂದು ಶ್ರುತಿಯು ಇದನ್ನು ವಿಶದಪಡಿಸುತ್ತದೆ. ಎಂದರೆ ಹಗ್ಗವು ತಾನು ವಿಕಾರಹೊಂದದೆ ಹಾವಿಗೆ ಕಾರಣವಾಗುವಂತೆ, ಶ್ರೀನಾರಾಯಣನು ತಾನು ವಿಕಾರನಾಗದೆ ಜಗದ್ವಿಕಾರಕಾರಣನಾ-ಗುತ್ತಾನೆ-ಎಂದು ಹೇಳಿದಹಾಗಾಯಿತು. ಅದಕಾರಣ, ಹಗ್ಗದಲ್ಲಿ ಹಾವಿನ ಭ್ರಾಂತಿ-ಯಾಗುವಂತೆ, ಪರಮಾತ್ಮನಲ್ಲಿ ಜಗತ್ತು ಭ್ರಾಂತಿಯಾಗಿ ಕಾಣಬರುತ್ತದೆಂದು ನಿಶ್ಚಿತವಾ-ಗುವುದು. ಹೀಗೆ, ಸರ್ವಜಗತ್ಕಲ್ಪನೆಗೆ ಅಧಿಷ್ಠಾನನಾಗಿ ಅದ್ವಿತೀಯನಾಗಿರುವ ಪರ-ಮಾತ್ಮನೇ ಆತ್ಮನ ವಾಸ್ತವತತ್ತ್ವರೂಪವು- ಆತ್ಮನು ಅದ್ವಿತೀಯಪರಮಾತ್ಮನೇ ಎಂಬುದು ಯಥಾರ್ಥತತ್ತ್ವವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವತ್ಪಾದರವರ ಮುಖ್ಯಶಿಷ್ಯಚತುಷ್ಟಯದವರ ಚರಿತಸಂಗ್ರಹ

ಶ್ರೀಪರಮೇಶ್ವರನು ವೈದಿಕಧರ್ಮದ ಉಜ್ಜೀವನಕ್ಕಾಗಿ ತಾನು ಶ್ರೀಭಗವತ್ಪಾದರವರ ರೂಪದಿಂದ ಅವತರಿಸಿಬಂದಾಗ, ಅವರ ಈ ಕಾರ್ಯಕ್ಕೆ ಸಹಾಯಕರಾಗುವಂತೆ ನಿಯೋಜಿಸಿದ ದೇವತೆಗಳು ಅವರ ನಾಲ್ವರು ಶಿಷ್ಯರಾಗಿ ಅವತರಿಸಿದರು. ಇವರಲ್ಲಿ ಶ್ರೀಮಹಾವಿಷ್ಣುವು ಶ್ರೀಪದ್ಮಪಾದರು, ಶ್ರೀಬ್ರಹ್ಮದೇವನು ಶ್ರೀಸುರೇಶ್ವರರು; ಶ್ರೀವಾಯುದೇವನು ತನ್ನ ಎರಡು ಅಂಶಗಳಿಂದ ಶ್ರೀಹಸ್ತಾಮಲಕರು ಮತ್ತು ಶ್ರೀತೋಟಕರು. ಶ್ರೀಮಾಧವೀಯಶಂಕರವಿಜಯಗ್ರಂಥಾನುಸಾರವಾಗಿ ಇವರುಗಳ ಚರಿತ್ರೆಯು ಸಂಗ್ರಹವಾಗಿ ನಿರೂಪಿತವಾಗಿದೆ.

ಪುಮರ್ಥಾಶ್ಚತ್ವಾರಃ ಕಿಮುತ ನಿಗಮಾ ಋಕ್ಪ್ರಭೃತಯಃ
ಪ್ರಭೇದಾ ವಾ ಮುಕ್ತೇರ್ವಿಮಲತರಸಾಲೋಕ್ಯಮುಖರಾಃ
ಮುಖಾನ್ಯಾಹೋ ಧಾತುಶ್ಚಿರಮಿತಿ ವಿಮೃಶ್ಯಾಥ ವಿಬುಧಾಃ
ವಿದುಃ ಶಿಷ್ಯಾನ್ ಹಸ್ತಾಮಲಕಮುಖರಾನ್ ಶಂಕರಗುರೋಃ

ಶ್ರೀಪದ್ಮಪಾದರು, ಶ್ರೀಸುರೇಶ್ವರರು, ಶ್ರೀಹಸ್ತಾಮಲಕರು ಮತ್ತು ಶ್ರೀತೋಟಕರು–ಎಂಬ ಶ್ರೀಮಚ್ಛಂಕರಭಗವತ್ಪಾದಾಚಾರ್ಯರವರ ಪ್ರಧಾನಶಿಷ್ಯಚತುಷ್ಟಯದವರನ್ನು ಕಂಡು, ವಿದ್ವಾಂಸರುಗಳು–ಇವರು–ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪುರುಷಾರ್ಥಚತುಷ್ಟಯರೋ; ಅಥವಾ ಋಕ್, ಯಜುಸ್ಸು, ಸಾಮ ಮತ್ತು ಅಥರ್ವಣವೆಂಬ ವೇದಚತುಷ್ಟಯರೋ, ಅಥವಾ ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ ಮತ್ತು ಸಾಯುಜ್ಯಗಳೆಂಬ ಮುಕ್ತಿಚತುಷ್ಟಯರೂಪರೋ; ಅಥವಾ ಶ್ರೀಚತುರ್ಮುಖಬ್ರಹ್ಮದೇವನ ಮುಖಚತುಷ್ಟಯರೂಪರೋ"–ಎಂದು ಆಶ್ಚರ್ಯಪಡುತ್ತಾರೆ!

ಶೃಂಗಗಿರಿ ಕವಿ ನರಸಿಂಹಶರ್ಮಾ,
ಅದ್ವೈತಾಶ್ರಮಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂಜ್ಯಶ್ರೀಪದ್ಮಪಾದಗುರುಚರಿತ್ರೆ

ಶ್ರೀಮಚ್ಛಂಕರಭಗವತ್ಪಾದಾಚಾರ್ಯರು ಶ್ರೀಗೋವಿಂದಭಗವತ್ಪೂಜ್ಯಪಾದಾಚಾರ್ಯರಿಂದ ಸನ್ನ್ಯಾಸವನ್ನೂ ವೇದಾಂತಮಹಾವಾಕ್ಯೋಪದೇಶವನ್ನೂ ಪಡೆದು, ಶ್ರೀಗುರುವರ್ಯರ ನಿದೇಶದಂತೆ ಶ್ರೀಕಾಶೀಕ್ಷೇತ್ರಕ್ಕೆ ಬಂದು, ಶ್ರೀವಿಶ್ವೇಶ್ವರನನ್ನು ಆರಾಧಿಸುತ್ತ, ಕೆಲವುಕಾಲವಿದ್ದರು.

ಆ ಸಮಯದಲ್ಲಿ, ಸಮಸ್ತವೇದಾಧ್ಯಯನಸಂಪನ್ನನೂ ಮೇಧಾವಿಯೂ, ತೇಜಸ್ವಿಯೂ ಆಗಿದ್ದ ಒಬ್ಬ ಬ್ರಾಹ್ಮಣಬ್ರಹ್ಮಚಾರಿಯು ಶ್ರೀಭಗವತ್ಪಾದರಿಗೆ ಶರಣುಬಂದು ಪ್ರಾರ್ಥಿಸಿಕೊಂಡನು– "ಪೂಜ್ಯರೇ, ನಾನು ಕಾವೇರಿತೀರದ ಚೋಳದೇಶದವನು; ಜನ್ಮಮರಣಜರಾಸುಖದುಃಖಾದ್ಯನುಭವಗಳಿಂದ ಅತ್ಯಂತಭಯಂಕರವಾಗಿರುವ ಈಸಂಸಾರದಿಂದ ಭೀತನಾಗಿ. ಇದರಿಂದ ನನ್ನನ್ನು ಉದ್ಧಾರಮಾಡುವ ಮಹಾತ್ಮರನ್ನು ಹುಡುಕುತ್ತ ಬಂದಿದ್ದೇನೆ; ನನ್ನ ಪೂರ್ವಪುಣ್ಯದ ಭಾಗ್ಯೋದಯದಿಂದ ತಮ್ಮ ಪಾದಕಮಲಗಳು ನನಗೆ ಲಭಿಸಿವೆ; ನನ್ನನ್ನು ದಯೆಯಿಂದ ಉದ್ಧರಿಸಬೇಕು"– ಎಂದು.

ಆಗ ದಯಾಪರವಶರಾದ ಶ್ರೀಭಗವತ್ಪಾದರು, ಶರಣಾರ್ಥಿಯಾದ ಅವನ ಯೋಗ್ಯತೆಯನ್ನು ಪರಿಶೀಲಿಸಿ. ಆತನಿಗೆ ಸನ್ನ್ಯಾಸದೀಕ್ಷೆಯನ್ನಿತ್ತು, "ಸನಂದನ"– ರೆಂದು ನಾಮಕರಣಮಾಡಿದರು. ಇವರು ಶ್ರೀಭಗವತ್ಪಾದರವರ ಮೊದಲನೆಯ ಶಿಷ್ಯರು. ಹಾಗೆಯೇ ಇನ್ನೂ ಇತರರೂ ಅನೇಕರೂ ಶ್ರೀಭಗವತ್ಪಾದರಿಗೆ ಅಲ್ಲಿ ಶಿಷ್ಯರಾಗಿ ಬಂದರು.

ಮೇಧಾವಿಗಳೂ ಗುರುಭಕ್ತಿಪೂರ್ಣರೂ ಆಗಿದ್ದ ಇವರ ಭಕ್ತ್ಯತಿಶಯವನ್ನು ಇತರ ಶಿಷ್ಯರುಗಳಿಗೆ ತಿಳಿಸಿಕೊಡುವ ನೆಪದಿಂದ ಒಂದು ದಿವಸ, ಗಂಗಾನದಿಯ ಆಚೆಯ ದಡದಲ್ಲಿದ್ದ ಶ್ರೀಸನಂದನರನ್ನು, ತಮ್ಮ ಸಮೀಪಕ್ಕೆ ಕೂಡಲೆಬರುವಂತೆ ಕರೆಯಿತ್ತರು. ನದಿಯನ್ನು ದಾಟಬರಲು ಸಾಧನೆಯು ಯಾವುದೂ ಆಗ ಇರದಿರಲು,– "ಯಾರ ಭಕ್ತಿಯು ದುರಂತವಾದ ಸಂಸಾರಸಾಗರವನ್ನೇ ದಾಟಸುವುದೋ, ಅಂಥ ಭಕ್ತಿಯು ಇರುವಾಗ ಈ ನದಿಯು ಎಷ್ಟರದು?"– ಎಂಬ ದೃಢವಿಶ್ವಾಸದಿಂದ, ನದಿಯ ಮೇಲೆಯೇ ನಡೆದು ಬಂದರು. ಶ್ರೀಸನಂದನರ ಗುರುಭಕ್ತಿಗೆ ಮೆಚ್ಚಿದ ಶ್ರೀಗಂಗಾದೇವಿಯು, ಶ್ರೀಸನಂದನರ ಹೆಜ್ಜೆಹೆಜ್ಜೆಗೂ ಒಂದೊಂದು ಕಮಲವನ್ನು ಆಸರೆಯಾಗಿ ಒದಗಿಸಿದಳು. ಆ ಕಮಲಗಳ ಮೂಲಕವಾಗಿ ಬಂದು ನಮಸ್ಕರಿಸಿದ ಶ್ರೀಸನಂದನರನ್ನು ಶ್ರೀಭಗವತ್ಪಾದರು "ಶ್ರೀಪದ್ಮಪಾದರೆಂದು" ಕರೆದರು. ಇವರು ಮುಂದೆ ಅನ್ವರ್ಥವಾದ ಈ ಹೆಸರಿನಿಂದಲೇ ಪ್ರಸಿದ್ಧರಾದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವತ್ಪಾದರವರ ಮುಖಕಮಲದಿಂದಲೇ ಮೂರುಸಲ ಅವರ ಶ್ರೀಶಾರೀರಕ ಭಾಷ್ಯವನ್ನು ಶ್ರವಣಮಾಡಿದ ಭಾಗ್ಯವು ಶ್ರೀಪದ್ಮಪಾದರವರದು. ಇವರು ಶ್ರೀಶಾರೀರಿಕ ಭಾಷ್ಯದ ಮೇಲೆ ಶ್ರೀಪಂಚಪಾದಿಕೆಯೆಂಬ ಅಮೋಘವಾದ ವ್ಯಾಖ್ಯಾನವನ್ನು ಬರೆದಿರು-ತ್ತಾರೆ. 'ಪ್ರಪಂಚಸಾರ'–ವೆಂಬ ಶ್ರೀಭಗವತ್ಪಾದರ ಮಂತ್ರಶಾಸ್ತ್ರದ ಗ್ರಂಥಕ್ಕೆ ವಿಸ್ತಾರ ವಾಗಿ ವಿವರಣೆಯನ್ನು ಬರೆದಿದ್ದಾರೆ; ಇದು ಮಂತ್ರಶಾಸ್ತ್ರಜ್ಞರಿಗೆ ಪರಮಪ್ರಮಾಣ-ವಾಗಿದೆ. ಶ್ರೀಶಿವಪಂಚಾಕ್ಷರೀಮಹಾಮಂತ್ರಕ್ಕೆ ಭಾಷ್ಯವನ್ನು ರಚಿಸಿರುತ್ತಾರೆ; ಶ್ರೀಭಗ-ವತ್ಪಾವರ ಆತ್ಮಬೋಧಪ್ರಕರಣವನ್ನೂ ವ್ಯಾಖ್ಯಾನಿಸಿದ್ದಾರೆ. "ವಿಜ್ಞಾನದೀಪಿಕೆ"–ಯೆಂಬ ಸ್ವತಂತ್ರಗ್ರಂಥವನ್ನು ರಚಿಸಿ, ಶಾಸ್ತ್ರಗಳಲ್ಲಿ ಉಪದಿಷ್ಟಗಳಾಗಿರುವ ಎಲ್ಲ ನಿಯಮ ಗಳೂ, ಆತ್ಮತತ್ತ್ವಸಾಕ್ಷಾತ್ಕಾರಕ್ಕೆ ಅವಶ್ಯವಾಗಿರುವ ಚಿತ್ತಶುದ್ಧಿಗೆ ಸಾಧನೆಗಳೆಂಬು-ದನ್ನು ವಿಶದಪಡಿಸಿರುತ್ತಾರೆ.

ಶ್ರೀಪದ್ಮಪಾದರು ಕಡೆಯವರೆಗೂ ಶ್ರೀಭಗವತ್ಪಾದರ ನೆರಳಿನಂತೆ ಅನುಸರಿಸಿಕೊಂಡಿದ್ದು, ಎಲ್ಲ ಸಂದರ್ಭಗಳಲ್ಲಿಯೂ ಅಮೋಘವಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಭಗವತ್ಪಾದರು ಶ್ರೀಕಾಶೀವಿಶ್ವೇಶ್ವರನ ಅನುಗ್ರಹವನ್ನು ಪಡೆದು ಬದರಿಕಾಶ್ರಮಕ್ಕೆ ಬಂದು, ಅಲ್ಲಿ ಪ್ರಸ್ಥಾನತ್ರಯಕ್ಕೂ ಭಾಷ್ಯಗಳನ್ನು ವಿರಚಿಸಿ, ಪುನಃ ಶ್ರೀಕಾಶೀಕ್ಷೇತ್ರಕ್ಕೆ ಬಂದು, ಅಲ್ಲಿ ತಮ್ಮ ಶಿಷ್ಯಸಮುದಾಯಕ್ಕೆ ತಮ್ಮ ಭಾಷ್ಯಗಳನ್ನು ಪ್ರವಚನಮಾಡುತ್ತಿದ್ದ ಒಂದು ದಿವಸ, ಅವರ ಭಾಷ್ಯವನ್ನು ಪರೀಕ್ಷಿಸುವುದಕ್ಕಾಗಿ ಶ್ರೀಬಾದರಾಯಣವ್ಯಾಸರು ವೃದ್ಧಬ್ರಾಹ್ಮಣವೇಷದಿಂದ ಬಂದರು. ಆಗ ಶ್ರೀಶಾರೀರಿಕ ಸೂತ್ರಗಳ ಮೂರನೆಯ ಅಧ್ಯಾಯದ ಒಂದನೆಯ ಪಾದದ ಮೊದಲನೆಯ ಸೂತ್ರದ ಅರ್ಥದ ವಿಷಯವಾಗಿ ಅವರೀರ್ವರಿಗೂ ವಿಪುಲವಾದ ಚರ್ಚೆಯಾಯಿತು ಆ ಬ್ರಾಹ್ಮ-ಣನು ಮಾಡಿದ ಎಲ್ಲ ಆಕ್ಷೇಪಗಳಿಗೂ ಶ್ರೀಭಗವತ್ಪಾದರು ಶ್ರುತಿಸಮ್ಮತವಾಗಿ ಸಮಾ-ಧಾನಗಳನ್ನು ತಿಳಿಸಿದರು. ಈ ವಾದವು ಎಂಟುದಿನಗಳ ಪರ್ಯಂತವಾಗಿ ನಡೆಯುತ್ತಿರ-ಲಾಗಿ ಶ್ರೀಪದ್ಮಪಾದರು 'ಈ ಬ್ರಾಹ್ಮಣರು ಶ್ರೀಬಾದರಾಯಣವ್ಯಾಸರು'– ಎಂದು ಸೂಚಿ ಸಿದರು. ಕೂಡಲೇ ಶ್ರೀಭಗವತ್ಪಾದರು ಅವರನ್ನು ವಂದಿಸಿ ಕ್ಷಮೆಬೇಡಿದರು. ಆಗ ಶ್ರೀವ್ಯಾಸರು ಶ್ರುತಿಸೂತ್ರಸಾಮರಸ್ಯದಿಂದ ಪಾರಮಾರ್ಥಿಕವಾದ ಯಥಾರ್ಥತತ್ತ್ವವನ್ನು ಪ್ರತಿಪಾದಿಸಿರುವ ಶ್ರೀಭಗವತ್ಪಾದರ ಭಾಷ್ಯಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಪ್ರಶಂಶಿಸಿ ಈ ಭಾಷ್ಯಗಳನ್ನು ಲೋಕಕ್ಷೇಮಕ್ಕಾಗಿ ಎಲ್ಲೆಡೆಯಲ್ಲಿಯೂ ಪ್ರಚಾರಮಾಡ-ಬೇಕೆಂದು ಆದೇಶವನ್ನಿತ್ತು ಅಂತರ್ಹಿತರಾದರು.

ಶ್ರೀಶಿವಗುರು–ಆರ್ಯಾಂಬೆಯವರಿಗೆ ಶ್ರೀವೃಷೇಶ್ವರಸ್ವಾಮಿಯು ಅನುಗ್ರಹಿಸಿ-ದ್ದಂತೆ ಶ್ರೀಭಗವತ್ಪಾದರಿಗೆ ಜನ್ಮತಃ ಎಂಟುವರ್ಷಗಳ ಆಯಸ್ಸೇ ನಿಯಮಿತವಾಗಿತ್ತು. ಮೊಸಳೆಗ್ರಸ್ತವಾದಾಗ ಸನ್ನ್ಯಾಸಗ್ರಹಣಸಂಕಲ್ಪದಿಂದ, ಶ್ರೀಭಗವತ್ಪಾದರಿಗೆ ಅದು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಸಜನ್ಮವಾಗಿ, ಹದಿನಾರುವರ್ಷಗಳ ಆಯಸ್ಸು ದೊರಕಿತ್ತು. "ಷೋಡಶೇ ಕೃತವಾನ್ಭಾಷ್ಯಂ"– ಎಂಬಂತೆ ಪ್ರಸ್ಥಾನತ್ರಯಭಾಷ್ಯವನ್ನು ರಚಿಸುವಲ್ಲಿ ಶ್ರೀಭಗವತ್ಪಾದರಿಗೆ ಹದಿನಾರುವರ್ಷಗಳು ತುಂಬಿತ್ತು. ಭಾಷ್ಯಗಳ ಪ್ರಚಾರಕ್ಕಾಗಿ ಈ ಆಯುಃಪರಿಮಾಣವನ್ನು ದ್ವಿಗುಣವಾಗಿ ಅನುಗ್ರಹಿಸುವುದಕ್ಕಾಗಿಯೇ ಶ್ರೀವ್ಯಾಸರು ಬಂದದ್ದು. ಹೀಗೆ ಶ್ರೀಭಗವತ್ಪಾದರಿಗೆ ಒಟ್ಟನಲ್ಲಿ ಮೂವತ್ತೆರಡುವರ್ಷಗಳ ಆಯಸ್ಸು ಲಭಿಸಿ, ಭೂಮಂಡಲವನ್ನು ಅಲಂಕರಿಸಿ, ಅವರ ಮಹೋಪಕಾರವನ್ನು ಅನುಭವಿಸುವ ಭಾಗ್ಯವು ದೊರೆತು ಅವರ ಶಿಷ್ಯರ ಭಾಗ್ಯೋದಯವಾಯಿತು?

ಶ್ರೀಭಗವತ್ಪಾದರೊಡನೆ ಶ್ರೀವಿಶ್ವರೂಪಮಂಡನಮಿಶ್ರರು ವೇದಾಂತಪ್ರಮಾಣವಿಷಯದಲ್ಲಿ ವಾದಮಾಡಿ ಪರಾಜಿತರಾಗಿ, ವಾದದನಿಯಮದಂತೆ ಅವರು ಸನ್ನ್ಯಾಸಾಶ್ರಮವನ್ನು ಸ್ವೀಕರಿಸಬೇಕಾಗಿ ಬಂದಾಗ, ಅವರ ಸಹಧರ್ಮಚಾರಿಣಿಗಳಾದ ಶ್ರೀಸರಸವಾಣಿಯವರು ಶ್ರೀಭಗವತ್ಪಾದರೊಡನೆ ವಾದಮಾಡಿ, ಕಡೆಯಲ್ಲಿ ಕಾಮಕಲೆಯ ವಿಷಯದಲ್ಲಿ ಪ್ರಶ್ನೆಮಾಡಿದರು. ಆಗ ಶ್ರೀಭಗವತ್ಪಾದರು ಒಂದುಮಾಸದ ಅವಧಿಯನ್ನು ಪಡೆದು, ಮೃತನಾಗಿದ್ದ ಅಮರುಕರಾಜನ ದೇಹವನ್ನು ಪರಕಾಯಪ್ರವೇಶಯೋಗಸಾಮರ್ಥ್ಯದಿಂದ ಪ್ರವೇಶಿಸಲು ಉದ್ಯುಕ್ತರಾದರು. ಆಗ ಶ್ರೀಪದ್ಮಪಾದರು–ಇದು ಸನ್ನ್ಯಾಸಧರ್ಮಕ್ಕೆ ಭಂಗಕರವಾದಿತೆಂದು–ಶ್ರೀಭಗವತ್ಪಾದರಿಗೆ ಸೂಚಿಸಿ ಎಚ್ಚರಿಸಿದರು. ಶ್ರೀಭಗವತ್ಪಾದರು–"ದೇಹಾಂತರದ ಸಂಬಂಧವು ದೇಹಾಂತರಕ್ಕೆ ಸಂಭವಿಸುವುದಿಲ್ಲ"-ವೆಂಬ ತತ್ತ್ವವನ್ನು ತಿಳಿಸಿ, ಅವರನ್ನು ಸಮಾಧಾನಪಡಿಸಿದರು.

ಅಮರುಕರಾಜನ ಮೃತದೇಹವನ್ನು ಪ್ರವೇಶಿಸುವುದಕ್ಕಾಗಿ ಶ್ರೀಭಗವತ್ಪಾದರು ತಮ್ಮ ದೇಹವನ್ನು ಒಂದು ಗುಹೆಯಲ್ಲಿ ಬಿಟ್ಟುಹೋದಾಗ, ಶ್ರೀಪದ್ಮಪಾದರು ಅದರ ರಕ್ಷಣೆಯಲ್ಲಿ ಜಾಗರೂಕರಾಗಿದ್ದರು. ನಿಯಮಿತವಾದ ಒಂದುಮಾಸದ ಅವಧಿಯು ಮೀರುತ್ತಿದ್ದುದನ್ನು ಪರ್ಯಾಲೋಚಿಸಿ, ಶ್ರೀಪದ್ಮಪಾದರು ಗಾಯಕವೇಷದಿಂದ ಅಮರುಕರಾಜನ ಸಭೆಯನ್ನು ಪ್ರವೇಶಿಸಿ, ತಮ್ಮ ಗಾನದ ನೆಪದಿಂದ ಶ್ರೀಭಗವತ್ಪಾದರಿಗೆ ಸಮಯವನ್ನು ಸೂಚಿಸಿ ಅವರನ್ನು ಕರೆತಂದರು.

ಶ್ರೀಭಗವತ್ಪಾದರು ಶ್ರೀಶೈಲಕ್ಕೆ ತೆರಳಿದಾಗ, ಅಲ್ಲಿ ಭೈರವೋಪಾಸಕನಾದ ಕಾಪಾಲಿಕನು ಶ್ರೀಭಗವತ್ಪಾದರನ್ನು ವಾದದಲ್ಲಿ ಜಯಿಸಲಾಗದೆಂದು ತಿಳಿದು, ಕಪಟದಿಂದ ಅವರನ್ನು ಸಮೀಪಿಸಿ–"ತಾನು ಭೈರವನನ್ನು ಆರಾಧಿಸಿ ಪ್ರತ್ಯಕ್ಷೀಕರಿಸಿಕೊಂಡು, ತಾನು ಸಶರೀರವಾಗಿಯೇ ಕೈಲಾಸಕ್ಕೆ ಹೋಗುವ ಇಚ್ಛೆಯನ್ನು ಕೇಳಿಕೊಂಡಾಗ, ಭೈರವನು– 'ಚಕ್ರವರ್ತಿಯ ಅಥವಾ ಸರ್ವಜ್ಞನ ಶಿರಸ್ಸನ್ನು ಒಪ್ಪಿಸಬೇಕೆಂದು'- ತಿಳಿಸಿರುವನೆಂದೂ, ಚಕ್ರವರ್ತಿಯು ಈಗ ಯಾರೂ ಇಲ್ಲವಾದ್ದರಿಂದ, ಸರ್ವಜ್ಞರಾಗಿ ದೇಹಾಭಿಮಾನಶೂನ್ಯರಾಗಿರುವ ತಾವು ತಮ್ಮ ಶಿರಸ್ಸನ್ನು ಅನುಗ್ರಹಿಸಿ, ತನ್ನ ಇಚ್ಛೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ಸಲ್ಲಿಸಿಕೊಡಬೇಕೆಂದೂ-ತಿಳಿಸಿದನು. ಶ್ರೀಭಗವತ್ಪಾದರು ಅದಕ್ಕೆ ಒಡಂಬಟ್ಟು, ಏಕಾಂತದಲ್ಲಿ ಸಮಾಧಿಸ್ಥರಾಗಿದ್ದಾಗ ಆ ಭೈರವನು ಶ್ರೀಭಗವತ್ಪಾದರವರ ಶಿರಚ್ಛೇದಕ್ಕೆ ಸಿದ್ಧನಾಗಿ ಬಂದಾಗ, ಶ್ರೀಪದ್ಮಪಾದರು ಇದನ್ನು ತಿಳಿದು, ತಮ್ಮ ಆರಾಧ್ಯದೇವನಾದ ಶ್ರೀನೃಸಿಂಹಸ್ವಾಮಿಯರೂಪದಿಂದ ಪ್ರಕಟರಾಗಿ ಆ ಭೈರವನನ್ನು ಸಂಹರಿಸಿ, ಆಕಸ್ಮಿಕವಾಗಿ ಪ್ರಾಪ್ತವಾಗಿದ್ದ ಆಪತ್ತನ್ನು ಪರಿಹರಿಸಿದರು.

ಶ್ರೀಪದ್ಮಪಾದರಿಗೆ ಶ್ರೀನೃಸಿಂಹಸ್ವಾಮಿಯ ಅನುಗ್ರಹವು ದೊರಕಿದ ಸನ್ನಿವೇಶವನ್ನು ಆಗ ಶ್ರೀಪದ್ಮಪಾದರು ಹೀಗೆ ವ್ಯಕ್ತಪಡಿಸಿದರು. "ನಾನು ಬಾಲ್ಯದಲ್ಲಿ ಅಹೋಬಿಲವೆಂಬ ಪರ್ವತದ ಪವಿತ್ರವಾದ ಆಶ್ರಮದಲ್ಲಿ, ಭಕ್ತಪರಾಧೀನನಾದ ಶ್ರೀನೃಸಿಂಹಸ್ವಾಮಿಯನ್ನು ಬಹುಕಾಲ ಧ್ಯಾನಮಾಡುತ್ತಿರುವಾಗ. ಒಬ್ಬ ಕಿರಾತನು ಬಂದು, ನಾನು ಇಲ್ಲಿರುವ ಕಾರಣವನ್ನು ಪ್ರಶ್ನೆಮಾಡಿದನು. ಶ್ರೀನೃಸಿಂಹಸ್ವಾಮಿಯ ಸಂದರ್ಶನಕ್ಕಾಗಿ ಇಲ್ಲಿ ಧ್ಯಾನಾಸಕ್ತನಾಗಿರುವೆನೆಂಬುದನ್ನು ಕೇಳಿತಿಳಿದು, ಆ ಕಿರಾತನು, ಕೂಡಲೆ ಒಂದು ಗುಹೆಯಿಂದ ಶ್ರೀನೃಸಿಂಹಸ್ವಾಮಿಯನ್ನು ಬಳ್ಳಿಗಳಿಂದ ಕಟ್ಟಿ ಎಳತಂದು ನನಗೆ ತೋರಿಸಿದನು. "ಮಹಾಮಹರ್ಷಿಗಳಿಗೂ ಪ್ರಸನ್ನನಾಗದ ನೀನು ಈ ಕಿರಾತನಿಗೆ ಹೀಗೆ ವಶನಾಗಿರುವುದು ಹೇಗೆ?"–ಎಂದು ನಾನು ಸ್ತುತಿಸಿಪ್ರಾರ್ಥಿಸಲಾಗಿ–"ಈ ಕಿರಾತನು ನನ್ನನ್ನು ಧ್ಯಾನಿಸಿದಂಥ ಏಕಾಗ್ರತೆಯಿಂದ ಬೇರೆ ಯಾರೂ ಧ್ಯಾನಿಸಿಲ್ಲವಾಗಿ, ನಾನು ಇವನಿಗೆ ತುಂಬ ಅಧೀನನಾಗಿದ್ದೇನೆ"–ಎಂದು ತಿಳಿಸಿ, ನೆನೆಸಿದಾಗ ನನಗೂ ಒಲಿಯುವಂತೆ ಅನುಗ್ರಹಿಸಿ ಅಂತರ್ಹಿತನಾದನು"–ಎಂದು. ಇದನ್ನು ಕೇಳಿ ಎಲ್ಲರೂ ಶ್ರೀಪದ್ಮಪಾದರ ಪರಮಭಕ್ತಿಭಾಗ್ಯಕ್ಕೆ ಆನಂದಾಶ್ಚರ್ಯಭರಿತರಾದರು.

ಶ್ರೀಭಗವತ್ಪಾದರು ಸಂಚಾರಕ್ರಮದಿಂದ ಕರ್ಣಾಟಕಪ್ರಾಂತ್ಯಕ್ಕೆ ಬಂದಾಗ ಅಲ್ಲಿ ಕ್ರಕಚನೆಂಬ ಕಾಪಾಲಿಕನು, ಶ್ರೀಭಗವತ್ಪಾದರನ್ನು ಜಯಿಸಲಾರದೆ, ಅಭಿಚಾರದಿಂದ ಶ್ರೀಭಗವತ್ಪಾದರಿಗೆ ಭಗಂದರವೆಂಬ ತೀಕ್ಷ್ಣವಾದ ಬಾಧೆಯನ್ನು ಉಂಟುಮಾಡಿದನು. ಶ್ರೀಭಗವತ್ಪಾದರು ಇದರಲ್ಲಿ ತೀರಾ ಉದಾಸೀನತೆಯಿಂದ ಇದ್ದರೂ, ಶ್ರೀಪದ್ಮಪಾದರು ದೇಶದೇಶಗಳಿಂದ ಹಲವಾರು ವೈದ್ಯವರರನ್ನು ಕರೆತಂದು ಎಷ್ಟು ಚಿಕಿತ್ಸೆಯನ್ನು ನಡೆಯಿಸಿದರೂ ಪ್ರಯೋಜನವಾಗದಿದ್ದಾಗ, ದೇವವೈದ್ಯರಾದ ಅಶ್ವಿನೀದೇವತೆಗಳು ಬಂದು– "ಇದು ಆಭಿಚಾರದ ಫಲವಾದ್ದರಿಂದ, ಔಷಧಿಚಿಕಿತ್ಸೆಗೆ ವಿಷಯವಲ್ಲ"–ಎಂದು ತಿಳಿಸಿದರು. ಮಂತ್ರಶಾಸ್ತ್ರಪ್ರವೀಣರಾಗಿದ್ದ ಶ್ರೀಪದ್ಮಪಾದರು ಕೂಡಲೆ ಪ್ರತಿಯಾಗಿ ಅಭಿಚಾರಪ್ರಯೋಗವನ್ನು ಮಾಡಲಾಗಿ, ಆ ಕ್ರಕಚನು ಅದೇ ರೋಗದಿಂದ ನಾಶವನ್ನೈದಿದನು; ಶ್ರೀಭಗವತ್ಪಾದರು ಎಂದಿನಂತೆ ನೆಮ್ಮದಿಯನ್ನು ಹೊಂದಿದರು.

ಶ್ರೀಭಗವತ್ಪಾದರು ಶಿಷ್ಯಪರಿವಾರಸಮೇತರಾಗಿ ಕ್ರಮವಾಗಿ ಶ್ರೀಶೃಂಗಗಿರಿಕ್ಷೇತ್ರಕ್ಕೆ ಬಂದು, ಅಲ್ಲಿ ಹನ್ನೆರಡುವರ್ಷಗಳ ಕಾಲ ವಾಸಮಾಡಿದರು. ಆಗ ತಾವು ಮೊದಲೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಕಲ್ಪಿಸಿದ್ದಂತೆ ತಮ್ಮ ಶ್ರೀಶಾರೀರಕಭಾಷ್ಯಕ್ಕೆ ವಾರ್ತಿಕವನ್ನು ಬರೆಯುವಂತೆ ಶ್ರೀಸುರೇಶ್ವರರಿಗೆ ಆಜ್ಞೆಯಿತ್ತರು. ಮೊದಲಿನಿಂದಲೂ ಧೃಢಕರ್ಮಠರಾಗಿದ್ದು ವಾದದ ನಿಯಮದ ನಿರ್ಬಂಧಕ್ಕೆ ವಶರಾಗಿ ಸನ್ನ್ಯಾಸಿಗಳಾಗಿದ್ದ ಶ್ರೀಸುರೇಶ್ವರರು ಶ್ರೀಶಾರೀರಕಭಾಷ್ಯಕ್ಕೆ ಅಪಚಾರಮಾಡಿಯಾರೆಂದು ಶ್ರೀಪದ್ಮಪಾದಾದಿಗಳು ಶಂಕಿಸಿದರು. ಆಗ ಶ್ರೀಪದ್ಮಪಾದರೇ ವಾರ್ತಿಕವನ್ನು ರಚಿಸಲೆಂಬ ಇತರ ಶಿಷ್ಯರುಗಳ ಸೂಚನೆಗೆ ಶ್ರೀಭಗವತ್ಪಾದರು "ವಾರ್ತಿಕ ರಚನೆಯನ್ನು ಶ್ರೀಸುರೇಶ್ವರರೇ ಪ್ರತಿಜ್ಞೆಮಾಡಿರುವುದರಿಂದ ಇತರರಿಗೆ ಇದಕ್ಕೆ ಅವಕಾಶ ವಿಲ್ಲ"– ಎಂದು ತಿಳಿಸಿದರು. ಆಗ ಶ್ರೀಭಗವತ್ಪಾದರ ಸೂಚನೆಯಂತೆ ಶ್ರೀಪದ್ಮಪಾದರು ಸ್ವತಂತ್ರವಾಗಿಯೇ ಶ್ರೀಶಾರೀರಕಭಾಷ್ಯಕ್ಕೆ ವ್ಯಾಖ್ಯಾನವನ್ನು ರಚಿಸಿದರು. ಇದರ ಪೂರ್ವಭಾಗಕ್ಕೆ 'ಪಂಚಪಾದಿಕೆ'–ಯೆಂದೂ. ಉತ್ತರಭಾಗಕ್ಕೆ 'ವೃತ್ತಿ'ಯೆಂದೂ ಹೆಸರು, ಹೀಗೆ ವ್ಯಾಖ್ಯಾನವನ್ನು ವಿರಚಿಸಿ ಶ್ರೀಭಗವತ್ಪಾದರಿಗೆ ಅರ್ಪಿಸಿದರು. ಆಗಿನ ಕಾಲಗತಿಯನ್ನು ತಿಳಿದ ಶ್ರೀಭಗವತ್ಪಾದರು– "ಇದರ ನಾಲ್ಕುಸೂತ್ರಗಳ ವ್ಯಾಖ್ಯಾನಮಾತ್ರವೇ ಪ್ರಚಾರಕ್ಕೆ ಬರುವುದೆಂದು" ಭವಿಷ್ಯವನ್ನು ನುಡಿದರು. ಇದರಂತೆ ಶ್ರೀಪದ್ಮಪಾದರವರ 'ಪಂಚಪಾದಿಕಾ' ವ್ಯಾಖ್ಯಾನವು ಚತುಃಸೂತ್ರೀಪರ್ಯಂತವೇ ಪ್ರಚಾರದಲ್ಲಿ ಬಂದಿರುತ್ತದೆ. ಇದರ ಮೇಲೆ ಶ್ರೀಪ್ರಕಾಶಾತ್ಮಯತಿವರ್ಯರು 'ವಿವರಣ'–ವೆಂಬ ವ್ಯಾಖ್ಯಾನವನ್ನು ವಿರಚಿಸಿರುತ್ತಾರೆ. ಇದು, ಅಖಂಡಾನಂದಮುನಿಗಳಿಂದ 'ತತ್ತ್ವದೀಪನ'ವೆಂಬ ವ್ಯಾಖ್ಯಾನದಿಂದ ಅಲಂಕೃತವಾಗಿದೆ. ಸಮಸ್ತವೇದಾಂತಸಿದ್ಧಾಂತವನ್ನೂ ಪ್ರತಿಪಾದಿಸಿರುವ ಇದು, ವೇದಾಂತಸಿದ್ಧಾಂತದಲ್ಲಿ "ವಿವರಣಪ್ರಸ್ಥಾನ"ವೆಂದು ಪ್ರಖ್ಯಾತವಾಗಿದೆ. ಮತ್ತೊಂದು ಶ್ರೀವಾಚಸ್ಪತಿಮಿಶ್ರರಿಂದ ಪ್ರತಿಪಾದಿತವಾಗಿರುವ– ಭಾವತೀಪ್ರಸ್ಥಾನ"ವು.

ಶ್ರೀಭಗವತ್ಪಾದರೊಡನೆ ಶ್ರೀಶೃಂಗಗಿರಿಯಲ್ಲಿದ್ದಾಗ, ತೀರ್ಥಯಾತ್ರೆಯನ್ನು ಮಾಡಬೇಕೆಂಬ ತಮ್ಮ ಅಭಿಪ್ರಾಯವನ್ನು ವಿಜ್ಞಾಪಿಸಿ, ಗುರುವರ್ಯರ ಅನುಮತಿಯನ್ನು ಪ್ರಾರ್ಥಿಸಿದರು. ತೀರ್ಥಯಾತ್ರಾದಿಗಳು ಚಿತ್ತಶುದ್ಧಿಗೆ ಸಾಧನೆಗಳಾದ್ದರಿಂದ, ಇದು ಸಿದ್ಧವಾದಮೇಲೆ ಮತ್ತೆ ಇದು ಅನವಶ್ಯಕವೆಂದೂ; ಮತ್ತು ಶ್ರೀಗುರುಸಾನ್ನಿಧ್ಯವೇ ಶಿಷ್ಯರಿಗೆ ಸಮಸ್ತತೀರ್ಥಕ್ಷೇತ್ರಸ್ವರೂಪವಾದ್ದರಿಂದ, ಬೇರೆ ತೀರ್ಥಯಾತ್ರೆಯು ಅನವಶ್ಯಕವೆಂದೂ ಶ್ರೀಭಗವತ್ಪಾದರು ತಿಳಿಸಿದರು. ಆದರೂ, ಶ್ರೀಪದ್ಮಪಾದರು ತೀರ್ಥಯಾತ್ರೆಯಿಂದ ಲೋಕಾನುಭವವೂ, ವಿದ್ವತ್ಸಮಾಗಮಲಾಭವೂ ಆಗುವುದೆಂದು ಆಗ್ರಹಪಡಲಾಗಿ, ಭವಿತವ್ಯತೆಯ ಅಪರಿಹಾರ್ಯತ್ವವನ್ನು ಬಲ್ಲವರಾಗಿದ್ದ ಶ್ರೀಭಗವತ್ಪಾದರು ಜಾಗರೂಕರಾಗಿರಬೇಕೆಂದು ಎಚ್ಚರಿಕೆಯನ್ನಿತ್ತು ಅನುಮತಿಯನ್ನು ನೀಡಿದರು.

ಶ್ರೀಪದ್ಮಪಾದರು ಮೊದಲು ಉತ್ತರದೇಶದ ಯಾತ್ರೆಯನ್ನು ಮುಗಿಸಿಕೊಂಡು, ದಕ್ಷಿಣದಿಕ್ಕಿಗೆ ತಿರುಗಿದರು. ಶ್ರೀಕಾಳಹಸ್ತಿಕ್ಷೇತ್ರದಲ್ಲಿ ಶ್ರೀಸುವರ್ಣಮುಖೀನದಿಯಲ್ಲಿ ಸ್ನಾನಮಾಡಿ, ಶ್ರೀಕಾಳಹಸ್ತೀಶ್ವರನನ್ನಾರಾಧಿಸಿ, ಮುಕ್ತಿಕ್ಷೇತ್ರವಾದ ಕಾಂಚೀಪುರಕ್ಕೆ ಬಂದರು. ಅಲ್ಲಿಂದ ಪುಂಡರೀಕಪುರದಲ್ಲಿ ನಿತ್ಯವೂ ನೃತ್ಯನಿರತನಾಗಿರುವ ಶ್ರೀಪರಶಿವನನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಕ್ಷಾತ್ಕರಿಸಿ, ಅಲ್ಲಿಯ ಮಾಹಾತ್ಮ್ಯೆಯನ್ನು ಎಲ್ಲರಿಗೂ ವರ್ಣಿಸಿದರು. ಅಲ್ಲಿಂದ ಶ್ರೀಕಾವೇರೀತೀರದ ಮಾರ್ಗವಾಗಿ, ತಮ್ಮ ಪೂರ್ವಾಶ್ರಮದ ಸೋದರಮಾವನ ಮನೆಗೆ ಬಂದರು, ಅಲ್ಲಿ ಸತ್ಕೃತರಾಗಿ ಕೆಲವು ದಿವಸಗಳಿದ್ದು, ತಮ್ಮ ಪುಸ್ತಕಭಾರವನ್ನು ಅವರ ಮನೆಯಲ್ಲೇ ಬಿಟ್ಟು, ದರ್ಭಶಯನದ ಮೂಲಕವಾಗಿ ಶ್ರೀರಾಮಸೇತುವಿಗೆ ಬಂದು, ಶ್ರೀಪರಮೇಶ್ವರನನ್ನು ಆರಾಧಿಸಿದರು. ಅಲ್ಲಿ ಕೆಲವರು–"ರಾಮೇಶ್ವರ"–ಶಬ್ದವು ಯಾವ ಸಮಾಸದ್ದು?"–ಎಂದು ಪ್ರಶ್ನೆಮಾಡಲಾಗಿ, ಶ್ರೀಪದ್ಮಪಾದರು–'ಇದು ಮೂರುವಿಧ-ಸಮಾಸದ ಪದವು; ರಾಮಸ್ಯ ಈಶ್ವರಃ ರಾಮೇಶ್ವರಃ'–ಎಂಬ ತತ್ಪುರುಷಸಮಾಸದಲ್ಲಿ 'ಶ್ರೀರಾಮನಿಗೂ ಪೂಜ್ಯನು ಶ್ರೀಪರಮೇಶ್ವರನು'–ಎಂದು ಅರ್ಥವು; "ರಾಮಃ ಈಶ್ವರ-ಯಸ್ಯ ಸಃ ರಾಮೇಶ್ವರಃ"–ಎಂಬ ಬಹುವ್ರೀಹಿಸಮಾಸದಲ್ಲಿ–"ಶ್ರೀರಾಮನು ಶ್ರೀಪರಮೇಶ್ವರನಿಗೂ ಪೂಜ್ಯನು"–ಎಂದು ಅಭಿಪ್ರಾಯವು; ಆದರೆ, ಮುಖ್ಯವಾದ ಕರ್ಮಧಾರ-ಯಸಮಾಸದ– "ರಾಮಶ್ಚಾಸಾವೀಶ್ವರಶ್ಚ ರಾಮೇಶ್ವರಃ"–ಎಂಬಲ್ಲಿ–"ಶ್ರೀರಾಮನೇ ಶ್ರೀಪರಮೇಶ್ವರನು"–ಎಂಬ ತತ್ವಾರ್ಥವು ಸ್ಪಷ್ಟವಾಗುವುದು"–ಎಂದು ವಿವರಿಸಿದರು. ಇದನ್ನು ಕೇಳಿ ಎಲ್ಲರೂ ಆನಂದಪಟ್ಟರು.

ಅಲ್ಲಿಂದ ಇತರ ಸ್ಥಳಗಳಲ್ಲಿ ಸಂಚರಿಸುತ್ತ, ಕ್ರಮವಾಗಿ ತಮ್ಮ ಸೋದರಮಾವನ ಮನೆಗೆ ಬಂದರು. ಅಷ್ಟರಲ್ಲಿ ತಮ್ಮ ಸೋದರಮಾವನ ಮನೆಯು ಅಗ್ನಿಗೆ ಆಹುತಿಯಾಗಿದ್ದುದನ್ನು ಕೇಳಿತಿಳಿದು, ತುಂಬ ಪರಿತಾಪಪಟ್ಟರು. ಸೋದರಮಾವನ ಮನೆಯ ಜತೆಯಲ್ಲಿ ಮುಖ್ಯವಾಗಿದ್ದ ತಮ್ಮ ಪಂಚಪಾದಿಕಾವ್ಯಾಖ್ಯಾನದ ಪುಸ್ತಕವೂ ಭಸ್ಮವಾದುದನ್ನು ತಿಳಿದು ಅತಿಯಾಗಿ ಶೋಕಿಸಿದರು. "ಇವರ ಸೋದರಮಾವಂದಿರು ಶ್ರೀಮಂಡನಮಿಶ್ರರಂತೆಯೇ ವೀರಕರ್ಮವಾದಿಗಳಾಗಿದ್ದರೆಂದೂ, ಶ್ರೀಪದ್ಮಪಾದರ ಶ್ರೀಪಂಚಪಾದಿ-ಕಾವ್ಯಾಖ್ಯಾನವನ್ನು ಪರಿಶೀಲಿಸಿ, ಈ ಅರ್ಥವು ಅಲ್ಲಿ ಪೂರ್ಣವಾಗಿ ನಿರಾಕೃತವಾಗಿರುವುದನ್ನು ಕಂಡು, ದ್ವೇಷದಿಂದ ಆ ಗ್ರಂಥವನ್ನು ನಾಶಮಾಡಬೇಕೆಂಬ ದುರಾಗ್ರಹದಿಂದ, ತಮ್ಮ ಮನೆಗೆ ತಾವೇ ಬೆಂಕಿಹಾಕಿ ಸುಟ್ಟರೆಂದೂ ಲೋಕಪ್ರತೀತಿಯಿದೆ. ಈವಿಷಯವನ್ನು ನಿರೂಪಿಸುತ್ತ ಶ್ರೀಮಾಧವರು–"ಕರ್ಣಾಕರ್ಣಿಕೆಯಾಗಿ ಬಂದಿರುವ ಐತಿಹ್ಯವನ್ನೇ ಅವಲಂಬಿಸಿ ಈ ವಿಷಯವನ್ನು ಬರೆದಿರುತ್ತೇನೆ; ಇದರ ವಾಸ್ತವಾಂಶವೇನೋ ಕಾಣೆ; ಪಾಪಕಾರ್ಯವನ್ನು ಮಾಡುವವನಿಗೆ ಎಷ್ಟು ಪಾತಕವೋ, ಅದನ್ನು ಸರಿಯಾಗಿ ತಿಳಿಯದೆ ಹೇಳುವವನಿಗೆ ಅದಕ್ಕಿಂತಲೂ ಇಮ್ಮಡಿಯಾದ ಪಾತಕವು ಉಂಟಾಗುವುದೆಂದು ಶಾಸ್ತ್ರವು"–ಎಂದು ತಿಳಿಸಿರುತ್ತಾರೆ. ತಪ್ಪಾದ ವಿಷಯವನ್ನು ನಿರೂಪಿಸುವುದಕ್ಕೆ ಭಯಪಟ್ಟು, ಯಥಾರ್ಥವನ್ನೇ ಪರಿಶೋಧಿಸಿ ನಿರೂಪಿಸಿರುವರೆಂದು ಇದರಿಂದ ವ್ಯಕ್ತ-ವಾಗುವುದರಿಂದ, ಶ್ರೀಮಾಧವೀಯಶಂಕರವಿಜಯಗ್ರಂಥದ ಪ್ರಾಮಾಣಿಕತೆಯು ಸ್ಪಷ್ಟಪಡುವುದು.

ತಮ್ಮ ಪಂಚಪಾದಿಕಾಗ್ರಂಥವು ನಾಶವಾದದ್ದಕ್ಕೆ ಕಪಟದಿಂದ ದುಃಖಿಸುತ್ತಿದ್ದ ಸೋದರಮಾವನನ್ನು ಕುರಿತು 'ನನ್ನ ಗ್ರಂಥವು ಹೋದರೆ ಹೋಗಲಿ, ಪುನಃ ಗ್ರಂಥ-

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ರಚಿಸುವ ಶಕ್ತಿಯು ನನಗೆ ಇದ್ದೇ ಇದೆ"–ಎಂದು ಸಮಾಧಾನಹೇಳಿದರು. ಇದನ್ನು ಪರಿಭಾವಿಸಿ, ಮತ್ತೆ ಇವರು ತಮಗೆ ಸಮ್ಮತವಲ್ಲದ ಗ್ರಂಥವನ್ನು ಬರೆಯಲಾಗದಂತೆ, ಬುದ್ಧಿಮಾಂದ್ಯಕರವಾದ ಔಷಧಿಯನ್ನು ಅವರ ಭಿಕ್ಷೆಯಲ್ಲಿ ಮಿಶ್ರಮಾಡಿ ಊಟಮಾಡಿಸಿದರು. ಇದರಿಂದ ಶ್ರೀಪದ್ಮಪಾದರಿಗೆ ಗ್ರಂಥವಿವರಣೆಯ ಕೌಶಲದಲ್ಲಿ ವಿಸ್ಮರಣೆಯಾಯಿತು. ಇದನ್ನು ತಿಳಿದೇ ಶ್ರೀಭಗವತ್ಪಾದರು ಶ್ರೀಪದ್ಮಪಾದರ ತೀರ್ಥಯಾತ್ರೆಗೆ ಸಹಜವಾಗಿ ಅನುಮತಿಸಲು ಒಪ್ಪಲಿಲ್ಲ; ಆದರೆ ಭವಿತವ್ಯತೆಯನ್ನು ತಡೆಯುವವರಾರು? ಶ್ರೀಸುರೇಶ್ವರರಿಂದ ತಮ್ಮ ಶ್ರೀಶಾರೀರಕಭಾಷ್ಯಕ್ಕೆ ವಾರ್ತಿಕವನ್ನು ರಚಯಿಸಬೇಕೆಂಬ ಶ್ರೀಭಗವತ್ಪಾದರ ಮುಖ್ಯಸಂಕಲ್ಪವೇ ಸಿದ್ಧಿಸದೇ ಹೋಯಿತಲ್ಲವೆ? ಇದರ ಪ್ರಯೋಜನಕ್ಕೆ ಪಾತ್ರವಾಗಬೇಕಾದ ಜನತೆಯ ದೌರ್ಭಾಗ್ಯವೇ ಮೂಲಕಾರಣವೆಂದು ತಿಳಿಯಬೇಕು.

ಶ್ರೀಪದ್ಮಪಾದರು ತಮ್ಮ ತೀರ್ಥಯಾತ್ರೆಯನ್ನು ಪೂರೈಸಿಕೊಂಡು ಶ್ರೀಭಗವತ್ಪಾದರು ಶ್ರೀಕಾಲಟೀಕ್ಷೇತ್ರದಲ್ಲಿದ್ದಾಗ ಅಲ್ಲಿಗೆ ಬಂದರು. ಇತರ ಶಿಷ್ಯರುಗಳು ಅಷ್ಟರಲ್ಲಿ ಅಲ್ಲಿಗೆಬಂದು ಸೇರಿದರು. ಶ್ರೀಪದ್ಮಪಾದರು ತಮ್ಮ ಪಂಚಪಾದಿಕಾವ್ಯಾಖ್ಯಾನವು ನಷ್ಟವಾದದ್ದನ್ನೂ ತಮಗೆ ಬುದ್ಧಿಮಾಂದ್ಯವಾದದ್ದನ್ನೂ ಶ್ರೀಗುರುವರ್ಯರಲ್ಲಿ ನಿವೇದಿಸಿ ದುಃಖಪಟ್ಟರು. ಆಗ ಶ್ರೀಭಗವತ್ಪಾದರು ಹಿಂದೆ ವಿಜ್ಞಾಪಿಸಿ ಓದಿಹೇಳಿದ್ದ ಚತುಃಸೂತ್ರೀಪರ್ಯಂತವಾದ ಪಂಚಪಾದಿಕೆಯನ್ನು ಹೇಳಿಬರೆಯಿಸಿದರು. ಇದರಿಂದ ಶ್ರೀಪದ್ಮಪಾದರು ಸಂತುಷ್ಟಾಂತರಂಗರಾಗಿ, ಶ್ರೀಗುರುವರ್ಯರಿಗೆ ಅನಂತಪ್ರಣಾಮಗಳನ್ನು ಸಲ್ಲಿಸಿದರು.

ಅಲ್ಲಿಂದ ಮತ್ತೆ ಜಗದ್ವಿಜಯಕ್ಕಾಗಿ ಶಿಷ್ಯಸಹಿತರಾಗಿ ಹೊರಟ ಶ್ರೀಭಗವತ್ಪಾದರೊಡನೆ ಶ್ರೀಕಾಶ್ಮೀರಕ್ಕೆ ಬಂದು, ಅಲ್ಲಿ ಶ್ರೀಭಗವತ್ಪಾದರವರ ಶ್ರೀಸರ್ವಜ್ಞಪೀಠಾರೋಹಣದಿವ್ಯಮಹೋತ್ಸವವನ್ನು ಸಾಕ್ಷಾತ್ಕರಿಸಿಕೊಂಡು, ಶ್ರೀಭಗವತ್ಪಾದರೊಡನೆ ಹಿಮವತ್ಕೇದಾರಕ್ಕೆ ಬಂದರು. ಅಷ್ಟರಲ್ಲಿ ಶ್ರೀಭಗವತ್ಪಾದರವರ ಅವತಾರಕಾರ್ಯವು ಜಯಶೀಲವಾಗಿ ನಿರ್ವಾಹವಾಗಿದ್ದು, ಶ್ರೀಬ್ರಹ್ಮಾದಿದೇವತಾಸಮೂಹವೆಲ್ಲವೂ ಶ್ರೀಭಗವತ್ಪಾದರನ್ನು ಎದುರುಗೊಳ್ಳಲು ಬಂದಿರಲಾಗಿ, ಶ್ರೀಭಗವತ್ಪಾದರು ತಮ್ಮ ಮಾಯಿಕವಾಗಿದ್ದ ಮಾನುಷರೂಪವನ್ನು ತ್ಯಜಿಸಿ, ತಮ್ಮ ನೈಜವಾದ ಶ್ರೀಪರಮೇಶ್ವರನ ರೂಪದಿಂದ ಶ್ರೀಕೈಲಾಸಕ್ಕೆ ಬಿಜಯಮಾಡಿದರು!

ಅನಂತರ ಶ್ರೀಪದ್ಮಪಾದರು ಶ್ರೀಭಗವತ್ಪಾದಗುರುಸಾರ್ವಭೌಮರ ಆಜ್ಞಾನುಸಾರ ಪಶ್ಚಿಮದ ಶ್ರೀದ್ವಾರಕಾಮಠವನ್ನು ಅಲಂಕರಿಸಿ, ಅವಿಚ್ಛಿನ್ನವಾದ ಸದ್ಗುರು ಪರಂಪರೆಯನ್ನು ಪ್ರವರ್ತಿಸಿ ಸನಾತನವೈದಿಕವರ್ಣಾಶ್ರಮಧರ್ಮಪ್ರಸಾರಕಾರ್ಯವನ್ನು ಯಶಸ್ವಿಯಾಗಿ ಕೈಗೊಂಡು ಧನ್ಯರಾದರು. ಶ್ರೀಮಹಾವಿಷ್ಣುವಿನ ಅವತಾರರಾಗಿ ಬಂದಿದ್ದು, ಶ್ರೀಪರಮೇಶ್ವರನ ಆಜ್ಞೆಯಂತೆ ಅವನ ಅವತಾರಕಾರ್ಯದಲ್ಲಿ ನಿರತರಾಗಿದ್ದು ಅನಂತರ ತಮ್ಮ ಶ್ರೀವೈಕುಂಠಧಾಮಕ್ಕೆ ಬಿಜಯಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವಶಾಸ್ತ್ರಾರ್ಥನಿಷ್ಣಾತಂ ವಾಣೀವೈದಗ್ಧ್ಯಶಾಲಿನಂ ।
ವೇದಾಂತವಾರ್ತಿಕಾಚಾರ್ಯಂ ಶ್ರೀಸುರೇಶ್ವರಮಾಶ್ರಯೇ ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಸುರೇಶ್ವರವಾರ್ತಿಕಾಚಾರ್ಯಗುರುಚರಿತ್ರೆ.

'ನಮಸ್ತೇ ಶಾರದಾದೇವಿ ಕಾಶ್ಮೀರಪುರವಾಸಿನಿ'– ಎಂಬಂತೆ ಸಮಸ್ತವಿದ್ಯಾಧಿದೇವಿಯಾಗಿರುವ ಶ್ರೀಶಾರದಾದೇವಿಯ ತೌರೂರೂ, ವಿದ್ಯಾಸ್ಥಾನವೂ ಆಗಿರುವ ಶ್ರೀಕಾಶ್ಮೀರದೇಶದ ರಾಜನ ಆಸ್ಥಾನವಿದ್ವನ್ಮಣಿಗಳಾಗಿದ್ದ ಶ್ರೀಹಿಮಮಿತ್ರಪಂಡಿತವರ್ಯರ ಪುತ್ರರತ್ನರು ಶ್ರೀವಿಶ್ವರೂಪಮಂಡನಮಿಶ್ರರು ಇವರು ತಮ್ಮ ಪಿತೃಚರಣರಿಂದಲೇ ಸಕಲ ಶಾಸ್ತ್ರಗಳಲ್ಲಿಯೂ ಪ್ರಾವೀಣ್ಯವನ್ನು ಪಡೆದು, ಅನಂತರ, ವೈದಿಕಕರ್ಮಕಾಂಡವನ್ನು ಪ್ರತಿಪಾದಿಸುವುದಕ್ಕಾಗಿ ಶ್ರೀಪರಮೇಶ್ವರನ ಆಜ್ಞೆಯಂತೆ ಅವತರಿಸಿಬಂದು, ಶ್ರೀಕುಮಾರಿಲಭಟ್ಟಪಾದರೆಂದು ಪ್ರಸಿದ್ಧರಾಗಿ, ಶ್ರೀಜೈಮಿನಿಮಹಾಮುನಿಗಳ ಪೂರ್ವಮೀಮಾಂಸಾಸೂತ್ರಗಳ ಮೇಲಿನ ಶ್ರೀಶಬರಸ್ವಾಮಿಗಳವರ ಭಾಷ್ಯದ ಮೇಲೆ ವಿಪುಲವೂ ಅಸದೃಶವೂ ಆದ ವಾರ್ತಿಕವನ್ನು ವಿರಚಿಸಿ– ಪೂರ್ವಮೀಮಾಂಸಾವಾರ್ತಿಕಾಚಾರ್ಯ'–ರೆಂದು ಪ್ರಖ್ಯಾತಿಪಡೆದ ಶ್ರೀಕುಮಾರಿಲಭಟ್ಟಪಾದರವರ ಪಟ್ಟಶಿಷ್ಯರಾದರು ಶ್ರೀಮಂಡನಪಂಡಿತರು ವೀರಕರ್ಮಠರಾಗಿ, ಮಾಹಿಷ್ಮತಿಯಲ್ಲಿ ನೆಲೆಸಿ, ವೇದವಿಹಿತಕರ್ಮಾನುಷ್ಠಾನಗಳಲ್ಲಿ ನಿರತರಾಗಿದ್ದು, ಅಸಂಖ್ಯಾತಶಿಷ್ಯರುಗಳಿಂದ ಸೇವಿತರಾಗಿದ್ದರು. ಶ್ರೀಪರಮೇಶ್ವರನ ಆಜ್ಞೆಯಂತೆ, ತಮ್ಮ ವೈದಿಕಧರ್ಮದ ಉಜ್ಜೀವನಕಾರ್ಯಕ್ಕೆ ಸಹಾಯಕರಾಗಿ ಅವತರಿಸಿದ ಶ್ರೀಬ್ರಹ್ಮದೇವನೇ ಶ್ರೀವಿಶ್ವರೂಪರು. ಇವರಿಗೆ ಮಂಡನರೆಂಬ ಹೆಸರು ಇವರ ವಿದ್ವತ್ತಿನ ಪ್ರೌಢಿಮೆಯ ನಿಮಿತ್ತವಾಗಿಬಂದ ಬಿರುದಿನಹೆಸರು.

ಶ್ರೀಬ್ರಹ್ಮದೇವನ ರಾಣಿಯಾದ ಶ್ರೀಸರಸ್ವತೀದೇವಿಯು, ಕಾರಣಾಂತರದಿಂದ ಶ್ರೀದೂರ್ವಾಸಮಹರ್ಷಿಗಳ ಶಾಪದ ನಿಮಿತ್ತವಾಗಿ, ಶೋಣಾನದಿಯ ತೀರದಲ್ಲಿ ವಿರಾಜಮಾನವಾಗಿದ್ದ ಬ್ರಾಹ್ಮಣಾಗ್ರಹಾರದ ಶ್ರೀವಿಷ್ಣುಮಿತ್ರರೆಂಬ ವಿದ್ವದಗ್ರೇಸರರ ಪುತ್ರಿಯಾಗಿ ಜನಿಸಿದಳು. ಸಹಜವಾಗಿಯೇ ಸಕಲಕಲಾಪ್ರವೀಣೆಯಾಗಿದ್ದಳು. ಸರಸವಾಣಿಯೆಂಬುದೂ ಈಕೆಯ ಮತ್ತೊಂದು ಪ್ರಸಿದ್ಧವಾದ ನಾಮಧೇಯವು. ವಂಶ, ವಿದ್ಯೆ, ರೂಪ, ಗುಣ, ಸಂಪತ್ತು-ಮುಂತಾಗಿ ಎಲ್ಲ ವಿಧಗಳಿಂದಲೂ ಅನುರೂಪರಾಗಿದ್ದ ಶ್ರೀವಿಶ್ವರೂಪ- ಉಭಯಭಾರತಿಯರಿಗೆ, ಪುಣ್ಯಯೋಗದಿಂದ ವಿವಾಹಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ವಸ್ತುತವಾಗಿಯೇ ಸತಿಪತಿಯರಾಗಿದ್ದ ಇವರ ಈ ಯೋಗವು ಸಹಜವೇ ಆಯಿತು.

ಹೀಗೆ ಅನುರೂಪಳಾದ ಉಭಯಭಾರತಿಯನ್ನು ಸಹಧರ್ಮಚಾರಿಣಿಯನ್ನಾಗಿ ಪಡೆದು ಭಾಗ್ಯಶಾಲಿಗಳಾದ ಶ್ರೀವಿಶ್ವರೂಪಮಂಡನರು ಶಾಸ್ತ್ರಸಮ್ಮತವಾದ ಗಾರ್ಹಸ್ಥ್ಯಧರ್ಮನಿರತರಾಗಿ, ಅಸಂಖ್ಯಾತವಿದ್ಯಾರ್ಥಿಗಳಿಗೆ ಪಾಠಪ್ರವಚನಗಳನ್ನು ಮಾಡುತ್ತಿದ್ದರು. ಶ್ರೀವಿಶ್ವರೂಪರೊಡನೆ ಹಲವಾರುಮಂದಿ ವಿದ್ವಾಂಸರುಗಳು ಶಾಸ್ತ್ರಾರ್ಥದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದಕ್ಕೆ ಬಂದು ಪರಾಜಿತರಾಗಿಹೋದರು. ಆಮೇಲೆ ಇವರೊಡನೆ ವಾದಮಾಡು-ವವರೇ ಇಲ್ಲದೆ ಬಹುಕಾಲವಾಗಿತ್ತು.

ಇಷ್ಟರಲ್ಲಿ, ಶ್ರೀಪರಮೇಶ್ವರನು ವೈದಿಕಜ್ಞಾನಕಾಂಡದ ಉದ್ಧಾರಕ್ಕಾಗಿ ಶ್ರೀ-ಭಗವತ್ಪಾದಾಚಾರ್ಯವರ್ಯರ ರೂಪದಿಂದ ಅವತರಿಸಿಬಂದು, ವೇದಾಂತಪ್ರಸ್ಥಾನ-ತ್ರಯಕ್ಕೆ ಭಾಷ್ಯಗಳನ್ನು ವಿರಚಿಸಿ, ಇವುಗಳನ್ನು ಲೋಕದಲ್ಲಿ ಪ್ರಚಾರಮಾಡಬೇಕೆಂಬ ಶ್ರೀವಿಶ್ವನಾಥನ ಮತ್ತು ಶ್ರೀವ್ಯಾಸರ ಆಣತಿಯಂತೆ, ಪೂರ್ವಮೀಮಾಂಸಾವಾರ್ತಿಕಕಾರರಾಗಿ ಪ್ರಖ್ಯಾತರಾಗಿದ್ದ ಶ್ರೀಕುಮಾರಿಲಭಟ್ಟಪಾದರಿಂದಲೇ ತಮ್ಮ ಶ್ರೀಶಾರೀರಕ-ಭಾಷ್ಯಕ್ಕೂ ವಾರ್ತಿಕದ ರಚನೆಯನ್ನು ಮಾಡಿಸುವುದು ಇದಕ್ಕೆ ಸಮುಚಿತವೆಂದು ಪರ್ಯಾಲೋಚಿಸಿ, ಶ್ರೀಕುಮಾರಿಲರು ಇದ್ದ ಪ್ರಯಾಗಕ್ಷೇತ್ರಕ್ಕೆ ಬಂದರು,

ನಾಸ್ತಿಕಬೌದ್ಧಮತದ ಅತ್ಯಂತಪ್ರಾಬಲ್ಯವಿದ್ದ ಆ ಕಾಲದಲ್ಲಿ ಆ ಮತವನ್ನು ನಿರಾಕರಿಸದೆ ತಮ್ಮ ವೈದಿಕಧರ್ಮದ ಉದ್ಧಾರಕಾರ್ಯವು ಅಶಕ್ಯವಾದದ್ದನ್ನೂ, ಆ ಮತದ ರಹಸ್ಯವನ್ನರಿಯದೆ ಅದರ ನಿರಾಕರಣೆಯು ಅಸಾಧ್ಯವೆಂಬುದನ್ನೂ ಮನಗಂಡು, ಶ್ರೀಕುಮಾರಿಲಸ್ವಾಮಿಯವರು ಕಪಟದಿಂದ ಬೌದ್ಧಗುರುವಿನ ಶಿಷ್ಯತ್ವವನ್ನು ಅಂಗೀಕರಿಸಿ ಆ ಮತದ ರಹಸ್ಯಗಳನ್ನು ತಿಳಿದು ನಾಸ್ತಿಕಬೌದ್ಧಮತವನ್ನು ಖಂಡಿಸಿ ವಾರ್ತಿಕವನ್ನು ರಚಿಸಿ, ಕರ್ಮಕಾಂಡೋದ್ಧಾರವನ್ನು ಯಶಸ್ವಿಯಾಗಿ ನೆರವೇರಿಸಿದರು. ಈ ಗುರು-ದ್ರೋಹದ ಪಾತಕದ ಪ್ರಾಯಶ್ಚಿತ್ತಕ್ಕಾಗಿ ಶ್ರೀಕುಮಾರಿಲರು ತುಷಾಗ್ನಿಯನ್ನು ಪ್ರವೇಶಿಸಿದ್ದರು. ಈ ಸಮಯದಲ್ಲಿ ಶ್ರೀಭಗವತ್ಪಾದರು ಬಂದು ಅವರನ್ನು ಕಂಡು, ತಮ್ಮ ಇಚ್ಛೆಯನ್ನು ಅವರಿಗೆ ತಿಳಿಸಿದರು. ಶ್ರೀಕುಮಾರಿಲರು ತಾವು ಕೈಗೊಂಡಿದ್ದ ಪ್ರಾಯ-ಶ್ಚಿತ್ತಕರ್ಮವನ್ನು ಪರಿತ್ಯಜಿಸಲು ಸಮ್ಮತಿಸಲಿಲ್ಲ. "ತಮ್ಮ ಶ್ರೀಶಾರೀರಿಕಭಾಷ್ಯಕ್ಕೆ ವಾರ್ತಿಕವನ್ನು ಬರೆಯಿಸುವ ಉದ್ದೇಶವಿರುವುದಾದರೆ, ತಮಗಿಂತಲೂ ಹೆಚ್ಚಿನ ಸಾಮ-ರ್ಥ್ಯಶಾಲಿಯೇ ಆಗಿರುವ, ಮಾಹಿಷ್ಮತಿಯ ಶ್ರೀವಿಶ್ವರೂಪಮಂಡನರಿಂದ ಈ ಕಾರ್ಯ-ವನ್ನು ನೆರವೇರಿಸಿಕೊಳ್ಳಬಹುದು"– ಶ್ರೀಕುಮಾರಿಲರು ಶ್ರೀಭಗವತ್ಪಾದರಿಗೆ ಸಲಹೆ ಹೇಳಿದರು. ಶ್ರೀವಿಶ್ವರೂಪರು ವೀರಕರ್ಮಠರಾಗಿರುವುದರಿಂದ ಅವರನ್ನು ತಮ್ಮ ಕಾರ್ಯಕ್ಕೆ ಅನುಕೂಲವಾಗುವಂತೆ ಅವರನ್ನು ಒಲಿಸಿಕೊಳ್ಳಬೇಕಾಗವುದೆಂದೂ ಸೂಚಿ-ಸಿದರು.

ಅನಂತರ ಶ್ರೀಭಗವತ್ಪಾದರು ಶಿಷ್ಯಗಣಸಮೇತರಾಗಿ ಮಾಹಿಷ್ಮತಿಗೆ ಬಂದರು. ಶ್ರೀರೇವಾನದಿಯಲ್ಲಿ ಸ್ನಾನಾಹ್ನಿಕಾದಿಗಳನ್ನು ನೆರವೇರಿಸಿಕೊಂಡು, ಶ್ರೀಮಂಡನರ ಮನೆಗೆ ಮಧ್ಯಾಹ್ನಕಾಲಕ್ಕೆ ಸರಿಯಾಗಿ ಬಂದರು. ಶ್ರೀಮಂಡನರು ಆ ದಿವಸ ತಮ್ಮ ಪಿತೃಚರಣರ ಶ್ರಾದ್ಧಕರ್ಮದಲ್ಲಿ ನಿರತರಾಗಿದ್ದು, ಆಗ ನಿಮಂತ್ರಿತರಾಗಿದ್ದ ಶ್ರೀವ್ಯಾಸ-ಜೈಮಿನಿಗಳ ಪಾದಪ್ರಕ್ಷಾಳನೆಯಲ್ಲಿ ತೊಡಗಿದ್ದರು; ಶ್ರೀಮಂಡನಗನ್ನು ವಶವಡಿಸಿ-

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಳ್ಳಲು ಇದೇ ಸುಸಮಯವೆಂದು ಭಾವಿಸಿ, ಶ್ರೀಭಗವತ್ಪಾದರು ಅವರ ಮನೆಯ ಬಾಗಿಲುಗಳೆಲ್ಲ ಭದ್ರವಾಗಿ ಮುಚ್ಚಿದ್ದುದರಿಂದ, ಯೋಗಶಕ್ತಿಯಿಂದ ಆಕಾಶಮಾರ್ಗದಿಂದ, ನಿಮಂತ್ರಿತರಾಗಿದ್ದ ಮಹರ್ಷಿಗಳ ಪಾದಪ್ರಕ್ಷಾಳನೆಯಲ್ಲಿ ನಿರತರಾಗಿದ್ದ ಶ್ರೀಮಂಡನರ ಸಮೀಪದಲ್ಲಿ, ಅಂಗಳದಲ್ಲಿ ಬಂದಿಳಿದರು.

"ಕರ್ಮಜ್ಞಾನಕಾಂಡದ್ವಯಾತ್ಮಕವಾಗಿರುವ ವೇದದಲ್ಲಿ ಕರ್ಮಕಾಂಡವೊಂದೇ ಪ್ರಾಮಾಣಿಕವೆಂದೂ, ಜ್ಞಾನಕಾಂಡಾತ್ಮಕವಾದ ಉಪನಿಷತ್ತುಗಳು ಅಪ್ರಾಮಾಣಿಕಗಳೆಂದೂ, ಅದನ್ನನುಸರಿಸಿ ಸರ್ವಕರ್ಮಸನ್ನ್ಯಾಸಮಾಡುವುದು ಕರ್ಮಭ್ರಷ್ಟತೆಯೆಂದೂ" ದೃಢವಾಗಿ ನಂಬಿದ್ದ ಶ್ರೀಮಂಡನರಿಗೆ, ಪವಿತ್ರವಾದ ಪಿತೃಯಜ್ಞಕರ್ಮದ ಸಮಯದಲ್ಲಿ ಪತಿತರಾದ ಸನ್ನ್ಯಾಸಿಗಳು ಸಮೀಪಕ್ಕೆ ಬಂದದ್ದು, ಮಿತಿಮೀರಿದ ಕೋಪಕ್ಕೆ ಕಾರಣವಾಯಿತು; ಅಂಥಕೋಪದ ಭರದಲ್ಲಿ ಅವರು, ಶ್ರೀಭಗವತ್ಪಾದರನ್ನು ಅವಾಚ್ಯವಾಗಿ ನಿಂದಿಸಲಾರಂಭಿಸಿದರು.

ಮಂಡನರು–"ಕುತೋ ಮುಂಡೀ?"–"ಈ ಮುಂಡಿಯು(ಬೋಳನು) ಎಲ್ಲಿಂದ ಬಂದನು?" ಪವಿತ್ರವಾದ ಕರ್ಮದ ಸಮಯದಲ್ಲಿ ಪತಿತರೊಡನೆ ಸಂಭಾಷಿಸಲೂಬಾರದ ಕಾರಣ, ಪರೋಕ್ಷವಾಗಿ ಮಂಡನರು ಪ್ರಶ್ನೆಮಾಡಿದರು. "ಪವಿತ್ರವಾದ ಪಿತೃಕರ್ಮದಲ್ಲಿ ಹೊರಗಿನ ಸಂಬಂಧವಿರಬಾರದೆಂದು ಮನೆಯ ಬಾಗಿಲುಗಳನ್ನೆಲ್ಲ ಮುಚ್ಚಿರುವಾಗ, –"ಕಳ್ಳನಂತೆ ಯಾವ ಮಾರ್ಗದಿಂದ ಇವನು ಇಲ್ಲಿಗೆ ಬಂದನು? ಎಂಬುದು"–ಶ್ರೀಮಂಡನರ ಪ್ರಶ್ನೆಯ ಅಭಿಪ್ರಾಯವಾಗಿತ್ತು.

ಶ್ರೀಭಗವತ್ಪಾದರು–"ಆಗಲಾನ್ಮುಂಡೀ"–"ಕತ್ತಿನವರೆಗೆ ಮಾತ್ರವೇ ಮುಂಡನ (ಕ್ಷೌರ)ವನ್ನು ಮಾಡಿಸಿಕೊಂಡಿರುವವನು ನಾನು"-ಎಂದು ಶ್ರೀಭಗವತ್ಪಾದರು ಉತ್ತರವಿತ್ತರು.

ಶ್ರೀಮಂಡನರು–'ಕುತಃ?'– "ಯಾವಮಾರ್ಗದಿಂದ"–ಎಂಬಪ್ರಶ್ನೆಗೆ–"ಎಲ್ಲಿಯುವರೆಗೆ"–ಎಂದೂ; 'ಮುಂಡೀ'–'ಬೋಳ'– ಎಂಬುದಕ್ಕೆ–'ಮುಂಡನಮಾಡಿಸಿಕೊಂಡವನು?–ಎಂದೂ ಅರ್ಥವನ್ನು ಇಟ್ಟುಕೊಂಡು, ಅದಕ್ಕೆ ತಕ್ಕಂತೆ ಉತ್ತರವನ್ನಿತ್ತರು. ಮಾತಿಗೆ ಬೇರೆ ಅರ್ಥವನ್ನು ಕಲ್ಪಿಸಿಹೇಳುವುದು–"ವಕ್ರೋಕ್ತಿ"–ಯೆಂದು ಆಲಂಕಾರಿಕರು ಹೇಳುವರು.

ಹೀಗೆ ತಮ್ಮ ಮಾತಿಗೆ ಬೇರೆಅರ್ಥವನ್ನು ಕಲ್ಪಿಸಿ ಉತ್ತರಹೇಳಿದ್ದನ್ನು ಗಮನಿಸಿ, ಶ್ರೀಮಂಡನರು ತಮ್ಮ ಪ್ರಶ್ನೆಯ ತಾತ್ಪರ್ಯವನ್ನು ವಿಶದಪಡಿಸುತ್ತ ಹೇಳಿದರು–

ಶ್ರೀಮಂಡನರು–"ಪಂಥಾಸ್ತೇ ಪೃಚ್ಛ್ಯತೇ ಮಯಾ"–"ನೀನು ಬಂದ ದಾರಿಯು ಯಾವುದೆಂದು ನಾನು ಕೇಳಿದ್ದು"–ಎಂದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿ ಶ್ರೀಭಗವತ್ಪಾದರು–"ನಿನ್ನ ಮಾರ್ಗವನ್ನು ನಾನು ಕೇಳಿದ್ದು, ನಿನ್ನನ್ನಲ್ಲ"–ಎಂದು ಅರ್ಥವನ್ನು ಕಲ್ಪಿಸಿಕೊಂಡು,–

ಶ್ರೀಭಗವತ್ಪಾದರು–"ಕಿಮಾಹ ಪಂಥಾಃ"– "ಹಾಗಾದರೆ, ಆ ಮಾರ್ಗವು ನಿನಗೇನು ಉತ್ತರವನ್ನು ಹೇಳಿತು?"–ಎಂದು ಪ್ರಶ್ನಿಸಿದರು.

ಹೀಗೆ ವಕ್ರವಾಗಿ ಅರ್ಥಮಾಡಿದ್ದರಿಂದ ವಿಶೇಷವಾಗಿ ಕೋಪಿತರಾಗಿ, ಅಂಥ ಕೋಪದ ಭರದಿಂದ, ಅವಾಚ್ಯವಾಗಿ,

ಶ್ರೀಮಂಡನರು– 'ತ್ವನ್ಮಾತಾ ಮುಂಡೇತ್ಯಾಹ'– "ನಿನ್ನ ತಾಯಿ ವಿಧವೆ"– "ನೀನು ವಿಧವಾಪುತ್ರ" ಎಂದು ಹೇಳಿತು"– ಎಂದು ಹೇಳಿದರು.

ಆಗ

ಶ್ರೀಭಗವತ್ಪಾದರು– "ತದೈವ ಹಿ?" "ಹಾಗೆಯೇನು?" "ದಾರಿಯನ್ನು ಪ್ರಶ್ನಿಸಿದ್ದು ನೀನು; ದಾರಿಯು ಹೇಳಿದ ಉತ್ತರವು ನಿನಗೇ ಸಂಬಂಧಿಸುವುದು– ಪ್ರಶ್ನೆಮಾಡದ ನನಗಲ್ಲವಲ್ಲವೆ?"– ಎಂದು ಹೇಳಿದರು.

ಶ್ರೀಮಂಡನರು ಕೋಪಾತಿರೇಕದಿಂದ– "ಅಹೋ ಪೀತಾ ಕಿಮು ಸುರಾ?"– "ನೀನೇನು ಮದ್ಯಪಾನಮಾಡಿದ್ದೀಯಾ?" ಇಂಥ ಅಸಂಬದ್ಧವಾಗಿ ಮಾತನಾಡುತ್ತಿರುವ ನೀನು ಮದ್ಯಸೇವನೆಮಾಡಿ ಬುದ್ಧಿಗೆಟ್ಟವನೇ ಆಗಿರಬೇಕು"– ಎಂದು ಹೇಳಿದರು.

ಶ್ರೀಭಗವತ್ಪಾದರು– "ನೈವ ಶ್ವೇತಾ"– "ಅಲ್ಲ ಅಲ್ಲ; ಮದ್ಯವು ಬಿಳಿಯಬಣ್ಣದ್ದು". "ಪೀತಾ"– "ಕುಡಿಯಲ್ಪಟ್ಟಿದೆಯೆ?"– ಎಂಬ ಮಂಡನರ ಪ್ರಶ್ನೆಗೆ– 'ಹಳದಿಯ ಬಣ್ಣದ್ದೆ?'– ಎಂದು ಅರ್ಥಮಾಡಿ,– 'ಅಲ್ಲ; ಅಲ್ಲ, ಬಿಳಿಯ ಬಣ್ಣದ್ದು–" ಎಂದು ಉತ್ತರಿಸಿದರು.

ಆಗ

ಶ್ರೀಮಂಡನರು "ಕಿಂ ತ್ವಂ ಜಾನಾಸಿ ತದ್ವರ್ಣಂ?"–"ಓಹೋ ಮದ್ಯದ ಬಣ್ಣವೂ ನಿನಗೆ ಗೊತ್ತೆ?"– ಎಂದರೆ– "ಮದ್ಯದ ಪರಿಚಯವು ನಿನಗಿದೆಯಲ್ಲವೆ?"– ಎಂದು ಕೇಳಿದರು.

ಶ್ರೀಭಗವತ್ಪಾದರು– "ಅಹಂ ವರ್ಣಂ, ಭವಾನ್ ರಸಂ"– "ಹೌದು ಹೌದು, ನನಗೆ ಅದರ ಬಣ್ಣವು ತಿಳಿದಿದೆ; ಅದರ ರಸವು ನಿನಗೆ ಪರಿಚಿತವಾಗಿರುವುದಲ್ಲವೆ?"– ಎಂದು ಉತ್ತರವಿತ್ತರು. ಮದ್ಯದ ಪಾನವೇ ಪಾತಿತ್ಯಕ್ಕೆ ಕಾರಣವೇ ಹೊರತು, ಅದರ ಬಣ್ಣದ ಪರಿಚಯವಲ್ಲ. ಬೆಂಕಿಯ ಸ್ಪರ್ಶವು ದಾಹಕವಾಗಿ ಹಾನಿಕರವಾಗುವುದೇ ಹೊರತು, ಅದರ ನೋಡುವಮಾತ್ರವಲ್ಲ. ವಿಷವು ನೋಡಿದರೂ, ಮುಟ್ಟಿದರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ದೋಷವಿಲ್ಲ. ಸೇವಿಸಿದರೆ ಹಾನಿಕರ, ಕೆಲವನ್ನು ನೋಡುವುದೂ ದೋಷಕರವು, ಕೆಲವನ್ನು ಮುಟ್ಟಿದರೂ ದೋಷಕರವಾಗುವುದು. ಇದೆಲ್ಲ ದೃಷ್ಟವಾಗಿಯೂ ಶಾಸ್ತ್ರ - ಪ್ರಾಮಾಣಿಕವಾಗಿಯೂ ವ್ಯವಸ್ಥಿತವಾಗಿದೆ.

ಶ್ರೀಮಂಡನರು:-

ಕಂಥಾಂ ವಹಸಿ ದುರ್ಬುದ್ಧೇ ಗರ್ದಭೇನಾಪಿ ದುರ್ಭರಾಂ।
ಶಿಖಾಯಜ್ಞೋಪವೀತಾಭ್ಯಾಂ ಕಸ್ತೇ ಭಾರೋ ಭವಿಷ್ಯತಿ?॥

"ಕತ್ತೆಯೂ ಹೊರಲಾರದಂಥ ಗಂಟಿನಭಾರವನ್ನು ಹೊತ್ತು ತಿರುಗುತ್ತಿರುವೆ; ಶಾಸ್ತ್ರನಿಯಮಾನುಸಾರವಾಗಿ ಕರ್ಮಾಧಿಕಾರವನ್ನು ಉಂಟುಮಾಡುವ ಶಿಖಾಯಜ್ಞೋಪವೀತಗಳನ್ನು ಪರಿತ್ಯಜಿಸಿ ಭ್ರಷ್ಟನಾಗಿದ್ದೀಯಲ್ಲ? ಶಿಖಾಯಜ್ಞೋಪವೀತಗಳು ಮಾತ್ರ ನಿನಗೆ ಭಾರವಾಯಿತೋ?"–ಎಂದು ಆಕ್ಷೇಪಿಸಿದರು.

ಶ್ರೀಭಗವತ್ಪಾದರು– "ಶಿಖಾಯಜ್ಞೋಪವೀತಾಭ್ಯಾಂ ಶ್ರುತೇರ್ಭಾರೋ ಭವಿಷ್ಯತಿ" "ಶಿಖಾಯಜ್ಞೋಪವೀತಗಳ ಧಾರಣೆಯು ಶಾಸ್ತ್ರೀಯಕರ್ಮಾನುಷ್ಠಾನಕ್ಕೆ ಆವಶ್ಯಗಳೆಂಬುದು ಶಾಸ್ತ್ರನಿಯಮವು. "ಶಿಖಾಂ ಯಜ್ಞೋಪವೀತಂ ಚಾಪ್ಸು ಪರಿತ್ಯಜೇತ್" ಎಂಬ ಸನ್ನ್ಯಾಸಾಶ್ರಮದ ವಿಧಿಗನುಸಾರವಾಗಿ ಇವುಗಳನ್ನು ತ್ಯಜಿಸಿರುತ್ತೇನೆ; ಇಲ್ಲ-ವಾದರೆ ಈ ಶ್ರುತಿನಿಯಮಕ್ಕೆ ವಿರುದ್ಧವಾಗುವುದು"– ಎಂದು ತಿಳಿಸಿದರು.

ಹೀಗೆ ಮಾತಿಗೆ ಮಾತು ಬೆಳೆಯುತ್ತ ಹೋಗಿ ನನೆ, ಈ ವಾದಕ್ಕೆ ಕೊನೆ-ಯಿಲ್ಲದ್ದಾಗುವುದು. ಈಗ ಶ್ರೀಭಗವತ್ಪಾದರು ಹೇಳಿದ ಉತ್ತರವು ಶಾಸ್ತ್ರಕ್ಕೆ ಸಂಬಂಧ-ಪಟ್ಟದ್ದಾದ್ದರಿಂದ, ಸನ್ನ್ಯಾಸವಿಧಿಯಶಾಸ್ತ್ರವನ್ನು ಶ್ರೀಮಂಡನರು ಪ್ರಮಾಣವೆಂದು ಅಂಗೀಕರಿಸಲಾರದುದರಿಂದ, ಇನ್ನು ಮುಂದೆ ಇದು ಶಾಸ್ತ್ರವಿಚಾರಕ್ಕೆ ಇಳಿಯುವುದು. ಇದನ್ನು ಪರಿಭಾವಿಸಿ ಶ್ರೀವೇದವ್ಯಾಸರು ಶ್ರೀಮಂಡನರನ್ನು ಕುರಿತು– "ಅಕ್ರೋಧನೈಃ ಶೌಚಪರೈಃ ಸತತಂ ಬ್ರಹ್ಮಚಾರಿಭಿಃ। ಭವಿತವ್ಯಂ ಭವದ್ಭಿಶ್ಚ ಮಯಾ ಚ ಶ್ರಾದ್ಧ-ಕರ್ಮಣಿ"– ಎಂಬ ಶ್ರಾದ್ಧಕರ್ಮದ ನಿಯಮದಂತೆ, ಕೋಪವು ಶ್ರಾದ್ಧಕರ್ಮಕ್ಕೆ ವಿರುದ್ಧವೆಂದು ಜ್ಞಾಪಿಸಿದರು. ಮತ್ತು ಪರಮಹಂಸಯತಿಗಳು ಸಾಕ್ಷಾದ್ವಿಷ್ಣುಸ್ವರೂ-ಪರೆಂದೂ ಇವರು ಈಗ ಅಪ್ರಾರ್ಥಿತರಾಗಿ ಈ ಕರ್ಮದ ಸಮಯದಲ್ಲಿ ಬಂದಿರುವುದು ಅವರ ಭಾಗ್ಯವೆಂದೂ ತಿಳಿಸಿ, ಶ್ರೀಭಗವತ್ಪಾದರನ್ನು ವಿಷ್ಣುಸ್ಥಾನದಲ್ಲಿ ನಿಮಂತ್ರಿಸಬೇ-ಕೆಂದೂ ಸೂಚಿಸಿದರು. ಅದರಿಂದ ಎಚ್ಚರಗೊಂಡ ಶ್ರೀಮಂಡನರು, ಕೂಡಲೆ ಶುಚಿ-ರ್ಭೂತರಾಗಿ ಆಚಮನಮಾಡಿ, ಶ್ರೀಭಗವತ್ಪಾದರನ್ನು ಶ್ರಾದ್ಧಸಂರಕ್ಷಕವಿಷ್ಣುಸ್ಥಾನಕ್ಕೆ ನಿಮಂತ್ರಿಸಿದರು. ಶ್ರೀಭಗವತ್ಪಾದರು ತಾವು ಅವರೊಡನೆ ವಾದಭಿಕ್ಷೆಗೆ ಬಂದಿರುವುದೆಂದೂ ಅನ್ನಭಿಕ್ಷೆಗೆ ಅಲ್ಲವೆಂದೂ– ತಿಳಿಸಿದರು. ಆಗ ಶ್ರೀಮಂಡನರು ತಮ್ಮೊಡನೆ ವಾದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬರುವವರನ್ನೇ ಕಾಣದೆ ಎಷ್ಟೋ ಕಾಲವಾಯಿತೆಂದೂ, ತಾವು ವಾದಕ್ಕೆ ಯಾವಾಗಲೂ ಸಿದ್ಧರೇ ಆಗಿರುವವರೆಂದೂ, ಪ್ರಕೃತದಲ್ಲಿ ಆರಂಭಿಸಿರುವ ಈ ಪಿತೃಕರ್ಮವು ನೆರವೇರಿದ ಅನಂತರ ವಾದವು ನಡೆಯಲೆಂದೂ– ಹೇಳಿ, ಶ್ರೀಭಗವತ್ಪಾದರನ್ನು ಒಡಂಬಡಿಸಿ ಶ್ರೀವಿಷ್ಣುಸ್ಥಾನದಲ್ಲಿ ಅವರನ್ನು ಆವಾಹಿಸಿ, ಶ್ರಾದ್ಧಕರ್ಮವನ್ನು ಸಾಂಗವಾಗಿ ನೆರವೇರಿಸಿದರು.

ಪಂಡಿತೋತ್ತಮರಾದ ಶ್ರೀಭಗವತ್ಪಾದರಿಗೂ ಶ್ರೀಮಂಡನರಿಗೂ ಮೇಲೆ ವರ್ಣಿಸಿರುವಂಥ ಅಶ್ಲೀಲಗಳಾದ ಮಾತುಗಳು ನಡೆದುವೆಂಬುದು ತೀರಾ ಅಸಂಗತವೆಂದು ಕೆಲವರು ಶಂಕಿಸುವರು. ಪ್ರಕೃತಸಂದರ್ಭದ ವಿಮರ್ಶೆಯಿಲ್ಲದ ದೋಷವೇ ಇಂಥ ಅಭಿಪ್ರಾಯಗಳಿಗೆ ಕಾರಣವಾಗಿದೆ. ಶ್ರೀಮಂಡನರನ್ನು ಶಾಸ್ತ್ರವಾದದಲ್ಲಿ ಜಯಿಸುವುದೇನೂ ಶ್ರೀಭಗವತ್ಪಾದರಿಗೆ ಅಶಕ್ಯವಾಗಿರಲಿಲ್ಲ; ಶ್ರೀಮಂಡನರನ್ನು ಒಲಿಸಿಕೊಂಡು, ಅವರಿಂದ ತಮ್ಮ ಶ್ರೀಶಾರೀರಕಭಾಷ್ಯಕ್ಕೆ ವಾರ್ತಿಕವನ್ನು ರಚನೆಮಾಡಿಸುವುದೇ ಅವರ ಮುಖ್ಯ ಉದ್ದೇಶವಾಗಿತ್ತು. ವೇದಾಂತಗಳಿಗೆ ವಿರುದ್ಧವಾದ ಶ್ರದ್ಧೆಯುಳ್ಳವರಾಗಿ, ಪಾಂಡಿತ್ಯಪ್ರಕರ್ಷದಿಂದ ಮೆರೆಯುತ್ತಿದ್ದ ಶ್ರೀಮಂಡನರನ್ನು ತಮ್ಮ ಸಿದ್ಧಾಂತಕ್ಕೆ ಒಲಿಸಿಕೊಳ್ಳುವುದು ಅವಶ್ಯವಾಗಿತ್ತು. ಅವರ ಅಹಂಭಾವವನ್ನು ಮುರಿದು ನಿರುತ್ತರರನ್ನಾಗಿ ಮಾಡದೆ ಇದು ಸಾಧ್ಯವಾಗಿರಲಿಲ್ಲವಾಗಿ, ಇದನ್ನು ಪರಿಭಾವಿಸಿಯೇ ಶ್ರೀಭಗವತ್ಪಾದರು ಇಂಥ ವಕ್ರೋಕ್ತಿಗಳನ್ನು ಪ್ರಯೋಗಿಸಿದರೆಂಬುದು ಸಮುಚಿತವೇ ಆಗಿರುತ್ತದೆ.

ಮಾರನೆಯ ದಿನದಿಂದ ಶ್ರೀಭಗವತ್ಪಾದರಿಗೂ ಶ್ರೀಮಂಡನಪಂಡಿತರಿಗೂ ಶಾಸ್ತ್ರಾರ್ಥವಿಷಯವಾಗಿ ವಾದವು ಆರಂಭವಾಯಿತು. ಶ್ರೀಮಂಡನರು ಶ್ರೀವ್ಯಾಸರನ್ನೂ ಶ್ರೀಜೈಮಿನಿಗಳನ್ನೂ ಈ ವಾದದಲ್ಲಿ ಅಧ್ಯಕ್ಷರಾಗಬೇಕೆಂದು ಪ್ರಾರ್ಥಿಸಿದರು. ಕಾರ್ಯಾಂತರದ ನಿಮಿತ್ತದಿಂದ, ಅವರುಗಳು ಶ್ರೀಮಂಡನರ ಮಡದಿಯಾಗಿ ಸರ್ವಜ್ಞಳಾಗಿದ್ದ ಶ್ರೀಸರಸವಾಣಿಯನ್ನು ಅಧ್ಯಕ್ಷಳನ್ನಾಗಿ ಏರ್ಪಡಿಸಿ ಹೊರಟುಹೋದರು.

ಕರ್ಮಬ್ರಹ್ಮವಾದಗಳಲ್ಲಿ ಅದ್ವಿತೀಯಪಂಡಿತರಾಗಿದ್ದ ಶ್ರೀಮಂಡನರ ಮತ್ತು ಶ್ರೀಭಗವತ್ಪಾದರ ಈ ವಾದವು, ಹಿಂದೆಯೂ ಮುಂದೆಯೂ ಕಂಡುಕೇಳರಿಯದಂಥ ಪರಮಾದ್ಭುತವಾದದ್ದಾಗಿತ್ತು. ಬಹುದಿನಗಳವರೆಗೆ ನಡೆದ ಈ ವಾದದಲ್ಲಿ ಯಾರೊಬ್ಬರಿಂದಾದರೂ ಅಪಶಬ್ದವಾಗಲಿ, ದುರ್ಭಾಷೆಯಾಗಲಿ, ಅಶಾಸ್ತ್ರೀಯವಚನವಾಗಲಿ ಕೇಳಿಬರುತ್ತಿರಲಿಲ್ಲ. ಲೋಕೋತ್ತರವಾದ ಈ ವಾದವನ್ನು ಕೇಳುವುದಕ್ಕಾಗಿ ದೇಶದೇಶಗಳಿಂದಲೂ ವಿದ್ವತ್ಸಮಾಜವೇ ಬಂದುಸೇರಿತ್ತು; ದೇವಾದಿಗಳೂ ಸಹ ಅಂತರಿಕ್ಷದಲ್ಲಿ ವಿಮಾನಗಳಿಂದ ಬಂದು ಇದನ್ನು ವೀಕ್ಷಿಸುತ್ತಿದ್ದರು.

ಉಭಯಭಾರತೀದೇವಿಯ ಅಧ್ಯಕ್ಷತೆಯಲ್ಲಿ ಇವರೀರ್ವರ ವಾದವು ಆರಂಭವಾಗಲು ಶ್ರೀಭಗವತ್ಪಾದರು ತಮ್ಮ ಪಕ್ಷವನ್ನು ಪ್ರತಿಜ್ಞೆಮಾಡಿ ಮಂಡಿಸಿದರು–

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮೈಕಂ ಪರಮಾರ್ಥಸಚ್ಚಿದಮಲಂ ವಿಶ್ವಪ್ರಪಂಚಾತ್ಮನಾ
ಶುಕ್ತೀ ರೂಪ್ಯಪರಾತ್ಮನೇವ ಬಹಲಾಜ್ಞಾನಾವೃತಂ ಭಾಸತೇ।
ತಜ್ಜ್ಞಾನಾನ್ನಿಖಿಲ ಪ್ರಪಂಚವಿಲಯಾತ್ಸ್ವಾತ್ಮನ್ಯವಸ್ಥಾ ಪರಂ
ನಿರ್ವಾಣಂ ಜನಿಮುಕ್ತಮಭ್ಯುಪಗತಂ ಮಾನಂ ಶ್ರುತೀರ್ಮಸ್ತಕಂ ॥

ಬಾಢಂ ಜಯೇ ಯದಿ ಪರಾಜಯಭಾಗಹಂ ಸ್ಯಾಂ
ಸನ್ನ್ಯಾಸಮಂಗ ಪರಿಹೃತ್ಯ ಕಷಾಯಚೇಲಂ ।
ಶುಕ್ಲಂ ವಸೀಯ ವಸನಂ ದ್ವಯಭಾರತೀಯಂ
ವಾದೇ ಜಯಾಜಯಫಲಪ್ರತಿದೀಪಿಕಾಸ್ತು ॥"

"ಕಪ್ಪೆಚಿಪ್ಪು ತನಗೆ ಬೇರೆಯಾದ ಬೆಳ್ಳಿಯೆಂದು ತೋರಿಬರುವಂತೆ, ಪಾರಮಾರ್ಥಿಕವಾಗಿ ಪರಿಶುದ್ಧ ಸಚ್ಚಿದಾನಂದಸ್ವರೂಪವಾಗಿರುವ ಬ್ರಹ್ಮವು, ಅನಾದ್ಯನಿರ್ವಚನೀಯವಾದ ಅಜ್ಞಾನದಿಂದ ಆವೃತನಾಗಿ, ಸರ್ವಜಗದ್ರೂಪವಾಗಿ ಭ್ರಾಂತಿಯಿಂದ ತೋರಿಬರುತ್ತಿದೆ; ಬ್ರಹ್ಮದ ತಾತ್ವಿಕಸ್ವರೂಪದ ತಿಳಿವು ಉಂಟಾಗಲು, ಈ ಅಜ್ಞಾನವು ಪೂರ್ಣವಾಗಿ ನಾಶವಾಗಿ ಅದರಿಂದಾಗಿರುವ ಪ್ರಪಂಚವೆಲ್ಲ ಲಯಹೊಂದಿ, ಜನ್ಮಮರಣರಹಿತವಾದ ಸ್ವಸ್ವರೂಪದಲ್ಲಿ ಇರುವಿಕೆಯೆಂಬ ಮೋಕ್ಷವು ಸಿದ್ಧಿಸುವುದು. ಈ ಅರ್ಥದಲ್ಲಿ ಶ್ರುತಿಶಿರಸ್ಸುಗಳಾಗಿರುವ ಉಪನಿಷತ್ತುಗಳು ಪ್ರಮಾಣಗಳು;

"ನಾನು ಈ ವಾದದಲ್ಲಿ ಈ ಅರ್ಥವನ್ನು ಪ್ರತಿಪಾದಿಸಿ ಜಯಶೀಲನಾಗುವುದು ನಿಶ್ಚಿತವು; ಒಂದು ವೇಳೆ ನಾನು ಪರಾಜಿತನಾಗುವುದಾದರೆ, ಆಗ ನಾನು ಕಷಾಯಚಿಹ್ನೆಯ ಸನ್ನ್ಯಾಸಾಶ್ರಮವನ್ನು ಪರಿತ್ಯಜಿಸಿ, ಗಾರ್ಹಸ್ಥ್ಯಕ್ಕೆ ಯೋಗ್ಯವಾದ ಬಿಳಿಯ ವಸ್ತ್ರವನ್ನು ಧರಿಸುವೆನು. ನಮ್ಮ ಈ ವಾದದಲ್ಲಿ ಉಭಯಭಾರತಿಯು ನಮ್ಮ ಜಯಾಪಜಯಗಳ ನಿರ್ಣಾಯಕಳಾಗಲಿ"– ಎಂದು.

ಶ್ರೀಭಗವತ್ಪಾದರ ಈ ಪ್ರಕಾರವಾದ ಪ್ರತಿಜ್ಞೆಯನ್ನು ಗಮನಿಸಿ, ಶ್ರೀಮಂಡನರೂ ತಮ್ಮ ಪಕ್ಷವನ್ನು ಹೀಗೆ ಪ್ರಕಟಮಾಡಿದರು–

"ವೇದಾಂತಾ ನ ಪ್ರಮಾಣಂ ಚಿತಿವಪುಷಿ ಪದೇತತ್ರ ಸಂಗತ್ಯಯೋಗಾತ್
ಪೂರ್ವೋ ಭಾಗಃ ಪ್ರಮಾಣಂ ಪದಚಯಗಮಿತೇ ಕಾರ್ಯವಸ್ತುನ್ಯಶೇಷೇ;
ಶಬ್ದಾನಾಂ ಕಾರ್ಯಮಾತ್ರಂ ಪ್ರತಿ ಸಮಧಿಗತಾ ಶಕ್ತಿರಭ್ಯುನ್ನತಾನಾಂ
ಕರ್ಮಭ್ಯೋ ಮುಕ್ತಿರಿಷ್ಟಾ ತದಿಹ ತನುಭೃತಾಮಾಯುಷಃ ಸ್ಯಾತ್ಸಮಾಪ್ತೇಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

"ವಾದೇ ಕೃತೇಽಸ್ಮಿನ್ಯದಿ ಮೇ ಜಯಾನ್ಯಃ
ತ್ವಯೋದಿತಾತ್ಸ್ಯಾದ್ವಿಪರೀತಭಾವಃ!
ಯೇಯಂ ತ್ವಯಾ ಭೂದ್ಗದಿತಾ ಪ್ರಸಾಕ್ಷ್ಯೈ
ಜಾನಾತಿ ಚೇತ್ಸಾ ಭವಿತಾ ವಧೂರ್ಮೇ ||"

"ಸಿದ್ಧವಸ್ತುವಾದ ಚೇತನಬ್ರಹ್ಮದಲ್ಲಿ ವೇದಾಂತಗಳು ಪ್ರಮಾಣಗಳಾಗುವುದಿಲ್ಲ; ಲೋಕದಲ್ಲಿ ಪ್ರಸಿದ್ಧವಿಲ್ಲದ ಅಂಥ ವಸ್ತುವನ್ನು ಯಾವಶಬ್ದವೂ ತಿಳಿಸಿಕೊಡಲಾರದು. ಪ್ರಾಮಾಣಿಕಶಬ್ದಗಳಿಗೆ ಕಾರ್ಯವನ್ನು ಬೋಧಿಸುವುದರಲ್ಲಿಯೇ ಸಾಮರ್ಥ್ಯವಿರುವುದೆಂಬುದು ವಿಚಾರಪರರಾದ ಬಲ್ಲವರಿಗೆಲ್ಲ ಸಮ್ಮತವಾಗಿದೆ; ಆದುದರಿಂದ ಪದಗಳ ಸಮುದಾಯವಾದ ವಾಕ್ಯಗಳಿಂದ ತಿಳಿದುಬರುವ ಕ್ರಿಯೆಗಳನ್ನು ಬೋಧಿಸುವ ವೇದದ ಮೊದಲನೆಯ ಕರ್ಮಕಾಂಡವೊಂದೇ ಪ್ರಮಾಣವಾದುದು. ಕರ್ಮಗಳಿಂದಲೇ ಮುಕ್ತಿಯು ಸಿದ್ಧಿಸುವುದು. ಅದೂ ಈಗಿನ ಆಯುಸ್ಸು ಪೂರೈಸಿದ ಅನಂತರವೇ ಸರಿ!

"ನಮ್ಮ ಈ ವಾದದಲ್ಲಿ, ಈ ನನ್ನ ಪ್ರತಿಜ್ಞೆಯನ್ನು ಸಾಧಿಸಿಕೊಳ್ಳಲಾರದೆ ನಾನು ಅಪಜಿತನಾಗುವ ಪಕ್ಷದಲ್ಲಿ, ನೀವು ತಿಳಿಸಿದುದಕ್ಕೆ ವಿರುದ್ಧವಾದುದೇ ಆಗಲಿ; ಎಂದರೆ ನಾನು ಗೃಹಸ್ಥಾಶ್ರಮವನ್ನು ಪರಿತ್ಯಜಿಸಿ ಸನ್ನ್ಯಾಸವನ್ನು ಪರಿಗ್ರಹಿಸುತ್ತೇನೆ; ಈ ವಾದದಲ್ಲಿ ನೀವು ತಿಳಿಸಿರುವಂತೆ, ನನ್ನ ಪತ್ನಿಯು, ತಿಳಿಯಬಲ್ಲವಳಾದರೆ, ಸಾಕ್ಷಿಯಾಗಲಿ"-ಎಂದು.

ಈ ಪ್ರಕಾರವಾಗಿ, ಪರಸ್ಪರಾಶ್ರಮವನ್ನು ಪರಿತ್ಯಜಿಸಿ ಆಶ್ರಮಾಂತರವನ್ನು ಪರಿಗ್ರಹಿಸುವಂಥ ಉಗ್ರವಾದ ಪ್ರತಿಜ್ಞೆಗಳನ್ನು ಮಾಡಿಕೊಂಡು, ಅವರೀರ್ವರೂ ವಿದ್ವತ್ಸಮ್ಮುಖದಲ್ಲಿ ವಾದವನ್ನು ಆರಂಭಿಸಿದರು. ಪ್ರತಿದಿನವೂ ಪ್ರಾತರಾಹ್ನಿಕಾದಿಗಳ ಅನಂತರ ವಾದವು ಆರಂಭಿಸಿ, ಮಧ್ಯಾಹ್ನದವರೆಗೂ ನಡೆದು, ಮಧ್ಯಾಹ್ನಾನಂತರ ಸಾಯಂಕಾಲದವರೆಗೂ ನಡೆಯುತ್ತಿತ್ತು. ಉಭಯಭಾರತಿಯು ತನ್ನ ಗೃಹಕೃತ್ಯಗಳಿಗೆ ಅಡ್ಡಿಯಾಗದಂತೆ ಅವರೀರ್ವರ ಕಂಠದಲ್ಲಿಯೂ ಒಂದೊಂದು ಪುಷ್ಪಹಾರವನ್ನು ಹಾಕಿಸಿ'-'ಯಾರ ಹಾರವು ಬಾಡುವುದೋ ಅವರು ಪರಾಜಿತರೆಂದು ತಿಳಿಯತಕ್ಕದ್ದೆಂದು"- ವ್ಯವಸ್ಥೆಮಾಡಿ, ತನ್ನ ಗೃಹಕಾರ್ಯದಲ್ಲಿ ನಿರತಳಾಗಿದ್ದಳು. ಪ್ರತಿದಿನವೂ ಮಧ್ಯಾಹ್ನದ ವೇಳೆಗೆಬಂದು, ಶ್ರೀಭಗವತ್ಪಾದರೇ ಮೊದಲಾದ ಸನ್ಯಾಸಿಗಳನ್ನು ಭಿಕ್ಷೆಗೂ. ಇತರ ಸಭಾಸದರನ್ನು ಭೋಜನಕ್ಕೂ ಆಹ್ವಾನಿಸುತ್ತಿದ್ದಳು.

ಪೂರ್ವಮೀಮಾಂಸಕರ ಪಕ್ಷದ ಶ್ರೀಮಂಡನರ ವಾದಸರಣಿಯು ಈ ಪ್ರಕಾರವಾಗಿತ್ತು-"ಅತೀಂದ್ರಿಯಗಳಾದ ಇಹಪರಗಳ ಶ್ರೇಯೋಭ್ಯುದಯಗಳಲ್ಲಿ ಅಪೌರುಷೇಯವಾಗಿ ನಿರ್ದುಷ್ಟಪ್ರಮಾಣವಾಗಿರುವ ವೇದವೊಂದೇ ಪ್ರಮಾಣವು. ಇಂಥ ವೇದವು

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಷ್ಫಲವಾದ ವಿಷಯದಲ್ಲಿ ಪ್ರಮಾಣವೆನಿಸಲಾರದು. ಪ್ರವೃತ್ತಿಯಿಂದಲೋ ಇಷ್ಟ-ಪ್ರಾಪ್ತ್ಯನಿಷ್ಟಪರಿಹಾರರೂಪವಾದ ಫಲವು ಸಿದ್ಧಿಸುವುದು ಲೋಕದಲ್ಲಿ ಕಂಡಿದೆ; ನಿವೃತ್ತಿ-ಯಿಂದಲೋ ಕೇವಲ ವಸ್ತುವನ್ನು ಬೋಧಿಸುವುದರಿಂದ ಏನುಫಲ? ಲೌಕಿಕನ್ಯಾಯವೇ ಶಾಸ್ತ್ರನ್ಯಾಯ. ಆದ್ದರಿಂದ ಫಲಶಾಲಿಯಾದ ಪ್ರವೃತ್ತಿನಿವೃತ್ತಿಗಳನ್ನು ಬೋಧಿಸುವಿಕೆ-ಯಿಂದಲೇ ಶ್ರುತಿಗೂ ಪ್ರಾಮಾಣ್ಯವು ಸಿದ್ಧಿಸುವುದರಿಂದ, ಅಂಥ ವಿಧಿನಿಷೇಧಪರಗಳಾದ ಕರ್ಮಕಾಂಡವಾಕ್ಯಗಳೆ ಪ್ರಮಾಣಗಳಾಗುವುವು''–ಎಂದು.

ಶ್ರೀಭಗವತ್ಪಾದರವರ ಇದಕ್ಕೆ ಸಮಾಧಾನಕರವಾದ ಅಭಿಪ್ರಾಯವು ಹೀಗೆ–ಫಲವನ್ನುಳ್ಳ ವಿಷಯವನ್ನು ಬೋಧಿಸುವ ಶ್ರುತಿಯೇ ಪ್ರಮಾಣವೆಂಬುದು ಸರಿಯೇ! ಆದರೆ,-"ಪ್ರವೃತ್ತಿನಿವೃತ್ತಿಗಳನ್ನು ಬೋಧಿಸಿದರೇ ಫಲವು ಲಭಿಸುವುದು–ಸಿದ್ಧವಸ್ತುವನ್ನು ಬೋಧಿಸಿದರೆ ಫಲವೇನೂ ಇಲ್ಲ"–ಎಂಬ ಅಭಿಪ್ರಾಯವು ಮಾತ್ರ ಸರಿಯಲ್ಲ. "ನಿನಗೆ ಪುತ್ರೋತ್ಸವವಾಯಿತು; ಇದು ಹಾವಲ್ಲ, ಹಗ್ಗ"–ಎಂದು ಮುಂತಾದ ಕೇವಲ ಸಿದ್ಧ-ವಿಷಯವನ್ನು ಬೋಧಿಸುವ ಮಾತುಗಳಿಂದಲೂ, ಸಂತೋಷ ಮತ್ತು ಭಯನಿವೃತ್ತಿ-ರೂಪಫಲವು ಲೋಕದಲ್ಲಿಯೂ ಪ್ರಸಿದ್ಧವೇ ಇದೆ.

"ಇದಲ್ಲದೆ, ಕರ್ಮದಿಂದಲೇ ಮೋಕ್ಷವು ಸಿದ್ಧಿಸುವುದೆಂಬುದು ಸರಿಯಲ್ಲ; ಕರ್ಮಗಳ ಫಲಗಳೆಲ್ಲವೂ ಅನಿತ್ಯಗಳೇ ಆಗಿವೆ. ಮೋಕ್ಷವನ್ನು ಒಪ್ಪುವವರೆಲ್ಲರೂ ಅದನ್ನು ನಿತ್ಯ-ವೆಂದೇ ಅಂಗೀಕರಿಸಬೇಕು. ಅನಿತ್ಯವಾದ ಸಂಸಾರದಿಂದ ಬೇಸತ್ತು ನಿತ್ಯವಾದ ಫಲವನ್ನು ಅಪೇಕ್ಷಿಸುವ ಮುಮುಕ್ಷುವಿಗೆ ಮತ್ತೆ ಅನಿತ್ಯವಾದ ಮೋಕ್ಷವು ಬೇಕೆನಿಸುವುದಿಲ್ಲ. ಸಾಧನದಿಂದ ಲಭಿಸಿ ಆಗಂತುಕವಾದ ಫಲವು ನಿತ್ಯವೆನಿಸಲಾರದು. ಆದುದರಿಂದ ನಿತ್ಯವಾದ ಮೋಕ್ಷವು ಮುಮುಕ್ಷುವಿನ ನಿತ್ಯಸಿದ್ಧಸ್ವರೂಪವೇ ಆಗಿರಬೇಕೆಂದು ಸಿದ್ಧಿಸು-ವುದು. ಇದು ಸಿದ್ಧವಾಗಿಲ್ಲವೆಂಬ ಈಗಿನ ಅನುಭವವು ಕೇವಲಭ್ರಾಂತಿಯೆಂದೇ ನಿಶ್ಚಿತವು ಈ ಭ್ರಾಂತಿಯು ತತ್ತ್ವಜ್ಞಾನದಿಂದಲೇ ನಿವರ್ತಿಸುವಂಥದ್ದು. ಆದಕಾರಣ, ಬ್ರಹ್ಮಾತ್ಮ-ತತ್ತ್ವಜ್ಞಾನವೊಂದೇ ಸಂಸಾರಿತ್ವಭ್ರಾಂತಿಯನ್ನು ಕಳೆದು, ನಿತ್ಯಸಿದ್ಧಮುಕ್ತಿಯನ್ನು ಕೈಗೂಡಿಸುವುದಕ್ಕೆ ಸಾಧನವು. ಹೀಗೆ ಜೀವಂತವಾಗಿರುವಾಗಲೇ ಇಂಥ ತತ್ತ್ವದ ಅನುಭವದಿಂದ ಮುಕ್ತನಾಗುವುದೂ ಸಂಭಾವಿತವೇ ಆಗಿದೆ"–ಎಂದು.

ಐದಾರುದಿವಸಗಳ ವಾದದಲ್ಲಿ ಇಷ್ಟುವಿಷಯವು ಸಿದ್ಧಾಂತಕ್ಕೆ ಬಂದು ನಿಂತಿತು. ಶ್ರೀಮಂಡನರು ತಮ್ಮ ಪಕ್ಷದಲ್ಲಿ ಮುಂದೇನನ್ನೂ ವಾದಿಸಲಾರದವರಾಗಿ, ಶ್ರೀಭಗವ-ತ್ಪಾದರ ಅದ್ವೈತಸಿದ್ಧಾಂತವನ್ನು ಆಕ್ಷೇಪಿಸಲು ಉದ್ಯುಕ್ತರಾದರು–

೧. **ಶ್ರೀಮಂಡನರು**–"ಮಾನಾಧೀನಾ ಮೇಯಸಿದ್ಧಿಃ"–"ಪ್ರಮಾಣವಿಲ್ಲದೆ ಯಾವ ಅರ್ಥವೂ ಸಿದ್ಧಿಸಲಾರದು"; ಜೀವೇಶ್ವರರಿಗೆ ಐಕ್ಯವನ್ನು ನೀವು ಹೇಳುತ್ತೀರಷ್ಟೆ! ಇದರಲ್ಲಿ ಪ್ರಮಾಣವೇನು?

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವತ್ಪಾದರು-ಛಾಂದೋಗ್ಯೋಪನಿಷತ್ತಿನ ಆರನೆಯ ಅಧ್ಯಾಯದಲ್ಲಿ ಉದ್ದಾಲಕರು ತಮ್ಮ ಪುತ್ರರಾದ ಶ್ವೇತಕೇತುಗಳಿಗೆ ಉಪದೇಶಮಾಡಿರುವ 'ತತ್ತ್ವಮಸಿ'. ಎಂಬ ಮಹಾವಾಕ್ಯವು ಈ ಅರ್ಥದಲ್ಲಿ ಪ್ರಮಾಣವಾಗಿದೆ.

೨. **ಶ್ರೀಮಂಡನರು**-ವೇದದಲ್ಲಿ ಕೇಳಿಬರುವ "ಹುಂ,ಫಟ್"-ಮುಂತಾದ ಶಬ್ದಗಳಂತೆ "ತತ್ತ್ವಮಸಿ"-ಮುಂತಾದ ವಚನಗಳೂ, ಕೇವಲ ಜಪಕ್ಕೆ ಉಪಯೋಗವಾದವುಗಳೇ ಹೊರತು, ಈ ವಾಕ್ಯಗಳಿಗೆ ಅರ್ಥದಲ್ಲಿ ತಾತ್ಪರ್ಯವೇ ಇಲ್ಲ.

ಶ್ರೀಭಗವತ್ಪಾದರು-ಅರ್ಥವಿಲ್ಲದ,-'ಹುಂ, ಫಟ್'-ಮುಂತಾದವುಗಳು ಜಪ. ಮಾತ್ರಕ್ಕೆ ಉಪಯೋಗಿಗಳಾಗಿರುವ ಮಾತ್ರಕ್ಕೆ, ಅರ್ಥವತ್ತಾಗಿರುವ-'ತತ್ತ್ವಮಸಿ'-' ಮುಂತಾದ ವಚನಗಳಿಗೆ ಜಪಾರ್ಥತ್ವವನ್ನು ಹೇಳುವುದು ಉಚಿತವಲ್ಲ.

೩. **ಶ್ರೀಮಂಡನರು**-'ತತ್ತ್ವಮಸಿ'-ವಾಕ್ಯಕ್ಕೊಂದು ಅರ್ಥವು ತೋರಿಬರುವುದು ಸತ್ಯವೇ. ಶ್ರುತಿಗೆ ಯಜ್ಞಾದಿಕರ್ಮಗಳಲ್ಲಿಯೇ ತಾತ್ಪರ್ಯವಿರುವುದರಿಂದಲೂ, ಕರ್ತೃ-ವಿಲ್ಲದೆ ಕರ್ಮವು ಸಂಭವಿಸಲಾರದುದರಿಂದಲೂ, ವೇದೋಕ್ತಕರ್ಮಗಳಿಗೆ ಅವಶ್ಯವಾಗಿರುವ ಕರ್ತೃವಿನ ಸ್ವರೂಪವನ್ನು ತಿಳಿಸುತ್ತ-'ತತ್ತ್ವಮಸಿ'-ಮುಂತಾದ ವಾಕ್ಯಗಳು ಕರ್ಮ-ವಿಧಿಗಳಿಗೆ ಶೇಷಗಳೇ ಆಗಿವೆ; ಪ್ರಧಾನಾರ್ಥಕಗಳಲ್ಲ.

ಶ್ರೀಭಗವತ್ಪಾದರು- ಕರ್ಮಗಳ ಪ್ರಕರಣದಲ್ಲಿ ಹೇಳಿರುವ ಯೂಪಾದಿಗಳು ಕರ್ಮವಿಧಿಗಳಿಗೆ ಶೇಷಗಳಾಗುತ್ತವೆ; ಸ್ವತಂತ್ರವಾದ ಜ್ಞಾನಪ್ರಕರಣದಲ್ಲಿರುವ ಈ ವಾಕ್ಯಗಳು ಕರ್ಮವಿಧಿಶೇಷಗಳಾಗುವುದು ಹೇಗೆ?

೪. **ಶ್ರೀಮಂಡನರು**- ಜ್ಞಾನಕಾಂಡದಲ್ಲಿಯೇ ಇರುವ-"ಆದಿತ್ಯೋ ಬ್ರಹ್ಮೇ-ತ್ಯಾದೇಶಃ ಮನೋ ಬ್ರಹ್ಮೇತ್ಯುಪಾಸೀತ, ಅನ್ನಂ ಬ್ರಹ್ಮ"- ಮುಂತಾದ ವಿಧಿಗಳಿಗೆ ಶೇಷವಾಗಬಹುದು;

ಶ್ರೀಭಗವತ್ಪಾದರು- ಆ ವಾಕ್ಯಗಳಲ್ಲಿ- 'ಉಪಾಸೀತ, ಆದೇಶಃ, ವ್ಯಜಾನೀತ್ ಎಂದು ಮುಂತಾಗಿ ವಿಧಿಯು ಕೇಳಿಬರುವುದರಿಂದ, ಇವು ಉಪಾಸನಾವಿಧಿಗಳಾಗುವುವು 'ತತ್ತ್ವಮಸಿ,- ಮುಂತಾದವಾಕ್ಯಗಳಲ್ಲಿ ಹೀಗೆ ವಿಧಿಬೋಧಕವು ಇಲ್ಲವಲ್ಲ?

೫. **ಶ್ರೀಮಂಡನರು**-ರಾತ್ರಿಸತ್ರಯಾಗದಲ್ಲಿ ವಿಧಿಯು ಕೇಳಿಬರದಿರುವುದಾದರೂ ಪ್ರತಿಷ್ಠೆಗೆ ಸಾಧನವಾಗಿದೆಯೆಂದು ಫಲವು ಕೇಳಿಬರುವುದರಿಂದ, ಅಲ್ಲಿ ವಿಧಿಯು ಅಂಗೀ-ಕೃತವಾಗಿದೆ; ಹೀಗೆ- 'ತತ್ತ್ವಮಸಿ'-ವಾಕ್ಯದಲ್ಲಿಯೂ ವಿಧಿಯು ಕಲ್ಪನೆಯು ಯುಕ್ತವ

ಶ್ರೀಭಗವತ್ಪಾದರು- "ವಿಧಿಯಿದ್ದರೇ ಫಲಶಾಲಿಯಾಗುವುದು' ಎಂಬ ನಿಯಮ ವಿದ್ದಿದ್ದರೆ, ಆಗ ಫಲವತ್ತಾದ ಕಾರಣದಿಂದ "ತತ್ತ್ವಮಸಿ'- ವಾಕ್ಯದಲ್ಲಿಯೂ ವಿಧಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ಕಲ್ಪಿಸಲಾದೀತು. ಸಿದ್ಧವಸ್ತುಮಾತ್ರಬೋಧನೆಯಿಂದಲೂ ಫಲವು ಉಂಟಾಗು-ವುದೆಂದು ಹೇಳಿರುವುದರಿಂದ, ಇಲ್ಲಿ ಅನವಶ್ಯಕವಾಗಿ ವಿಧಿಯನ್ನು ಕಲ್ಪಿಸುವುದು ಪ್ರಾಮಾಣಿಕವಾಗುವುದಿಲ್ಲ. ಇದಲ್ಲದೆ, ಇಲ್ಲಿ ಉಪಾಸನಾವಿಧಿಯನ್ನು ಕಲ್ಪಿಸಿದರೆ, ಉಪಾಸನೆಯು ಮಾನಸಿಕ ಕ್ರಿಯಾರೂಪವಾದ್ದರಿಂದಲೂ, ಕ್ರಿಯಾಜನ್ಯವು ಅನಿತ್ಯವಾದ್ದರಿಂದಲೂ' ನಿತ್ಯವಾದ ಮೋಕ್ಷವು ಇದರಿಂದ ಸಿದ್ಧಿಸದೆ ಹೋಗುವುದು.

೬. **ಶ್ರೀಮಂಡನರು**– 'ತತ್ತ್ವಮಸಿ'– ವಾಕ್ಯವು ಉಪಾಸನಾವಿಧಿಯಾಗದಿದ್ದರೂ ಈ ವಾಕ್ಯವು ತತ್ಪದದ ಅರ್ಥವಾದ ಬ್ರಹ್ಮದೊಡನೆ, ತ್ವಂಪದದ ಅರ್ಥನಾದ ಜೀವನಿಗೆ ಸಾಮ್ಯವನ್ನು ಬೋಧಿಸುವುದೆಂದಾಗಬಹುದು.

ಶ್ರೀಭಗವತ್ಪಾದರು– ಜೀವನಿಗೆ ಬ್ರಹ್ಮದೊಡನೆ, ಸಾಮ್ಯವೆಂದರೇನು? ಇಬ್ಬರೂ ಚೇತನರೆಂದೋ, ಅಥವಾ ಸರ್ವಜ್ಞಸರ್ವೇಶ್ವರತ್ವಾದಿಗುಣಗಳಿಂದಲೂ ಇಬ್ಬರೂ ಸಮರೆಂದೋ? ಇಬ್ಬರೂ ಚೇತನರೆಂಬುದು ಮೊದಲೇ ಎಲ್ಲರಿಗೂ ಸಿದ್ಧವಾಗಿರುವುದರಿಂದ, ಇದನ್ನು ತಿಳಿಸಲು ಶಾಸ್ತ್ರವೇ ಬೇಕಿಲ್ಲ. ಸರ್ವಾಂಶದಿಂದಲೂ ಸಮ್ಯವೆಂದು ಹೇಳಿದರೆ, ಜೀವಬ್ರಹ್ಮರು ಭಿನ್ನರೆಂಬ ನಿಮ್ಮ ಅಭಿಪ್ರಾಯಕ್ಕೇ ವಿರುದ್ಧವಾಗುವುದು:– ಇಂಥ ಗುಣಗಳೆಲ್ಲವೂ ಇರುವ ಎರಡು ವಸ್ತುಗಳು ಸಂಭಾವಿತವಾಗುವುದಿಲ್ಲ.

೭. **ಶ್ರೀಮಂಡನರು**– ಜೀವೇಶ್ವರರೀರ್ವರೂ ನಿತ್ಯಜ್ಞಾನಸ್ವರೂಪರೇ ಆಗಿದ್ದರೂ, ಜೀವನಿಗೆ ಈ ಸ್ವರೂಪವು ಈಗ ಅವಿದ್ಯೆಯಿಂದ ಆವೃತವಾಗಿದ್ದು ಅನುಭವಸಿದ್ಧವಾಗಿಲ್ಲ. ಜೀವನೂ ಬ್ರಹ್ಮದಂತೆಯೇ ನಿತ್ಯಜ್ಞಾನಸ್ವರೂಪನಾಗಿದ್ದಾನೆಂಬುದನ್ನು– 'ತತ್ತ್ವಮಸಿ'-ವಾಕ್ಯವು ತಿಳಿಸುತ್ತದೆ.

ಶ್ರೀಭಗವತ್ಪಾದರು– ಜೀವಬ್ರಹ್ಮರು ನಿತ್ಯಜ್ಞಾನಸ್ವರೂಪರೇ ಆಗಿರುವಲ್ಲಿ, ಅವಿದ್ಯೆಯಿಂದ ಇವರ ಐಕ್ಯವೇ ಆವೃತವಾಗಿದೆಯೆಂದೂ, ಇದೇ ಪರಮಾರ್ಥತತ್ತ್ವ-ವೆಂದೂ ಅಂಗೀಕರಿಸುವುದೇ ಯುಕ್ತವಲ್ಲವೆ? ಇಂಥ ಎರಡು ವಸ್ತುಗಳಿರುವುದು ಸಂಭಾ-ವಿತವಲ್ಲವಲ್ಲವೆ?

೮. **ಶ್ರೀಮಂಡನರು**– ತತ್ಪದಾರ್ಥವು ಜಗತ್ಕಾರಣವಾದ ಬ್ರಹ್ಮವಲ್ಲವೆ. ಜಗ-ತ್ಕಾರಣವನ್ನು ಪ್ರಧಾನವೆಂದೋ, ಪರಮಾಣುಗಳೆಂದೋ, ಅಭಾವವೆಂದೋ, ಶೂನ್ಯ-ವೆಂದೋ ಹೇಳುವ ಇತರ ಮತಗಳನ್ನು ನಿರಾಕರಿಸಿ;– ತ್ವಂಪದಾರ್ಥವಾದ ಜೀವನಂತೆ, ಬ್ರಹ್ಮವು ಚೇತನವೆಂದು– ಬ್ರಹ್ಮಕ್ಕೆ ಜೀವನೊಡನೆ ಸಾಮ್ಯವನ್ನು– 'ತತ್ತ್ವಮಸಿ'-ವಾಕ್ಯವು ಹೇಳುತ್ತದೆಂದು ಸ್ವೀಕರಿಸಬಹುದು.

ಶ್ರೀಭಗವತ್ಪಾದರು– ಈ ಅರ್ಥವಾಗಬೇಕಾದರೆ, "ತತ್ತ್ವಮಸ್ಮಿ"– ಎಂದು ವಾಕ್ಯವಿರಬೇಕಾಗುವುದು. ಇದಲ್ಲದೆ, 'ತದೈಕ್ಷತ, ಸೋಽಕಾಮಯತ'– ಮುಂತಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರುತಿಗಳಿಂದಲೇ ಜಗತ್ಕಾರಣವಸ್ತುವು ಚೇತನವೆಂಬುದನ್ನು ಹೇಳಿರುವುದರಿಂದ, ಈ ಅರ್ಥದಲ್ಲಿ ತಾತ್ಪರ್ಯವನ್ನು ಹೇಳುವುದು ಪುನರುಕ್ತಿಯಾಗಿ ಸಮಂಜಸವಲ್ಲ.

೯. **ಶ್ರೀಮಂಡನರು**– 'ನಾನು ಈಶ್ವರನಲ್ಲ'– ಎಂದು ಜೀವೇಶ್ವರರ ಭೇದವು ಸರ್ವಪ್ರತ್ಯಕ್ಷವಾಗಿರುವುದರಿಂದ, ಈ ಪ್ರಮಾಣಾಂತರಕ್ಕೆ ವಿರುದ್ಧವಾಗಿ ಜೀವೇಶ್ವರು ಐಕ್ಯವನ್ನು ಹೇಳಿದರೆ, ಈ ವಾಕ್ಯವು ಪ್ರಮಾಣವೇ ಆಗುವುದಿಲ್ಲ.

ಶ್ರೀಭಗವತ್ಪಾದರು– ಎರಡು ವಸ್ತುಗಳ ಭೇದವು ತಿಳಿದುಬರಬೇಕಾದರೆ, ಅವೆರಡೂ ಪ್ರತ್ಯಕ್ಷವಾಗಿರಬೇಕು. 'ನಾನು'– ಎಂಬ ವ್ಯವಹಾರಕ್ಕೆ ವಿಷಯನಾಗಿರುವುದರಿಂದ ಜೀವನನ್ನು ಪ್ರತ್ಯಕ್ಷನೆಂದು ಹೇಳಿದರೂ, ಈಶ್ವರನು ಪ್ರತ್ಯಕ್ಷನಲ್ಲದ್ದರಿಂದ, ಇವರೀರ್ವರ ಭೇದವು ಪ್ರತ್ಯಕ್ಷಗೋಚರವಾಗುವುದು ಹೇಗೆ?

ಶ್ರೀಮಂಡನರು– "ನಾನು ಈಶ್ವರನಲ್ಲ– ಈಶ್ವರಭಿನ್ನನು"– ಎಂಬ ಪ್ರತ್ಯಕ್ಷವಿರುವುದರಿಂದ, ಈ ವಿಶಿಷ್ಟ ಜ್ಞಾನದಲ್ಲಿಜೀವನಿಗೆ ವಿಶೇಷಣವಾಗಿರುವ ಈಶ್ವರಭೇದವೂ ಪ್ರತ್ಯಕ್ಷವೇ ಆಗಿರುತ್ತದೆ.

ಶ್ರೀ ಭಗವತ್ಪಾದರು– ಎರಡು ವಸ್ತುಗಳೂ ಪ್ರತ್ಯಕ್ಷಗಳಾಗದೆ ಅವುಗಳ ಭೇದದ ಪ್ರತ್ಯಕ್ಷವು ಅಸಂಭಾವಿತವೇ ಸರಿ. ಇದಲ್ಲದೆ, ಜೀವನು ಪ್ರತ್ಯಕ್ಷನೆಂಬುದೂ ಸರಿಯಲ್ಲ.

೧೧. **ಶ್ರೀಮಂಡನರು**– ಆತ್ಮನು ಮನಸ್ಸಿಗೆ ಪ್ರತ್ಯಕ್ಷನಲ್ಲವೆ?

ಶ್ರೀಭಗವತ್ಪಾದರು–ಆತ್ಮನು ನಿತ್ಯನಲ್ಲವೆ? ನಿತ್ಯನಾದ ಜೀವನು ಅಣುಪರಿಮಾಣನೋ. ಮಹತ್ಪರಿಮಾಣನೋ ಆಗಿರಬೇಕು–ಮಧ್ಯಮಪರಿಮಾಣನಾದರೆ ನಿತ್ಯನಾಗಲಾರನು. ಎರಡುಪಕ್ಷದಲ್ಲಿಯೂ ಆತ್ಮನು ನಿರವಯುವನಾದ್ದರಿಂದ, ಅಸಂಗನಾದ ಅವನಿಗೆ ಯಾವುದರ ಸಂಬಂಧವೂ ವಾಸ್ತವವಾದುದಾಗಲಾರದೆ, ಮನಸ್ಸಿಗೂ ಗೋಚರನಾಗಲಾರನು. ಮನಸ್ಸು ಹೊರಗಿನ ವಿಷಯಗಳನ್ನು ತಿಳಿಸುವ ಸಾಧನವೇ ಹೊರತು ತನಗೇ ಪ್ರೇರಕನಾಗಿರುವ ಆತ್ಮನನ್ನು ವಿಷಯೀಕರಿಸಲಾರದು.

೧೨. **ಶ್ರೀಮಂಡದರು**–ಜೀವೇಶ್ವರರ ಭೇದವು ಸಾಕ್ಷಿಪ್ರತ್ಯಕ್ಷವಾಗಿದೆ!

ಶ್ರೀಭಗವತ್ಪಾದರು–ಸಾಕ್ಷಿಪ್ರತ್ಯಕ್ಷವು ತಾತ್ವಿಕಾತಾತ್ವಿಕಗಳಿಗೆಲ್ಲ ಸಮವಾಗಿರುವುದರಿಂದ, ಪ್ರಬಲವಾದ ಶ್ರುತಿಪ್ರಮಾಣದಿಂದ ಈ ಭೇದವು ಬಾಧಿತವಾಗುವುದು.

೧೩. **ಶ್ರೀ,ಮಂಡನರು**–ಬ್ರಹ್ಮವು ಸರ್ವಜ್ಞವು; ಜೀವನು ಅಸರ್ವಜ್ಞನು–ಅಜ್ಞನು ಆದ್ದರಿಂದ ಸರ್ವಜ್ಞತ್ವಾಸರ್ವಜ್ಞತ್ವರೂಪಗಳಾದ ವಿರುದ್ಧಧರ್ಮಗಳುಳ್ಳ ಇವರೀರ್ವರಿಗೂ ಭೇದವು–ಶೀತೋಷ್ಣರೂಪವಿರುದ್ಧಧರ್ಮಗಳುಳ್ಳ ಜಲಾಗ್ನಿಗಳಂತೆ–ಅನುಮಾನಪ್ರಮಾಣದಿಂದ ಸಿದ್ಧಿಸುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವತ್ಪಾದರು–ಜೀವೇಶ್ವರರ ಅಜ್ಞತೆಸರ್ವಜ್ಞತೆಗಳಿಗೆ ಇವರಿಗೆ ಉಪಾಧಿಗಳಾಗಿರುವ ಅವಿದ್ಯೆ ಮತ್ತು ಮಾಯೆಗಳೇ ಕಾರಣಗಳಾಗಿರುವುದರಿಂದ, ಜೀವೇಶ್ವರರ ಈ ಭೇದವು ಔಪಾಧಿಕವಾಗಿದೆ. ಔಪಾಧಿಕರೂಪವು ವಸ್ತುವಿನ ವಾಸ್ತವಸ್ವರೂಪವಲ್ಲ; ಇದು ಇವರ ಪಾರಮಾರ್ಥಿಕವಾದ ಏಕತ್ವಕ್ಕೆ ವಿರುದ್ಧವಲ್ಲ.

೧೪. **ಶ್ರೀಮಂಡನರು**– "ದ್ವಾ ಸುಪರ್ಣಾ'– ಮುಂತಾದ ಶ್ರುತಿಯೇ ಜೀವೇಶ್ವರರ ಭೇದವನ್ನು ಹೇಳುತ್ತದೆಯಲ್ಲವೆ?

ಶ್ರೀಭಗವತ್ಪಾದರು– ಪ್ರತ್ಯಕ್ಷಾದಿಪ್ರಮಾಣಗಳಿಂದ ತಿಳಿದುಬರುವ ಭೇದವನ್ನೇ ಈ ಶ್ರುತಿಯು ತಿಳಿಸುತ್ತ, ಈ ಅರ್ಥದಲ್ಲಿ ಇದು ಪ್ರಮಾಣವೇ ಅಗುವುದಿಲ್ಲ.

ಶ್ರೀಮಂಡನರು– ಸ್ಮೃತಿಗಳಲ್ಲಿ ಹೇಳಿರುವ ವಿಷಯಗಳಿಗೆ ಶ್ರುತಿಯೇ ಮೂಲಪ್ರಮಾಣವಾಗಬಹುದಲ್ಲವೆ?

ಶ್ರೀಭಗವತ್ಪಾದರು– ವೇದಜ್ಞರಾದ ಸ್ಮೃತಿಕಾರರು ವೇದಾರ್ಥವನ್ನೇ ಸ್ಮೃತಿಗಳಲ್ಲಿ ನಿರೂಪಿಸಿರುವುದರಿಂದ, ಒಂದವೇಳೆ ಯಾವುದಾದರೂ ಸ್ಮೃತಿಯ ಅರ್ಥಕ್ಕೆ ಮೂಲವಾದ ಶ್ರುತಿವಚನವನ್ನು ಕಾಣಬರದಿದ್ದರೂ, ಅದಕ್ಕೆ ಮೂಲವಾಗಿ ಶ್ರುತಿವಚನವಿರಬೇಕೆಂದು ನ್ಯಾಯತಃ ಸಿದ್ಧವಾಗುವುದು; ಪಾಮರಾದಿಗಳಿಗೂ ಪ್ರಸಿದ್ಧವಾಗಿರುವ ಜೀವೇಶ್ವರರ ಭೇದಪ್ರತ್ಯಕ್ಷಕ್ಕೆ, ಹೀಗೆ ಶ್ರುತಿಮೂಲಕತ್ವವನ್ನು ಕಲ್ಪಿಸಲು ಸಾಧ್ಯವೆ?

೧೫. **ಶ್ರೀಮಂಡನರು**– ಪ್ರಮಾಣಾಂತರದ ಸಂವಾದವು ಪ್ರಾಮಾಣ್ಯಕ್ಕೆ ಕಾರಣವಾಗುತ್ತದೆ; ಜೀವೇಶ್ವರರ ಭೇದಪ್ರತ್ಯಕ್ಷದ ಸಂವಾದವಿರುವ– 'ಋತಂ ಪಿಬಂತೌ'- ಮುಂತಾದ ಶ್ರುತಿಯು ಪ್ರಬಲವಾಗುತ್ತದೆ!

ಶ್ರೀಭಗವತ್ಪಾದರು–ಸ್ವತಃಪ್ರಾಮಾಣ್ಯವಾದಿಗಳಾದ ನಿಮ್ಮ ಅಭಿಪ್ರಾಯದಲ್ಲಿ ಶ್ರುತಿಗೆ ಪ್ರಮಾಣಾಂತರದ ಸಂವಾದದ ಅಪೇಕ್ಷೆಯಿಂದ ಪ್ರಾಮಾಣ್ಯವರ್ಣನೆಯು ಬಹುಶೋಭಿಸುತ್ತದೆ! ಪ್ರಮಾಣಾಂತರಗಳಿಂದ ತಿಳಿದುಬರದ ವಿಷಯವನ್ನು ತಿಳಿಸುವಿಕೆಯೇ ಪ್ರಾಮಾಣ್ಯವಲ್ಲವೆ? ಉಪಕ್ರಮೋಪಸಂಹಾರಾದಿಷಡ್ವಿಧತಾತ್ಪರ್ಯಲಿಂಗಗಳಿಂದ ಸಿದ್ಧಿಸುವ ಜೀವೇಶ್ವರೈಕ್ಯಾರ್ಥವೇ ಶ್ರುತಿತಾತ್ಪರ್ಯವಿಷಯೀಭೂತವಾದ ಯಥಾರ್ಥತತ್ತ್ವವೆಂದು ನಿರ್ಣೀತವಲ್ಲವೆ?

ಹದಿನೆಂಟುದಿನಗಳ ವಿಸ್ತಾರವಾದ ಈವಾದದ ಈಕಡೆಯಲ್ಲಿ ಶ್ರೀಭಗವತ್ಪಾದರು ಜೀವಬ್ರಹ್ಮೈಕ್ಯವೇದಾಂತಸಿದ್ಧಾಂತವನು ಪ್ರತಿಪಾದಿಸಲಾಗಿ, ಮುಂದೆ ಏನನ್ನೂ ಹೇಳಲಾರದೆ ಶ್ರೀಮಂಡನರು ಮೌನವನ್ನು ಅಲಂಕರಿಸಿದರು. ಅಷ್ಟರಲ್ಲಿ ಮಧ್ಯಾಹ್ನಕಾಲವಾಗಿದ್ದು ಶ್ರೀಮಂಡನರ ಕಂಠಮಾಲೆಯು ಬಾಡಿದ್ದುದನ್ನು ಕಂಡು, ಶ್ರೀಮಂಡನರು ವಾದದ ನಿಯಮದಂತೆ ಸನ್ಯಾಸವನ್ನು ಸ್ವೀಕರಿಸಬೇಕಾದುದನ್ನು ಪರಿಭಾವಿಸಿ ಶ್ರೀಸರಸವಾಣಿಯು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವತ್ಪಾದರನ್ನೂ ಶ್ರೀಮಂಡನರನ್ನೂ ಈರ್ವರನ್ನೂ ಭಿಕ್ಷೆಗೆ ದಯಮಾಡಿಸಬೇಕೆಂದು ಆಹ್ವಾನಿಸಿದಳು.

ಅನಂತರ, ಉಭಯಭಾರತಿಯು ಶ್ರೀಭಗವತ್ಪಾದರ ಸಮಾಗಮದಿಂದ ತನ್ನ ಶಾಪವಿಮೋಚನೆಯನ್ನು ತಿಳಿದು, ಶ್ರೀಭಗವತ್ಪಾದರ ಅನುಮತಿಯನ್ನು ಪಡೆದು, ಅವರ ಪ್ರಾರ್ಥನೆಯಂತೆ ಅವರ ವೈದಿಕಧರ್ಮಪ್ರಚಾರಕಾರ್ಯದಲ್ಲಿ ನೆರವಾಗುವಂತೆ ಅನುಮತಿಯನ್ನಿತ್ತು, ಸ್ವಸ್ಥಾನಕ್ಕೆ ತೆರಳಿದಳು

ಇತ್ತ ಶ್ರೀಮಂಡನರು ಚಿಂತಾಪಗವಶರಾಗಿದ್ದುದನ್ನು ಕಂಡು ಶ್ರೀಭಗವತ್ಪಾದರು ಅದರ ಕಾರಣವನ್ನು ಪ್ರಶ್ನೆಮಾಡಿದರು. ಅದಕ್ಕೆ ಶ್ರೀಮಂಡನರು–

"ವಾದವಲ್ಲಿ ಪರಾಜಿತನಾದೆನೆಂದೇನೂ ನನಗೆ ದುಃಖವಿಲ್ಲ. ನಾನು ಇದುವರೆಗೂ ತಿಳಿದುಕೊಂಡಿದ್ದುದು ಸರಿಯಲ್ಲವೆಂದೂ, ತಾವು ಪ್ರತಿಪಾದಿಸಿದುದೇ ವೈದಿಕಪಾರಮಾರ್ಥಿಕಸಿದ್ಧಾಂತತತ್ತ್ವವೆಂದೂ ನನಗೆ ದೃಢವಾಗಿದೆ. ಆದರೆ– 'ಪೂಜ್ಯರಾದ ಶ್ರೀಜೈಮಿನಿಮುನಿಗಳೂ- ಶ್ರೀಶಬರಸ್ವಾಮಿಗಳೂ, ಶ್ರೀಕುಮಾರಿಲಭಟ್ಟಪಾದರವರೂ ಸಹ ತಪ್ಪರ್ಥವನ್ನೇ ಹೀಗೆ ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆಯೆ'?– ಎಂಬ ಸಂದೇಹವು ನನ್ನನ್ನು ಪೀಡಿಸುತ್ತಿದೆ"– ಎಂದು ವಿಜ್ಞಾಪಿಸಿದರು.

ಆಗ ಶ್ರೀಭಗವತ್ಪಾದರು–"ಹಾಗಲ್ಲ; "ಸರ್ವೇ ವೇದಾ ಯತ್ಪದಮಾಮನಂತಿ!- ವೇದೈಶ್ಚ ಸರ್ವೈರಹಮೇವ ವೇದ್ಯಃ"–ಮುಂತಾದ ಶ್ರುತಿಸ್ಮೃತಿಪ್ರಮಾಣವಚನನಿಚಯಾನುಸಾರವಾಗಿ ಅದ್ವಿತೀಯಬ್ರಹ್ಮಾತ್ಮತತ್ತ್ವವೇ ಶ್ರುತಿಸ್ಮೃತೀತಿಹಾಸಪುರಾಣಾದಿ ಸಕಲಶಾಸ್ತ್ರಕ್ಕೂ ಪರಮತಾತ್ಪರ್ಯವಿಷಯೀಭೂತವಾದ ಸಿದ್ಧಾಂತಾರ್ಥವು; ಈ ತತ್ತ್ವಸಾಕ್ಷಾತ್ಕಾರರೂಪವಾದ ಅನುಭವವೇ ಪರಮಪುರುಷಾರ್ಥವಾದ ಮೋಕ್ಷಕ್ಕೆ ಸಾಧನವು" ಎಂಬ ಸಿದ್ಧಾಂತವನ್ನು ಶ್ರೀಸರ್ವಜ್ಞಬಾದರಾಯಣಾಚಾರ್ಯರು ಶ್ರೀಶಾರೀರಕನ್ಯಾಯಪ್ರಸ್ಥಾನದಲ್ಲಿ ಸುನಿಶ್ಚಿತವಾಗಿ ಪ್ರತಿಪಾದಿಸಿದ್ದಾರೆ. ಇವರ ಶಿಷ್ಯರಾದ ಶ್ರೀಜೈಮಿನಿಮುನಿಗಳು ತಮ್ಮ ಗುರುಗಳ ಸಿದ್ಧಾಂತಕ್ಕೆ ವಿರುದ್ಧವಾಗಿ ಹೇಳಿದ್ದಾರೆಂದು ಕಲ್ಪಿಸಲೂ ಸಾಧ್ಯವೆ ?

"ಆದರೆ, ವೈದಿಕಸ್ವವರ್ಣಾಶ್ರಮಧರ್ಮಗಳನ್ನು ಯಥಾವತ್ತಾಗಿ ನಿಷ್ಕಾಮನೆಯಿಂದ ಅನುಷ್ಠಿಸಿ, ಪೂರ್ಣಚಿತ್ತಶುದ್ಧಿಯನ್ನು ಪಡೆದ ಮುಖ್ಯಾಧಿಕಾರಿಗೇ ಈ ತತ್ತ್ವದ ಅನುಭವವು ಲಭಿಸುವುದು. ಫಲಾಕಾಂಕ್ಷೆಯಿಂದಲೇ ಪ್ರವರ್ತಿಸುವ ಸ್ವಭಾವದ ಜನಸಾಮಾನ್ಯಕ್ಕೆ ನಿಷ್ಕಾಮಪ್ರವೃತ್ತಿಯು ದುರ್ಲಭವೆಂದು ಭಾವಿಸಿ, ಶ್ರೀಜೈಮಿನಿಮುನಿಗಳು ಶ್ರುತಿವಿಹಿತಗಳಾಗಿರುವ ಕರ್ಮಗಳನ್ನು ಪ್ರತಿಪಾದಿಸಿದ್ದಾರೆ. ಆದ್ದರಿಂದ ಶ್ರೀಜೈಮಿನಿಮುನಿಗಳು ಪ್ರತಿಪಾದಿಸಿರುವುದು ಕೇವಲ ಧರ್ಮದ ವಿಷಯವೇ ಹೊರತು, ವೇದದ

Sri Vidyabharathi Book Centre, Sringeri

CC-O. In Public Domain. Digitized by eGangotri

ತತ್ತ್ವಾರ್ಥವಿಷಯವಲ್ಲ. ಸರ್ವಜ್ಞಶ್ರೀಬಾದರಾಯಣರ ಶಿಷ್ಯರಾದ ಇವರು, ಅವರು ಪ್ರತಿಪಾದಿಸಿರುವುದಕ್ಕೆ ವಿರುದ್ಧವಾಗಿ ಹೇಳಿದನೆಂದು ತಿಳಿಯಲು ಸಾಧ್ಯವೇ? ಇದರಂತೆಯೇ ಸರ್ವಜ್ಞರಾಗಿರುವ ಕಪಿಲಕಣಾದಗೌತಮಪತಂಜಲಿ–ಮುಂತಾದವರಿಗೂ ಸಹ ವೇದತಾತ್ಪರ್ಯಾರ್ಥವಾಗಿರುವ ಕೇವಲಾದ್ವೈತಸಿದ್ಧಾಂತವೇ ಸಮ್ಮತವೆಂದೂ ಇದಕ್ಕೆ ಅವಶ್ಯವಾದ ಪೂರ್ವಪಕ್ಷವಮತಗಳನ್ನು ತಮ್ಮ ಸಾಂಖ್ಯಾದಿಮತಗಳಲ್ಲಿ ಇವರುಗಳು ಪ್ರದರ್ಶನಮಾಡಿರುವರೆಂದೂ ತಿಳಿಯತಕ್ಕದ್ದು"–ಎಂದು ಬೋಧಿಸಿದರು.

ಆದರೂ-"ಸೂತ್ರಭಾಷ್ಯವಾರ್ತಿಕಕಾರರುಗಳು ಪ್ರಬಲಯುಕ್ತಿಪುರಸ್ಸರವಾಗಿ ಪ್ರತಿಪಾದಿಸಿರುವ ಅರ್ಥದಲ್ಲಿ ಅವರಿಗೆ ಮುಖ್ಯತಾತ್ಪರ್ಯವಿಲ್ಲವೆಂದು ಹೇಳುವುದು ಹೇಗೆ"–ಎಂದು ಶ್ರೀಮಂಡನರು ಚಿಂತಿಸುತ್ತಿದ್ದುದನ್ನು ಅರಿತು, ಶ್ರೀಭಗವತ್ಪಾದರು ಶ್ರೀಜೈಮಿನಿಗಳನ್ನು ಆದರದಿಂದ ಧ್ಯಾನಿಸಿದರು ಶ್ರೀಜೈಮಿನಿಗಳು ಕೂಡಲೆಪ್ರತ್ಯಕ್ಷರಾಗಿ ಬಂದು, ಶ್ರೀಮಂಡನರನ್ನು ಕುರಿತು -"ಶ್ರೀಭಗವತ್ಪಾದರು ಸಾಕ್ಷಾಚ್ಛ್ರೀಪರಮೇಶ್ವರನ ಅಂಶವಿಭೂತಿಗಳೆಂದೂ, ಅವರು ಹೇಳಿದುದೇ ಯಥಾರ್ಥವೆಂದೂ ತಮಗೂ ಇದೇ ವಾಸ್ತವವಾದ ಅಭಿಪ್ರಾಯವೆಂದೂ" – 'ತಿಳಿಸಿದರು. ಇದರಿಂದ ಸಂತುಷ್ಟಾಂತರಂಗರಾದ ಶ್ರೀಮಂಡನರು, ವೈದಿಕಸಕಲಕರ್ಮಗಳನ್ನೂ ಯಥಾವಿಧಿಯಾಗಿ ಅನುಷ್ಠಿಸಿ ಅತ್ಯಂತನಿರ್ಮಲಾಂತಃಕರಣರಾಗಿ ಮುಖ್ಯಾಧಿಕಾರಿಗಳಾಗಿದ್ದು, ಸನ್ಯಾಸಾಶ್ರಮಸ್ವೀಕಾರಕ್ಕೆ ಸಿದ್ಧರಾದರು.

ಆಗ ಶ್ರೀಮಂಡರು ಶ್ರುತಿವಿಧಿಯನ್ನನುಸರಿಸಿ, ಪ್ರಾಜಾಪ್ರತ್ಯೇಷ್ಟಿಯನ್ನು ಅನುಷ್ಠಿಸಿ, ತಮ್ಮ ಸಕಲಲೌಕಿಕಸಂಪತ್ತನ್ನೂ ಬ್ರಾಹ್ಮಣರಿಗೆ ದಾನಮಾಡಿ, ಮಹಾವಿರಕ್ತಿಸಂಪದ್ಭೂಷಿತರಾಗಿ, ಶ್ರೀಭಗವತ್ಪಾದರನ್ನು ವಿಧಿವತ್ತಾಗಿ ಉಪಸದನಮಾಡಿದರು. ಶ್ರೀಭಗವತ್ಪಾದರು ಅವರಿಗೆ ಯಥಾವತ್ತಾಗಿ ಸನ್ನಾಸದೀಕ್ಷೆಯನ್ನು ಅನುಗ್ರಹಿಸಿ, **ಶ್ರೀಸುರೇಶ್ವರರೆಂಬ** ಪಟ್ಟನಾಮವನ್ನು ಇತ್ತು, ವೇದಾಂತಮಹಾವಾಕ್ಯವನ್ನು ಉಪದೇಶಿಸಿದರು. ಮುಖ್ಯಾಧಿಕಾರಿಗಳಾಗಿದ್ದ ಶ್ರೀಸುರೇಶ್ವರು ಶ್ರೀಗುರುವರ್ಯರ ಅನುಗ್ರಹದಿಂದ ಕೂಡಲೆ ಬ್ರಹ್ಮಾತ್ಮತತ್ತ್ವಸಾಕ್ಷಾತ್ಕಾರವನ್ನು ಪಡೆದು, ಜೀವನ್ಮುಕ್ತರಾಗಿ, ತಮ್ಮ ಬ್ರಹ್ಮಪದವಿಯಲ್ಲಿಯೂ ಆಸಕ್ತಿರಹಿತರಾದರು!

ಅನಂತರ ದಿಗ್ವಿಜಯಕ್ರಮದಿಂದ ಶ್ರೀಭಗವತ್ಪಾದರೊಡನೆ ಅನೇಕದೇಶಗಳಲ್ಲಿ ಸಂಚರಿಸುತ್ತ, ಕ್ರಮೇಣ ಶ್ರೀಶೃಂಗಗಿರಿಕ್ಷೇತ್ರಕ್ಕೆ ಬಂದರು. ಶ್ರೀಭಗವತ್ಪಾದರು ತಮ್ಮ ಭಾಷ್ಯಗಳನ್ನು ಶಿಷ್ಯವರ್ಗದವರಿಗೆ ಪ್ರವಚನಮಾಡುತ್ತ ಹನ್ನೆರಡುವರ್ಷಗಳ ಕಾಲ ಅಲ್ಲಿ ಇದ್ದರು. ಶ್ರೀಶೃಂಗಗಿರಿಯಲ್ಲಿ ಬ್ರಹ್ಮವಿದ್ಯಾಸ್ವರೂಪಿಣಿಯಾಗಿರುವ ಶ್ರೀಶಾರದಾದೇವಿಯನ್ನು ಪ್ರತಿಷ್ಠಿಸಿ ಅದ್ವೈತಸಿದ್ಧಾಂತಪ್ರಚಾರಕ್ಕಾಗಿ ಸದ್ಗುರುಸಂಪ್ರದಾಯವನ್ನು ಪ್ರವರ್ತಿಸಿ, ಶ್ರೀಸುರೇಶ್ವರರನ್ನು ಅಲ್ಲಿ ಪ್ರಥಮಾಚಾರ್ಯರನ್ನಾಗಿ ನಿಯಮಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗಿರುವಲ್ಲಿ ಒಂದು ದಿವಸ ಶ್ರೀಸುರೇಶ್ವರರು, – "ತಮಗೆ ನಾನು ಯಾವ ಸೇವೆಯನ್ನು ಮಾಡಿ ಧನ್ಯನಾಗಲಿ?"– ಎಂದು ಪ್ರಾರ್ಥಿಸಿದರು. ಆಗ ಶ್ರೀಭಗವತ್ಪಾದರು ತಮ್ಮ ಸಂಕಲ್ಪದಂತೆ, ತಮ್ಮ ಶ್ರೀಶಾರೀರಕಭಾಷ್ಯಕ್ಕೆ ವಾರ್ತಿಕವನ್ನು ರಚಿಸಬೇಕೆಂದು ತಿಳಿಸಿದರು. "ಶ್ರೀಗುರುಚರಣಾನುಗ್ರಹದ ಬಲದಿಂದ ಈ ಮಹತ್ತರಕಾರ್ಯವನ್ನು ಸಾಧಿಸುತ್ತೇನೆಂದು"– ವಿಜ್ಞಾಪಿಸಿ, ಶ್ರೀಸುರೇಶ್ವರರು ಇದಕ್ಕೆ ಉದ್ಯುಕ್ತರಾದರು.

ಆದರೆ, ಇಷ್ಟರಲ್ಲಿ, ಶ್ರೀಪದ್ಮಪಾದರೇ ಮೊದಲಾದ ಇತರ ಶಿಷ್ಯರು ಇದನ್ನು ವಿರೋಧಿಸಿ–"ಶ್ರೀಸುರೇಶ್ವರರು ಮೊದಲಿನಿಂದಲೂ ವೀರಕರ್ಮಠರಾಗಿದ್ದು, ವಾದದಲ್ಲಿ ಜಿತರಾಗಿ, ಅದರ ನಿಯಮಕ್ಕೆ ಬದ್ಧರಾಗಿ ಸನ್ಯಾಸಿಗಳಾಗಿರುವುದರಿಂದ, ಅವರು ಶ್ರೀಶಾರೀರಕಭಾಷ್ಯಕ್ಕೆ ಸಿದ್ಧಾಂತಾನುಗುಣವಾಗಿ ವ್ಯಾಖ್ಯಾನವನ್ನು ಮಾಡುವರೆಂದು ನಂಬಲಾಗುವುದಿಲ್ಲವೆಂದು ಪ್ರತಿಭಟಿಸಿದರು. ಶಿಷ್ಯಸಮೂಹದವರ ಈ ಅಭಿಪ್ರಾಯಕ್ಕೆ ವಿರುದ್ಧವಾಗಿ ನಡೆಯಲು ಇಷ್ಟಪಡದ ಶ್ರೀಭಗವತ್ಪಾದರು, ಶ್ರೀಸುರೇಶ್ವರರಿಗೆ ಈ ವಿಷಯವನ್ನು ತಿಳಿಸಿ, ಸ್ವತಂತ್ರವಾಗಿಯೇ ವೇದಾಂತತತ್ತ್ವವಿಷಯಕವಾದ ಒಂದು ಗ್ರಂಥವನ್ನು ಬರೆಯುವಂತೆ ಸೂಚಿಸಿದರು. ಆಗ ಶ್ರೀಸುರೇಶ್ವರರು ತಮ್ಮ ಅಮೋಘವಾದ "ನೈಷ್ಕರ್ಮ್ಯಸಿದ್ಧಿ"–ಗ್ರಂಥವನ್ನು ರಚಿಸಿ ಶ್ರೀಭಗವತ್ಪಾದರಲ್ಲಿ ಅರ್ಪಿಸಿದರು. ಇದನ್ನು ಪರಿಶೀಲಿಸಿ, ಇತರವಿದ್ವಾಂಸರುಗಳೂ ಸಹ, ಶ್ರೀಸುರೇಶ್ವರರ ತತ್ತ್ವಜ್ಞಾನವನ್ನೂ ಗ್ರಂಥದ ಪ್ರೌಢಿಮೆಯನ್ನೂ ಕೊಂಡಾಡಿದರು.

ಆಗ ಶ್ರೀಪದ್ಮಪಾದರು ತಾವು ಶ್ರೀಶಾರೀರಕಭಾಷ್ಯಕ್ಕೆ ವಾರ್ತಿಕವನ್ನು ರಚಿಸಲು ಅಪ್ಪಣೆಯನ್ನು ಬೇಡಿದರು. ಶ್ರೀಭಗವತ್ಪಾದರು–"ವಾರ್ತಿಕವನ್ನು ರಚಿಸುವ ಪ್ರತಿಜ್ಞೆಯನ್ನು ಶ್ರೀಸುರೇಶ್ವರರೇ ಮಾಡಿದ್ದರಿಂದ, ಇತರರು ಯಾರೂ ಇದನ್ನು ಮಾಡುವಂತಿಲ್ಲ ಆದ್ದರಿಂದ ಶ್ರೀಶಾರೀರಕಭಾಷ್ಯದ ಮೇಲೆ ಸ್ವತಂತ್ರವಾಗಿಯೇ ವ್ಯಾಖ್ಯಾನವನ್ನು ಬರೆಯೆಂದು ಶ್ರೀಪದ್ಮಪಾದರಿಗೆ ತಿಳಿಸಿದರು. ಆದರಂತೆ ಶ್ರೀಪದ್ಮಪಾದರು ಶ್ರೀಶಾರೀರಕ ಭಾಷ್ಯದಮೇಲೆ "ಪಂಚಪಾದಿಕೆ"–ಎಂಬ ಅಸದೃಶವಾದ ವ್ಯಾಖ್ಯಾನವನ್ನು ರಚಿಸಿದರು.

ಶ್ರೀಭಗವತ್ಪಾದರ ಶ್ರೀಶಾರೀರಕಭಾಷ್ಯಕ್ಕೆ ವಾರ್ತಿಕವನ್ನು ಬರೆಯುವ ತಮ್ಮ ಉದ್ದೇಶಕ್ಕೆ ವಿಘ್ನವಾದುದಕ್ಕೆ ಕೋಪಗೊಂಡ ಶ್ರೀಸುರೇಶ್ವರರು -"ಶ್ರೀಶಾರೀರಕಭಾಷ್ಯದ ಮೇಲೆ ವಾರ್ತಿಕವನ್ನು ಯಾರೂ ರಚಿಸಲಾಗದೆಂದು--"ಶಪಿಸಿದರು. ಹೀಗಾಗಿ ಶ್ರೀಭಗವತ್ಪಾದರವರ ಮುಖ್ಯಸಂಕಲ್ಪವೇ ಭಗ್ನವಾಗಿಹೋಯಿತು ಇದು ಶಿಷ್ಯಜನತೆಯ ದೌರ್ಭಾಗ್ಯದ ಫಲವೆಂದು ತಿಳಿಯಬೇಕಾಗಿದೆ.

ಆಗ ಶ್ರೀಭಗವತ್ಪಾದರು ಶ್ರೀಸುರೇಶ್ವರರನ್ನು ಸಮಾಧಾನಗೊಳಿಸುತ್ತ– "ನಮ್ಮ ತೈತ್ತಿರೀಯಶಾಖೆಯ ಉಪನಿಷತ್ತಿನ ಮೇಲೂ, ನಿನ್ನ ಶುಕ್ಲಯಜುಃಸಿನ ಕಾಣಶಾಖೆಯ, ಬೃಹದಾರಣ್ಯಕೋಪನಿಷತ್ತಿನ ಮೇಲೂ, ನಮ್ಮ ಭಾಷ್ಯಗಳಿವೆಯಷ್ಟೆ ಅವುಗಳ ಮೇಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾರ್ತಿಕಗಳನ್ನು ರಚಿಸು ಮತ್ತು ನಮ್ಮ ಶ್ರೀಶಾರೀರಕಭಾಷ್ಯದ ಮೇಲೆ ಸಂಪೂರ್ಣವಾದ ಭಾಮತೀ— ಎಂಬ ವ್ಯಾಖ್ಯಾನವನ್ನು ಬರೆದು ಕೀರ್ತಿವಂತನಾಗುವೆ'–ಎಂದು ತಿಳಿಸಿದರು. ಇದರಂತೆ ಶ್ರೀಸುರೇಶ್ವರರು ಶ್ರೀಭಗವತ್ಪಾದರವರ ತೈತ್ತಿರೀಯ ಮತ್ತು ಬೃಹದಾರಣ್ಯ-ಕೋಪನಿಷತ್ತುಗಳ ಭಾಷ್ಯಗಳ ಮೇಲೆ ಅಮೋಘಗಳೂ ವಿಸ್ತೃತಗಳೂ ಆದ ವಾರ್ತಿಕಗಳನ್ನು ವಿರಚಿಸಿ, **ವಾರ್ತಿಕಕಾರರು** ಎಂಬ ಅಸಾಧಾರಣವಾದ ಬಿರುದಿನಿಂದ ಜಗತ್ಪ್ರಸಿದ್ಧರಾಗಿದ್ದಾರೆ. ಹಾಗೆಯೇ ಶ್ರೀಭಗವತ್ಪಾದರವರ ಶ್ರೀಪಂಚೀಕರಣಪ್ರಕರಣದ ಮೇಲೆಯೂ ಶ್ರೀದಕ್ಷಿಣಾಮೂರ್ತಿಸ್ತೋತ್ರದ ಮೇಲೆಯೂ ವಾರ್ತಿಕಗಳನ್ನುರಚಿಸಿದ್ದಾರೆ. ಬ್ರಹ್ಮಸಾಕ್ಷಾತ್ಕಾರಸಂಪನ್ನರೇ ಆಗಿದ್ದರೂ, ಶ್ರೀಶಾರೀರಕಭಾಷ್ಯಕ್ಕೆ ವ್ಯಾಖ್ಯಾನಮಾಡುವ ಆದರವು ಬಲವತ್ತರವಾಗಿದ್ದುದರಿಂದ, ಇದರಿಂದ ಪ್ರತಿಬದ್ಧರಾಗಿ, ಆಜನ್ಮದಲ್ಲಿಯೇ ವಿದೇಹಕೈವಲ್ಯಭಾಗಿಗಳಾಗದೆ, ಮುಂದೆ ವಾಚಸ್ಪತಿಮಿಶ್ರರಾಗಿ ಜನಿಸಿ, ಶ್ರೀಶಾರೀರಕಭಾಷ್ಯದ ಮೇಲೆ ಪೂರ್ಣವಾಗಿ ಭಾಮತೀ— ವ್ಯಾಖ್ಯಾನವನ್ನು ವಿರಚಿಸಿ ಧನ್ಯರಾದರು. ಇದು ವೇದಾಂತಶಾಸ್ತ್ರದಲ್ಲಿ "ಭಾಮತೀಪ್ರಸ್ಥಾನವೆಂದು ಸರ್ವಜಗತ್ಪ್ರಸಿದ್ಧವಾಗಿದೆ. ಶ್ರೀ-ವಾಚಸ್ಪತಿಮಿಶ್ರರ ಈ ಭಾಮತೀವ್ಯಾಖ್ಯಾನವು ಶ್ರೀಅಮಲಾನಂದರವರ ಕಲ್ಪತರುವಿನಿಂದ ವ್ಯಾಖ್ಯಾತವಾಗಿ, ಕಲ್ಪತರುವ್ಯಾಖ್ಯಾನವು ಶ್ರೀಮದಪ್ಪಯ್ಯದೀಕ್ಷಿತರ ಪರಿಮಳವ್ಯಾಖ್ಯಾನದಿಂದ ವ್ಯಾಖ್ಯಾತವಾಗಿದೆ. ಶ್ರೀಬ್ರಹ್ಮಸೂತ್ರ– ಶ್ರೀಭಗವತ್ಪಾದರವರ ಶ್ರೀಶಾರೀರಕಭಾಷ್ಯ-ಭಾಮತೀ–ಕಲ್ಪತರು–ಪರಿಮಳ– ಈ ಪಂಚಗ್ರಂಥಗಳೇ ವೇದಾಂತಶಾಸ್ತ್ರವೆಂದು, ಶ್ರೀ-ಮಧುಸೂಧನಸರಸ್ವತಿಗಳ ಅದ್ವೈತಸಿದ್ಧಿಯ ವ್ಯಾಖ್ಯಾತೃಗಳಾದ ಶ್ರೀಗೌಡಬ್ರಹ್ಮಾನಂದ ಸರಸ್ವತಿಗಳು ತಮ್ಮ ರತ್ನಾವಳೀ ವ್ಯಾಖ್ಯಾನದಲ್ಲಿ ವ್ಯಕ್ತಪಡಿಸಿರುತ್ತಾರೆ.

ಪೂರ್ವಾಶ್ರಮದ ಇವರ ಗುರುಗಳಾದ ಶ್ರೀಕುಮಾರಿಲಭಟ್ಟಪಾದರು ಪೂರ್ವ-ಮೀಮಾಂಸಾಸೂತ್ರಗಳ ಮೇಲಿನ ಶ್ರೀಶಾಬರಭಾಷ್ಯಕ್ಕೆ ವಾರ್ತಿಕವನ್ನು ಬರೆದಂತೆ, ಶ್ರೀಸುರೇಶ್ವರರೂ ಶ್ರೀಭಗವತ್ಪಾದರವರ ಉಪನಿಷದ್ಭಾಷ್ಯಗಳಿಗೆ ಅಮೋಘವಾರ್ತಿಕ-ಗಳನ್ನು ರಚಿಸಿ ವಾರ್ತಿಕಕಾರಾದರೆಂದು ಕೀರ್ತಿಶಾಲಿಗಳಾಗಿ, "ಗುರುವಿನಂತೆ ಶಿಷ್ಯ"–ನೆಂಬನಾಣ್ಣುಡಿಯನ್ನು ಸಾರ್ಥಕಗೊಳಿಸಿದರು!

ಶ್ರೀಸುರೇಶ್ವರರು ಮಂಡನಪಂಡಿತರೆಂಬ ಹೆಸರಿನಲ್ಲಿ, ಶ್ರೀಕುಮಾರಿಲಭಟ್ಟಪಾದ-ರವರ ಶ್ಲೋಕವಾರ್ತಿಕಕ್ಕೆ ವ್ಯಾಖ್ಯಾನವನ್ನೂ, ವಿಧಿವಿವೇಕವೆಂಬ ಗ್ರಂಥವನ್ನೂ ಪೂರ್ವ-ಮೀಮಾಂಸಾಶಾಸ್ತ್ರದ ವಿಷಯವಾಗಿ ಎರಡು ಗ್ರಂಥಗಳನ್ನು ಬರೆದಿದ್ದಾರೆ. "ಬ್ರಹ್ಮಸಿದ್ಧಿ' ಯೆಂಬ ವೇದಾಂತಗ್ರಂಥವನ್ನೂ ಇವರು ಪೂರ್ವಾಶ್ರಮದಲ್ಲಿ ಬರೆದಿದ್ದರೆಂದು ಆಧುನಿಕ-ಚಾರಿತ್ರಿಕವಿಮರ್ಶಕರಲ್ಲಿ ಮಹಾಕೋಲಾಹಲವೇ ಇನ್ನೂ ಪರಿಹೃತವಾಗದೆ ಇರುತ್ತದೆ ಪೂರ್ವಾಶ್ರಮದಲ್ಲಿ ಶ್ರೀಸುರೇಶ್ವರರು ವೇದಾಂತಗಳಿಗೆ ಪ್ರಾಮಾಣ್ಯವನ್ನೇ ಒಡಂಬಡದೆ, ಸನ್ನ್ಯಾಸಾಶ್ರಮವನ್ನು ಕರ್ಮಭ್ರಷ್ಟತೆಯೆಂದೂ ಮನಗಂಡವರಾಗಿದ್ದರೆಂಬ ಅಂಶವೇ ಇವರುಗಳ ವಿಚಾರಕ್ಕೇ ಗೋಚರಿಸದಿರುವುದು ಆಶ್ಚರ್ಯವೇ ಸರಿ!

Sri Vidyabharathi Book Centre, Sringeri

CC-O. In Public Domain. Digitized by eGangotri

"ಶ್ರೀಸುರೇಶ್ವರಾಚಾರ್ಯರ ಇಷ್ಟೊಂದು ವಿಸ್ತಾರವಾದ ವಾರ್ತಿಕಗಳನ್ನು ಓದುವವರಾರು?"– ಎಂದು ಅಲಸರಾದ ಅಲ್ಪಮತಿಗಳು ಉದ್ಗರಿಸುವರು. ಶಾಸ್ತ್ರಸಮ್ಮತವಾಗಿ ಶ್ರೇಯಸ್ಕರವಾಗಿರುವ ಸರ್ವವಿಷಯವೂ– "ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ"– ಎಂಬಂತೆ, ನಿಃಸಂದಿಗ್ಧವಾಗಿಯೂ ಸುನಿಶ್ಚಿತವಾಗಿಯೂ ತಿಳಿದುಬರುವಂತೆ ಇಂಥ ಗ್ರಂಥಗಳನ್ನು ಬರೆಯುವುದು ಯಾರಿಂದ ಸಾಧ್ಯ? ಇಂಥ ಮಹೋಪಕಾರವನ್ನು ಮಾಡಿಕೊಟ್ಟಿರುವ ಇವರಿಗೆ ಸರ್ವರೂ ಎಷ್ಟು ಕೃತಜ್ಞರಾಗಿದ್ದರೂ ಅತ್ಯಲ್ಪವೇ ಸರಿ! ಇಂಥ ಗ್ರಂಥವನ್ನು ಅಧ್ಯಯನಮಾಡಿ ತಿಳಿಯುವ ಭಾಗ್ಯಶಾಲಿಯು ಯಾವನೊಬ್ಬನು ಇದ್ದರೆ, ಅಂಥವನಿಗೇ ಇವು ಸಾರ್ಥಕಗಳು– ಬೀದಿಯ ಸಾಮಾನ್ಯಜನರಿಗಲ್ಲ!

ಶ್ರೀಸುರೇಶ್ವರರು ಶ್ರೀಭಗವತ್ಪಾದರೊಡನೆ ದಿಗ್ವಿಜಯಯಾತ್ರೆಯನ್ನು ನೆರವೇರಿಸಿ, ಶ್ರೀಭಗವತ್ಪಾದರ ಆಜ್ಞೆಯಂತೆ ಶ್ರೀಶೃಂಗಗಿರಿಶಾರದಾಜಗದ್ಗುರುಪೀಠವಲ್ಲಿ ನೆಲೆಸಿ, ಶಿಷ್ಯವರ್ಗದವರಿಗೆಲ್ಲ ವೇದಾಂತಪ್ರವಚನವನ್ನು ಮಾಡುತ್ತಿದ್ದರು. ಇವರ ಶಿಷ್ಯರಲ್ಲಿ ಒಬ್ಬರಾದ ಶ್ರೀಸರ್ವಜ್ಞಾತ್ಮಮುನಿಗಳು ಶ್ರೀಶಾರೀರಕಭಾಷ್ಯಕ್ಕೆ 'ಸಂಕ್ಷೇಪಶಾರೀರಕ'–ವೆಂಬ ಅನ್ವರ್ಥವೂ ಮನೋಹರವೂ ಆದ, ಪದ್ಯರೂಪವಾದ ವ್ಯಾಖ್ಯಾನವನ್ನು ರಚಿಸಿರುತ್ತಾರೆ. ಶ್ರೀಸುರೇಶ್ವರರು ಶ್ರೀಶೃಂಗಗಿರಿಯಲ್ಲಿಯೇ ಕಡೆಯವರೆಗೂ ಇದ್ದರು. ಇವರ ಸಮಾಧಿಯು ಶ್ರೀಶಾರದಾದೇವಾಲಯದ ಸಮೀಪದಲ್ಲಿಯೇ ಬೆಳಗುತ್ತಿದೆ.

ಶ್ರೀಸುರೇಶ್ವರರಿಗೆ ತಮ್ಮ ಆಚಾರ್ಯರಾದ ಶ್ರೀಭಗವತ್ಪಾದರಲ್ಲಿ ಇದ್ದ ಭಕ್ತಿಭಾವವನ್ನು ವ್ಯಕ್ತಪಡಿಸುವ ಅವರ ಒಂದೆರಡು ಮಾತುಗಳನ್ನು ಸ್ಮರಿಸುವುದು ಯುಕ್ತವು; ಇದರಿಂದ ಇವರ ವಚನಗಳ ಮಹತ್ತ್ವವೂ ವ್ಯಕ್ತವಾಗುವುದು.

ನ ಖ್ಯಾತಿಲಾಭಪೂಜಾರ್ಥಂ ಗ್ರಂಥೋಽಸ್ಮಾಭಿರುದೀರ್ಯತೇ ।
ಸ್ವಬೋಧಪರಿಶುದ್ಧ್ಯರ್ಥಂ ಬ್ರಹ್ಮವಿನ್ನಿಕಷಾಶ್ಮಸು॥ (ನೈ. ಸಿ. ೧-೬)

"ನಾವು ಗ್ರಂಥಗಳನ್ನು ಬರೆಯುವುದು ಕೀರ್ತಿಗಾಗಲಿ, ಧನಲಾಭಕ್ಕಾಗಲಿ ಗೌರವ ಸಂಪಾದನೆಗಾಗಲಿ ಅಲ್ಲ; ಮತ್ತೇನೆಂದರೆ, ಒರೆಗಲ್ಲಿನಲ್ಲಿ ಚಿನ್ನವನ್ನು ಪರೀಕ್ಷಿಸುವಂತೆ, ಬ್ರಹ್ಮಜ್ಞಾನಸಂಪನ್ನರಾದ ಮಹಾತ್ಮರ ಒರೆಗಲ್ಲಿನಲ್ಲಿ ನಮ್ಮ ತಿಳಿವನ್ನು ಪರೀಕ್ಷಿಸಿ ಶುದ್ಧಿಗೊಳಿಸಿಕೊಳ್ಳುವುದಕ್ಕೇ ಆಗಿದೆ"– ಇದರಿಂದ ಲೋಕೋತ್ತರವಾದ ತಮ್ಮ ವಿನಯವನ್ನು ವ್ಯಕ್ತಪಡಿಸಿದ್ದಾರೆ.

ಗುರೂಕ್ತ್ಯೋ ವೇದರಾದ್ಧಾಂತಸ್ತತ್ರ ನೋ ವಚ್ಮ್ಯಶಕ್ತಿತಃ।
ಸಹಸ್ರಕಿರಣವ್ಯಾಪ್ತೇ ಖದ್ಯೋತಃ ಕಿಂ ಪ್ರಕಾಶಯೇತ್॥(ನೈ. ಸಿ.೧-೫)

Sri Vidyabharathi Book Centre, Sringeri

CC-O. In Public Domain. Digitized by eGangotri

"ಶ್ರೀಭಗವತ್ಪಾದಾಚಾರ್ಯರೇ ವೇದಾಂತಸಿದ್ಧಾಂತವನ್ನು ಪೂರ್ಣವಾಗಿಯೂ ವಿಶದವಾಗಿಯೂ ತಿಳಿಸಿರುವುದರಿಂದ, ಈ ವಿಷಯದಲ್ಲಿ ಮತ್ತೆ ಏನನ್ನು ಹೇಳಲೂ ಶಕ್ತಿ-ಯಿಲ್ಲದವನೇ ಆಗಿದ್ದೇನೆ; ಸೂರ್ಯನಿಂದಲೇ ಎಲ್ಲವೂ ಸರ್ವತ್ರ ಬೆಳಗುತ್ತಿರುವಲ್ಲಿ, ಮಿಂಚಿನಹುಳುವು ಏನನ್ನು ತಾನೆ ಪ್ರಕಾಶಪಡಿಸೀತು?" ಇಲ್ಲಿ ತಮ್ಮ ಪಾಂಡಿತ್ಯದ ಅಹಂಕಾರವನ್ನು ಪರಿಹರಿಸಿಕೊಂಡಿದ್ದಾರೆ. ಮತ್ತು ಶ್ರೀಭಗವತ್ಪಾದರು ಪ್ರತಿಪಾದಿಸಿದ ವಿಷಯವಾಗಿ ಯಾರೂ ಏನನ್ನೂ ಹೆಚ್ಚು ಹೇಳಲಾರರೆಂದು ಇತರರ ಗರ್ವವನ್ನೂ ಮುರಿದಿದ್ದಾರೆ.

ಜ್ಞಾನಂ....ವಕ್ಷ್ಯೇ ಗುರ್ವನುಶಿಕ್ಷಯಾ॥ (ನೈ.ಸಿ. ೧–೩)

"ಶ್ರೀಭಗವತ್ಪಾದಗುರುಗಳ ಆಜ್ಞಾವಶರಾಗಿಯೇ ತಾವು ಗ್ರಂಥವನ್ನು ಬರೆದಿರು-ವುದಾಗಿ"– ಹೇಳಿ, ಇದು ಸತ್ಸಂಪ್ರದಾಯಿಕವಾಗಿ ಪ್ರಾಮಾಣಿಕವಾಗಿರುತ್ತ, ಸರ್ವರಿಗೂ ಗ್ರಾಹ್ಯವಾಗಿದೆಯೆಂಬುದನ್ನು ತಿಳಿಸಿದ್ದಾರೆ.

ಅಲಬ್ಧಾತಿಶಯಂ ಯಸ್ಮಾದ್ವ್ಯಾವೃತ್ತಾಸ್ತಮಬಾದಯಃ।
ಗರೀಯಸೇ ನಮಸ್ತಸ್ಮೈ ಅವಿದ್ಯಾಗ್ರಂಥಿಭೇದಿನೇ॥ (ನೈ. ಸಿ. ೧–೨)

"ಶ್ರೇಯಸ್ಕರವಾಗಿರುವ ಶ್ರುತ್ಯರ್ಥವನ್ನು ಯಥಾರ್ಥವಾಗಿ ಪ್ರತಿಪಾದಿಸಿರುವ ಶ್ರೀಭಗವತ್ಪಾದರಿಗೆ ಸಮರಾದವರು ಮೂರುಲೋಕಗಳಲ್ಲಿಯೂ ಮೂರುಕಾಲಗಳ-ಲ್ಲಿಯೂ ಬೇರೆ ಯಾರೂ ಇಲ್ಲವಾದುದರಿಂದ, ಗುರುವರ್ಯರ ವಿಷಯದಲ್ಲಿ ತಾರತಮ್ಯ-ದ್ಯೋತಕಗಳಾದ ತರ–ತಮಪ್ರತ್ಯಯಗಳು ಪ್ರವರ್ತಿಸಲಾರದೆ ಹಿಂತಿರುಗಿವೆ! ಇವರೋ-ರ್ವರೇ ನಿಜವಾದ ಗುರುಗಳು; ಸಂಸಾರಕಾರಣವಾಗಿರುವ ಅವಿದ್ಯಾಗ್ರಂಥಿಯನ್ನು ಕಡಿದು ಎಲ್ಲರನ್ನೂ ಕೃತಾರ್ಥರನ್ನಾಗಿ ಮಾಡುವ ಮಹಿಮಶಾಲಿಗಳಾದ ಶ್ರೀಭಗವತ್ಪಾದರಿಗೆ ನಿರಂತರವೂ ವಂದನೆಗಳು".

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಹಸ್ತಮಲಕಾಚಾರ್ಯರ ಚರಿತ್ರೆ.

ಶ್ರೀಭಗವತ್ಪಾದಾಚಾರ್ಯರು ದೇಶಸಂಚಾರಮಾಡುತ್ತ, ಶ್ರೀಗೋಕರ್ಣಕ್ಷೇತ್ರದ ಸಮೀಪದ ಶ್ರೀಬಲಿ-ಎಂಬ ಅಗ್ರಹಾರಕ್ಕೆ ಶಿಷ್ಯರುಗಳೊಡನೆ ಬಂದರು. ಅದು ಶ್ರೋತ್ರಿಯಾಗ್ರಹಾರವಾಗಿತ್ತು. ಅಲ್ಲಿ ಪ್ರಭಾಕರರೆಂಬ ವಿದ್ವಾಂಸರಿದ್ದರು. ಕರ್ಮಮಾರ್ಗನಿರತರಾಗಿ ಯಜ್ಞಯಾಗಾದಿಪರರಾಗಿದ್ದರು. ಅವರಿಗೆ ಒಬ್ಬ ಪುತ್ರನು ಹುಟ್ಟಿದನು. ರೂಪಲಾವಣ್ಯಾದಿಸೌಭಾಗ್ಯಸಂಪನ್ನನಾಗಿದ್ದರೂ, ಆ ಕುಮಾರನು ಹುಟ್ಟಿದಂದಿನಿಂದಲೂ ಯಾವ ಮಾತನ್ನೂ ಆಡದೆ, ಯಾವ ವ್ಯವಹಾರವನ್ನೂ ಮಾಡದೆ, ಮುಗ್ಧನಾಗಿದ್ದನು; ಅವನ ಧ್ವನಿಯನ್ನೂ ಯಾರೂ ಕೇಳಿರಲಿಲ್ಲ. ಗ್ರಹಪೀಡಾದಿದೋಷದಿಂದ ಹೀಗಾಗಿರಬಹುದೆಂದು ಭಾವಿಸಿ, ಅನೇಕವಿಧಶಾಂತಿಕರ್ಮಗಳನ್ನೆಲ್ಲ ಮಾಡಿದ್ದರು. ಪ್ರಾಪ್ತವಯಸ್ಕನಾಗಲಾಗಿ, ತಮ್ಮ ಕರ್ತವ್ಯವೆಂಬ ಭಾವನೆಯಿಂದ ಅವನಿಗೆ ಉಪನಯನಸಂಸ್ಕಾರವನ್ನೂ ಹೇಗೋ ನೆರವೇರಿಸಿದ್ದರು.

ಯಾರೋಮಹಾತ್ಮರು ತಮ್ಮ ಅಗ್ರಹಾರಕ್ಕೆ ಬಂದಿರುವರೆಂದು ಕೇಳಿ, ಇವರ ಅನುಗ್ರಹದಿಂದಲಾದರೂ ಪುತ್ರನ ಮೌಗ್ಧ್ಯವು ಪರಿಹೃತವಾದೀತೆಂಬ ಆಸೆಯಿಂದ, ಆ ಮಗನನ್ನು ಕರೆದುಕೊಂಡುಬಂದು, ಶ್ರೀಭಗವತ್ಪಾದಗಲ್ಲಿ ಸಂಗತಿಯನ್ನೆಲ್ಲ ವಿಜ್ಞಾಪಿಸಿಕೊಂಡರು. ಬೂದಿಮುಚ್ಚಿದ್ದ ಅಗ್ನಿಯಂತಿದ್ದ ಬಾಲಕನ ವಸ್ತುಸ್ಥಿತಿಯನ್ನು ಅರಿತ ಶ್ರೀಭಗವತ್ಪಾದರು ಆಶಿಶುವನ್ನು ಕುರಿತು– "ನೀನು ಯಾರಪ್ಪ; ಏಕೆ ಹೀಗೆ ಜಡನಾಗಿದ್ದೀಯೆ?ಎಂದು ಕೇಳಿದರು.

ಕೂಡಲೇ ಆ ಶಿಶುವು– "ನಾನು ಜಡನಲ್ಲ; ಜಡಗಳಾದ ದೇಹೇಂದ್ರಿಯಪ್ರಾಣಾದಿಗಳು ನನ್ನ ಬಲದಿಂದ ಚಲಿಸುತ್ತಿವೆ. ನಾನು ನಿತ್ಯನಿರ್ವಿಕಾರಪ್ರಜ್ಞಾನಘನಸ್ವರೂಪನು" ಎಂದು ಉತ್ತರವಿತ್ತು, ಶ್ರೀಭಗವತ್ಪಾದರಿಗೆ ನಮಸ್ಕರಿಸಿದನು. ಶ್ರೀಭಗವತ್ಪಾದರು ಅವನ ತಲೆಯ ಮೇಲೆ ತಮ್ಮ ಅಮೃತಹಸ್ತವನ್ನಿಟ್ಟು ಅನುಗ್ರಹಿಸಿದರು.

ಅನಂತರ ಪ್ರಭಾಕರನನ್ನು ಕುರಿತು– "ಇವನು ನಿಮ್ಮಲ್ಲಿ ಇರಲು ಯೋಗ್ಯನಲ್ಲ; ನಮ್ಮ ವಶಕ್ಕೆ ಬಿಟ್ಟುಬಿಡಿ; ನಿಮಗೆ ಯೋಗ್ಯವಾದ ಪುತ್ರಸಂತಾನವು ಬೇರೆ ಲಭಿಸುತ್ತದೆ ಎಂದರೆ ಅನುಗ್ರಹಿಸಿ ಕಳುಹಿಸಿದರು.

ಉಪದೇಶಾದಿಗಳಿಲ್ಲದೆ ಸ್ವತ ಏವ ತತ್ತ್ವಾನುಭವಸಂಪನ್ನನಾಗಿದ್ದ ಆ ಶಿಶುವಿಗೆ ಶ್ರೀಭಗವತ್ಪಾದರು ಸನ್ಯಾಸವನ್ನು ಅನುಗ್ರಹಿಸಿ, ಅನ್ವರ್ಥವಾಗಿ– "ಶ್ರೀಹಸ್ತಾಮಲಕ" ರೆಂದು ನಾಮಕರಣಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಮ್ಮ ಶಾರೀರಕಭಾಷ್ಯಕ್ಕೆ ವಾರ್ತಿಕವನ್ನು ರಚಿಲು, ಶ್ರೀಸುರೇಶ್ವರರಿಗೆ ಅಜ್ಞೆಯನ್ನು ಕೊಟ್ಟಾಗ ಇತರಶಿಷ್ಯರುಗಳು ಅದನ್ನು ಸಮ್ಮತಿಸದೆ,-"ತತ್ತ್ವಜ್ಞಾನಸಂಪನ್ನರಾಗಿಯೇ ಜನಿಸಿರುವ ಮಹಾಭಾಗ್ಯಶಾಲಿಗಳಾದ ಶ್ರೀಹಸ್ತಾಮಲಕರು ವಾರ್ತಿಕವನ್ನು ಬರೆಯಲಿ; ಶ್ರೀಸುರೇಶ್ವರರು ವೀರಕರ್ಮಠರಾಗಿದ್ದು, ವಾದದಲ್ಲಿ ಸೋತು, ಗತ್ಯಂತರವಿಲ್ಲದೇ ಸನ್ಯಾಸಿಗಳಾಗಿದ್ದಾರೆ; ಅವರು ಶಾರೀರಕಭಾಷ್ಯಕ್ಕೆ ಸಮಂಜಸವಾದ ವ್ಯಾಖ್ಯಾನವನ್ನು ಮಾಡದೇಹೋಗಬಹುದು"- ಎಂದು ಹೇಳಿದರು. ಆಗ ಶ್ರೀಭಗವತ್ಪಾದರು- "ಹಸ್ತಾಮಲಕರು ತತ್ತ್ವಾನುಭವಿಗಳಾದರೂ, ಶಾಸ್ತ್ರಾಧ್ಯಯನವನ್ನು ಈ ಜನ್ಮದಲ್ಲಿ ಮಾಡಿಲ್ಲವಾದ್ದರಿಂದ, ಶಾಸ್ತ್ರವ್ಯಾಖ್ಯಾನವನ್ನು ಮಾಡಲು ಸಮರ್ಥರಲ್ಲ"ವೆಂದು ತಿಳಿಸಿದರು-

ಮತ್ತೆ- "ಈ ಜನ್ಮದಲ್ಲಿ ಶಾಸ್ತ್ರಾಧ್ಯಯನವಿಲ್ಲದೇ ಅವರಿಗೆ ಜ್ಞಾನೋದಯವು ಆಗಿರುವುದು ಹೇಗೆ?"-ಎಂಬ ಪ್ರಶ್ನೆಗೆ ಉತ್ತರಹೇಳುತ್ತ, ಹಸ್ತಾಮಲಕರ ಪೂರ್ವವೃತ್ತವನ್ನು ಹೀಗೆ ವಿವರಿಸಿದರು.

"ಹಿಂದೆ ಯಮುನಾತೀರದಲ್ಲಿ ಒಬ್ಬ ಸಿದ್ಧನು ಧ್ಯಾನತತ್ಪರನಾಗಿ ಕುಳಿತಿದ್ದನು. ಆಗ ಒಬ್ಬ ಬ್ರಾಹ್ಮಣಸ್ತ್ರೀಯು ಎರಡು ವರ್ಷದ ಮಗುವನ್ನು ಅವರ ಸಮೀಪದಲ್ಲಿ ಬಿಟ್ಟು- 'ಮಹಾತ್ಮರೇ ಈ ಶಿಶುವನ್ನು ಸ್ವಲ್ಪ ನೋಡಿಕೊಳ್ಳಿ, ನಾನು ಸ್ನಾನಮಾಡಿ ಬೇಗ ಬರುತ್ತೇನೆ'- ಎಂದು ಹೇಳಿಹೋದಳು. ಇತ್ತ ಇವರು ಧ್ಯಾನಮಗ್ನರಾಗಲು, ಆ ಶಿಶುವು ಕ್ರಮವಾಗಿ ಹರಿದಾಡುತ್ತ ನದಿಯಲ್ಲಿ ಬಿದ್ದು ಮೃತವಾಯಿತು. ಅಷ್ಟರಲ್ಲಿ ಸ್ನಾನವನ್ನು ಮುಗಿಸಿಕೊಂಡು ಬಂದ ಆ ಸ್ತ್ರೀಯು ಮೃತವಾದ ಶಿಶುವನ್ನು ಎತ್ತಿಕೊಂಡು ಅತ್ಯಂತವಾಗಿ ಗೋಳಾಡಿದಳು. ಅದನ್ನು ಕೇಳಿ ಬಹಿರ್ಮುಖರಾದ ಆ ಸಿದ್ಧರು ಆಕೆಯ ಸ್ಥಿತಿಯನ್ನು ಕಂಡು ಮರುಕಗೊಂಡು, ತಾವೇ ಆ ಶಿಶುವಿನ ದೇಹವನ್ನು ಪ್ರವೇಶಿಸಿದರು.

"ಮಗುವು ಬದುಕಿದ್ದನ್ನು ಕಂಡು ಸಂತಸದಿಂದ ಆಕೆಯು ಮನೆಗೆ ಬಂದಳು. ಈ ಸಿದ್ಧರೇ ಈಗ ಹಸ್ತಾಮಲಕರಾಗಿದ್ದಾರೆ. ಇವರಿಗೆ ಸಕಲತತ್ತ್ವವೂ ಕರಗತವಾಗಿದೆಯಾದರೂ, ಗ್ರಂಥರಚನೆಯು ಇವರಿಂದ ಸಾಧ್ಯವಲ್ಲ"- ಎಂದು. ಹೀಗೆ ಜನ್ಮದಿಂದಲೇ ಸಿದ್ಧರಾದ ಮಹಾಮಹಿಮರು ಶ್ರೀಹಸ್ತಾಮಲಕರು. ಶ್ರೀಭಗವತ್ಪಾದರಲ್ಲಿ ಇವರು ವಿಜ್ಞಾಪಿಸಿದ ದ್ವಾದಶಶ್ಲೋಕಗಳು ಸಮಸ್ತಶಾಸ್ತ್ರಾರ್ಥಸಾರಗರ್ಭಿತವಾಗಿವೆ. ಶ್ರೀಭಗವತ್ಪಾದರವರೇ ಇವುಗಳಿಗೆ ಭಾಷ್ಯವನ್ನು ರಚಿಸಿದ್ದಾರೆಂದಮೇಲೆ ಇದರ ಮಹತ್ತ್ವವನ್ನು ಹೇಳುವುದೇನು".

ಶ್ರೀಭಗವತ್ಪಾದರ ಜತೆಯಲ್ಲಿ ದಿಗ್ವಿಜಯಯಾತ್ರೆ, ಸರ್ವಜ್ಞಪೀಠಾರೋಹಣಾದಿಗಳಲ್ಲಿ ಭಾಗಿಗಳಾಗಿ, ಶ್ರೀಭಗವತ್ಪಾದರು ಹಿಮಾಲಯಕೇದಾರದಲ್ಲಿ ಕೈಲಾಸಕ್ಕೆ ತೆರಳಲು, ಅವರ ಆಜ್ಞಾನುಸಾರವಾಗಿ ಪೂರ್ವದಿಕ್ಕಿನ ಜಗನ್ನಾಥಕ್ಷೇತ್ರದ ಗೋವರ್ಧನ ಮಠದಲ್ಲಿ ಪ್ರಥಮಾಚಾರ್ಯಪದವಿಯನ್ನಲಂಕರಿಸಿ, ಸತ್ಸಂಪ್ರದಾಯಪ್ರವರ್ತಕರಾದರು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀತೋಟಕಾಚಾರ್ಯರ ಚರಿತ್ರೆ.

ಶ್ರೀಭಗವತ್ಪಾದಾಚಾರ್ಯರು ಶ್ರೀಶೃಂಗಗಿರಿಕ್ಷೇತ್ರದಲ್ಲಿ ಶ್ರೀಶಾರದಾಪ್ರತಿಷ್ಠೆಯನ್ನು ಮಾಡಿ ಭಾಷ್ಯಪ್ರವಚನವನ್ನು ನಡೆಯಿಸುತ್ತ ೧೨ ವರ್ಷಗಳ ಕಾಲ ಅಲ್ಲಿವಾಸಮಾಡಿದರು ಅವರ ಶಿಷ್ಯಕೋಟಿಯಲ್ಲಿ ಗಿರಿಗಳೆಂಬುವರು ಅತೀವಶ್ರದ್ಧಾಳುವಾಗಿದ್ದರು; ಶ್ರೀಭಗವತ್ಪಾದರ ಛಾಯೆಯೋ ಎಂಬಂತೆ ಅವರನ್ನು ಅನುಸರಿಸುತ್ತಿದ್ದು, ಅವರಿಗೆ ಬೇಕಾಗುವ ಸೇವೆಗಳನ್ನು ಸಕಾಲದಲ್ಲಿ ಸಲ್ಲಿಸುತ್ತಿದ್ದರು. ಶ್ರೀಭಗವತ್ಪಾದರಲ್ಲಿ ಅತಿಶಯಭಯಭಕ್ತಿಸಂಪನ್ನರಾಗಿ, ಯಾವಾಗಲೂ ವಿನಯಾದಿಗುಣಗಳಿಂದ ಶೋಭಿಸುತ್ತಿದ್ದರು.

ಆಚಾರ್ಯರಿಗಿಂತಲೂ ಮುಂಚೆಯೇ ಎದ್ದು, ಸ್ನಾನಾದಿಗಳಿಂದ ಪರಿಶುದ್ಧರಾಗಿ, ಆಚಾರ್ಯರಿಗೆ ದಂತಧಾವನಾದಿಶೌಚಗಳಿಗೆ ಬೇಕಾದ ಕಾಷ್ಠ, ಮೃತ್ತಿಕೆ, ಜಲ ಮುಂತಾದವುಗಳನ್ನು ಅರ್ಪಿಸುವರು; ಅವರಿಗೆ ಅಹ್ನಿಕಕ್ಕೆ ಮೃದುವಾದ ಕಂಬಳಾಸನವನ್ನು ಏರ್ಪಡಿಸುವರು; ಆಚಾರ್ಯರ ಪಾದಮರ್ದನಾದ್ಯುಪಚಾರಗಳಲ್ಲಿ ನಿಪುಣರಾಗಿದ್ದರು. ಪ್ರತಿದಿನವೂ ಶ್ರೀಭಗವತ್ಪಾದರ ಭಾಷ್ಯಪ್ರವಚನಗಳಲ್ಲಿ ತಪ್ಪದೆ ಸನ್ನಿಹಿತರಾಗಿರುತ್ತಿದ್ದರು

ಒಂದುದಿವಸ ಶ್ರೀಗಿರಿಗಳು ಶ್ರೀಭಗವತ್ಪಾದರ ವಸ್ತ್ರಗಳನ್ನು ತುಂಗಾನದಿಯಲ್ಲಿ ಒಗೆಯುತ್ತಿದ್ದರು. ಅಷ್ಟರಲ್ಲಿ ಇತರಶಿಷ್ಯರೆಲ್ಲರೂ ಸೇರಿ ಶ್ರೀಭಗವತ್ಪಾದರಲ್ಲಿ ಪಾಠಕ್ಕೆ ಸಿದ್ಧರಾಗಿ, ಶಾಂತಿಪಾಠವನ್ನು ಆರಂಭಿಸಿದರು. ಶ್ರೀಭಗವತ್ಪಾದರು'–ಗಿರಿಯೂ ಬರಲಿ'– ಎಂದು ಸೂಚಿಸಿದರು. ಆಗ ಶ್ರೀಪದ್ಮಪಾದರು– "ಮಂದಪ್ರಜ್ಞನಾದ ಗಿರಿಯು ಗೋಡೆಯಂತೆ ಶಾಸ್ತ್ರಕ್ಕೆ ಅನಧಿಕಾರಿ, ಅವನಿಗಾಗಿ ನಿರೀಕ್ಷಿಸುವುದೇತಕ್ಕೆ?"– ಎಂದು ಹೇಳಿದರು. ಇವರ ದುರಹಂಕಾರವನ್ನು ಮುರಿಯುವ ಉದ್ದೇಶದಿಂದ ಶ್ರೀಭಗವತ್ಪಾದರು ಶ್ರೀಗಿರಿಗಳಿಗೆ ಮನಸ್ಸಿನಿಂದಲೇ ಹದಿನಾಲ್ಕುಶಾಸ್ತ್ರಗಳನ್ನೂ ಅನುಗ್ರಹಿಸಿದರು ಅಷ್ಟರಲ್ಲಿ ವಸ್ತ್ರಕ್ಷಾಳನೆಯು ಮುಗಿದು, ಶ್ರೀಗಿರಿಗಳು ವಿದಿತಾಖಿಲವಿದ್ಯರಾಗಿ, ಪರತತ್ತ್ವಪ್ರತಿಪಾದಕಗಳಾದ, ಲಲಿತಪದಪುಂಜಾಲಂಕೃತತೋಟವೃತ್ತಗಳಿಂದ ಶ್ರೀಭಗವತ್ಪಾದರನ್ನು ಸ್ತುತಿಗೈಯ್ಯುತ್ತ ಬಂದು ಪ್ರಣಾಮಮಾಡಿದರು. ಇದನ್ನು ಕೇಳಿ ಸರ್ವರೂ ಲಜ್ಜಿತರೂ, ಪರಮಾಶ್ಚರ್ಯಚಕಿತರೂ ಆದರು.

ಉತ್ತಮಭಕ್ತಿಯ ಆವೇಶದಿಂದ ತಾನಾಗಿಯೇ ತೋಟಕವೃತ್ತಮಯಗಳಾದ ತತ್ತ್ವವಚನಗಳು ಶ್ರೀಗಿರಿಗಳ ವದನಾರವಿಂದದಿಂದ ಹೊರಬಂದ ಕಾರಣದಿಂದ ಶ್ರೀಭಗವತ್ಪಾದರು ಸನ್ನ್ಯಾಸದೀಕ್ಷೆಯನ್ನು ಅನುಗ್ರಹಿಸಿ, ಅವರನ್ನು "ಶ್ರೀತೋಟಕಾಚಾರ್ಯರೆಂದೇ"– ಕರೆದರು.ಈ ನಾಮಧೇಯದಿಂದಲೇ ಇವರು ಜಗತ್ತಿನಲ್ಲಿ ಖ್ಯಾತರಾಗಿದ್ದಾರೆ. ಮತ್ತು ಶ್ರೀತೋಟಕರು ಇದೇ ವೃತ್ತದಲ್ಲಿ ಮಹಾರ್ಥಸಂಪತ್ತಿನಿಂದ ಶೋಭಿಸುತ್ತಿರುವ– 'ಶ್ರುತಿಸಾರಸಮುದ್ಧರಣ'ವೆಂಬ ದಿವ್ಯತತ್ತ್ವಗ್ರಂಥವನ್ನು ವಿರಚಿಸಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀದೇಶಿಕೇಂದ್ರರಿಗೆ ಗುರುದಕ್ಷಿಣೆಯನ್ನು ಅರ್ಪಿಸಿ ಧನ್ಯರಾದರು. ಶ್ರೀಭಗವತ್ಪಾದರವರ ಅನುಗ್ರಹವು ಮಹತ್ತರವಾದುದು.—ಅತಿಮಂದಪ್ರಜ್ಞರಾಗಿದ್ದ ಶ್ರೀಗಿರಿಗಳು ಶ್ರೀಪದ್ಮ-ಪಾದಾದಿಗಳಿಗೆ ಸಮಾನರಾಗಿ ಶ್ರೀಭಗವತ್ಪಾದರವರ ಒರ್ವ ಮುಖ್ಯಶಿಷ್ಯರೆನಿಸಿದರು.

ಶ್ರೀಭಗವತ್ಪಾದರವರ ಆಜ್ಞೆಯಂತೆ ಉತ್ತರದಿಕ್ಕಿನ ಬದರಿಕಾಶ್ರಮದಲ್ಲಿನ ಜ್ಯೋತಿರ್ಮಠದಲ್ಲಿ ಪ್ರಥಮಾಚಾರ್ಯಸ್ಥಾನವನ್ನು ಅಲಂಕರಿಸಿ, ಸದ್ಗುರುಸಂಪ್ರದಾಯವನ್ನು ಬೆಳಗಿಸಿದರು.

ವ್ಯಾಸಶಂಕರಪದ್ಮಾಂಘ್ರಿಹಸ್ತಾಮಲಕತೋಟಕಾ೯ ।
ವಾರ್ತಿಕಾಚಾರ್ಯಮುಖ್ಯಾನ್ಸ್ವೈ ವಂದೇ ವಿದ್ಯಾನಿಧೀನಹಂ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಅಭಿನಂದನೆ

ಸರ್ವಲೋಕಗಳ ಇಹಪರಶ್ರೇಯೋಭ್ಯುದಯಗಳಿಗೆ ಒಂದೇ ಪರಮಸಾಧನವಾಗಿರುವ ವೈದಿಕಸನಾತನವರ್ಣಾಶ್ರಮಧರ್ಮವನ್ನು ಪ್ರತಿಪಾದಿಸಿ ಪ್ರಚಾರಮಾಡಿರುವ ಮಹಾತ್ಮರುಗಳಲ್ಲಿ ಶ್ರೀಮಚ್ಛಂಕರಭಗವತ್ಪೂಜ್ಯಪಾದಾಚಾರ್ಯರೇ ಅದ್ವಿತೀಯರು. ಇವರ ಉಪದೇಶಗಳು ಸರ್ವದೇಶಕಾಲವ್ಯಕ್ತಿಗಳಿಗೂ ಶ್ರೇಯಸ್ಕರಗಳಾಗಿ ಆದರಣೀಯಗಳಾಗಿವೆ. ಇವರ ವೈಯಕ್ತಿಕಚಾರಿತ್ರಿಕವಿಷಯಗಳು ಶ್ರೇಯಸ್ಕಾಮಿಗಳಿಗೆ ಅನತಿಪ್ರಯೋಜನಗಳೇ ಸರಿ. ಆದರೂ, ಈ ವಿಷಯಗಳಲ್ಲಿ ಬಹುವಿಧವಿವಾದಾಂಶಗಳು ಪ್ರಚಾರದಲ್ಲಿರುವಲ್ಲಿ, ಪ್ರಾಮಾಣಿಕವಾಗಿರುವ ಶ್ರೀಮಾಧವೀಯಶಂಕರವಿಜಯಾನುಸಾರವಾಗಿ ವಾಸ್ತವಾಂಶಗಳನ್ನು ಸಮನ್ವಯಮಾಡಿ ಪ್ರತಿಪಾದಿಸಿರುವ ಶ್ರೀಕವಿನರಸಿಂಹಶರ್ಮರು ಎಲ್ಲರ ಕೃತಜ್ಞತೆಗೆ ಪಾತ್ರರೆಂಬಲ್ಲಿ ಸಂದೇಹವಿಲ್ಲ. ಶಾಸ್ತ್ರಸಿದ್ಧಾಂತಾರ್ಥವನ್ನು ತಿಳಿಯಬಯಸುವ ಜಿಜ್ಞಾಸುಗಳು, ಇವರು ಪ್ರಚಾರಮಾಡಿರುವ ನೂರಾರುಪ್ರಕರಣಗಳನ್ನು ಮನನಮಾಡುವುದು ಉತ್ತಮವು.

ಶಂಕರಕಿಂಕರಃ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಜ್ಞಾಪನೆ

ಮಾನವಜೀವಿತವು ಅಮೂಲ್ಯವಾದ ಶ್ರೇಯಸ್ಸಾಧನೆಯಾಗಿದೆ, ಜನರು ಇದನ್ನು ಸಾರ್ಥಕಪಡಿಸಿಕೊಳ್ಳುವ ಮಾರ್ಗವನ್ನರಿಯದೆ, ಸ್ವೇಚ್ಛಾಪರರಾಗಿ, ತಮ್ಮ ಜೀವಿತವನ್ನು ವ್ಯರ್ಥಮಾಡಿಕೊಳ್ಳುವುದೇ ಅಲ್ಲದೆ, ಮುಂದೆ ಅನಂತವೂ ಅಪರಿಹಾರ್ಯವೂ ಆದ ಅನರ್ಥಕ್ಕೂ ಗುರಿಯಾಗುತ್ತಿದ್ದಾರೆ.

ಮಾನವಜೀವಿತದ ಉತ್ಕರ್ಷವನ್ನೂ, ಅದರ ಸಾರ್ಥಕತೆಯನ್ನೂ ತಿಳಿಸಿ, ಆಯಾ-ಅಧಿಕಾರಿಜನರು ತಮ್ಮ ತಮ್ಮ ಜೀವಿತದ ಪರಮಫಲವನ್ನು ಪಡೆದು ಧನ್ಯರಾಗುವ ಮಾರ್ಗವನ್ನು ಆಯಾಮಹಾಪುರುಷರು ಆಗಾಗ ಲೋಕದಲ್ಲಿ ಅವತರಿಸಿ ಬೋಧಿಸಿ-ದ್ದಾರೆ. ಇವೇ ನಾನಾಮತಗಳೆಂದು ಪ್ರಸಿದ್ಧವಾಗಿವೆ.

ಪ್ರಪಂಚದಲ್ಲಿ ಪ್ರಚಾರದಲ್ಲಿರುವ ಹಲವಾರುಮತಗಳಲ್ಲಿ ವೈದಿಕಮತವೊಂದೇ-ಅದರಲ್ಲಿಯೂ ಅದ್ವೈತವೇ–ಪ್ರಾಮಾಣಿಕವಾದ ಪಾರಮಾರ್ಥಿಕಮತವಾಗಿದೆ. ಆದರೂ ಎಲ್ಲರಿಗೂ ವೈದಿಕಾದ್ವೈತಮತದಲ್ಲಿ ಅಧಿಕಾರವು ಸುಲಭವಲ್ಲ; ಹಿಂದಿನ ಅನೇಕಜನ್ಮ-ಗಳಲ್ಲಿ ಅನುಷ್ಠಿಸಿದ ಪುಣ್ಯಗಳ ಪರಿಪಾಕದಿಂದಲೇ ವೈದಿಕಾದ್ವೈತಮತದ ಸಂಪ್ರದಾಯ-ದಲ್ಲಿ ಜನ್ಮವು ಲಭಿಸುವುದು. ಇತರಮತಗಳಲ್ಲಿ ಜನ್ಮಪಡೆದಿರುವವರು, ತಮ್ಮ ತಮ್ಮ ಧರ್ಮಗಳಲ್ಲಿ ಶ್ರದ್ಧಾಪೂರ್ವಕವಾಗಿ ನಿರತರಾದರೆ, ಮುಂದಿನ ಜನ್ಮಗಳಲ್ಲಿ ಉತ್ತರೋ-ತ್ತರವಾಗಿ ಉತ್ತಮೋತ್ತಮಮತಗಳಲ್ಲಿ ಜನ್ಮವೆತ್ತಿ, ಕಡೆಯಲ್ಲಿ ಅದ್ವೈತಮತದಲ್ಲಿ ಹುಟ್ಟಿ, ಅಲ್ಲಿ ಸಾಧನೆಗಳನ್ನು ಅನುಷ್ಠಿಸಿ, ಕ್ರಮೇಣ ಪುರುಷಾರ್ಥವನ್ನು ಪಡೆದು, ಕೃತಕೃತ್ಯ-ರಾಗುವರು. ಈ ರೀತಿಯಾಗಿ ಎಲ್ಲ ಮತಗಳೂ ಪ್ರಾಮಾಣಿಕವಾಗಿವೆ.

ಆಯಾಅಧಿಕಾರಿಗಳಿಗೆ ಆಯಾಮತಗಳು ಹಿತಕರಗಳಾಗಿವೆ; ಆದುದರಿಂದಲೇ ಅವರವರಿಗೆ ತಮ್ಮ ತಮ್ಮ ಮತಗಳಲ್ಲಿ ಅತಿಶಯವಾದ ಆದರವು ಸಹಜವಾಗಿಯೇ ಇರು-ತ್ತದೆ. ಈ ಪರಮಾರ್ಥವನ್ನು ತಿಳಿಯದೆ– "ತನ್ನ ಮತವೇ ಸನ್ಮತವು, ಇದೇ ಸರ್ವ-ರಿಗೂ ಹಿತಕರವಾದುದು; ಆದ್ದರಿಂದ ಎಲ್ಲರೂ ತನ್ನ ಮತವನ್ನೇ ಅನುಸರಿಸಬೇಕು"– ಎಂಬ ದುರಭಿಮಾನಕ್ಕೆ ವಶರಾಗಿ, ಪ್ರತಿಯೊಂದುಮತದವರೂ ಇತರ ಮತಗಳ ಅನು-ಯಾಯಿಗಳ ಮೇಲೆ ದ್ವೇಷಾಸೂಯೆಗಳನ್ನು ಬೆಳೆಸಿಕೊಂಡು, ಪರಸ್ಪರವಾಗಿ ಹಾನಿ-ಮಾಡುವುದರಲ್ಲಿಯೂ ತೊಡಗಿದ್ದಾರೆ. ಜಗತ್ತಿನ ಇತಿಹಾಸವು ಇದಕ್ಕೆ ಸಾಕ್ಷಿಯಾಗಿದೆ.

ಆದರೆ—

"ಸರ್ವಾಣಿ ತಾನಿ ಮಾನಾನಿ ಕಥಿತಾನಿ ಮನೀಷಿಭಿಃ ।
ಅಧಿಕಾರಿವಿಭೇದೇನ; ನೈಕಸ್ಯೈವ ಸದಾ ದ್ವಿಜಾಃ ॥"

Sri Vidyabharathi Book Centre, Sringeri

CC-O. In Public Domain. Digitized by eGangotri

"ಅಧಿಕಾರಿಗಳ ಭೇದದಿಂದ ಎಲ್ಲ ಮತಗಳೂ ಪ್ರಮಾಣಗಳೇ; ಆದರೂ, ಯಾರು ಯಾವಮತವನ್ನಾದರೂ ಅನುಸರಿಸಿದರೆ ಒಳ್ಳೆಯದಾಗುವುದಿಲ್ಲ; ತನಗೆ ಅಧಿಕಾರವಿರುವ ಮತವನ್ನೇ ತಾನು ಅನುಸರಿಸಬೇಕು"– ಎಂದು ಬಲ್ಲವರು ಹೇಳುತ್ತಾರೆ.

ಸ್ವಧರ್ಮೇ ನಿಧನಂ ಶ್ರೇಯಃ, ಪರಧರ್ಮೋ ಭಯಾವಹಃ !–

"ಸ್ವಧರ್ಮದಲ್ಲಿ ಎಂದರೆ, ತನ್ನನ್ನು ಕುರಿತು ಶಾಸ್ತ್ರವು ಬೋಧಿಸುವ ಧರ್ಮದಲ್ಲಿ; ನಿರತನಾಗಿದ್ದು ಮರಣಹೊಂದುವುದು ಶ್ರೇಯಸ್ಕರವು; ಎಂದರೆ ಮರಣಪರ್ಯಂತವೂ ತನ್ನ ಮತದ ಧರ್ಮದಲ್ಲಿಯೇ ತಪ್ಪದೆ ನಿರತನಾಗಿರುವುದೇ ಶ್ರೇಯಸ್ಕರವು; ಯಾವ-ಸಮಯದಲ್ಲಿಯೂ ಪರಧರ್ಮವು ಭಯಂಕರವೇ ಆಗುವುದು"– ಎಂದು ಶ್ರೀಮದ್ಗೀ-ತೆಯೂ ಈ ಅರ್ಥವನ್ನೇ ಕಂಠೋಕ್ತವಾಗಿ ಉಪದೇಶಿಸುತ್ತದೆ. ಇದನ್ನೆಲ್ಲ ತಾಳ್ಮೆಯಿಂದ ವಿಮರ್ಶಿಸಿ, ತಮ್ಮತಮ್ಮ ಜೀವಿತವನ್ನು ಸಾರ್ಥಕಮಾಡಿಕೊಳ್ಳುವುದಕ್ಕಾಗಿ, ಎಲ್ಲರೂ ಸ್ವಸ್ವಧರ್ಮಗಳಲ್ಲಿ ಶ್ರದ್ಧಾಭಕ್ತಿಪೂರ್ವಕವಾಗಿ ನಿರತರಾಗಬೇಕು.

ಸರ್ವಶ್ರೇಯಸ್ಕರವೂ ಸರ್ವಸಮಂಜಸವೂ ಆಗಿರುವ ಈ ಅಮೋಘವಾದ ಹಿತ-ವನ್ನು ಸ್ಪಷ್ಟವಾಗಿ ಪ್ರತಿಪಾದಿಸಿರುವ ಶ್ರೀಮಚ್ಛಂಕರಭಗವತ್ಪಾದರೊಬ್ಬರೇ ಜಗತ್ತಿ-ನಲ್ಲೆಲ್ಲ ಏಕೈಕಸದ್ಗುರುಗಳಾಗಿರುವರು. ಈ ಅರ್ಥವನ್ನು ಈ ಲಘುಗ್ರಂಥದಲ್ಲಿ ಯಥಾ-ಮತಿ ದಿಙ್ಮಾತ್ರದಿಂದ ತೋರಿಸಿದ್ದೇನೆ.

ಕಾಳಿದಾಸಃ ಕವಿಸ್ತದ್ವದಪರೇ ಕವಯೋ ಯಥಾ ।
ಶ್ರೀಮಂತೋ ಭಗವತ್ಪಾದಾ ಭಾಷ್ಯಕಾರಾಸ್ತಥಾಪರೇ ॥
ಭಗವತ್ಪಾದಮಾಹಾತ್ಮ್ಯಲೇಶಸಂಕೀರ್ತನಾದಹಂ ।
ಬಹುಪುಣ್ಯವಶಾಲ್ಲಭ್ಯಾನ್ನನು ಧನ್ಯೋಽಸ್ಮ್ಯಸಂಶಯಂ ॥

ಅಕ್ಷಯ ಸಂ॥ ಶ್ರೀಶಂಕರಜಯಂತೀ

ಶೃಂಗಗಿರಿಕವಿನರಸಿಂಹಶರ್ಮಾ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ವದಭಿಪ್ರಾಯಗಳು

'ಭಗವತ್ಪಾದಸಂಜ್ಞಕಃ'— ಎಂಬ ಶ್ರೀಮಚ್ಛಂಕರಭಗವತ್ಪಾದಾಚಾರ್ಯರ ಅಷ್ಟೋತ್ತರಶತನಾಮಾವಳಿಯ ಹೆಸರೇ ಇವರ ಅಸಾಧಾರಣವಾದ ಮಹಿಮೆಯನ್ನು ಹೇಳುತ್ತದೆ; ಈ ಬಿರುದಿನ ಹೆಸರು ಮತ್ತಾರಿಗೂ ಸಲ್ಲದು.

ಅನೇಕರೀತಿಗಳಿಂದ ಶ್ರೀಭಗವತ್ಪಾದರ ಮಹಿಮಾತಿಶಯವನ್ನು ನಿರೂಪಿಸುವ ನೆಪದಿಂದ ಸಮಸ್ತವೇದಾಂತಸಿದ್ಧಾಂತದ ಸಾರಾರ್ಥವನ್ನು ಹೃದ್ಗತಮಾಡಿಕೊಡುವ ಕವಿ ಶರ್ಮರ ಈ ಚಿಕ್ಕಪುಸ್ತಕವು, ಶ್ರೀಭಗವತ್ಪಾದರ ದಿವ್ಯಸೂಕ್ತಿಗಳ ರೂಪದಿಂದ ಅವರ ಸಾಕ್ಷಾತ್ಕಾರವನ್ನೇ ಮಾಡಿಸುತ್ತ, ಇವುಗಳನ್ನು ಮನನಮಾಡುವ ಅಧಿಕಾರಿಪುರುಷರಿಗೆ ಬ್ರಹ್ಮಾಮೃತವನ್ನು ಉಣಬಡಿಸಿ, ನಿತ್ಯನಿರತಿಶಯತೃಪ್ತಿಸುಖವನ್ನು ಉಂಟುಮಾಡುತ್ತದೆ; ಸಕಲರಿಗೂ ಶ್ರೇಯೋಮಾರ್ಗವನ್ನು ತೋರಿಸುತ್ತದೆ; ಪ್ರೌಢವೂ, ಸರಳವೂ, ಮನೋ-ಹರವೂ ಆದ ಇವರ ಶೈಲಿಯು ಓದುಗರಿಗೆ ಆನಂದಕರವಾಗಿದೆ!

ರೋಗಗಳನ್ನು ಪರಿಹರಿಸುವುದು, ಸಂಪತ್ತನ್ನು ಉಂಟುಮಾಡಿಕೊಡುವುದು, ಸಂತಾನವನ್ನು ಅನುಗ್ರಹಿಸುವುದು, ಅಂಗವೈಕಲ್ಯವನ್ನು ಸರಿಪಡಿಸುವುದು—ಮುಂತಾದ ಅಲೌಕಿಕಮಹಿಮೆಗಳನ್ನು—ಬೌದ್ಧರು, ಜೈನರು, ಕ್ರಿಶ್ಚಿಯನರು, ಮಹಮ್ಮದೀಯರು, ಇತರಲೌಕಿಕಪುರುಷರು ಮೊದಲಾದ— ಎಲ್ಲರಲ್ಲಿಯೂ ಕಾಣುತ್ತಿದ್ದೇವೆ. ಇವೆಲ್ಲ ಕೇವಲ ಲೌಕಿಕಮಾತ್ರೋಪಯೋಗಿಯಾದುವು; ಇವುಗಳಿಂದ ಪರದಲ್ಲಿ ಯಾವ ಸೌಭಾಗ್ಯವೂ ದೊರೆಯುವುದಿಲ್ಲ. ಅನಾದ್ಯನಂತವಾದ ದುಃಖಮಯಸಂಸಾರಸಾಗರವನ್ನು ದಾಟಿ, ಪರಮಶ್ರೇಯಸ್ಸನ್ನು ಪಡೆದು ಕೃತಕೃತ್ಯರಾಗುವುದಕ್ಕೆ— **ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ'**— ಎಂಬ ಶ್ರೀಭಗವದುಪದೇಶದಂತೆ, ಅತ್ಯವಶ್ಯವಾದ ಪಾರ-ಮಾರ್ಥಿಕತತ್ತ್ವಜ್ಞಾನವನ್ನು ಅಬಾಧಿತವಾಗಿ ಪ್ರತಿಪಾದಿಸಿ ಅನುಗ್ರಹಿಸಿರುವ ಶ್ರೀಭಗ-ವತ್ಪಾದರ ದಿವ್ಯವೈಭವವು ಅನನ್ಯಸಾಧಾರಣವಾದುದು! ಇದನ್ನು ಸ್ಪಷ್ಟವಾಗಿ ಎತ್ತಿ ತೋರಿಸಿರುವ ಶ್ರೀಕವಿಗಳು ಧನ್ಯರು!

ಶ್ರೀಭಗವತ್ಪಾದರವರ ಉಪದೇಶದಂತೆ, ಇಹಪರಶ್ರೇಯೋಭ್ಯುದಯಗಳ ಸಾಧನೆ-ಗಾಗಿ ಸರ್ವರೂ ಶಾಸ್ತ್ರೀಯಸ್ವಧರ್ಮದಲ್ಲಿ ಆಸಕ್ತರಾಗಬೇಕು.

೧೪—೫—೬೭ **ಶಂಕರಕಿಂಕರ**

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಸ್ತಕವನ್ನು ಆದ್ಯಂತ ಬಹುಜಾಗ್ರತೆಯಾಗಿ ನೋಡಿ, ಅಭಿಪ್ರಾಯವು ಚೆನ್ನಾಗಿ ಅವಗಾಹನೆಯಲ್ಲಿ ಬಂತು. ಇಲ್ಲಿ ಕೊಟ್ಟ ವಿಷಯವು ಇಡೀ ವೇದಾಂತದ ತತ್ತ್ವವನ್ನು ಸಂಕ್ಷೇಪವಾಗಿ, ಏನೂ ಬಿಡದೆ, ಎಲ್ಲವನ್ನೂ ಛಲೋದಾಗಿ ವಿವರಿಸಿದೆ.... ಖಂಡನ ಮಂಡನಕ್ಕಿಂತ ಸೀದಾ ತತ್ತ್ವವನ್ನು ಲೋಕಕ್ಕೆ ತಿಳಿಸುವ ಇಂಥ ದೃಷ್ಟಿಯೇ ಛಲೋದು.

ಶಿರಾಳಿ–ಉತ್ತರಕನ್ನಡಜಿಲ್ಲೆ; ಪರಮಹಂಸ

12-4-67 ಶ್ರೀಸ್ವಾಮೀ ಶಿವಾನಂದತೀರ್ಥರು

Sri Vidyabharathi Book Centre, Sringeri

CC-O. In Public Domain. Digitized by eGangotri

|| ಶ್ರೀಃ ||

ಉಪೋದ್ಘಾತ

ಸಮಸ್ತಭೂಮಂಡಲದಲ್ಲಿ ಭರತಖಂಡವು ಕರ್ಮಭೂಮಿಯಾಗಿ ಪ್ರಶಸ್ತವಾಗಿದೆ. **"ಗಾಯಂತಿ ದೇವಾ ಅಪಿ ಗೀತಕಾನಿ ಧನ್ಯಾ ನರಾ ಭಾರತಭೂಮಿಭಾಗೇ"**–"ಭಾರತಭೂಮಿಯಲ್ಲಿ ಜನ್ಮಪಡೆದ ಮನುಷ್ಯರು ಧನ್ಯರು"–ಎಂದು ದೇವತೆಗಳೂ ಗೀತೆಗಳನ್ನು ಹಾಡಿ ಹೊಗಳುತ್ತಿದ್ದಾರೆ"-ಎಂದು ಮುಂತಾಗಿ ಪುರಾಣವಚನಗಳೂ ಭರತಖಂಡದ ಹೆಚ್ಚುಗಾರಿಕೆಯನ್ನು ವರ್ಣಿಸುತ್ತವೆ. ಜೀವಿತದ ಪರಮಫಲವನ್ನು ಪಡೆಯುವುದಕ್ಕೆ ಮೊದಲನೆಯ ಸಾಧನವು ಶ್ರುತಿಸ್ಮೃತಿವಿಹಿತವಾದ ಕರ್ಮವು. ಈ ಕರ್ಮವನ್ನು ಅನುಷ್ಠಿಸುವ ಅಧಿಕಾರವು ಭಾರತಭೂಮಿಯಲ್ಲಿ ಜನ್ಮಪಡೆದ ಮಾನವರಿಗೆ ಮಾತ್ರ. ಇಲ್ಲಿ ಮಾಡುವ ಕರ್ಮಗಳ ಫಲವಾಗಿಯೇ ಇತರಕಡೆಗಳಲ್ಲಿ ನಾನಾವಿಧಗಳಾದ ಜನ್ಮಗಳೂ, ಸುಖದುಃಖರೂಪಫಲಗಳೂ ಲಭಿಸುತ್ತವೆ. ಇಲ್ಲಿ ಕರ್ಮಗಳು ಸರಿಯಾಗಿ ನಡೆದರೆ, ಪ್ರಪಂಚವೆಲ್ಲ ಕ್ಷೇಮವನ್ನು ಪಡೆಯುವುದು; ಇಲ್ಲಿಕರ್ಮಗಳು ಸರಿಯಾಗಿ ನಡೆಯದಿದ್ದರೆ, ಲೋಕವೆಲ್ಲ ಅನರ್ಥಕ್ಕೀಡಾಗುವುದು. ಆದ್ದರಿಂದಲೇ ಶ್ರುತಿಸ್ಮೃತಿವಿಹಿತಗಳಾದ ಧರ್ಮಗಳು ಕೆಟ್ಟಾಗ, ಅವುಗಳನ್ನು ಸರಿಪಡಿಸುವುದಕ್ಕಾಗಿ ಜಗತ್ಕಾರಣನಾದ ಪರಮಾತ್ಮನು ಭಾರತಭೂಮಿಯಲ್ಲಿ ಅವತರಿಸುತ್ತಾನೆಂಬುದು –**"ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ "**—ಎಂಬ ವಚನಗಳಿಂದ ತಿಳಿದುಬರುವುದು.

ಶ್ರೌತಸ್ಮಾರ್ತಧರ್ಮಗಳಿಗೆ ಹಿಂದೆ ತ್ರೇತಾಯುಗದಲ್ಲಿ ರಾವಣಾದಿರಾಕ್ಷಸರಿಂದ ಹಾನಿಸಂಭವಿಸಿದ ಕಾಲದಲ್ಲಿ, ಧರ್ಮಹಾನಿಯ ದುಷ್ಫಲವನ್ನು ಸಹಿಸಲಾರದೆ ದೇವತೆಗಳು ಶ್ರೀಮಹಾವಿಷ್ಣುವನ್ನು ಧರ್ಮರಕ್ಷಣೆಗಾಗಿ ಮರೆಹೊಕ್ಕರು; ಆಗ ಪುತ್ರಾರ್ಥಿಯಾಗಿ ತನ್ನ ಸೇವೆ ಮಾಡುತ್ತಿದ್ದ ದಶರಥಚಕ್ರವರ್ತಿಗೆ ಮಗನಾಗಿ ಶ್ರೀರಾಮಚಂದ್ರನ ರೂಪದಿಂದ ಅವತರಿಸಿದನು. ದ್ವಾಪರಯುಗದಲ್ಲಿಯೂ ದುಷ್ಟರಿಂದ ಧರ್ಮದ ರಕ್ಷಣೆಗಾಗಿ ದೇವತೆಗಳಿಂದ ಪ್ರಾರ್ಥಿತನಾದ ಶ್ರೀವಿಷ್ಣುವು, ದೇವಕೀವಸುದೇವರ ಪುತ್ರನಾಗಿ ಶ್ರೀಕೃಷ್ಣಪರಮಾತ್ಮನ ರೂಪದಿಂದ ಆವಿರ್ಭವಿಸಿದನು. ಕಲಿಯುಗವು ಆರಂಭವಾಗಿ ಮೂರುಸಾವಿರ ವರ್ಷಗಳು ಕಳೆಯುವಲ್ಲಿ, ಶಾಸ್ತ್ರೀಯಧರ್ಮಕ್ಕೆ ಮತ್ತೆ ಬೌದ್ಧರೇ ಮೊದಲಾದ ನಾಸ್ತಿಕರಿಂದ ಹಾನಿಯುಂಟಾಯಿತು; ಆಗ ಕಳವಳಗೊಂಡ ದೇವತೆಗಳ ಪ್ರಾರ್ಥನೆಯನ್ನು ಲಾಲಿಸಿ, ಶ್ರೀಪರಮೇಶ್ವರನು, ಪುತ್ರಾರ್ಥವಾಗಿ ತನ್ನನ್ನು ಸೇವಿಸುತ್ತಿದ್ದ ಆರ್ಯಾಂಬಾಶಿವಗುರುಗಳಿಗೆ ಪುತ್ರನಾಗಿ, ಶ್ರೀಶಂಕರಭಗವತ್ಪಾದರವರ ರೂಪದಿಂದ ಅವತರಿಸಿದನು.

ಇತರಯುಗಗಳಲ್ಲಿ ಧರ್ಮದ ಹಾನಿಯೆಂದರೆ, ಧರ್ಮಶ್ರದ್ಧೆಯುಳ್ಳವರಿಗೆ ಹೊರಗಿನ ದುಷ್ಟರಿಂದ ಉಂಟಾಗುತ್ತಿದ್ದ ತೊಂದರೆಗಳು; ಮತ್ತು ಅಂಥ ದುಷ್ಟರನ್ನು ನಾಶಮಾಡುವ ಮಾತ್ರದಿಂದ ಧರ್ಮಕ್ಕೆ ನಿರರ್ಗಳಪ್ರಚಾರವು ಆಗುತ್ತಿತ್ತು. ಆದ್ದರಿಂದಲೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಇತರಯುಗಗಳಲ್ಲಿ ಧರ್ಮಕಂಟಕರಾಗಿದ್ದ ದುಷ್ಟರ ನಾಶವೇ ಪ್ರಧಾನಕಾರ್ಯ-ವಾಗಿತ್ತು; ಧರ್ಮದ ಉಪದೇಶವು ಪ್ರಮುಖವಾಗಿರಲಿಲ್ಲ. ಆದುದರಿಂದಲೇ ಶ್ರೀರಾಮ-ಕೃಷ್ಣಾದ್ಯವತಾರಗಳು ಕ್ಷತ್ರಿಯವಂಶದಲ್ಲಾದವು. ಈ ಕಲಿಯುಗದಲ್ಲಾದರೋ, ನಾಸ್ತಿ-ಕರ ಪ್ರಾಬಲ್ಯದಿಂದ ಜನತೆಗೆ ಧರ್ಮದಲ್ಲಿ ಶ್ರದ್ಧೆಯೇ ನಿರ್ಮೂಲವಾಗುತ್ತ ಬರಲಾಗಿ, ತತ್ತ್ವಬೋಧೆಯಿಂದಲ್ಲದೆ ಬೇರೆ ಉಪಾಯದಿಂದ ಧರ್ಮವನ್ನು ಉದ್ಧರಿಸುವುದು ಸಾಧ್ಯ-ವಾಗದೇ ಹೋಯಿತು. ಅದಕ್ಕಾಗಿ, **'ಈಶಾನಃ ಸರ್ವವಿದ್ಯಾನಾಂ'**—ಎಂಬ ಶ್ರುತಿಯಂತೆ ಸರ್ವವಿದ್ಯಾಧಿಪತಿಯಾದ ಶ್ರೀಪರಮೇಶ್ವರನೇ ಅವತಾರಮಾಡಬೇಕಾಯಿತು. ಆದುದ-ರಿಂದಲೇ, **'ವರ್ಣಾನಾಂ ಬ್ರಾಹ್ಮಣೋ ಗುರುಃ'**—ಎಂಬ ಸ್ಮೃತಿವಚನದಂತೆ, ಉಪದೇಶಮಾಡುವ ಅಧಿಕಾರವುಳ್ಳ ಬ್ರಾಹ್ಮಣವಂಶದಲ್ಲಿ ಶ್ರೀಭಗವತ್ಪಾದರ ಅವತಾರ-ವಾಯಿತು. ಹೀಗೆ ಧರ್ಮಪ್ರಚಾರಕ್ಕಾಗಿ ಶ್ರೀಪರಮೇಶ್ವರನು ಶ್ರೀಮಚ್ಛಂಕರಭಗವತ್ಪಾ-ದಾಚಾರ್ಯರವರ ರೂಪದಿಂದ ಅವತರಿಸಿದನೆಂಬ ವಿಷಯದಲ್ಲಿ ಅನೇಕಪುರಾಣವಚನಗಳು ಪ್ರಮಾಣವಾಗಿವೆ.

ಕಲೌ ರುದ್ರೋ ಮಹಾದೇವಃ ಶಂಕರೋ ನೀಲಲೋಹಿತಃ।
ಪ್ರಕಾಶತೇ ಪ್ರತಿಷ್ಠಾರ್ಥಂ ಧರ್ಮಸ್ಯ ವಿಕೃತಾಕೃತೇಃ॥

"ಕಲಿಯುಗದಲ್ಲಿ ವಿಕಾರಹೊಂದಿದ ಧರ್ಮದ ಪ್ರತಿಷ್ಠೆಗಾಗಿ ಶ್ರೀರುದ್ರನು ಅವ-ತಾರಮಾಡಿ ಬೆಳಗುವನು."

(ಲಿಂಗಪುರಾಣ 40. 21)

ಕಲೌ ರುದ್ರೋ ಮಹಾದೇವೋ ಲೋಕಾನಾಮೀಶ್ವರಃ ಪರಃ।
ಕರಿಷ್ಯತ್ಯವತಾರಂ ಸ್ವಂ ಶಂಕರೋ ನೀಲಲೋಹಿತಃ॥
ಶ್ರೌತಸ್ಮಾರ್ತಪ್ರತಿಷ್ಠಾರ್ಥಂ ಭಕ್ತಾನಾಂ ಹಿತಕಾಮ್ಯಯಾ
ಉಪದೇಕ್ಷ್ಯತಿ ತಜ್ಜ್ಞಾನಂ ಶಿಷ್ಯಾಣಾಂ ಬ್ರಹ್ಮಸಂಜ್ಞಿತಂ॥
ಸರ್ವವೇದಾಂತಸಾರಂ ಹಿ ಧರ್ಮಾನ್ ವೇದಾಂತ-
ದರ್ಶನಾತ್॥

(ಕೂರ್ಮಪುರಾಣ 30. 32–34)

"ಲೋಕೇಶ್ವರನಾದ ಮಹಾದೇವನು ಭಕ್ತರ ಹಿತಕ್ಕಾಗಿ ಶ್ರೌತಸ್ಮಾರ್ತಧರ್ಮಗಳ ಪ್ರತಿಷ್ಠೆಮಾಡಲು ಕಲಿಯುಗದಲ್ಲಿ ಅವತರಿಸಿ, ಸರ್ವವೇದಾಂತಸಾರವಾದ ಬ್ರಹ್ಮ-ಜ್ಞಾನವನ್ನು ಉಪದೇಶಿಸುತ್ತಾನೆ."

ಚತುರ್ಭಿಃ ಸಹ ಶಿಷ್ಯೈಸ್ತು ಶಂಕರೋಽವತರಿಷ್ಯತಿ॥

Sri Vidyabharathi Book Centre, Sringeri

(ವಾಯುಪುರಾಣ)

CC-O. In Public Domain. Digitized by eGangotri

ಚತುರ್ಭಿಃ ಸಹ ಶಿಷ್ಯೈಸ್ತು ಶಂಕರೋಽವತರಿಷ್ಯತಿ।
ವ್ಯಾಕುರ್ವನ್ ವ್ಯಾಸಸೂತ್ರಾಣಿ ಶ್ರುತೇರರ್ಥಂ ಯಥೋ-
ಚಿವಾನ್।
ಸ ಏವಾರ್ಥಃ ಶ್ರುತೇರ್ಗ್ರಾಹ್ಯಃ ಶಂಕರಃ ಸವಿತಾನನಃ॥

(ಸೌರಪುರಾಣ)

"ನಾಲ್ಕುಜನಪ್ರಧಾನಶಿಷ್ಯರೊಡನೆ ಶ್ರೀಶಂಕರನು ಅವತರಿಸಿ ವ್ಯಾಸಸೂತ್ರಗಳಿಗೆ ಯಾವ ಅರ್ಥವನ್ನು ಪ್ರತಿಪಾದಿಸುತ್ತಾನೋ, ಅದನ್ನೇ ಶ್ರುತಿಯ ಯಥಾರ್ಥವಾದ ಅರ್ಥವೆಂದು ಗ್ರಹಿಸಬೇಕು."

ಹೀಗೆಯೇ ಭವಿಷ್ಯೋತ್ತರಪುರಾಣ, ಸ್ಕಾಂದಪುರಾಣ, ಶಿವಪುರಾಣ, ಶಿವರಹಸ್ಯ-ಮುಂತಾದಪುರಾಣಗಳಲ್ಲಿ ಶ್ರೀಶಂಕರಭಗವತ್ಪಾದರವರ ಅವತಾರವನ್ನು ಸ್ಪಷ್ಟವಾಗಿ ವರ್ಣಿಸಿದೆ. ಪುರಾಣಗಳು ವೇದೋಪಬೃಂಹಕಗಳು. ಆದುದರಿಂದ ಶ್ರೀಭಗವತ್ಪಾದರು ಶ್ರೀಪರಮೇಶ್ವರನ ಅವತಾರಪುರುಷರೆಂಬುದು ಶ್ರುತಿಸಮ್ಮತವೆಂದು ಇದರಿಂದ ಸೂಚಿತವಾಗುತ್ತದೆ. ಶ್ರೀರುದ್ರೋಪನಿಷತ್ತಿನಲ್ಲಿ **'ನಮಃ ಕಪರ್ದಿನೇ ಚ ವ್ಯುಪ್ತಕೇಶಾಯ ಚ'**—ಎಂದು ವಚನವಿದೆ. **'ವ್ಯುಪ್ತಕೇಶ'**—ಎಂದರೆ ಸನ್ಯಾಸೀ ಎಂದು **ಶ್ರೀಅಭಿನವಶಂಕರಚಾರ್ಯರ** ಭಾಷ್ಯದಲ್ಲಿ ವಿವರಿಸಿದೆ. ಯದ್ಯಪಿ ಇದರಿಂದ—ಸರ್ವಾತ್ಮಕನಾದ ಶ್ರೀಪರಮೇಶ್ವರನು ಸನ್ಯಾಸಿಸ್ವರೂಪನೆಂದು —ಸಾಮಾನ್ಯವಾಗಿ ಅರ್ಥವಾಗುವುದಾದರೂ, ಪುರಾಣಗಳ ಉಪಬೃಂಹಣಗಳಿಗನುಸಾರವಾಗಿ ಶ್ರೀಮಚ್ಛಂಕರಭಗವತ್ಪಾದರೆಂದು ಅರ್ಥವು ನಿಶ್ಚಿತವಾಗುತ್ತದೆ. ಆದುದರಿಂದಲೇ **ಶ್ರೀಮದಭಿನವಶಂಕರಾಚಾರ್ಯರ** ಭಾಷ್ಯದಲ್ಲಿ—

'ವ್ಯುಪ್ತಾಃ ಮುಂಡಿತಾಃ ಕೇಶಾಃ ಯಸ್ಯ ಸಃ ವ್ಯುಪ್ತಕೇಶಃ ಪರಮಹಂಸಪರಿವ್ರಾಜಕಃ। ತೇನ ದತ್ತಾತ್ರೇಯದುರ್ವಾಸಃಪ್ರಭೃತಯಃ ಜಾಬಾಲೋಪನಿಷದಾದಿಪ್ರಸಿದ್ಧಾಃ; ಕಲಿಯುಗೇ ಚ—ಚತುರ್ಭಿಃ ಸಹ ಶಿಷ್ಯೈಸ್ತು ಶಂಕರೋಽವತರಿಷ್ಯತಿ, 'ಶಂಕರಃ ಸವಿತಾನನಃ'— ಇತ್ಯಾದಿಪುರಾಣಪ್ರಸಿದ್ಧಪರಮೇಶ್ವರಾವತಾರಭಾವಾಃ ಶಂಕರಾಚಾರ್ಯಸ್ವಾಮಿನಃ; ತದ್ರೂಪಾಯೇತ್ಯರ್ಥಃ। ಅನೇನ 'ಬ್ರಹ್ಮಾಧಿಪತಿರ್ಬ್ರಹ್ಮಣೋಽಧಿಪತಿಃ'— ಇತಿ ಶ್ರುತಿಪ್ರಸಿದ್ಧಂ ಬ್ರಹ್ಮವಿದ್ಯಾಸಂಪ್ರದಾಯಪ್ರವರ್ತಕತ್ವಮುಕ್ತಂ।"—ಎಂದು ಸ್ಪಷ್ಟವಾಗಿ ಈ ವಿಷಯವು ಪ್ರತಿಪಾದಿಸಲ್ಪಟ್ಟಿದೆ.

ಹೀಗೆ ಶ್ರೀಭಗವತ್ಪಾದಾಚಾರ್ಯರು ಶ್ರೀಪರಮೇಶ್ವರನ ಅವತಾರಪುರುಷರೆಂಬುದು ಶ್ರುತಿಸ್ಮೃತ್ಯಾದಿಪ್ರಮಾಣಸಿದ್ಧವಾಗಿರುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ"- ಎಂಬ ಪ್ರತಿಜ್ಞೆಯಂತೆ, ಎಲ್ಲ ಪರಮಾತ್ಮನ ಅವತಾರಗಳೂ ಲೋಕಕ್ಷೇಮಕರಗಳಾದ ವೈದಿಕವರ್ಣಾಶ್ರಮ-ಧರ್ಮದ ಪ್ರತಿಷ್ಠಾಪನೆಗೇ ಆಗಿವೆ. ನಿಖಿಲಜಗದೇಕಾಧಿಪತಿಯಾಗಿರುವ ಶ್ರೀಪರಮೇಶ್ವರನ ಅವತಾರಪುರುಷರಾಗಿರುವ ಶ್ರೀಭಗವತ್ಪಾದರು ಇದಕ್ಕಾಗಿಯೇ ಪ್ರತಿಪಾದಿಸಿರುವ ಕೇವಲಾದ್ವೈತಸಿದ್ಧಾಂತವೇ ಪ್ರಾಮಾಣಿಕವಾಗಿ ಯಥಾರ್ಥವಾಗಿದೆ. ಶ್ರೀಭಗವತ್ಪಾದರ ಅನಂತರ ಬಂದ ರಾಮಾನುಜರೂ ಮಧ್ವರೂ ತಾವು ಆದಿಶೇಷನ ಮತ್ತು ವಾಯು-ದೇವನ ಅವತಾರರೆಂದು ಹೇಳಿಕೊಂಡು, ವೇದಶಾಸ್ತ್ರಗಳಿಗೆ ಬೇರೆಬೇರೆಯಾಗಿ ಅರ್ಥಗಳನ್ನು ಹೇಳುವ ಸಾಹಸವನ್ನು ಮಾಡಿರುತ್ತಾರೆ.

"ಯೋ ದೇವಃ ಸರ್ವದೇವಾನಾಂ ಮಹಾದೇವ ಇತಿ ಶ್ರುತಃ||, ತಮೀಶ್ವರಾಣಾಂ ಪರಮಂ ಮಹೇಶ್ವರಂ, ತಂ ದೇವತಾನಾಂ ಪರಮಂ ಚ ದೈವತಂ|| "- ಮುಂತಾದ ವಚನಪ್ರಮಾಣಗಳಂತೆ ಶ್ರೀಪರಮೇಶ್ವರನು ವಾಯುಶೇಷ-ಮುಂತಾದ ಎಲ್ಲ ದೇವತೆಗಳಿಗಿಂತಲೂ ಶ್ರೇಷ್ಠನೆಂಬುದು ಸ್ಪಷ್ಟವೇ ಇರುವುದಾಗಿ, ಶ್ರೀಭಗ-ವತ್ಪಾದರ ಉತ್ಕರ್ಷವು ಸ್ವತಃಸಿದ್ಧವಾಗಿದೆ! ವಿಷ್ಣುಬ್ರಹ್ಮರ ಅವತಾರಗಳೆಂದು ಹೇಳಿ-ಕೊಳ್ಳದೆ, ತಮ್ಮನ್ನು ಶೇಷವಾಯುಗಳ ಅವತಾರರೆಂದು ರಾಮಾನುಜಮಧ್ವರು ಏಕೆ ಹೇಳಿಕೊಂಡರೋ, ತಿಳಿಯದು. ಮತ್ತು ಶ್ರೀಭಗವತ್ಪಾದರು ಶ್ರೀಪರಮೇಶ್ವರನ ಅವತಾರ ರೆಂಬಲ್ಲಿ ಶ್ರುತಿಪುರಾಣಾದಿಗಳ ಪ್ರಾಮಾಣ್ಯವಿರುವಂತೆ, ಮಧ್ವರಾಮಾನುಜರು ವಾಯು-ಶೇಷರ ಅವತಾರರೆಂಬಲ್ಲಿ,-ಇವರುಗಳ ಕಲ್ಪಿತವಚನಗಳಲ್ಲದೆ,- ಬೇರೆಯಾವ ಪ್ರಮಾಣವೂ ಕಂಡುಬರುವುದಿಲ್ಲ. ಮಧ್ವರು ವಾಯ್ವವತಾರರೆಂಬಲ್ಲಿ ಋಗ್ವೇದದ ಬಳಿತ್ಥಾಸೂಕ್ತವು ಪ್ರಮಾಣವೆಂದು ಅವರು ಹೇಳಿಕೊಳ್ಳುವರು; ಈ ಸೂಕ್ತದ ಅರ್ಥವೇ ಬೇರೆಯೆಂಬುದು ವೇದಭಾಷ್ಯದಿಂದ ವ್ಯಕ್ತವಿದೆ. **ಪ್ರಥಮೋ ಹನೂಮಾನ್ನಾಮ ದ್ವಿತೀಯೋ ಭೀಮ-ಸೇನಕಃ | ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ|**"- ಎಂದು ಮಾಧ್ವಮತೀಯರು ಹೇಳಿಕೊಳ್ಳುವರು. ಹನುಮಂತನು ವಾಯುಪುತ್ರನೆಂದೂ, ಭೀಮನು ವಾಯುದೇವನ ಮಂತ್ರದ ಪ್ರಭಾವದಿಂದ ಕುಂತೀದೇವಿಗೆ ಜನಿಸಿದವನೆಂದೂ ಪ್ರಸಿದ್ಧಿಯಿದೆಯೇ ಹೊರತು, ಇವರು ವಾಯ್ವವತಾರರೆಂಬಲ್ಲಿ ಪ್ರಮಾಣವೇ ಇಲ್ಲ: ಪುತ್ರನೇ ಅವತಾರವೆ?

ಶ್ರೀಮದ್ವಾಲ್ಮೀಕಿರಾಮಾಯಣದಲ್ಲಿನ ಏಳು ಕಾಂಡಗಳಿಗೂ ಶ್ರೀರಾಮನ ಚರಿತ್ರೆಯ ಸಂಬಂಧವಾಗಿಯೇ ಬಾಲಕಾಂಡ, ಅಯೋಧ್ಯಾಕಾಂಡ, ಆರಣ್ಯಕಾಂಡ, ಕಿಷ್ಕಿಂಧಾಕಾಂಡ, ಯುದ್ಧಕಾಂಡ, ಉತ್ತರಕಾಂಡ-ಎಂದು ಹೆಸರುಗಳಿರುವಾಗ, ಶ್ರೀಆಂಜ-ನೇಯನ ವ್ಯವಹಾರಪ್ರಧಾನವಾಗಿರುವ ಐದನೆಯ ಕಾಂಡಕ್ಕೆ-"ಸುಂದರಕಾಂಡ"- ವೆಂದು ಹೆಸರಿದೆ. 'ಸುಂದರ' ಎಂಬುದು ಶ್ರೀಪರಶಿವನ ನಾಮಧೇಯವು -ಮಧುರೆಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮೀನಾಕ್ಷೀಸುಂದರೇಶ್ವರರ ದೇವಾಲಯವು ಪ್ರಸಿದ್ಧವಿದೆ! ಹೀಗೆ ಇದು ಶ್ರೀಪರಮೇಶ್ವರನ ಲೀಲೆಯೊದ್ದರಿಂದಲೇ ಈ ಕಾಂಡಕ್ಕೆ 'ಸುಂದರ'–ಕಾಂಡವೆಂದು ಶ್ರೀವಾಲ್ಮೀಕಿಮಹರ್ಷಿಗಳು ಹೆಸರನ್ನಿಟ್ಟಿರುವುದು ಸಮುಚಿತವಾಗಿದೆ. ಆದ್ದರಿಂದ ಶ್ರೀಮದಾಂಜನೇಯನು ಶ್ರೀಶಿವಾವತಾರನೆಂಬುದು ಸಿದ್ಧವು.

ಶ್ರೀಮಹಾವಿಷ್ಣುವು ಜಗತ್ತಿನ ಧರ್ಮದ ರಕ್ಷಣಾಕಾರ್ಯದಲ್ಲಿ ಅಧಿಕೃತನಾಗಲು, ಜಗತ್ತಿನ ಧಾರ್ಮಿಕಸ್ಥಿತಿಗೆ ವಿರೋಧಿಗಳಾದ ದಾನವಾದಿಗಳು ಮಹಾಬಲಿಷ್ಠರಾಗಿರುವಲ್ಲಿ ಇವರನ್ನು ನಿಗ್ರಹಿಸುವ ಸಾಮರ್ಥ್ಯಕ್ಕಾಗಿ ಶ್ರೀಪರಮೇಶ್ವರನನ್ನು ಆರಾಧಿಸಲು ಶ್ರೀಶಿವನು ಶ್ರೀವಿಷ್ಣುವಿಗೆ ದಾನವಸಂಹಾರಕ್ಕೆ ಅನುಕೂಲವಾಗುವಂಥ ಚಕ್ರವನ್ನೂ, ತನ್ನ ಗಣಗಳ ಸಹಾಯವನ್ನೂ ಅನುಗ್ರಹಿಸಿದನೆಂದು ಪುರಾಣಗಳಲ್ಲಿ ಪ್ರಸಿದ್ಧವೇ ಇದೆ. ಹೀಗೆ ಮಹಾಬಲಿಷ್ಠರಾಗಿದ್ದ ರಾವಣಾದಿಗಳ ನಿಗ್ರಹಕ್ಕಾಗಿ ಶ್ರೀಪರಮೇಶ್ವರನೇ ಶ್ರೀಹನುಮಂತನಾಗಿ ಅವತರಿಸಿಬಂದು ಶ್ರೀರಾಮಚಂದ್ರನಿಗೆ ಅನುಗ್ರಹಮಾಡಿದನೆಂಬುದು ಸಮಂಜಸವಾಗಿದೆ. ಧರ್ಮವಿರೋಧಿಗಳಾದವರ ನಾಶಕ್ಕೆ ಹನುಮಂತನೂ ಭೀಮಸೇನನೂ ಸಹಾಯಕರಾಗಿದ್ದರು. ಹನುಮಂತನ ಸಮಾಗಮವು ದೊರೆಯದಿದ್ದಿದ್ದರೆ, ಶ್ರೀರಾಮನ ಸ್ಥಿತಿಯು ಏನಾಗುತ್ತಿತ್ತೆಂಬುದು ಚಿಂತ್ಯವೇ ಆಗಿದೆ!

ಈಗ ಬೌದ್ಧಾವತಾರವಾಗಿರುವುದರಿಂದ, ಇಲ್ಲಿ 'ಭಗವತ್ಕಾರ್ಯಸಾಧಕ' ರಾದ ಮಧ್ವರು ಬೌದ್ಧಮತದಂತೆಯೇ ವೈದಿಕಧರ್ಮಮಾರಕರಾಗಿರುವುದು ಉಚಿತವೆನಿಸುತ್ತದೆ. ಪ್ರಾಮಾಣಿಕವಾದ ವೈದಿಕಾದ್ವೈತಸಿದ್ಧಾಂತವನ್ನರಿಯದ– 'ಅಹಿಂಸಾ ಪರಮೋ ಧರ್ಮಃ'– ಎಂಬ ಬೌದ್ಧವಚನವು ಅಧರ್ಮವೇ ಆಗುವಂತೆ, ಅವೈದಿಕವಿಷ್ಣೂತ್ಕರ್ಷಾದಿವಚನಗಳೂ ಅಪ್ರಾಮಾಣಿಕಗಳೇ ಆಗುವುವು.

ಮಧ್ವರಾಮಾನುಜಮತಗಳಲ್ಲಿ ಭಕ್ತಿಯನ್ನೂ ಮತ್ತು ಶರಣಾಗತಿಯನ್ನೂ ಮುಕ್ತಿಸಾಧನವೆಂದು ಪರಿಗಣಿಸಿರುವುದರಿಂದ, ಈ ಮತಗಳು ವೈದಿಕವರ್ಣಾಶ್ರಮಧರ್ಮಸ್ಥಾಪನೆಗೆ ಉಪಯುಕ್ತಗಳೇ ಅಲ್ಲವಾಗಿವೆ.

ಇವರುಗಳ ಶಾಸ್ತ್ರವ್ಯಾಖ್ಯಾನಗಳೂ ಅಸಾಂಪ್ರದಾಯಿಕಗಳೇ ಆಗಿವೆ. ಸಕಲ ಶ್ರುತಿಸ್ಮೃತೀತಿಹಾಸಪುರಾಣಪ್ರಮಾಣಗಳಿಗೂ–**"ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ।"**–ಎಂಬ ಅದ್ವೈತಸಿದ್ಧಾಂತಾರ್ಥದಲ್ಲಿಯೇ ತಾತ್ಪರ್ಯವಿರುವುದು ನಿಶ್ಚಿತವಾಗಿದೆ. ಇದು ಮಾಧ್ವರಾಮಾನುಜಮತಗಳಿಗೆ ಸಮ್ಮತವಲ್ಲವಾಗಿ, ಇವರು ಶಾಸ್ತ್ರವಚನಗಳಿಗೆ ತಮತಮಗೆ ಬೇಕಾದಂತೆ ಅರ್ಥವನ್ನು ಕಲ್ಪಿಸಿಹೇಳುತ್ತಾರೆ. ಇದನ್ನೆಲ್ಲ ಉದಾಹರಿಸಿ ತೋರಿಸುವುದು ಪ್ರಕೃತದಲ್ಲಿ ಸಾಧ್ಯವಾಗುವಂತಿಲ್ಲ; ಆದರೂ ಒಂದೆರಡು ಸಂದರ್ಭಗಳನ್ನು ತಿಳಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೧. ಶ್ರೀಮದ್ಭಗವದ್ಗೀತೆಯಲ್ಲಿ–

"ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ।

ಉಭಯೋರಪಿ ದೃಷ್ಟೋಽಂತಸ್ತ್ವನಯೋಸ್ತತ್ತ್ವದರ್ಶಿಭಿಃ॥"–

"ಅಸದ್ವಸ್ತುವಿಗೆ ಉತ್ಪತ್ತಿಯಿಲ್ಲ; ಸದ್ವಸ್ತುವಿಗೆ ನಾಶವಿಲ್ಲ; ಈ ಎರಡು ನಿಶ್ಚಯಗಳೂ ತತ್ತ್ವದರ್ಶಿಗಳಿಂದ ತಿಳಿಯಲ್ಪಟ್ಟವೆ?–"ಎಂದು ಇದರ ಅರ್ಥವು. ಎಂದರೆ,–ಅಸದ್ವಸ್ತುವಿಗೆ ಉತ್ಪತ್ತಿಯಿಲ್ಲ,– ಆದ್ದರಿಂದ ಅದಕ್ಕೆ ನಾಶವೂ ಇಲ್ಲ; ಸದ್ವಸ್ತುವಿಗೆ ನಾಶವಿಲ್ಲ; ಅದಕ್ಕೆ ಉತ್ಪತ್ತಿಯೂ ಇಲ್ಲ; ಉತ್ಪತ್ತಿನಾಶಗಳು ಸದ್ವಸ್ತುವಿಗೂ ಇಲ್ಲ ಅಸದ್ವಸ್ತುವಿಗೂ ಇಲ್ಲ; ಆದ್ದರಿಂದ ಉತ್ಪತ್ತಿನಾಶಗಳನ್ನುಳ್ಳ ಪ್ರಪಂಚವೆಲ್ಲ ಸದ್ವಸ್ತುವೂ ಅಲ್ಲ. ಅಸದ್ವಸ್ತುವೂ ಅಲ್ಲ– ಅದು ಸದಸದ್ವಿಲಕ್ಷಣವಾದುದು– ಇದನ್ನೇ ಮಿಥ್ಯಾಎಂದು ಹೇಳುವರು. ಹೀಗೆ "ಪ್ರಪಂಚವೆಲ್ಲ ಮಿಥ್ಯಾ"– ಎಂಬುದು ಈ ಪದ್ಯದ ತಾತ್ಪರ್ಯವಾಗಿದೆ. ಈ ಅರ್ಥವು ಈ ವಾದಿಗಳಿಗೆ ಸಮ್ಮತವಲ್ಲದ್ದರಿಂದ, ಇದಕ್ಕೆ ಇವರು ತಮಗೆ ತೋಚಿದಂತೆ ಅರ್ಥವನ್ನು ಕಲ್ಪಿಸಿ ಹೇಳುತ್ತಾರೆ

ಇವರು ಹೇಳುವುದು ಹೀಗೆ–

"ಅಸತ್ತಿಗೆ ಎಂದರೆ ದುಷ್ಕರ್ಮಕ್ಕೆ; ಭಾವವಿಲ್ಲ– ಎಂದರೆ ಸುಖವು ಫಲವಾಗುವುದಿಲ್ಲ; ಸತ್ತಿಗೆ ಎಂದರೆ ಸತ್ಕರ್ಮಕ್ಕೆ, ಅಭಾವ ಎಂದರೆ ದುಃಖವು ಫಲವಲ್ಲ"– ಎಂದು. 'ಮಾಡಿದ್ದುಣ್ಣೋ ಮಹಾರಾಯ' ಎಂಬ ಈ ಅರ್ಥವು ಪಾಮರರಾದಿಯಾಗಿ ಎಲ್ಲರಿಗೂ ಪ್ರಸಿದ್ಧವೇ ಇರುವುದರಿಂದ,ಇದನ್ನು ತಿಳಿಯುವುದಕ್ಕೆ ತತ್ತ್ವದರ್ಶಿಗಳು ಜ

೨. ಶ್ರೀಭಾಗವತಮಹಾಪುರಾಣದ ಕಡೆಯಲ್ಲಿ,ಈ ಪುರಾಣದ ಮುಖ್ಯತಾತ್ಪರ್ಯವೇನೆಂಬುದನ್ನು ಹೀಗೆ ತಿಳಿಸಿರುತ್ತದೆ–

ಸರ್ವವೇದಾಂತಸಾರಂ ಯದ್ಬ್ರಹ್ಮಾತ್ಮೈಕತ್ವಲಕ್ಷಣಂ।
ವಸ್ತ್ವದ್ವಿತೀಯಂ ತನ್ನಿಷ್ಠಂ ಕೈವಲ್ಯೈಕಪ್ರಯೋಜನಂ॥

ಎಂದರೆ–"ಮೋಕ್ಷವನ್ನೇ ಮುಖ್ಯಪ್ರಯೋಜನವುಳ್ಳ, ಎಲ್ಲ ವೇದಾಂತಗಳ ಸಾರಾರ್ಥವಾಗಿರುವ, ಬ್ರಹ್ಮ ಮತ್ತು ಜೀವರ ಏಕತ್ವರೂಪವಾದ ಅದ್ವಿತೀಯವಸ್ತುವಿನಲ್ಲಿಯೇ ತಾತ್ಪರ್ಯದ್ದಾಗಿದೆ"ಎಂದು.

"ಬ್ರಹ್ಮಾತ್ಮೈಕತ್ವಲಕ್ಷಣಂ'– ಎಂಬುದಕ್ಕೆ-"ಬ್ರಹ್ಮ=ಹರಿ; ಆತ್ಮಾ– ಮುಕ್ತಜೀವ; ಇವರ ಏಕತ್ವ– ಒಂದೇ ಅಭಿಪ್ರಾಯ" —ಹರಿ ಮತ್ತು ಮುಕ್ತಜೀವ-ಇವರಿಬ್ಬರಿಗೂ ಒಂದೇ ಅಭಿಪ್ರಾಯವೇ ಹೊರತು, ಇವರೀರ್ವರಿಗೂ ಭಿನ್ನಾಭಿಪ್ರಾಯವಿಲ್ಲ" ಎಂದು ಅರ್ಥವನ್ನು ವರ್ಣಿಸುತ್ತಾರೆ.।

Sri Vidyabharathi Book Centre, Sringeri

CC-O. In Public Domain. Digitized by eGangotri

೩ ಶ್ರೀವಿಷ್ಣುಪುರಾಣದಲ್ಲಿನ–

"ವಿಭೇದಜನಕೇऽಜ್ಞಾನೇ ನಾಶಮಾತ್ಯಂತಿಕಂ ಗತೇ ।
ಆತ್ಮನೋ ಬ್ರಹ್ಮಣೋ ಭೇದಮಸಂತಂ ಕಃ ಕರಿಷ್ಯತಿ॥

–"ಜೀವನಿಗೂ ಬ್ರಹ್ಮಕ್ಕೂ ಭೇದವನ್ನು ಉಂಟುಮಾಡುತ್ತಿರುವ ಅಜ್ಞಾನವು ಪೂರ್ಣವಾಗಿ ನಾಶವಾಗಲಾಗಿ, ಆಮೇಲೆ, ಇವರೀರ್ವರಿಗೂ ಇಲ್ಲದೇ ಇರುವ ಭೇದವನ್ನು ಯಾರು ತಿಳಿದಾರು?" –ಎಂಬ ಅರ್ಥದ ಈ ಪದ್ಯಕ್ಕೆ–

ವಿಭೇದಜನಕೇ– ಭೇದಕ್ಕೆ ವಿರುದ್ಧವಾದ ಅಭೇದವನ್ನು ಉಂಟುಮಾಡುವ; ಅಜ್ಞಾನೇ- ಅಜ್ಞಾನವು: ಆತ್ಯಂತಿಕಂ ನಾಶಂ ಗತೇ–ನಾಶವಾದ ಮೇಲೆ; ಆತ್ಮನೋ ಬ್ರಹ್ಮಣೋ ಅಭೇದಂ -ಜೀವ ಬ್ರಹ್ಮರ ಅಭೇದ (ಐಕ್ಯ)ವನ್ನು; ಕಃ ಕರಿಷ್ಯತಿ– ಯಾರು ಮಾಡಿಯಾರು?– ಎಂದು ಅರ್ಥವನ್ನು ವಿವರಿಸುತ್ತಾರೆ.।

೪. **ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇऽಸ್ತಂ ಗಚ್ಛಂತಿ ನಾಮರೂಪೇ ವಿಹಾಯ। ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಂ॥** ಎಂಬುದು ಮುಂಡಕೋಪನಿಷತ್ತಿನ ಒಂದು ಮಂತ್ರವು. ತತ್ತ್ವಸಾಕ್ಷಾತ್ಕಾರವನ್ನು ಪಡೆದ ಜ್ಞಾನಿಯು ಮುಕ್ತಿಯನ್ನು ಪಡೆಯುವ ಸ್ಥಿತಿಯನ್ನು ಇಲ್ಲಿ ವಿವರಿಸಿರುತ್ತೆ. "ಗಂಗಾ, ಯಮುನಾ, ಕಾವೇರೀ ಮುಂತಾದ ನದಿಗಳು ಹರಿದುಹೋಗಿ, ತಮ್ಮ ತಮ್ಮ ನಾಮರೂಪಗಳನ್ನು ಕಳೆದುಕೊಂಡು, ಸಮುದ್ರದಲ್ಲಿ ಲುಪ್ತವಾಗುತ್ತವೆ–'ಸಮುದ್ರವೇ ಆಗುತ್ತವೆ; ಇದರಂತೆ, ತತ್ತ್ವಜ್ಞಾನಿಯು, ತನ್ನ ಔಪಾಧಿಕಗಳಾಗಿದ್ದ ನಾಮರೂಪಗಳಿಂದ ಬಿಡಲ್ಪಟ್ಟವನಾಗಿ, ಸ್ವಪ್ರಕಾಶನಾದ ಪರಮಪುರುಷನನ್ನು ಹೊಂದಿ, ಆ ಪರಮಪುರುಷನೇ ಆಗುವನು"–ಎಂದು ಈ ಮಂತ್ರದ ಅರ್ಥವು ಸ್ಪಷ್ಟವಾಗಿದೆ.

'ಇಲ್ಲಿ–ನಾಮರೂಪೇ ವಿಹಾಯ' ಎಂಬುದನ್ನು– "ನಾಮರೂಪೇ ಅವಿಹಾಯ–" ಎಂದು ವಿಭಾಗಮಾಡಿ, "ನಾಮರೂಪಗಳನ್ನು ಬಿಡದೆಯೇ" –ಎಂದು ಅರ್ಥವನ್ನು ಹೇಳುವರು. "ಈದೂದೇ ದ್ವಿವಚನಂ ಪ್ರಗೃಹ್ಯಂ"-ಈಊಕಾರಾಂತವಾಗಿರುವ ದ್ವಿವಚನವು ಪ್ರಗೃಹ್ಯಸಂಜ್ಞಿಕವಾಗಿ, ಸಂಧಿಯಾಗುವುದಿಲ್ಲ"– 'ಎಂಬ ವ್ಯಾಕರಣನಿಯಮಕ್ಕೆ ಇದು ವಿರುದ್ಧವಾಗುವುದರಿಂದ 'ನಾಮರೂಪೇ ಅವಿಹಾಯ'– ಎಂದೇ ಶ್ರುತಿಯು ಇರಬೇಕಾಗುವುದು; ಆದರೆ ಶ್ರುತಿಯ ಪಾಠವು ಹೀಗಿಲ್ಲ. ಇದನ್ನು–"ಅದು ಶ್ರೌತಪ್ರಯೋಗವಾದ್ದರಿಂದ ಲೌಕಿಕವ್ಯಾಕರಣದ ನಿಯಮ ಇದಕ್ಕೆಸಂಗತವಾಗುವುದಿಲ್ಲ"-ಎಂದು ಹೇಳುವರು.

ಆದರೂ, ಉತ್ತರಾರ್ಧದಲ್ಲಿ 'ನಾಮರೂಪಾದ್ವಿಮುಕ್ತಃ।'– 'ನಾಮರೂಪಗಳಿಂದ ಬಿಡಲ್ಪಟ್ಟವನಾಗಿ'– ಎಂದು ಸ್ಪಷ್ಟವಾಗಿದೆಯಲ್ಲವೆ?'– ಎಂದರೆ, 'ವಿಮುಕ್ತಃ–,

Sri Vidyabharathi Tirtha Sringeri Collection

CC-O. In Public Domain. Digitized by eGangotri

ಎಂದರೆ, ವಿರುದ್ಧಮುಕ್ತಃ– ಮುಕ್ತನಾಗದೆ" ಸಹಿತನಾಗಿಯೇ'– ಎಂದು ಅರ್ಥವೆಂದು ವ್ಯಾಖ್ಯಾನಿಸುವರು!

೫. **'ಸತ್ಯಂಜ್ಞಾನಮನಂತಂ ಬ್ರಹ್ಮ'**– "ಬ್ರಹ್ಮವು' ಅನಂತ– ಎಂದರೆ ದೇಶಕಾಲವಸ್ತುರೂಪವಾದ ಮೂರುವಿಧವಾಗಿದೆ ಪರಿಚ್ಛೇದ (ಅಂತ)ವೂ ಇಲ್ಲದ, ಅಪರಿಚ್ಛಿನ್ನವಾದ, ಸತ್ಯಜ್ಞಾನಸ್ವರೂಪದ್ದು'–ಎಂಬ ಅರ್ಥದ ಈ ಮಂತ್ರಕ್ಕೆ–'ನಮ್ಮ ಅನಂತನನ್ನೇ (ವಿಷ್ಣುವನ್ನೇ) ಬ್ರಹ್ಮ– ಎಂದು ಶ್ರುತಿಯು ಹೇಳುತ್ತದೆ: ರುದ್ರಾದಿಗಳು ಬ್ರಹ್ಮವಲ್ಲ'– ಎಂಬ ಇವರ ಅರ್ಥವು ಅಮೋಘವಾದದ್ದಲ್ಲವೆ!

ಇಂಥ ಪಾಂಡಿತ್ಯಗಳಿಗೆ ಇವರ ಹರಿಸರ್ವೋತ್ತಮನೇ ತೃಪ್ತಿಗೊಂಡು ಇವರುಗಳನ್ನು ಅನುಗ್ರಹಿಸಬೇಕು!– ಶ್ರೀಮಹಾವಿಷ್ಣುವಿಗೂ ತಿಳಿಯಲಾಗದ ವ್ಯಾಖ್ಯಾನವೈಖರಿಯಲ್ಲವೆ ಇದು!

ಇಂಥ ಉದಾಹರಣೆಗಳನ್ನು ಅಸಂಖ್ಯಾತವಾಗಿ ತೋರಿಸಬಹುದು. ಆದರೆ ಇದನ್ನು ಹೇಳುವುದೂ ಕೇಳುವುದೂ ಮಹಾಪಾತಕವೇ ಆಗುವುದರಿಂದ, ಹೆದರಿ, ಇಲ್ಲಿಗೇ ವಿರಮಿಸಬೇಕಾಗಿದೆ. ಮತಾಂತರದವರಿಗೆ ಪ್ರತ್ಯಗಾತ್ಮನ ಸ್ವರೂಪದ ಪರಿಚಯವೇ ಶೂನ್ಯವಾಗಿದೆ!

"ಶಬ್ದರೂಪವಾಗಿರುವ ಶಾಸ್ತ್ರವಚನಗಳಿಗೆ ಹೀಗೂ ಅರ್ಥಗಳನ್ನು ಹೇಳಲು ಸಾಧ್ಯವಾಗುವುದಲ್ಲವೆ?"– ಎಂದು ಕೇಳಬಹುದು. ಹೌದು, ಲೋಕದಲ್ಲಿ, ಆಡುವವನ ಮಾತಿಗೆ ಅವನ ಅಭಿಪ್ರಾಯವನ್ನನುಸರಿಸಿ ಶಬ್ದಗಳಿಗೆ ಅರ್ಥಗಳನ್ನು ಹೇಳಲು ಯುಕ್ತವೆನಿಸುವುದು. ಅಪೌರುಷೇಯವಾಗಿರುವ ವೇದಶಾಸ್ತ್ರಗಳ ವಚನಗಳಿಗೆ, ಅನಾದಿಸಂಪ್ರದಾಯಾನುಸಾರವಾಗಿಯೇ ಅರ್ಥವನ್ನು ಸ್ವೀಕರಿಸಬೇಕು. ಪ್ರತಿಸೃಷ್ಟಿಯ ಆರಂಭದಲ್ಲಿಯೂ ಶ್ರೀಪರಮೇಶ್ವರನು ಶ್ರೀಬ್ರಹ್ಮದೇವನಿಗೆ ವೇದಶಾಸ್ತ್ರವನ್ನು ಅನುಗ್ರಹಿಸಿದಾಗ, ಅದರ ಅರ್ಥಸಹಿತವಾಗಿಯೇ ಅನುಗ್ರಹಿಸಿರುತ್ತಾನಾಗಿ, ಅನಾದಿಪರಂಪರೆಯಿಂದ ಬಂದ ಈ ಸಂಪ್ರದಾಯಾನುಸಾರವಾಗಿಯೇ ಅರ್ಥವನ್ನು ಶ್ರೀಭಗವತ್ಪಾದರು ಪ್ರತಿಪಾದಿಸಿರುತ್ತಾರಾಗಿ, ಇದೇ ಪ್ರಾಮಾಣಿಕಯಥಾರ್ಥವಾಗಿದೆ. ಮಧ್ವರಾಮಾನುಜರು ಮೊದಲು ಅದ್ವೈತಗುರುಗಳಲ್ಲಿಯೇ ಅಧ್ಯಯನಮಾಡಿ, ಅವರು ಉಪದೇಶಿಸಿದ ಸಾಂಪ್ರದಾಯಿಕಯಥಾರ್ಥವು, ತಮ್ಮ ದೋಷದಿಂದ, ರುಚಿಸದೆ ಹೋಗಲಾಗಿ, ಹೊಸಮಾರ್ಗಗಳನ್ನು ಹಿಡಿದರೆಂದು ಅವರುಗಳಲ್ಲಿಯೇ ಪ್ರಸಿದ್ಧಿಯಿರುವುದರಿಂದ, ಇವರ ಮತಗಳು ಅಸಾಂಪ್ರದಾಯಿಕಗಳೂ, ಸತ್ಸಂಪ್ರದಾಯವಿರುದ್ಧಗಳೂ ಎಂಬುದು ತಾನೇ ಪ್ರಸಿದ್ಧವಾಗುವುದು.

ಶ್ರೀಭಗವತ್ಪಾದರ ಪೂರ್ವಿಕರಾದ ವೇದವಾದಿಗಳೆಲ್ಲರೂ ಜೀವಬ್ರಹ್ಮೈಕತತ್ತ್ವವನ್ನೇ ಪಾರಮಾರ್ಥಿಕವೆಂದು ಅಂಗೀಕರಿಸಿದ್ದರು. ಆದರೆ ಜೀವನಿಗೆ ಸಂಸಾರಸ್ಥಿತಿಯು ವಾಸ್ತವವೆಂದೂ, ಇದು ಶಾಸ್ತ್ರೀಯನಿತ್ಯಕರ್ಮಾನುಷ್ಠಾನ ಅಥವಾ ಜ್ಞಾನಕರ್ಮ-

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮುಚ್ಚಯಾನುಷ್ಠಾನದಿಂದ ಸಂಸಾರವು ಕಳೆದು ಮೋಕ್ಷವು ಸಿದ್ಧಿಸುವುದೆಂದೂ ವಾದಿಸುತ್ತಿದ್ದರು ಶ್ರೀಭಗವತ್ಪಾದರು ನಿತ್ಯವಾದ ಮೋಕ್ಷವು ತತ್ತ್ವಜ್ಞಾನಮಾತ್ರಸಾಧ್ಯವಾದುದೆಂದೂ ಸಂಸಾರಸ್ಥಿತಿಯು ಭ್ರಾಂತಿಯೆಂದೂ ಪ್ರತಿಪಾದಿಸಿ ಈ ಅಭಿಪ್ರಾಯಗಳನ್ನು ನಿರಾಕರಿಸಿದರು. ಮಧ್ವರಾಮಾನುಜಮತಗಳ ಹೆಸರೇಹಿಂದೆ ಎಲ್ಲಿಯೂ ಇರದೆ,ಈಚಿನ ಕಲ್ಪಿತಮತಗಳೆಂದು ಸ್ಪಷ್ಟವು. ಶ್ರೀಭಗವತ್ಪಾದರ ಸಿದ್ಧಾಂತದಿಂದಲೇ ಇವೂ ಸ್ವತಃಸುನಿರಾಕೃತಗಳೇ ಆಗಿವೆ.

"ನಬುದ್ಧಿಭೇದಂ ಜನಯೇದಜ್ಞಾನಾಂ"– ಎಂಬ ಶ್ರೀಭಗವದಾಜ್ಞೆಯಂತೆ, ಇದೆಲ್ಲ ಶ್ರೀಭಗವತ್ಪಾದಶಿಷ್ಯರನ್ನು ಕುರಿತು ತಿಳಿಸಿದ್ದೆಂದು ತಿಳಿಯತಕ್ಕದ್ದು.

ಪರಮಾತ್ಮನು ಪ್ರತ್ಯಗಾತ್ಮನಿಗೆ ಬೇರೆಯಾಗುವಅನ್ಯನಾಗುವ– -ಪಕ್ಷದಲ್ಲಿ ಅವನು ಘಟಾದಿಗಳಂತೆ ದೃಶ್ಯನೂ, ಅನಾತ್ಮನೂ, ಪರಿಚ್ಛಿನ್ನನೂ, ಜಡನೂ ನಶ್ವರನೂ,ಮಿಥ್ಯಾಭೂತನೂ ಆಗುವನು; ಆತ್ಮನೂ ಪರಿಚ್ಛಿನ್ನನಾಗಿ ಅನಿತ್ಯನಾಗುವನು.

'ಯೋಽನ್ಯಾಂ ದೇವಾತಾಮುಪಾಸ್ತೇಽನ್ಯೋಽಸಾವನ್ಯೋಽಹಮಸ್ಮೀತಿ ನ ಸ ವೇದ ಯಥಾ ಪಶುಃ" ಪರಮಾತ್ಮನನ್ನು ಆತ್ಮನಿಗೆ ಬೇರೆಯೆಂದು ತಿಳಿಯುವವನು, ತಿಳಿವಿಲ್ಲದ ಪಶುವೇ ಸರಿ"–ಎಂದು ಶ್ರುತಿಯು ನಿಂದಿಸುತ್ತದೆ.

"ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ" ಎಂಬ ಶ್ರುತಿಯಂತೆ, -"ಪರಮಾತ್ಮನೂ ಆತ್ಮನಿಗಾಗಿಯೇ ಸೇವ್ಯ"-ನೆಂದಾಗಿ, ಆತ್ಮನೇ ಸರ್ವಶೇಷಿಯಾಗಿ, ಶೇಷಶೇಷಿಭಾವವು ತಲೆಕೆಳಗಾಗುವುದು; ಆದ್ದರಿಂದ ಸರ್ವಶೇಷಿಯಾಗಿರುವ ಪ್ರತ್ಯಗಾತ್ಮನೇ ಪರಮಾರ್ಥವಾಗಿ ಪರಮಾತ್ಮನೆಂಬುದೇ ಯಥಾರ್ಥಸಿದ್ಧಾಂತವು.

Sri Vidyabharathi Book Centre, Sringeri

CC-O. In Public Domain. Digitized by eGangotri

'ಮಾನುಷ್ಯೇ ಮನುಷ್ಯವಚ್ಚೇಷ್ಟಾ' —"ಮನುಷ್ಯನಾಗಿ ಅವತರಿಸಿದಾಗ ಮನುಷ್ಯರಂತೆ ವ್ಯವಹಾರವು'—ಎಂಬ ನ್ಯಾಯದಂತೆ, **ಮರ್ತ್ಯಾತ್ಮತಾಮಭಿನಿವೇಕ್ಷಸಿ ಚೇತ್ತದಸ್ತು'**— ಶ್ರೀರಾಮ, ಮನುಷ್ಯನಾಗಿ ಅವತರಿಸಿರುವುದರಿಂದ ಮನುಷ್ಯರಂತೆ ನಟನೆಮಾಡುತ್ತೇನೆಂಬ ನಿನ್ನ ಅಭಿಪ್ರಾಯವಾದರೆ, ಆಗಲಿ, ಹಾಗೆಯೇಮಾಡು; ಆದರೆ–**'ಏಕೇನ ಸಪ್ತ ಚ ತರೂನಿಷುಣಾಪವಿಧ್ಯನ್ ಪಾದಾಂಚಲೇನ ದಶ-ಯೋಜನಮುಷ್ಟಿ ಧೂನ್ವನ್। ಮಘ್ನನ್ ಸುತಂ ಸುರಪತೇರಪಿ ಲೀಲಯೈವ ಕಿಂ ಮನ್ಯಸೇ ಮನುಜತಾ ಪ್ರಕಟೀಕೃತೇತಿ॥'**— 'ಒಂದೇ ಬಾಣದಿಂದ ಏಳು ತಾಳೇಮರಗಳ ಎಲೆಗಳನ್ನೆಲ್ಲ ಉದುರಿಸುವಿಕೆ; ಕಾಲಿನ ಅಂಗುಷ್ಠದ ತುದಿಯಿಂದ ದುಂದುಭಿರಾಕ್ಷಸನ ದೊಡ್ಡತಲೆಬುರುಡೆಯನ್ನು ಹತ್ತುಯೋಜನದ ದೂರ ಎಸೆಯು-ವಿಕೆ; ಇಂದ್ರಪುತ್ರನಾದ ಮಹಾಪರಾಕ್ರಮಶಾಲಿವಾಲಿಯನ್ನು ಒಂದೇ ಬಾಣದಿಂದ ಸಂಹರಿಸುವಿಕೆ ....ಇವೇಮೊದಲಾದ ಕಾರ್ಯಗಳಿಂದ ಮನುಷ್ಯತ್ವವು ಪ್ರಕಟಮಾಡಲ್ಪ-ಟ್ಟಿತೆಂದು ತಿಳಿಯುತ್ತೀಯೇನು?"—ಎಂದು ನೀಲಕಂಠದೀಕ್ಷಿತರು ಶ್ರೀರಾಮನನ್ನು ಸ್ತುತಿಸಿದ್ದಾರೆ. **'ನಹಿ ಕಸ್ತೂರಿಕಾಮೋದಃ ಶಪಥೇನ ನಿವಾರ್ಯತೇ–'** ಕಸ್ತೂರಿಯ ಪರಿಮಳವನ್ನು ಶಪಥದಿಂದ ತಡೆಯಲಾದೀತೆ?" ಸ್ವರೂಪಕ್ಕೆ ಎಂದೂ ಚ್ಯುತಿಯಾಗ-ಲಾರದು. ರಾಹುಗ್ರಸ್ತನಾಗಿದ್ದಾಗಲೂ ಸೂರ್ಯನ ಪ್ರಭೆ ಪ್ರಸಿದ್ಧವೇ ಇರುತ್ತದೆ. ಬೇರೆರೂಪದಲ್ಲಿದ್ದರೂ ಶ್ರೀಪರಮಾತ್ಮನ ಲೋಕೋತ್ತರವಾದ ಸ್ವರೂಪವು ವ್ಯಕ್ತವಾಗಿ ತೋರಿಬರುವುದು ಸಹಜವೇ!

ಶ್ರೀಭಗತ್ಪಾದರ ಪ್ರತಿಕಾರ್ಯವೂ ಹೀಗೆ ಲೋಕೋತ್ತರವೆನಿಸಿ, ಅವರ ಶ್ರೀಪರ-ಮೇಶ್ವರಸ್ವರೂಪವನ್ನು ಜ್ಞಾಪಿಸುತ್ತದೆ. ಶ್ರೀಶಂಕರರು ಎರಡುಮೂರುತಿಂಗಳ ಕಾಲದ ವಿದ್ಯಾಭ್ಯಾಸದಿಂದಲೇ ಗುರುಗಳಿಗೆ ಸಮಾನವಾದ ವಿದ್ವತ್ತನ್ನು ಪಡೆದರು? ದರಿದ್ರ-ಬ್ರಾಹ್ಮಣನ ಪತ್ನಿಯು ಕೊಟ್ಟ ಒಣಗಿದ ಒಂದುನೆಲ್ಲಿಯಕಾಯಿಗೆ ಫಲವಾಗಿ, ಆಕೆಗೆ ಅಪರಿಮಿತಭಾಗ್ಯದಾನಮಾಡಿಸಿದರು; ಐದನೆಯ ವಯಸ್ಸಿನಲ್ಲಿಯೇ ಅನಿತರಸಾಧಾರಣ-ಶಮಾದಿಸಂಪತ್ತನ್ನು ಗಳಿಸಿದರು; ಮಾತೃಸೇವೆಗಾಗಿ ಪೂರ್ಣಾನದಿಯನ್ನು ಮನೆಯ ಸಮೀಪಕ್ಕೆ ತರಿಸಿದರು; ಮೊಸಳೆಯ ಬಾಯಿಂದ ಪಾರಾಗಿಬಂದರು; ಅತಿಬಾಲ್ಯ-ದಲ್ಲಿಯೇ ವೈರಾಗ್ಯಸಂಪತ್ತಿನಿಂದ ಸನ್ಯಾಸಾಶ್ರಮಸ್ವೀಕಾರವನ್ನು ಸಂಕಲ್ಪಿಸಿದರು; ನರ್ಮದಾತೀರದಲ್ಲಿ ಸಮಾಧಿಸ್ಥರಾಗಿದ್ದ ಶ್ರೀಗೋವಿಂದಭಗವತ್ಪಾದರವರ ಅನುಗ್ರಹಕ್ಕೆ ಪಾತ್ರರಾಗಿ, ಅವರಿಂದ ಕ್ರಮಸನ್ಯಾಸಹೊಂದಿ ಸಾಂಪ್ರದಾಯಿಕವಾದ ವೇದಾಂತಮಹಾ-ವಾಕ್ಯೋಪದೇಶವನ್ನು ಪಡೆದರು; ಮಳೆಗಾಲದಲ್ಲಿ ನರ್ಮದಾನದಿಯ ಅತ್ಯಧಿಕಪ್ರವಾ-ಹದ ಹಾವಳಿಯನ್ನು ತಡೆದರು; ಇದರಿಂದ ಇವರ ಪರಮೇಶ್ವರಾವತಾರತ್ವವನ್ನು ತಿಳಿದ ಶ್ರೀಗೋವಿಂದಭಗವತ್ಪಾದರ– "ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆಯ-

Sri Vidyabharathi [redacted], Sringeri

CC-O. In Public Domain. Digitized by eGangotri

ಬೇಕೆ"ಂಬ– ಆಜ್ಞೆಯನ್ನು ಶಿರಸಾವಹಿಸಿದರು; ಅದರಂತೆ ಶ್ರೀಕಾಶೀಕ್ಷೇತ್ರಕ್ಕೆ ಹೋಗಿ ಶ್ರೀವಿಶ್ವೇಶ್ವರನ ಅನುಗ್ರಹವನ್ನು ಪಡೆದರು; ಅನಂತರ ಬದರಿಕಾಶ್ರಮದಲ್ಲಿ ಬ್ರಹ್ಮ-ವಿತ್ತಮರಾದ ಮಹರ್ಷಿಗಳೊಡನೆ ವಿಚಾರಮಾಡಿ; **"ತಾಮುಷ್ಟಾದಶಧಾ ದೃಷ್ಟ್ವಾ ಶಂಕರಃ ಸೂತಸಂಹಿತಾಂ ।ಚಕ್ರೇ ಶಾರೀರಕಂ ಭಾಷ್ಯಂ ಸರ್ವಶ್ರುತಿ-ಮನೋಹರಂ"**–"ಸಮಸ್ತವೇದಾಂತಸಿದ್ಧಾಂತಪ್ರತಿಪಾದಕವಾದ ಶ್ರೀಮತ್ಸೂತಸಂಹಿತೆ-ಯನ್ನು ಹದಿನೆಂಟುಬಾರಿ ನೋಡಿ, ಸರ್ವಶ್ರುತಿಗಳಿಗೂ ಸಮ್ಮತವಾದ ಶಾರೀರಕಭಾಷ್ಯ-ವನ್ನು ವಿರಚಿಸಿದರು"– ಎಂಬ ಪ್ರಮಾಣದಂತೆ, ನ್ಯಾಯಪ್ರಸ್ಥಾನವಾದ ಶ್ರೀಬ್ರಹ್ಮ-ಸೂತ್ರಗಳಿಗೂ, ಹಾಗೆಯೇ ಶ್ರುತಿಪ್ರಸ್ಥಾನವಾದ ದಶೋಪನಿಷತ್ತುಗಳಿಗೂ, ಸ್ಮೃತಿಪ್ರಸ್ಥಾನಕ್ಕೆ ಪ್ರತೀಕವಾದ ಶ್ರೀಮದ್ಭಗವದ್ಗೀತೆಗೂ ಅಮೋಘಗಳಾದ ಭಾಷ್ಯಗಳನ್ನು ಹದಿನಾರನೆಯ ವಯಸ್ಸಿನಲ್ಲಿಯೇ ರಚಿಸಿದರು; ಶ್ರೀಕಾಶಿಯಲ್ಲಿ ಭಾಷ್ಯಪ್ರವಚನಮಾಡುತ್ತಿದ್ದಾಗ, ಶ್ರುತಿಯುಕ್ತ್ಯನುಭವಗಳ ಸಾಮ-ರಸ್ಯದಿಂದ ಶೋಭಿಸುತ್ತಿದ್ದ ಭಾಷ್ಯಗಳನ್ನು ವಿಮರ್ಶಿಸಿದ ಶ್ರೀಬಾದರಾಯಣವ್ಯಾಸರ ಮೆಚ್ಚಿಕೆಗೂ ಆಶೀರ್ವಾದಕ್ಕೂ ಪಾತ್ರರಾದರು; ಅವರ ಅಪ್ಪಣೆಯಂತೆ ಭಾಷ್ಯಗಳ ಪ್ರಚಾ-ರಕ್ಕಾಗಿ ಪ್ರಯಾಗದಲ್ಲಿ ಶ್ರೀಕುಮಾರಿಲಭಟ್ಟರನ್ನು ಸಂದರ್ಶಿಸಿ, ಅವರ ಸಲಹೆಯಂತೆ ಮಾಹಿಷ್ಮತೀಪಟ್ಟಣದಲ್ಲಿದ್ದ ಮಂಡನಮಿಶ್ರಪಂಡಿತಾಗ್ರಣಿಯೊಡನೆ ಶ್ರೀಶಾರದದೇವಿಯ ಸಮ್ಮುಖದಲ್ಲಿ ಶಾಸ್ತ್ರಾರ್ಥವಿಚಾರನಡೆಯಿಸಿ, ಮಂಡನಮಿಶ್ರರನ್ನು ಜಯಿಸಿ, ಶಿಷ್ಯ-ರನ್ನಾಗಿ ಸ್ವೀಕರಿಸಿದರು; ಆಸೇತುಹಿಮಾಚಲಪರ್ಯಂತವಾದ ಭರತಖಂಡದಲ್ಲಿ ಸಂಚರಿಸಿ, ಅವೈದಿಕಮತಗಳನ್ನೆಲ್ಲ ನಿರ್ಮೂಲಗೊಳಿಸಿ, ವೈದಿಕಸನಾತನಸನ್ಮಾರ್ಗವನ್ನು ನಿಷ್ಕಂಟ-ಕವಾಗಿ ಪ್ರಚಾರಗೊಳಿಸಿದರು; ಭರತಖಂಡದ ನಾಲ್ಕುದಿಕ್ಕುಗಳಲ್ಲಿಯೂ ಮಠಗಳನ್ನು ಸ್ಥಾಪಿಸಿ, ಅವಿಚ್ಛಿನ್ನವಾದ ಸದ್ಗುರುಪರಂಪರೆಯನ್ನು ಪ್ರವರ್ತಿಸಿ, ಆಚಂದ್ರಾರ್ಕವಾ-ಗಿಯೂ ಸನಾತನವೈದಿಕಸದ್ಧರ್ಮವು ಪ್ರಚಾರವಾಗುವಂತೆ ಏರ್ಪಡಿಸಿದರು; ಶ್ರೀಶೃಂಗ-ಗಿರಿಕ್ಷೇತ್ರದಲ್ಲಿ ಶ್ರೀಶಾರದಾದೇವಿಯನ್ನು ಪ್ರತಿಷ್ಠಿಸಿದರು; ತಮ್ಮ ಮಾತೃಶ್ರೀಯವರ ಅಂತ್ಯಕಾಲವನ್ನು ತಿಳಿದು ಅವರ ಸಮೀಪಕ್ಕೆ ಬಂದು, ಅವರಿಗೆ ಸದ್ಗತಿಯನ್ನು ಉಂಟು-ಮಾಡಿ, ತಾವು ಮಾತುಕೊಟ್ಟಂತೆ ಅವರ ಅಂತ್ಯಕ್ರಿಯೆಯನ್ನು ನೆರವೇರಿಸಿದರು. ಕಾಶ್ಮೀರದಲ್ಲಿ ಸರ್ವವಿದ್ವದ್ವೃಂದವನ್ನು ಜಯಿಸಿ, ಸರ್ವಜ್ಞಪೀಠವನ್ನು ಅಲಂಕರಿಸಿದರು; ಅವತಾರಕಾರ್ಯವು ಮುಗಿಯಲು, ಹಿಮವತ್ಕೇದಾರದಲ್ಲಿ ಶ್ರೀಪರಮೇಶ್ವರನ ಸ್ವಸ್ವರೂ-ಪದಿಂದ ಸ್ವಸ್ಥಾನಕ್ಕೆ ವಿಜಯಗೈದರು; ತಮ್ಮ ಮುಖ್ಯಶಿಷ್ಯರುಗಳಿಂದ ಶಾಸ್ತ್ರೀಯ-ಗ್ರಂಥಸಂದೋಹಗಳನ್ನು ಪ್ರಚಾರಮಾಡಿಸಿದರು. ಇವೇ ಮೊದಲಾದ ಒಂದೊಂದು ಕಾರ್ಯವೂ, ಅವರುಪ್ರತಿಪಾದಿಸಿರುವ ಅದ್ವೈತತತ್ತ್ವದಂತೆ ಅದ್ವಿತೀಯವಾಗಿಬೆಳಗುತ್ತಿದೆ

ಶಾಸ್ತ್ರಾರ್ಥದ ವಿಷಯದಲ್ಲಿ ಶ್ರೀಭಗವತ್ಪಾದರವರ ದಿವ್ಯವೈಭವವನ್ನು ದಿಙ್ಮಾತ್ರ-ವಾಗಿ ತೋರಿಸುವುದು ಇಲ್ಲಿ ನಮ್ಮಪ್ರಯತ್ನವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿವನಾಮನಿ ಭಾವಿತೇಂऽತರಂಗೇ
ಮಹತಿ ಜ್ಯೋತಿಷಿ ಮಾನಿನೀಮಯೂರ್ಥೇ!
ದುರಿತಾನ್ಯಪಯಾಂತಿ ದೂರದೂರಂ
ಮುಹುರಾಯಾಂತಿ ಮಹಾಂತಿ ಮಂಗಳಾನಿ॥

ವ್ಯಾಸಶಂಕರವಚೋऽನ್ಯೃತಧಾರೈಃ ಶುದ್ಧಿಮಾಪ ಪರಮಾಂ ಮಮಚೇತಃ।
ತೇನ ಖೇಲತಿ ನಿಜೇ ಪರತತ್ತ್ವೇ ಯೇನ ಮೇऽಸ್ತಿ ನ ಪುನರ್ಭವಶಂಕಾ॥

ಯಸ್ಯಾನು ದಯೇ ಸರ್ವಂ ವಿಶ್ವಂ ಚಿತ್ರಂ ವಿಭಾತಿ ಚಿತ್ರತರಂ।
ಯಸ್ಯೋದಯೇ ನ ಕಿಂಚಿತ್ಸೋऽಯಮಪೂರ್ವಃ ಸ್ವಾತ್ಮಭಾನುಃ।

ಸ ಆತ್ಮಾ ತತ್ತ್ವ- ಮಿತ್ಯೇವಂ ವ್ಯತಿಹಾರೇಣ ಶಂಸನಾತ್ ।
ಬ್ರಹ್ಮಾತ್ಮನೋರೈಕ್ಯ ತತ್ತ್ವಂ ಶ್ರುತಿಪ್ರಮಾಣಿಕಂ ಸ್ಥಿತಂ ॥
ಚಿದಾತ್ಮಾ ನಿಷ್ಕಲೋ ನಿತ್ಯೋ ನಿರ್ವಿಕಾರೋ ನಿರಂಜನಃ ॥
ವ್ಯಾಕಕೋऽದ್ವಯ ಇತ್ಯೇವಂ ಯುಕ್ತಿತೋऽಪಿ ವಿನಿಶ್ಚಯಃ ॥
ಸಾಕ್ಷೀ ಸರ್ವಾನ್ವಿತಃ ಶುದ್ಧಃ ಸಚ್ಚಿದಾನಂದಲಕ್ಷಣಃ
ಸ್ವಾನುಭೂತ್ಯಾಪಿ ಸಂಸಿದ್ಧೋ ನಿತ್ಯಮುಕ್ತೋऽಹಮದ್ವಯಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವತ್ಪಾದದಿವ್ಯವೈಭವಂ

೧ ತತ್ತ್ವಾವೇದಕಮಾನತಾ ಶ್ರುತಿತತೇಸ್ತದ್ವ೨ಜ್ಜಗದ್ಯೋನಿತಾ
ಚಿನ್ಮಾತ್ರಸ್ಯ೩ಪರಾತ್ಮನಶ್ಚ ಜಗತಃ ಸತ್ಯತ್ವಮಿಥ್ಯಾತ್ಮತೇ।
೪ಐಕ್ಯಂ ಜೀವಪರಾತ್ಮನೋರವಿತಥಂ೫ಮುಕ್ತಿಶ್ಚ ತಜ್ಜ್ಞಾನತಃ
೬ಶ್ರೌತಂ ಕರ್ಮ ಚ ತತ್ರ ಸಾಧನಮಿತಿ ಹ್ಯಾಚಾರ್ಯಲೀಲಾಯಿತಂ ॥

೧. ಪಾರಮಾರ್ಥಿಕತತ್ತ್ವವನ್ನು ತಿಳಿಸುವ ಪ್ರಾಮಾಣ್ಯವು ಶ್ರುತಿಗಳಿಗೆ ಮಾತ್ರ;

೨. ಜಗತ್ಕಾರಣತ್ವವು ಚೇತನವಾದ ಪರಮಾತ್ಮ ಗೆ ಮಾತ್ರ;

೩. ಪರಮಾತ್ಮನೇ ಸತ್ಯ; ಜಗತ್ತೆಲ್ಲಾ ಮಿಥ್ಯಾ;

೪. ಜೀವಪರಮಾತ್ಮರ ಐಕ್ಯವೇ ಯಥಾರ್ಥವಾದದ್ದು;

೫. ಈ ಐಕ್ಯಜ್ಞಾನದಿಂದಲೇ ಮುಕ್ತಿಯು ಸಿದ್ಧಿಸುವುದು; ಮತ್ತು

೬. ಈ ಜ್ಞಾನಕ್ಕೆ ಶ್ರುತಿಯಲ್ಲಿ ಹೇಳಿರುವ ನಿಷ್ಕಾಮಸ್ವಧರ್ಮಾನುಷ್ಠಾನವೇ ಪರಮಸಾಧನೆಯು.

ಈ ಆರೂ ಶ್ರೀಭಗವತ್ಪಾದರ ಸಿದ್ಧಾಂತದ ಅಸಾಧಾರಣವಿಷಯಗಳು. ಶ್ರೀಭಗವತ್ಪಾದರು ಪ್ರಸ್ಥಾನತ್ರಯಭಾಷ್ಯಗಳಲ್ಲಿ ಈ ವಿಷಯಗಳನ್ನು ವಿಸ್ತಾರವಾಗಿಯೂ, ವಿಸ್ಪಷ್ಟವಾಗಿಯೂ ಪ್ರತಿಪಾದಿಸಿದ್ದಾರೆ. ಇವು ಸರಿಯಲ್ಲವೆಂದಾಗಲಿ, ಬೇರೆವಿಧವಾಗಿ ಈ ವಿಷಯಗಳನ್ನು ಪ್ರತಿಪಾದಿಸಬಹುದೆಂದಾಗಲಿ ಯಾರಿಂದಲೂ ಹೇಳಲು ಸಾಧ್ಯವಿಲ್ಲ. ಇದು ಶ್ರೀಭಗವತ್ಪಾದರ ದಿಗ್ವಿಜಯವಾಗಿದೆ; ಇವನ್ನು ಸಂಗ್ರಹವಾಗಿ ಇಲ್ಲಿ ವಿವರಿಸುತ್ತೇವೆ.

೧. **ತತ್ತ್ವಾವೇದಕಮಾನತಾ ಶ್ರುತಿತತೇಃ।** ತತ್ತ್ವವನ್ನು ತಿಳಿಸುವ ಪ್ರಾಮಾಣ್ಯವು ಶ್ರುತಿಗಳಿಗೆ ಮಾತ್ರ, ಮತ್ತಾವುದಕ್ಕೂ ಇಲ್ಲ

೨! **'ತತ್ತ್ವಜ್ಞಾನಾನ್ನಿಃಶ್ರೇಯಸಾಧಿಗಮಃ।'**— "ತತ್ತ್ವಜ್ಞಾನದಿಂದಲೇ ಮೋಕ್ಷಸಿದ್ಧಿಯು—", ಎಂಬುದು ಎಲ್ಲ ಶಾಸ್ತ್ರಕಾರರಿಗೂ ಸಮ್ಮತವು. **'ಮಾನಾಧೀನಾ ಮೇಯಸಿದ್ಧಿಃ,** ।— ಪ್ರಮಾಣದಿಂದಲೇ ವಸ್ತುಸಿದ್ಧಿಯು. ಮೋಕ್ಷಕ್ಕೆ ಸಾಧನವಾದ ತತ್ತ್ವವನ್ನು ತಿಳಿಯಲು, ತತ್ತ್ವದ ವಿಷಯವಲ್ಲಿ ಪ್ರಮಾಣವಾವುದೆಂಬುದನ್ನು ನಿಶ್ಚಯಿಸಿಕೊಂಡು, ಆ ಪ್ರಮಾಣವನ್ನನುಸರಿಸಿಯೇ ತತ್ತ್ವವನ್ನು ತಿಳಿಯಬೇಕು.

ಪ್ರತ್ಯಕ್ಷದಿಂದಲೇ ತತ್ತ್ವವನ್ನು ತಿಳಿಯಲಾಗುವುದೆಂದು ಕೆಲವರೂ, ಅನುಮಾನರೂಪವಾದ ಯುಕ್ತಿಯಿಂದಲೇ ಸಾಧ್ಯವೆಂದು ಮತ್ತೆ ಕೆಲವರೂ ಹೇಳುತ್ತಾರೆ ಪ್ರತ್ಯಕ್ಷದಿಂದಾಗಲಿ, ಯುಕ್ತಿಯಿಂದಾಗಲಿ, ಮತ್ತಾವರೀತಿಯಿಂದಲೇ ಆಗಲಿ, ತತ್ತ್ವವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಳಿಯಲು ಸಾಧ್ಯವಿಲ್ಲವೆಂದು, ಶ್ರುತಿಯೊಂದರಿಂದಲೇ ತತ್ತ್ವನಿಶ್ಚಯವು ಸಾಧ್ಯವೆಂದೂ ಶ್ರೀಭಗವತ್ಪಾದರು ಪ್ರತಿಪಾದಿಸಿದ್ದಾರೆ. ಅವರು ಪ್ರತಿಪಾದಿಸಿರುವ ಕೆಲವು ವಿಷಯ-ಗಳನ್ನು ಇಲ್ಲಿ ತೋರಿಸುತ್ತೇವೆ.

೧. ತತ್ಪ್ರತ್ಯಕ್ಷವಿಷಯಮೇವೇತಿ ಚೇತ್? ನ; ವಾದಿವಿಪ್ರತಿಪತ್ತಿದರ್ಶನಾತ್। ನ ಹಿ ದೇಹಾಂತರಸಂಬಂಧಿನ ಆತ್ಮನಃ ಪ್ರತ್ಯಕ್ಷೇಣಾಸ್ತಿತ್ವವಿಜ್ಞಾನೇ ಲೋಕಾಯತಿಕಾ ಭೌದ್ಧಾಶ್ಚ ನಃ ಪ್ರತಿಕೂಲಾಃ ಸ್ಯುರ್ನಾಸ್ತ್ಯಾತ್ಮೇತಿ ವದಂತಃ। ನ ಹಿ ಘಟಾದೌ ಪ್ರತ್ಯಕ್ಷವಿಷಯೇ ಕಶ್ಚಿದ್ವಿಪ್ರತಿಪದ್ಯತೇ ನಾಸ್ತಿ ಘಟ ಇತಿ ತಸ್ಮಾತ್ತತ್ಪ್ರತ್ಯಕ್ಷಾನ್ನಾತ್ಮಾಸ್ತಿತ್ವಪ್ರಸಿದ್ಧಿಃ। ತಥಾ ನಾನುಮಾನಾದಪಿ। (ಬೃ..೧.೧.೧.)

ಪ್ರತ್ಯಕ್ಷವಾಗಿ ತಿಳಿದುಬರುವ ವಿಷಯಗಳಲ್ಲಿ ಯಾರಿಗೂ ವಿವಾದಕ್ಕೆ ಅವಕಾಶವಿರುವುದಿಲ್ಲ,ತತ್ತ್ವದ ವಿಷಯದಲ್ಲಿ ವಾದಿಗಳಿಗೆ ಪರಸ್ಪರವಿರೋಧವು ಪ್ರಸಿದ್ಧವೇ ಇದೆ. ತತ್ತ್ವವು ಪ್ರತ್ಯಕ್ಷಗಮ್ಯವಲ್ಲ. ಪ್ರತ್ಯಕ್ಷವನ್ನು ಅನುಸರಿಸಿಯೇ ಅನುಮಾನವು ಪ್ರವರ್ತಿಸುವುದರಿಂದ, ಪ್ರತ್ಯಕ್ಷವಿಷಯವಲ್ಲದ ತತ್ತ್ವದ ವಿಷಯದಲ್ಲಿ, ಅನುಮಾನಕ್ಕೂ ಅವಕಾಶವಿಲ್ಲ-ಎಂದು ತಾತ್ಪರ್ಯವು.

೨. ಸಮ್ಯಗ್ಜ್ಞಾನಾನ್ಮೋಕ್ಷ-ಇತಿ ಸರ್ವೇಷಾಂ ಮೋಕ್ಷವಾದಿನಾಮಭ್ಯುಪಗಮಃ। ತಚ್ಚ ಸಮ್ಯಗ್ಜ್ಞಾನಮೇಕರೂಪಂ, ವಸ್ತುತಂತ್ರತ್ವಾತ್। ತತ್ರೈವಂಸತಿ, ಸಮ್ಯಗ್ಜ್ಞಾನೇ ವಾದಿನಾಂ ವಿಪ್ರತಿಪತ್ತಿರನುಪಪನ್ನಾ। ತರ್ಕಜ್ಞಾನಾನಾಂ ತು ಅನ್ಯೋಽನ್ಯವಿಪ್ರತಿಷೇಧಾತ್ಪ್ರಸಿದ್ಧಾ ವಿಪ್ರತಿಪತ್ತಿಃ!— ವೇದಸ್ಯ ತು ನಿತ್ಯತ್ವೇ, ವಿಜ್ಞಾನೋತ್ಪತ್ತಿಹೇತುತ್ವೇ ಚ ಸತಿ ಜತಜ್ಜನಿತಸ್ಯ ಜ್ಞಾನಸ್ಯ ಸಮ್ಯಕ್ತ್ವಂ, ಅತೀತಾನಾಗತವರ್ತಮಾನೈಃ ಸರ್ವೈರಪಿ ತಾರ್ಕಿಕೈರಪಹ್ನೋತುಮಶಕ್ಯಂ। ಅತಃ ಸಿದ್ಧಮಸ್ಯೈವೌಪಪನಿಷದಸ್ಯ ಜ್ಞಾನಸ್ಯ ಸಮ್ಯಕ್ತ್ವಂ (ಸೂ. ೨.೧.೧೧)

ಮೋಕ್ಷವನ್ನು ಒಪ್ಪುವವರೆಲ್ಲರೂ ಸಮ್ಯಗ್ಜ್ಞಾನದಿಂದಲೇ ಮೋಕ್ಷವೆಂದು ಒಪ್ಪಿದ್ದಾರೆ. ಇಂಥ ಸಮ್ಯಗ್ಜ್ಞಾನವು ಒಂದೇರೂಪವಾಗಿರಬೇಕು; ತರ್ಕಜನ್ಯಜ್ಞಾನದಲ್ಲಿ ವಿರುದ್ಧಾಭಿಪ್ರಾಯಗಳಿರುವುದು ಸರ್ವಪ್ರಸಿದ್ಧವೇ ಇದೆ. ವೇದವು ನಿತ್ಯವೆಂದೂ, ಅಪೌರುಷೇಯವಾಗಿ ಸರ್ವದೋಷರಹಿತವಾದ ಪ್ರಮಾಣವೆಂದೂ ನಿಶ್ಚಿತವಾಗಿರುವುದರಿಂದ, ಮೂರುಕಾಲದ ತಾರ್ಕಿಕರೆಲ್ಲರೂ ಸೇರಿದರೂ, ವೇದದಿಂದ ತಿಳಿದುಬರುವ ಜ್ಞಾನವನ್ನು ಸರಿಯುಲ್ಲವೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ, ಉಪನಿಷತ್ತುಗಳಿಂದ ತಿಳಿದುಬರುವ ಜ್ಞಾನವೇ ಸಮ್ಯಗ್ಜ್ಞಾನವೆಂದು ಸಿದ್ಧವು.

Sri Vidyabharathi Book Centre, Sringeri

CC-O. In Public Domain. Digitized by eGangotri

೩. ನ ತು ವಸ್ತು–ಏವಂ ನೈವಂ; ಅಸ್ತಿ,ನಾಸ್ತಿ–ಇತಿ ವಾ ವಿಕಲ್ಪ್ಯತೇಃ ವಿಕಲ್ಪನಾಸ್ತು ಪುರುಷಬುದ್ಧ್ಯಪೇಕ್ಷಾಃ । ನ ವಸ್ತುಯಾಥಾತ್ಮ್ಯಂ ಪುರುಷಬುದ್ಧ್ಯಪೇಕ್ಷಂ; ಕಿಂ ತರ್ಹಿ? ವಸ್ತುತಂತ್ರಮೇವ ತತ್। (ಸು.೧.೧.೧)

'ಇದು ಹೀಗೆ, ಹೀಗಲ್ಲ; ಇದೆ, ಇಲ್ಲ' ಎಂದುಮುಂತಾದ ವಿಕಲ್ಪಗಳು ವಸ್ತುವಿನ ವಿಷಯದಲ್ಲಿ ಸಮಂಜಸಗಳಲ್ಲ. ವಿಕಲ್ಪಗಳು ಪುರುಷಬುದ್ಧಿಗೆ ಅಧೀನಗಳು—ಅವು ಅವರವರಿಗೆ ತೋರಿಬಂದಂತೆ ಆಗುವ ತಿಳಿವಳಿಕೆಗಳು. ಆದರೆ, ವಸ್ತುವಿನ ವಾಸ್ತವಸ್ವ-ರೂಪವು ಜನರ ತಿಳಿವಳಿಕೆಗೆ ಅಧೀನವಲ್ಲ. ಬೆಂಕಿಯು ಬಿಸಿಯಾಗಿರುವಿಕೆಯು ಜನರ ತಿಳಿವಳಿಕೆಯನ್ನು ಅನುಸರಿಸಿ ಇರುವುದಿಲ್ಲ. ವಸ್ತುವಿನ ಸ್ವರೂಪವು ಸ್ವತಂತ್ರವಾದುದು ಅದು ಇರುವಂತೆ ಆಗುವ ತಿಳಿವಳಿಕೆಯು ಸರಿಯಾದ ತಿಳಿವಳಿಕೆ, ಅಥವಾ ಸಮ್ಯಗ್ಜ್ಞಾನವು. ವಸ್ತುವಿದ್ದಂತೆ ಅದನ್ನು ತಿಳಿಸುವುದು ಪ್ರಮಾಣವು. ಆದ್ದರಿಂದ, ಕೇವಲ ಪ್ರಮಾಣದಿಂದಲೇ ಸಮ್ಯಗ್ಜ್ಞಾನವು ಆಗುತ್ತದೆ, ತರ್ಕಾದಿಗಳಿಂದಲ್ಲ.

೪. ತಾರ್ಕಿಕೈಸ್ತು ಪರಿತ್ಯಕ್ತಾಗಮಬಲೈಃ ಅಸ್ತಿ ನಾಸ್ತಿ;– ಕರ್ತಾ ಅಕರ್ತಾ– ಇತ್ಯಾದಿ ವಿರುದ್ಧಂ ಬಹು ತರ್ಕಯದ್ಭಿಃ ಆಕುಲೀಕೃತಃ ಶಾಸ್ತ್ರಾ-ರ್ಥಃ । ತೇನಾರ್ಥನಿಶ್ಚಯೋ ದುರ್ಲಭಃ। ಯೇ ತು ಕೇವಲಶಾಸ್ತ್ರಾನುಸಾರಿಣಃ ಶಾಂತದರ್ಪಾಃ, ತೇಷಾಂ ಪ್ರತ್ಯಕ್ಷವಿಷಯೋ ಇವ ನಿಶ್ಚಿತಃ ಶಾಸ್ತ್ರಾರ್ಥಃ (ಬೃ.೧.೪.೬.)

ಪ್ರಮಾಣದ ಬಲವಿಲ್ಲದೆ, ತಮ್ಮ ಬುದ್ಧಿಶಕ್ತಿಯ ಬಲದಿಂದಲೇ–ಅತೀಂದ್ರಿಯನಾದ ಆತ್ಮನು ಇದ್ದಾನೆಂದೂ, ಇಲ್ಲವೆಂದೂ; ಅವನು ಕರ್ತೃವೆಂದೂ ಕರ್ತೃವಲ್ಲವೆಂದೂ–ಹೀಗೆ ಪರಸ್ಪರವಿರುದ್ಧವಾಗಿ ತರ್ಕಮಾಡುವವರಿಂದ ಶಾಸ್ತ್ರಾರ್ಥವು ವ್ಯಾಕುಲವಾಗಿದೆ ತರ್ಕದಿಂದ "ಇದೇ ಸರಿ"–ಎಂದು ನಿರ್ಣಯಿಸಲು ಸಾಧ್ಯವಿಲ್ಲವೆಂದು ಮನಗಂಡು, ಸ್ವತಂತ್ರ-ವಾಗಿ ತರ್ಕಮಾಡುವ ಅಹಂಕಾರವನ್ನು ಬಿಟ್ಟು, ಕೇವಲಶಾಸ್ತ್ರವನ್ನೇ ಯಾರು ಶರಣು-ಹೊಂದುತ್ತಾರೋ, ಅಂಥವರಿಗೆ, ಪ್ರತ್ಯಕ್ಷವಿಷಯದಲ್ಲಿ ಹೇಗೋ ಹಾಗೆ, ಶಾಸ್ತ್ರಾರ್ಥವು ಸ್ಪಷ್ಟವಾಗಿ ನಿಶ್ಚಿತವಾಗುವುದು.

೫. ಪರತಂತ್ರಪ್ರಜ್ಞಸ್ಯಾಪಿ ನಾಕಸ್ಮಾತ್ಸ್ಮೃತಿವಿಶೇಷವಿಷಯಃ ಪಕ್ಷಪಾತೋ ಯುಕ್ತಃ। ಕಸ್ಯಚಿತ್ಕ್ವಚಿತ್ಪಕ್ಷಪಾತೇ ಸತಿ, ಪುರುಷಮತಿವೈಶ್ವ-ರೂಪ್ಯೇಣ ತತ್ತ್ವಾನವಸ್ಥಾನಪ್ರಸಂಗಾತ್। ತಸ್ಮಾತ್ತಸ್ಯಾಪಿ ಸ್ಮೃತಿವಿಪ್ರತಿಪತ್ತ್ಯುಪನ್ಯಾಸೇನ, ಶ್ರುತ್ಯನುಸಾರಾನನುಸಾರವಿಷಯವಿವೇಚನೇನ ಚ, ಸನ್ಮಾರ್ಗೇ ಪ್ರಜ್ಞಾ ಸಂಗ್ರಹಣೀಯಾ। (ಸೂ.೨.೧.೧)

Sri Vidyabharathi Book Centre, Sringeri

CC-O. In Public Domain. Digitized by eGangotri

೨. ಜಗದ್ಯೋನಿತಾ ಚಿನ್ಮಾತ್ರಸ್ಯ । ಜಗತ್ಕಾರಣತ್ವವು ಚೈತನ್ಯಮಾತ್ರ-ಸ್ವರೂಪನಾದ ಪರಮಾತ್ಮನಿಗೆ ಮಾತ್ರವೇ; ಬೇರೆ ಯಾವುದೂ ಜಗತ್ತಿಗೆ ಕಾರಣ-ವಾಗುವುದಿಲ್ಲ.

೩. **ಪರಮಾತ್ಮನಶ್ಚ ಜಗತಃ ಸತ್ಯತ್ವಮಿಥ್ಯಾತ್ವತೇ ।**

ಪರಮಾತ್ಮನೇ ಸತ್ಯ ಜಗತ್ತೆಲ್ಲ ಮಿಥ್ಯಾ

'ಯತೋ ವಾ ಇಮಾನಿ ಭೂತಾನಿ ಜಾಯಂತೇ ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತಿ, ತದ್ಬ್ರಹ್ಮ । (ತೈ ೩.೧)

"ಯಾವುದರಿಂದ ಜಗತ್ತೆಲ್ಲ ಹುಟ್ಟಿ, ಯಾವುದರಲ್ಲಿ ಇದ್ದು, ಯಾವರೂಪವಾಗಿಯೇ ಲಯವಾಗುವುದೋ ಅದು ಬ್ರಹ್ಮ, ಪರಮಾತ್ಮನು"– ಎಂದು ಶ್ರುತಿಯು ಹೇಳುತ್ತದೆ. ಆದ್ದರಿಂದ– 'ಬ್ರಹ್ಮವೇ ಜಗತ್ತಿಗೆಲ್ಲ ಕಾರಣ, ಜಗತ್ತೆಲ್ಲ ಬ್ರಹ್ಮದ ಕಾರ್ಯ'– ಎಂದು ತಿಳಿದುಬರುವುದು. ಪ್ರತಿಕಾರ್ಯಕ್ಕೂ ನಿಮಿತ್ತಕಾರಣ, ಉಪಾದಾನಕಾರಣ ಎಂದು ಎರಡು ವಿಧವಾದ ಕಾರಣವು ಲೋಕದಲ್ಲಿ ಪ್ರಸಿದ್ಧವಾಗಿದೆ. ಗಡಿಗೆಗೆ ಮಣ್ಣು ಉಪಾದಾನಕಾರಣ, ಕುಂಬಾರನು ನಿಮಿತ್ತಕಾರಣ. ಯಾವುದು ಕಾರ್ಯದ ರೂಪವನ್ನು ಹೊಂದುತ್ತದೋ ಅದು ಅದಕ್ಕೆ ಉಪಾದಾನಕಾರಣವೆನಿಸುವುದು ಕಾರ್ಯವು ತನ್ನ ಉಪಾದಾನಕಾರಣವಾದ ವಸ್ತುವಿನಿಂದಲೇ ಹುಟ್ಟಿ, ಇರುವಕಾಲದಲ್ಲಿಯೂ, ಅದರಲ್ಲಿಯೇ ಇದ್ದು, ಲಯವಾಗುವಾಗ ಅದರ ರೂಪವನ್ನೇ ಹೊಂದುತ್ತದೆ. ಆದ್ದರಿಂದ ಕಾರ್ಯದ ಉತ್ಪತ್ತಿ, ಸ್ಥಿತಿ ಮತ್ತು ಲಯ–ಈ ಮೂರಕ್ಕೂ ಯಾವುದು ಕಾರಣವೋ ಅದು ಅದರ ಉಪಾದಾನಕಾರಣವೆಂದು ನಿಶ್ಚಿತವಾಗುತ್ತದೆ. ಚೇತನವಾದ ಬ್ರಹ್ಮವು ಜಗತ್ತಿನ ಉತ್ಪತ್ತಿ ಸ್ಥಿತಿಲಯಗಳಿಗೆ ಕಾರಣವೆಂದು ಶ್ರುತಿಯಿಂದ ತಿಳಿದುಬರುವುದರಿಂದ, ಬ್ರಹ್ಮನೇ ಸಮಸ್ತಜಗತ್ತಿಗೂ ಉಪಾದಾನಕಾರಣವೆಂದು ಸ್ಪಷ್ಟಪಡುವುದು.

ಮತ್ತು;

'ಸೋಽಕಾಮಯತ ಬಹು ಸ್ಯಾಂ ಪ್ರಜಾಯೇಯೇತಿ । ಇದಂ ಸರ್ವ-ಮಸೃಜತ । ಸತ್ಯಂ ಚಾನೃತಂ ಚ ಸತ್ಯಮಭವತ್ । (ತೈ ೩.೬.)

"ನಾನೇ ಬಹುವಾಗಿ, ಎಂದರೆ ಜಗದ್ರೂಪವಾಗಿ, ಜನಿಸುತ್ತೇನೆ"– ಎಂದು ಆಲೋಚಿಸಿ, ಪರಮಾತ್ಮನು ಈ ಜಗತ್ತೆಲ್ಲವನ್ನೂ ಸೃಜಿಸಿದನು; 'ಸತ್ಯ, ಅನೃತ' ಎಂದು ತೋರಿಬರುವ ಎಲ್ಲ ರೂಪವೂ ತಾನೇ ಆದನು"!

ಈ ಶ್ರುತಿಯಲ್ಲಿ ಪರಮಾತ್ಮನು ಆಲೋಚನೆಮಾಡಿ ಜಗತ್ತನ್ನು ಸೃಷ್ಟಿಸಿದನೆಂದು ಹೇಳಿರುವುದರಿಂದ,– ಗಡಿಗೆಯನ್ನು ಮಾಡುತ್ತೇನೆಂದು ಯೋಚಿಸಿ ಗಡಿಗೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

"ಸ್ವತಂತ್ರವಾಗಿ ಶಾಸ್ತ್ರಾರ್ಥವನ್ನು ತಿಳಿಯುವ ಸಾಮರ್ಥ್ಯವಿರುವವರು ಶಾಸ್ತ್ರದಿಂದಲೇ ಸಮ್ಯಗ್ಜ್ಞಾನವನ್ನು ಪಡೆಯಲಿ; ಅಂಥ ಸಾಮರ್ಥ್ಯವಿಲ್ಲದ ಜನಸಾಮಾನ್ಯವು ದೊಡ್ಡವರೆಂದು ಪ್ರಸಿದ್ಧರಾದವರಲ್ಲಿ ಯಾರನ್ನಾದರೂ ಅನುಸರಿಸಿ, ಅವರು ಹೇಳುವಂತೆ ತತ್ತ್ವವನ್ನು ತಿಳಿಯಬೇಕಾಗುವುದಲ್ಲವೆ?"– ಎಂದರೆ; ಅದು ಸರಿಯಲ್ಲ. ಲೋಕದಲ್ಲಿರ ಇಂಥ ದೊಡ್ಡವರೆಂದು ಪ್ರಸಿದ್ಧರಾದವರೂ ಹಲವರು ಇರುತ್ತಾ, ಅವರಲ್ಲಿಯೂ ಪರಸ್ಪರ ವಿರುದ್ಧಾಭಿಪ್ರಾಯಗಳೇ ಇರುವುದರಿಂದ ಯಾರ ಅಭಿಪ್ರಾಯವು ಸರಿಯಾದುದೆಂಬ ನಿಶ್ಚಯವು ಅಶಕ್ಯವೇ ಸರಿ. ಏಕೆಂದರೆ "ಅವರಲ್ಲಿ ಒಬ್ಬರನ್ನು ಸರಿಯಾಗಿ ತಿಳಿದವರೆಂದು ಹೇಳಿದರೆ, ಇತರರು ಅಲ್ಲವೆಂಬುದು ಹೇಗೆ? ಅವರೆಲ್ಲರೂ ದೊಡ್ಡವರಾಗಿ ಸರಿಯಾಗಿ ತಿಳಿದವರೆಂದಾದರೆ, ಅವರಲ್ಲಿ ವಿರುದ್ಧಾಭಿಪ್ರಾಯವಿರುವುದು ಹೇಗೆ ಸಮಂಜಸವು?" ಆದ್ದರಿಂದ, ಅಲ್ಲಿಯೂ– 'ಶ್ರುತಿಗೆ ಅನುಸಾರವಾಗಿದೆಯೋ, ಇಲ್ಲವೋ' ಎಂಬುದನ್ನು ವಿಮರ್ಶಿಸಿ, ಶ್ರುತಿಗೆ ಅನುಸಾರವಾಗಿ ಹೇಳುವವರನ್ನೇ ಪ್ರಾಮಾಣಿಕರೆಂದು ಒಪ್ಪಬೇಕು.

೬. **ತಸ್ಮಾತ್ತಾರ್ಕಿಕಭೇದದೃಷ್ಟಿಂ, ನಾಸ್ತಿಕಕುದೃಷ್ಟಿಂ ಚೋಜ್ಝಿತ್ವಾ ಮಾತಾಪಿತೃಸಹಸ್ರೇಭ್ಯೋಽಪಿ ಹಿತೈಷಿಣಾ ವೇದೇನೋಪದಿಷ್ಟಮಾತ್ಮೈಕತ್ವದರ್ಶನಂ ಶಾಂತದರ್ಪೈರಾದರಣೀಯಮಿತಿ ।** (ಕಠ ೪. ೧೫)

ಆದ್ದರಿಂದ ತಾರ್ಕಿಕರ ಭೇದದೃಷ್ಟಿಯನ್ನೂ, ನಾಸ್ತಿಕರ ದುಷ್ಟಬುದ್ಧಿಯನ್ನೂ ದೂರಮಾಡಿ, ತಾಯಿತಂದೆಗಳಿಗಿಂತಲೂ ಸಹಸ್ರರುಪಾಲು ಹೆಚ್ಚು ಹಿತೈಷಿಯಾದ ವೇದದಿಂದ ಉಪದಿಷ್ಟವಾಗಿರುವ ಆತ್ಮೈಕತ್ವವನ್ನೇ ಸಮ್ಯಗ್ಜ್ಞಾನವೆಂದು ವಿನಯದಿಂದ ಅಂಗೀಕರಿಸತಕ್ಕದ್ದು.

ಮೇಲೆ ತಿಳಿಸಿದ ಕೆಲವು ವಿಷಯಗಳಿಂದ, ತತ್ತ್ವದ ವಿಷಯದಲ್ಲಿ ಶ್ರುತಿಯೊಂದೇ ಪ್ರಮಾಣವೆಂಬುದು ಸ್ಪಷ್ಟಪಡುತ್ತದೆ. ಇತರ ಯಾವ ಮತದವರೂ ಇದನ್ನು ಒಪ್ಪುವುದಿಲ್ಲ.

ಮತಗಳು ಆಸ್ತಿಕವೆಂದೂ, ನಾಸ್ತಿಕವೆಂದೂ, ತಾಂತ್ರಿಕವೆಂದೂ–ಮೂರುವಿಧವಾಗಿವೆ. ವೇದವನ್ನು ಪ್ರಮಾಣವೆಂದು ಒಪ್ಪುವವರು ಆಸ್ತಿಕರು; ವೇದದ ಪ್ರಾಮಾಣ್ಯವನ್ನು ಒಪ್ಪದವರು ನಾಸ್ತಿಕರು; ಶೈವ, ವೈಷ್ಣವ, ಶಾಕ್ತಮುಂತಾದ ತಂತ್ರ(ಆಗಮ)ಗಳನ್ನು ಪ್ರಮಾಣವೆಂದು ಒಪ್ಪುವವರು ತಾಂತ್ರಿಕರು ಅಥವಾ ಆಗಮಿಕರು. ಈ ಮೂರು ಮತದವರಲ್ಲಿ ಆರು ಆರು ಪ್ರಭೇದಗಳಿವೆ. ಸಾಂಖ್ಯ ಯೋಗ- ವೈಶೇಷಿಕ, ನೈಯಾಯಿಕ ಮೀಮಾಂಸಕ, ವೇದಾಂತ–ಈ ಆರೂ ಆಸ್ತಿಕಮತಗಳು; ಚಾರ್ವಾಕ, ಬೌದ್ಧರ ನಾಲ್ಕು ಮತಗಳು,– ಜೈನ ಈ ಆರೂ ನಾಸ್ತಿಕಮತಗಳು; ಶೈವ, ವೈಷ್ಣವ, ಶಾಕ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಾಹ್ಮ,ಗಾಣಾಪತ್ಯ ಕಾಪಾಲಿಕವೆಂಬ ಆರು ತಾಂತ್ರಿಕಮತಗಳು, ಸಂಗ್ರಹವಾಗಿ ಹೇಳುವುದಾವರೆ,—ಚಾರ್ವಾಕ, ಬೌದ್ಧ, ಜೈನ–ಎಂದು ನಾಸ್ತಿಕಮತಗಳು ಮೂರು ಸಾಂಖ್ಯ, ನ್ಯಾಯ, ವೈಪಿಕ–ಎಂದು ಆಸ್ತಿಕಮತಗಳು ಮೂರು; ಶೈವ, ವೈಷ್ಣವ, ಶಾಕ್ತ ಎಂದು ತಾಂತ್ರಿಕಮತಗಳು ಮೂರು; ಇತರಮತಗಳು ಇವುಗಳ ಅವಾಂತರ-ಭೇದಮಾತ್ರಗಳಾಗಿವೆ.

ಇವರಲ್ಲಿ ನಾಸ್ತಿಕರೂ ತಾಂತ್ರಿಕರೂ ವೇದವನ್ನು ಪ್ರಮಾಣವೆಂದು ಅಂಗೀಕರಿಸುವುದಿಲ್ಲ. ಚಾರ್ವಕರಿಗೆ ಬೃಹಸ್ಪತಿಪ್ರಣೀತವಾದ ಚಾರ್ವಾಕಸೂತ್ರಗಳು ಪ್ರಮಾಣಗಳು; ಬೌದ್ಧರಿಗೆ ಬುದ್ಧನ ವಚನಗಳು ಪ್ರಮಾಣಗಳು;ಜೈನರಿಗೆ ಜಿನನ ವಾಕ್ಯಗಳು ಪ್ರಮಾಣಗಳು; ಶೈವರಿಗೆ ಶಿವಪ್ರೋಕ್ತಾಗಮಗಳೂ, ವೈಷ್ಣವರಿಗೆ ವಿಷ್ಣ್ವಾಗಮಗಳೂ,ಶಾಕ್ತರಿಗೆ ಶಾಕ್ತಾಗಮಗಳೂ ಪ್ರಮಾಣಗಳಾಗಿವೆ. ಇವೆಲ್ಲ ಪೌರುಷೇಯಗಳಾದ್ದರಿಂದ, ಅತೀಂದ್ರಿಯವಾದ ತತ್ತ್ವದ ವಿಷಯದಲ್ಲಿ ಪ್ರಮಾಣಗಳಾಗಲಾರವು. ಪಾಶ್ಚಾತ್ಯದೇಶಗಳ ಕ್ರಿಶ್ಚಿಯನರಮತ, ಮಹಮದೀಯರಮತ–ಮುಂತಾದುವುಗಳೂ ಸಹ ನಾಸ್ತಿಕಮತಗಳಲ್ಲಿಯೋ, ತಾಂತ್ರಿಕಮತಗಳಲ್ಲಿಯೋ ಸೇರತಕ್ಕವುಗಳು. ಈ ಮತಗಳನ್ನು ಈಶ್ವರನೆ ಪ್ರಚಾರಮಾಡಿದ್ದಾನೆಂದು ಅವರುಗಳು ನಂಬಿದ್ದರೂ ವೇದದಂತೆ ನಿಶ್ಚಿತವಾದ ಅಪೌರುಷೇಯತ್ವವು ಇಲ್ಲದಿರುವುದರಿಂದ,ಅವುಗಳು ಸರ್ವದಾನಿರ್ದುಷ್ಟ ಪ್ರಮಾಣಗಳೆನಿಸಲಾರವು

ಆಸ್ತಿಕಮತಗಳಲ್ಲಿ ಸಾಂಖ್ಯರೂ, ವೈಶೇಷಿಕರೂ ವೇದದ ಪ್ರಾಮಾಣ್ಯವನ್ನು ಒಪ್ಪುವರಾದರೂ, ವೇದಕ್ಕೆ ಮುಖ್ಯವಾದ ಪ್ರಾಮಾಣ್ಯವನ್ನು ಅಂಗೀಕರಿಸುವುದಿಲ್ಲ. ಮತ್ತೇನೆಂದರೆ, ತಮತಮಗೆ ಸಮ್ಮತವಾದ **ತರ್ಕ** (ಯುಕ್ತಿ) ಯಿಂದ ಒಂದು ಸಿದ್ಧಾಂತವನ್ನು ನಿಶ್ಚಯಿಸಿಕೊಂಡು. ವೇದವೂ ತಮ್ಮ ಸಿದ್ಧಾಂತವನ್ನೇ ಹೇಳುತ್ತದೆಂದು ತೋರಿಸಿಕೊಡಲು, ವೇದವಾಕ್ಯಕ್ಕೆ ತಮಗೆ ಅನುಗುಣವಾಗಿ ಅರ್ಥಗಳನ್ನು ಕಲ್ಪಿಸುತ್ತಾರೆ. ಆದುದರಿಂದ ವಸ್ತುತಃ ವಿಚಾರಮಾಡಿದರೆ, ಇತರ ನಾಸ್ತಿಕತಾಂತ್ರಿಕಮತದವರಂತೆ ಇವರುಗಳೂ ತರ್ಕಪ್ರಧಾನರಾದ ತಾರ್ಕಿಕಮತದವರೇ ಹೊರತು, ವೈದಿಕರಂತೆ ವೇದಪ್ರಧಾನರಾದವರಲ್ಲ.

ಶ್ರೀಭಗವತ್ಪಾದರಿಂದ ಈಚಿನವರಾದ ದ್ವೈತವಿಶಿಷ್ಟಾದ್ವೈತದ್ವೈತಾದ್ವೈತ-ಮುಂತಾದಮತದವರೂ ಸಹ, ಪಾಂಚರಾತ್ರಾದಿತಂತ್ರಗಳನ್ನು ಪ್ರಧಾನವಾಗಿ ಪ್ರಮಾಣವೆಂದು ಸ್ವೀಕರಿಸಿ, ಅಲ್ಲಿ ಹೇಳಿರುವ ಸಿದ್ಧಾಂತಕ್ಕೆ ಸರಿಯಾಗಿ ವೇದಕ್ಕೆ ವ್ಯಾಖ್ಯಾನ-ಮಾಡಲು ಪ್ರಯತ್ನಿಸಿದ್ದಾರೆ. ಆದುದರಿಂದ, ಈ ಮತಗಳಲ್ಲಿ ಪರಸ್ಪರವಿರುದ್ಧಗಳಾದ ಅಭಿಪ್ರಾಯಗಳೇ ಕಂಡುಬರುತ್ತಿರುವುದು ಸಹಜವಾಗಿದೆ. ವೇದವನ್ನೇ ಮುಖ್ಯಪ್ರಮಾಣವಾಗಿ ಒಪ್ಪಿದ್ದರೆ, ಹೀಗೆ ಭಿನ್ನಾಭಿಪ್ರಾಯಗಳಿಗೆ ಅವಕಾಶವಿರುತ್ತಿರಲಿಲ್ಲ. ಆದಕಾರಣ ಶ್ರುತಿಯನ್ನೇ ಪ್ರಧಾನಪ್ರಮಾಣವನ್ನಾಗಿ ಅಂಗೀಕರಿಸುವ ಶ್ರೀಭಗವತ್ಪಾದರ ಮತವೇ ಪಾರಮಾರ್ಥಿಕಪ್ರಾಮಾಣಿಕವೈದಿಕಮತವೆಂದು ಸಿದ್ಧವು!

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡುವ ಕುಂಬಾರನಂತೆ ಚೇತನನಾದ ಪರಮಾತ್ಮನು ಜಗತ್ತಿಗೆ ನಿಮಿತ್ತಕಾರಣನೆಂದೂ ತಿಳಿಯುಬರುವುದು. ಹೀಗೆ ಪರಮಾತ್ಮನು ಜಗತ್ತಿಗೆ ನಿಮಿತ್ತ ಮತ್ತು ಉಪಾದಾನ-ಎಂಬ ಎರಡುವಿಧ ಕಾರಣವೂ ಆಗಿದ್ದಾನೆ; ಇದನ್ನೇ- "ಬ್ರಹ್ಮವು ಜಗತ್ತಿಗೆ ಅಭಿನ್ನನಿಮಿತ್ತೋಪಾದಾನಕಾರಣ"- ಎಂದು ಹೇಳುತ್ತಾರೆ,

ಕಾರ್ಯಕಾರಣಗಳ ಸಂಭಂಧವನ್ನು ಸರಿಯಾಗಿ ತಿಳಿಯುವುದು ತತ್ವನಿರ್ಣಯಕ್ಕೆ ಆವಶ್ಯಕವು. ಕಾರ್ಯಕಾರಣಗಳಿಗೆ ಅನನ್ಯತ್ವರೂಪವಾದ ಸಂಬಂಧವಿದೆ; ಎಂದರೆ, ಕಾರ್ಯವು ಕಾರಣಕ್ಕೆ ಅನನ್ಯವಾದುದು, ಅನ್ಯವಾದುದಲ್ಲ. 'ಅನ್ಯ' ಎಂದರೆ ಸ್ವತಂತ್ರಸತ್ತಾಕವಾದುದು- ಎಂದರ್ಥ. ಕಾರಣವಸ್ತುವನ್ನು ಬಿಟ್ಟು ಕಾರ್ಯವು ಬೇರೆಯಾಗಿ; ಸ್ವತಂತ್ರವಾಗಿ, ಇರುವುದಿಲ್ಲ; ಮಣ್ಣನ್ನು ಬಿಟ್ಟು ಗಡಿಗೆಯು ಬೇರೆ, ಸ್ವತಂತ್ರ ವಸ್ತುವಲ್ಲ; ಮಣ್ಣೇ ಗಡಿಗೆಯ ರೂಪದಿಂದ ಕಾಣಬರುತ್ತದೆ; ಗಡಿಗೆಯು ಮಣ್ಣೇ ಹೊರತು, ಬೇರೆ ವಸ್ತುವಲ್ಲ;-ಎಂದರೆ, ಗಡಿಗೆಯು ಮಣ್ಣಿಗೆ ಅನನ್ಯ; ಅನ್ಯವಲ್ಲ.

ಇದರಂತೆ

ಕಾರ್ಯಮಾಕಾಶಾದಿಕಂ ಬಹುಪ್ರಪಂಚಂ ಜಗತ್: ಕಾರಣಂ ಪರಂ ಬ್ರಹ್ಮ; ತಸ್ಮಾತ್ಕಾರಣಾತ್ಪರಮಾರ್ಥತೋಽನನ್ಯತ್ವಂ, ವ್ಯತಿರೇಕೇಣಾಭಾವಃ ಕಾರ್ಯಸ್ಯಾವಗಮ್ಯತೇ । (ಸೂ. ೨. ೧. ೧೪):ನ ಕಾರಣಾದನ್ಯತ್ವಾತ್ಕಾರ್ಯಂ ವರ್ಷಶತೇನಾಪಿ ಶಕ್ಯಂ ನಿಶ್ಚೇತುಂ (ಸೂ. ೩. ೧. ೧೮)

ಆಕಾಶಮೊದಲಾಗಿ ಬಹುವಿಸ್ತಾರವಾದ ಈ ಪ್ರಪಂಚವು ಕಾರ್ಯವಾಗಿದೆ, ಇದಕ್ಕೆ ಕಾರಣವು ಪರಬ್ರಹ್ಮವು. ಕಾರಣವಾದ ಪರಬ್ರಹ್ಮದಿಂದ ಕಾರ್ಯವಾದ ಜಗತ್ತು ಪರಮಾರ್ಥವಾಗಿ ಅನನ್ಯವಾಗಿದೆ-ಬ್ರಹ್ಮವನ್ನು ಬಿಟ್ಟು, ಸ್ವತಂತ್ರವಾದ ಸ್ವರೂಪವಿಲ್ಲ-ದುದಾಗಿದೆ-ಎಂದು ತಿಳಿಯುಬರುವುದು. ನೂರಾರುವರ್ಷಗಳು ಕುಳಿತು ತರ್ಕಮಾಡಿ-ದರೂ ಕಾರ್ಯವು ಕಾರಣಕ್ಕೆ ಬೇರೆಯಾದುದು, ಸ್ವತಂತ್ರಸ್ವರೂಪವುಳ್ಳದ್ದು, ಎಂಬುದನ್ನು ನಿಶ್ಚಯಿಸಲು ಯಾರಿಂದಲೂ ಸಾಧ್ಯವಿಲ್ಲ.

ಯಾವುದು ಸ್ವತಂತ್ರವಾದ ಸ್ವರೂಪವುಳ್ಳದ್ದೋ ಅದು ಸತ್ಯವೆನಿಸುವುದು; ಸ್ವತಂತ್ರಸ್ವರೂಪವಿಲ್ಲದ್ದು ಅಸತ್ಯ, ಅನೃತ, ಮಿಥ್ಯಾ-ಎಂದು ಹೇಳಲ್ಪಡುವುದು. ಆದುದರಿಂದ-ಸ್ವತಂತ್ರಸ್ವರೂಪವುಳ್ಳ ಕಾರಣವಸ್ತುವೇ ಸತ್ಯವಾದುದು; ಅಂಥಸ್ವರೂಪ-ವಿಲ್ಲದ ಕಾರ್ಯವು 'ಮಿಥ್ಯಾ'-ಎಂದು ಸಿದ್ಧವಾಗುವುದು. ಆದಕಾರಣ, ಸರ್ವಜಗನ್ಮೂಲ ಕಾರಣವಾದ ಬ್ರಹ್ಮವೊಂದೇ ಪರಮಾರ್ಥಸತ್ಯವಸ್ತು; ಅದರ ಕಾರ್ಯವಾದ ದ್ವೈತ-

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಪಂಚವೆಲ್ಲವೂ ಮಿಥ್ಯಾಭೂತವಾದುದು. ಬ್ರಹ್ಮಕ್ಕೆ ಬೇರೆಯಾಗಿ ಸತ್ಯವಾದುದು ಯಾವುದೂ ಇಲ್ಲವಾದ್ದರಿಂದ, ಬ್ರಹ್ಮವು ಅದ್ವಿತೀಯವೆಂದು ಸಿದ್ಧಿಸುತ್ತದೆ; "ಬ್ರಹ್ಮ **ಸತ್ಯಂ ಜಗನ್ಮಿಥ್ಯಾ**"– ಎಂಬುದು ವೇದಾಂತಸಿದ್ಧಾಂತವು.

"ಜಗತ್ತಿಗೆ ಬ್ರಹ್ಮವೇ ಅಭಿನ್ನನಿಮಿತ್ತೋಪಾದಾನಕಾರಣವೆಂದು ನಿಶ್ಚಿತವಾದರೆ, ಬ್ರಹ್ಮವು ಅದ್ವಿತೀಯವೆಂದು ಸಿದ್ಧಿಸುತ್ತದೆ; ಬ್ರಹ್ಮವು ಜಗತ್ತಿಗೆ ಉಪಾದಾನಕಾರಣವೆಂಬುದು ಸರಿಯಲ್ಲವೆಂದು"– ವಾದಿಗಳು ನಾನಾವಿಧವಾಗಿ ಆಕ್ಷೇಪಿಸುತ್ತಾರೆ. ಇವುಗಳನ್ನು ಪರಿಹರಿಸಿ, ಬ್ರಹ್ಮವೇ ಜಗತ್ತಿಗೆ ಉಪಾದಾನಕಾರಣವೆಂಬುದನ್ನು ಶ್ರೀಭಗವತ್ಪಾದರು ಪ್ರತಿಪಾದಿಸಿದ್ದಾರೆ. ಇವರಲ್ಲಿ ಕೆಲವು ವಿಷಯಗಳನ್ನು ಇಲ್ಲಿ ತಿಳಿಸುತ್ತೇವೆ:-

೧ "ಜಗತ್ತಿಗೆ ಕಾರಣವೇ ಬೇಡ; ಸ್ವಭಾವವಾಗಿಯೇ ಜಗತ್ತು ಹೀಗೆ ಇದೆ"- ಎಂದು ಕೆಲವರು ನಾಸ್ತಿಕರೂ, ಸ್ವಭಾವವಾದಿಗಳೂ ಹೇಳುತ್ತಾರೆ. ಇದು ಸರಿಯಲ್ಲ; **ಘಟರುಚಕಾದ್ಯರ್ಥಿಭಿಃ ಪ್ರತಿನಿಯತಾನಿ ಕಾರಣಾನ್ಯುಪಾದೀಯಮಾನಾನ್ಯುಪಲಭ್ಯಂತೇ। (ಸೂ.೨.೧.೧೮)** ಗಡಿಗೆ, ಆಭರಣ–ಇವುಗಳನ್ನು ಬೇಕೆಂಬುವವರು- ಅದದಕ್ಕೆ ಬೇಕಾದ ಮಣ್ಣು, ಚಿನ್ನ ಮುಂತಾದ ಕಾರಣಗಳನ್ನು ತೆಗೆದುಕೊಳ್ಳುತ್ತಾರೆ. ಗಡಿಗೆ ಬೇಕೆಂಬುವರು ಹಾಲನ್ನು ತೆಗೆದುಕೊಳ್ಳುವುದಿಲ್ಲ; ಮೊಸರು ಬೇಕೆಂಬುವವರು ಮಣ್ಣನ್ನು ತೆಗೆದುಕೊಳ್ಳುವುದಿಲ್ಲ; ಮಣ್ಣಿನಿಂದಲೇ ಗಡಿಗೆಯು ಆಗುತ್ತದೆ. ಮೊಸರಾಗುವುದಿಲ್ಲ; ಹಾಲಿನಿಂದಲೇ ಮೊಸರು ದೊರೆಯುತ್ತದೆ ಗಡಿಗೆಯಲ್ಲ; ಕಾರ್ಯಕ್ಕೆ ಕಾರಣವೇ ಬೇಡವೆಂದಾದರೂ ಸ್ವಭಾವದಿಂದಲೇ ಕಾರ್ಯವಾಗುವುದೆಂದಾದರೂ, ಲೋಕಸಿದ್ಧವಾದ ಈ ಕಾರ್ಯಕಾರಣನಿಯಮಕ್ಕೆ ಹಾನಿಯಾಗುತ್ತದೆ. ಆದ್ದರಿಂದ ಲೋಕಪ್ರಸಿದ್ಧಿಯಿರುವಂತೆ ಪ್ರತಿಕಾರ್ಯಕ್ಕೂ, ಅದಕ್ಕೆ ಬೇಕಾದ ಬೇರೆ ಬೇರೆ ಉಪಾದಾನಕಾರಣವು ಇರಲೇಬೇಕೆಂದು ನಿಶ್ಚಿತವಾಗುವುದು. ಸ್ವಭಾವದಿಂದಲೇ ಇದೆಲ್ಲ ಆಗಿರುವುದೆಂದು ಹೇಳುವುದು ಯುಕ್ತವಾಗದು **'ನ ಚ ಸ್ವಭಾವತಃ; ವಿಶಿಷ್ಟದೇಶಕಾಲನಿಮಿತ್ತಾನಾಮಿಹೋಪಾದಾನಾತ್।' (ಸೂ-೧.೧.೨.)** ಆಯಾ, ದೇಶಕಾಲ.ನಿಮಿತ್ತಗಳನ್ನು ಅನುಸರಿಸಿಯೇ ಆಯಾಕಾರ್ಯಗಳಾಗುತ್ತವೆ; ಸ್ವಭಾವದಿಂದಲೇ ಕಾರ್ಯವಾಗುವುದಾದರೆ, ದೇಶ, ಕಾಲ ನಿಮಿತ್ತ ಪ್ರಯತ್ನಾದಿಗಳು ಯಾವುವೂ ಬೇಡವೆಂದಾಗುವುವು. ಆದರಿಂದ ಕಾರ್ಯವಾದ ಸಮಸ್ತಜಗತ್ತಿಗೂ ಕಾರಣವನ್ನು ಇದೆಯೆಂದು ಒಪ್ಪಬೇಕು.

೨. "ಜಗತ್ತಿಗೆ ಕಾರಣವು ಬೇಕು; ಅದು ಅಸತ್ತು"-ಎಂದು ಬೌದ್ಧರು ಹೇಳುತ್ತಾರೆ. ಅಸತ್ತಿನಿಂದಲೇ ಜಗತ್ತೆಲ್ಲವೂ ಹುಟ್ಟಿರುವುದೆಂದು ಬೌದ್ಧರ ಮತವು. ಕ್ರೈಸ್ತರೂ ಹೀಗೆಯೇ ಹೇಳುತ್ತಾರೆ – 'God created the world out of Nothing'–"ಅಸತ್ತಿನಿಂದಲೇ ದೇವರು ಜಗತ್ತನ್ನು ನಿರ್ಮಿಸಿದನು"ಎಂದು. ಇದು ಅಸಂಗತವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಭಾವಾಚ್ಚ ಭಾವೋತ್ಪತ್ತೌ, ಅಭಾವಾನ್ವಿತಮೇವ ಸರ್ವಂ ಕಾರ್ಯಂ ಸ್ಯಾತ್; ನ ಚೈವಂ ದೃಶ್ಯತೇ-ಸರ್ವಸ್ಯ ಚ ವಸ್ತುನಃ ಸ್ವೇನ ಸ್ವೇನ ರೂಪೇಣ ಭಾವಾತ್ಮನೈವೋಪಲಭ್ಯಮಾನತ್ವಾತ್। ನ ಚ ಮೃದನ್ವಿತಾಃ ಶರವಾದಯೋ ಭಾವಾಸ್ತಂತ್ವಾದಿವಿಕಾರಾಃ ಕೇನಚಿದುಪಲಭ್ಯಂತೇ; ಮೃದ್ವಿಕಾರನೇವ ತು ಮೃದನ್ವಿತಾನ್ ಭಾವಾರ್ನ್ ಲೋಕಃ ಪ್ರತ್ಯೇತಿ।(ಸೂ.೨.೨.೨೬)

ಅಸತ್ತು ಜಗತ್ತಿಗೆ ನಿಮಿತ್ತಕಾರಣವೋ, ಉಪಾದಾನಕಾರಣವೋ? ಚೇತನವೇ ನಿಮಿತ್ತಕಾರಣವಾಗುವುದರಿಂದ, ಅಸತ್ತು ಅಚೇತನವಾದ್ದರಿಂದ, ಅದು ನಿಮಿತ್ತಕಾರಣ-ವಾಗುವಹಾಗಿಲ್ಲ. ಉಪಾದಾನಕಾರಣವಸ್ತುವು ಕಾರ್ಯಗಳಲ್ಲಿ ಅನುಗತವಾಗಿ ತೋರಿ-ಬರುತ್ತಿರುವುದು; ಅಸತ್ತೇ ಜಗತ್ತಿಗೆ ಉಪದಾನಕಾರಣವೆಂದಾದರೆ ಎಲ್ಲ ವಸ್ತುಗಳೂ 'ಅಸತ್ ಅಸತ್'-ಎಂದೇ ತೋರಿಬರಬೇಕಾಗುವುದು. ಆದರೆ ಎಲ್ಲ ವಸ್ತುವೂ 'ಇದೆ ಇದೆ ಎಂದು ಸದ್ರೂಪವಾಗಿಯೇ ತಿಳಿದುಬರುತ್ತದೆ. "ಮಣ್ಣಿನ ಗಡಿಗೆ- ಮಣ್ಣಿನ ಹರವಿ" ಎಂದು ತೋರಿಬರುವ ಗಡಿಗೆಹರವಿಗಳನ್ನು ನೂಲಿನ ಕಾರ್ಯಗಳೆಂದು ಯಾರೂ ತಿಳಿಯುವುದಿಲ್ಲ; ಮಣ್ಣಿನಕಾರ್ಯಗಳನ್ನೇ -ಮಣ್ಣಿನ ಗಡಿಗೆ, ಮಣ್ಣಿನ ಹರವಿ ಎಂದು ಎಲ್ಲರೂ ತಿಳಿಯುತ್ತಾರೆ. ಆದ್ದರಿಂದ-'ಇದೆ ಇದೆ'-ಎಂದು ಸದ್ರೂಪವಾಗಿ ತೋರಿಬರುವ ಜಗತ್ತಿಗೆ ಸದ್ರೂಪವಾದುದೇ ಕಾರಣವಾಗಿರಬೇಕೇ ಹೊರತು, ಅಸತ್ತು ಕಾರಣವಲ್ಲ.

೩. ಜಗತ್ತಿಗೆ ಅಚೇತನವೇ ಉಪಾದಾನಕಾರಣವೆಂದು ಸಾಂಖ್ಯರು ಅಭಿಪ್ರಾಯ-ಪಡುತ್ತಾರೆ. "ಕಾರ್ಯಕಾರಣಗಳಿಗೆ ಸಮಾನಸ್ವಭಾವವಿರಬೇಕು; ಮಣ್ಣಿನ ಕಾರ್ಯಕ್ಕೆ ಮಣ್ಣು ಕಾರಣವು; ಜಗತ್ತೆಲ್ಲ ಅಚೇತನವಾಗಿರುವುದರಿಂದ ಅಚೇತನವೇ ಇದಕ್ಕೆ ಕಾರ-ಣವು"—ಎಂದು ಅವರ ವಾದ. ಇದೂ ಸಮಂಜಸವಾಗುವುದಿಲ್ಲ.

ನಾಚೇತನಂ ಲೋಕೇ ಸ್ವತಂತ್ರಂ ಕಿಂಚಿದ್ವಿಶಿಷ್ಟಪುರುಷಾರ್ಥನಿರ್ವರ್ತ-ನಸಮರ್ಥಾನ್ವಿಕಾರಾನ್ವಿರಚಯದ್ದೃಷ್ಟಂ। (ಸೂ.೨.೨.೧)

ನ ಹಿ ಮೃಪಾದಯೋ ರಥಾದಯೋ ವಾ ಸ್ವಯಮಚೇತನಾಃ ಸಂತಃ ಚೇತನೈಃ ಕುಲಾಲಾದಿಭಿರಶ್ವಾದಿಭಿರ್ವಾನಧಿಷ್ಠಿತಾ ವಿಶಿಷ್ಟಕಾರ್ಯಾಭಿ-ಮುಖಪ್ರವೃತ್ತಯೋ ದೃಶ್ಯಂತೇ।(ಸೂ.೨.೨.೨)

ಅಚೇತನಕ್ಕೆ ಸ್ವತಃಪ್ರವೃತ್ತಿಯೇ ಸಂಭವಿಸುವುದಿಲ್ಲ; ಹೀಗಿರುವಾಗ ಆಯಾದೇಶ-ಕಾಲಗಳಿಗೆ ತಕ್ಕಂತೆ ಅವರವರಿಗೆ ಬೇರೆಬೇರೆಯಾಗಿ ಸುಖದುಃಖಗಳನ್ನು ಉಂಟುಮಾ-ಡುವಂಥ ವಸ್ತುಗಳನ್ನು ಸೃಷ್ಟಿಮಾಡುವ ಸಾಮರ್ಥ್ಯವು ಅಚೇತನಕ್ಕೆ ಎಲ್ಲಿ ಬಂತು?

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಂಬಾರ,ಕುದರೆ—ಮುಂತಾದ ಚೇತನದ ಸಂಬಂಧವಿಲ್ಲದೆ, ಮಣ್ಣು, ರಥ. ಮುಂತಾದ ಅಚೇತನಗಳು ತಾವಾಗಿಯೇ ಪ್ರಯೋಜನಕರವಾದ ಕ್ರಿಯೆಯನ್ನು ಮಾಡಲು ಶಕ್ತವಾಗುತ್ತವೆಯೆ?

ಆದ್ದರಿಂದ ಚೇತನಬ್ರಹ್ಮವೇ ಜಗದುಪಾದಾನಕಾರಣವೆಂಬುದು ಯುಕ್ತವಾಗಿದೆ.

೪. "ಅಚೇತನಕ್ಕೆ ಸ್ವತಃ ಪ್ರವೃತ್ತಿಯಾಗದೇ ಇದ್ದರೂ. ಕುಂಬಾರ—ಮೊದಲಾದವರ ಪ್ರೇರಣೆಯಿಂದ ಅಚೇತನವಾದ ಮಣ್ಣು—ಮುಂತಾದವು ಗಡಿಗೆ—ಮುಂತಾದ ಕಾರ್ಯಗಳನ್ನು ಉಂಟುಮಾಡುವಂತೆ, ಚೇತನನಾದ ಈಶ್ವರನಿಂದ ಪ್ರೇರಿತವಾದ ಅಚೇತನವು ಜಗತ್ತನ್ನು ಉಂಟುಮಾಡಿದೆಯೆಂದು ಹೇಳುವುದರಲ್ಲಿ ಬಾಧಕವೇನು?"— ಎಂದು ಯೋಗಮತದವರೂ, ತಾರ್ಕಿಕರೂ ಕೇಳುತ್ತಾರೆ. ಸಾಂಖ್ಯರಂತೆ ಪ್ರಧಾನವೆಂಬ ದೊಡ್ಡ ಅಚೇತನವೇ ಜಗತ್ತಿಗೆ ಉಪಾದಾನಕಾರಣವೆಂದು ಯೋಗಮತದವರು ಒಪ್ಪಿಕೊಂಡು, ಈಶ್ವರನು ಪ್ರಧಾನದಿಂದ ಜಗತ್ತನ್ನು, ಕುಂಬಾರನು ಮಣ್ಣಿನಿಂದ ಗಡಿಗೆಯನ್ನು ಹೇಗೋ ಹಾಗೆ, ಸೃಷ್ಟಿಸುತ್ತಾನೆಂದು ಹೇಳುತ್ತಾರೆ. ಈಶ್ವರನು ಪರಮಾಣುಗಳೆಂಬ ಅತ್ಯಂತಚಿಕ್ಕವಸ್ತುಗಳಿಂದ ಜಗತ್ತನ್ನು ಸೃಷ್ಟಿಸುತ್ತಾನೆಂದು ತಾರ್ಕಿಕರ ಅಭಿಪ್ರಾಯವು. ಇದೂ ನಿರ್ದುಷ್ಟವಾಗುವುದಿಲ್ಲ.

ಈಶ್ವರಸ್ಯ ಪ್ರಧಾನಪುರುಷಯೋರಧಿಷ್ಠಾತೃತ್ವೇನ ಜಗತ್ಕಾರಣತ್ವಂ ನೋಪಪದ್ಯತೇ; ಅಸಾಮಂಜಸ್ಯಾತ್ । ಹೀನಮಧ್ಯಮೋತ್ತಮಭಾವೇನ ಪ್ರಾಣಿಭೇದಾನ್ವಿದಧತ ಈಶ್ವರಸ್ಯ ರಾಗದ್ವೇಷಾದಿದೋಷಪ್ರಸಕ್ತೇರಸ್ಮದಾದಿವದನೀಶ್ವರತ್ವಂ ಪ್ರಸಜ್ಯೇತ । (ಸೂ. ೨.೨. ೩೭)

ಪ್ರಧಾನದಿಂದಾಗಲಿ, ಪರಮಾಣುಗಳಿಂದಲಾಗಲಿ, ಈಶ್ವರನು ಸ್ವತಂತ್ರನಾಗಿ ಜಗತ್ತನ್ನು ನಿರ್ಮಿಸುತ್ತಾನೆಂದು ಹೇಳಿದರೆ, ಸುಖದುಃಖಾದಿತಾರತಮ್ಯವುಳ್ಳ ಜಗತ್ತನ್ನು ಸ್ವೇಚ್ಛೆಯಾ ಈಶ್ವರನು ಸೃಷ್ಟಿಸುತ್ತಾನೆಂದಾಗಿ, ಅವನಿಗೆ ರಾಗದ್ವೇಷಾದಿದೋಷಗಳು ಅಪರಿಹಾರ್ಯವಾಗುವುವು; **ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ। (ಗೀ.೯.೨೯)** "ನಾನು ಎಲ್ಲರಿಗೂ ಸಮನಾಗಿದ್ದೇನೆ; ನನಗೆ ಯಾರೂ ಇಷ್ಟರು ದ್ವೇಷ್ಯರು ಎಂದು ಇಲ್ಲ"—ಎಂಬ ಈಶ್ವರನ ಈಶ್ವರತ್ವಕ್ಕೆ ಲೋಪವುಂಟಾಗುತ್ತದೆ. ಜೀವರು ಮಾಡಿದ ಕರ್ಮಗಳಿಗೆ ತಕ್ಕ ಫಲವನ್ನು ಕೊಡುವುದರಿಂದ ಈಶ್ವರನಿಗೆ ದೋಷವಿಲ್ಲವೆಂದು ಹೇಳಿದರೆ, ಅಂಥ ರಾಜಾದಿಗಳಂತೆ ಈಶ್ವರನೂ, ಕರ್ಮಪ್ರೇರ್ಯನೆಂದಾಗುವನು. ಬೀಜಾಂಕುರದಂತೆ ಅನಾದಿಯೆಂದು ಹೇಳುವುದು ಪ್ರಮಾಣಶೂನ್ಯವಾಗುವುದು.

ಈಶ್ವರನನ್ನು ಒಪ್ಪದೆ, ಕೇವಲ ಪರಮಾಣುಗಳಿಂದಲೇ ಜಗತ್ತು ಆಗಿರುವುದೆಂದು ಈಚಿನ ವೈಜ್ಞಾನಿಕರು ಹೇಳುತ್ತಾರೆ; ಇದು ಸ್ವಭಾವವಾದವೇ ಆಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಚೇತನವಾಗಿರುವ ಬ್ರಹ್ಮವು ಜಗತ್ತಿಗೆ ಅಭಿನ್ನನಿಮಿತ್ತೋಪಾದಾನಕಾರಣವೆಂಬುದು ಹೀಗೆ ಪ್ರಾಮಾಣಿಕವಾಗಿ ಸಮಂಜಸವಾಗಿದೆ. ಆದರೂ ಕೆಲವರುಇದನ್ನು ಸರಿಯಲ್ಲವೆಂದು ಆಕ್ಷೇಪಿಸುತ್ತಾರೆ: ಅವರ ಆಕ್ಷೇಪಗಳು ಹೀಗಿವೆ—

೧. ಚೇತನವನ್ನು ನಿಮಿತ್ತಕಾರಣವಾಗಿಯೇ ಲೋಕದಲ್ಲಿ ನೋಡಿದ್ದೇವೆ; ಚೇತನ-ಬ್ರಹ್ಮವು ಜಗತ್ತಿಗೆ ಉಪಾದಾನಕಾರಣವೆಂಬುದು ಹೇಗೆ ಯುಕ್ತವಾಗುವುದು?

೨. ಕಾರ್ಯಕಾರಣಗಳು ಸಮಾನಲಕ್ಷಣವಾಗಿರಬೇಕು; ಮಣ್ಣಿನಿಂದಾಗಿರುವ ಘಟವು ಮಣ್ಣಾಗಿಯೇ ಇರುತ್ತದೆ. ಚೇತನದಿಂದ ಹುಟ್ಟಿದ್ದ ಜಗತ್ತು ಚೇತನವೇ ಆಗಿ-ರಬೇಕಿತ್ತು. ಜಗತ್ತು ಅಚೇತನವಾಗಿರುವುದರಿಂದ, ಇದರ ಉಪಾದಾನಕಾರಣವು ಅಚೇ-ತನವೇ ಆಗಿರಬೇಕು; ಚೇತನಬ್ರಹ್ಮವು ಜಡಜಗತ್ತಿಗೆ ಉಪಾದಾನಕಾರಣವೆಂಬುದು ಸರಿಯಲ್ಲ.

೩. ಜಗತ್ತು ಕಾರ್ಯವಾದ ಮಾತ್ರಕ್ಕೆ ಮಿಥ್ಯಾ ಎಂಬುದು ಹೇಗೆ? ಮಣ್ಣಿನ ಕಾರ್ಯವಾದ ಮಾತ್ರಕ್ಕೆ ಘಟವು ಅಸತ್ಯವೇ? ಪ್ರತ್ಯಕ್ಷಾದಿಪ್ರಮಾಣಗಳಿಂದ ತಿಳಿದು-ಬರುತ್ತಾ, ಎಲ್ಲವ್ಯವಹಾರಕ್ಕೂ ಆಸ್ಪದವಾಗಿರುವ ಪ್ರಪಂಚವನ್ನು ಮಿಥ್ಯಾ-ಎನ್ನುವುದು ಸರಿಯಲ್ಲ-

ಈ ಆಕ್ಷೇಪಗಳು ಸರಿಯಲ್ಲವೆಂದು ಶ್ರೀಭಗವತ್ಪಾದರು ಸಮಾಧಾನ ಹೇಳಿದ್ದಾರೆ—

೧. ಶಬ್ದಮೂಲಂ ಚ ಬ್ರಹ್ಮ, ಶಬ್ದಪ್ರಮಾಣಕಂ, ನೇಂದ್ರಿಯ-ಪ್ರಮಾಣಕಂ । ತದ್ಯಥಾಶಬ್ದಮಭ್ಯುಪಗಂತವ್ಯಂ । "ಅಚಿಂತ್ಯಾಃ ಖಲು ಯೇ ಭಾವಾ ನ ತಾಂಸ್ತರ್ಕೇಣ ಯೋಜಯೇತ್ ।" ತಸ್ಮಾಚ್ಛಬ್ದ ಮೂಲ ಏವಾ ತೀಂದ್ರಿಯಾರ್ಥಯಾಥಾತ್ಮ್ಯಾವಗಮಃ । (ಸೂ. ೨. ೧ ೨೭)

'ಜಗತ್ತಿಗೆ ಕಾರಣವಾವುದು?'– ಎಂದುಮುಂತಾದವಿಷಯಗಳು ಅತೀಂದ್ರಿಯ ಗಳಾಗಿವೆ. ಅತೀಂದ್ರಿಯವಿಷಯಗಳಲ್ಲಿ ಶ್ರುತಿಯನ್ನು ಬಿಟ್ಟು ಬೇರೆ ಯಾವುದೂ ಪ್ರಮಾಣವಾಗುವುದಿಲ್ಲ. ಆದ್ದರಿಂದ ಶ್ರುತಿಯಿಂದ ತಿಳಿದುಬರುವಂತೆ ಈ ವಿಷಯವನ್ನು ತಿಳಿಯಬೇಕು. ಲೋಕದಲ್ಲಿ ಕಂಡಿಲ್ಲವೆಂಬ ಮಾತ್ರದಿಂದ, ಪ್ರಮಾಣದಿಂದ ತಿಳಿದು-ಬರುವುದನ್ನು ಸರಿಯಲ್ಲವೆಂದು ಹೇಳುವುದು ಯುಕ್ತವಲ್ಲ ಚಕ್ಷುರಿಂದ್ರಿಯಮಾತ್ರ-ದಿಂದ ತಿಳಿದುಬರುವ ರೂಪದವಿಷಯದಲ್ಲಿ, ಇತರಪ್ರಮಾಣಗಳಿಂದ ಹಾಗೆತಿಳಿದುಬರು-ತ್ತಿಲ್ಲವೆಂದು, ಸಂದೇಹಪಡುತ್ತಾರೆಯೆ? ಬ್ರಹ್ಮವು ಜಗತ್ತಿಗೆ ಅಭಿನ್ನನಿಮಿತ್ತೋಪಾದಾನ-ಕಾರಣವೆಂದು ಶ್ರುತಿಯೇ ಹೇಳುವುದರಿಂದ ಅರ್ಥವನ್ನು ಯಥಾರ್ಥವೆಂದೇತಿಳಿಯಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

೨. ಈ ಕಾರಣದಿಂದಲೇ– 'ಅಚೇತನವಾದ ಜಗತ್ತಿಗೆ ಚೇತನವಸ್ತುವು ಉಪಾದಾನಕಾರಣವು ಹೇಗೆಂಬ'–ಸಂದೇಹಕ್ಕೂ ಅವಕಾಶವಿಲ್ಲ; ಶ್ರುತಿಯಲ್ಲಿ ಹೇಳಿರುವಂತೆಯೇ ಈ ವಿಷಯವನ್ನು ತಿಳಿಯಬೇಕಾಗಿದೆ. ಇದಲ್ಲದೆ,– ಉಪಾದಾನಕಾರಣದ ಸ್ವರೂಪವು ಅದರ ಕಾರ್ಯಗಳಲ್ಲಿ ಅನುಗತವಾಗಿ ತೋರಿಬರಬೇಕೆಂಬ'– ಲೋಕನ್ಯಾಯವು, ಇಲ್ಲಿ ಸಂಗತವೂ ಆಗಿದೆ. ಹೇಗೆಂದರೆ– ಬ್ರಹ್ಮವು ಸಚ್ಚಿದಾನಂದಸ್ವರೂಪವೆಂದು ಶ್ರುತಿಯು ತಿಳಿಸುತ್ತದೆ. ಲೋಕದಲ್ಲಿ ಪ್ರತಿವಸ್ತುವೂ– 'ಘಟ ಇದೆ. ಪ್ರಕಾಶಿಸುತ್ತಿದೆ, ಇಷ್ಟವಾಗಿದೆ" ಎಂದು ತೋರಿಬರುವುದರಿಂದ– ಮಣ್ಣಿನ ಗಡಿಗೆ, ಮಣ್ಣಿನ ಹರವಿ– ಎಂದು ತೋರಿಬರುವ ಗಡಿಗೆ, ಹರವಿ ಮುಂತಾದ–ಕಾರ್ಯಗಳಿಗೆ ಮಣ್ಣು ಉಪಾದಾನವಾಗಿರುವಂತೆ, ಸಕಲಜಗತ್ತಿಗೂ ಸಚ್ಚಿದಾನಂದಸ್ವರೂಪವೇ ಉಪಾದಾನಕಾರಣವೆಂದು ಸ್ಪಷ್ಟವು. ಮತ್ತೆ-'ಬ್ರಹ್ಮದ ಚೇತನಸ್ವರೂಪವು ಜಡಜಗತ್ತಿನಲ್ಲಿ ತೋರಿಬರುತ್ತಿಲ್ಲವೇಕೆ?'- ಎಂದರೆ, ಈ ಶಂಕೆ ಸರಿಯಲ್ಲ:–

ಬ್ರಹ್ಮಣೋಽಪಿ ಸತ್ತಾಲಕ್ಷಣಃ ಸ್ವಭಾವಃ ಆಕಾಶಾದಿಷು ಅನುವರ್ತಮಾನೋ ದೃಶ್ಯತೇ । ಅತ್ಯಂತಸಾಮ್ಯೇ ಚ ಪ್ರಕೃತಿವಿಕಾರಭಾವ ಏವ ಪ್ರವಿಲೀಯೇತ । (ಸೂ. ೨. ೧. ೬.)

ಬ್ರಹ್ಮದ ಸಚ್ಚಿದ್ರೂಪವು ಆಕಾಶಾದಿಗಳಲ್ಲಿ ಅನುಗತವಾಗಿರುತ್ತಾ, ಬ್ರಹ್ಮವೇ ಜಗತ್ತಿಗೆ ಉಪಾದಾನಕಾರಣವೆಂಬುದು ಸ್ಪಷ್ಟವಾಗಿರುವಲ್ಲಿ, ಬ್ರಹ್ಮದ ಎಲ್ಲ ಸ್ವರೂಪವೂ ಜಗತ್ತಿನಲ್ಲಿ ತೋರಿಬರಬೇಕೆಂದು ಹಟಮಾಡುವ ಕಾರಣವಿಲ್ಲ. ಹಾಗಿಲ್ಲದೆ, ಕಾರಣಕಾರ್ಯಗಳಿಗೆ ಸರ್ವವಿಧದಲ್ಲಿಯೂ ಸಾಮ್ಯವಿರಬೇಕೆಂದು ಹೇಳಿದರೆ, ಕಾರ್ಯಕಾರಣ ಎಂಬ ಭೇದವೇ ಇಲ್ಲವಾಗುವುದು. ಆದ್ದರಿಂದ ಬ್ರಹ್ಮವೇ ಜಗತ್ತಿಗೆ ಅಭಿನ್ನನಿಮಿತ್ತೋಪಾದಾನಕಾರಣವೆಂಬುದು ಸಮಂಜಸವಾಗಿದೆ.

೩. "ಪ್ರತ್ಯಕ್ಷಾದಿಪ್ರಮಾಣಗಳಿಂದ ತಿಳಿದುಬರುತ್ತಾ ವ್ಯವಹಾರವಿಷಯವಾದ ಜಗತ್ತು ಮಿಥ್ಯಾ ಹೇಗೆ?"– ಎಂದು ಶಂಕಿಸುವುದೂ ಸರಿಯಲ್ಲ. ಹಗ್ಗದಹಾವು, ಕಪ್ಪೆಚಿಪ್ಪಿನಬೆಳ್ಳಿ–ಇವುಗಳು ಲೋಕದಲ್ಲಿ ತೋರಿಬರುತ್ತಿದ್ದರೂ, ಸತ್ಯವಲ್ಲವೆಂದು ಪ್ರಸಿದ್ಧವೇ ಇದೆ. ಇವು ಸತ್ಯವಲ್ಲವೇಕೆ? ಅಲ್ಲಿ ವಸ್ತುತಃ ಇರುವುದು ಹಗ್ಗ, ಕಪ್ಪೆಚಿಪ್ಪೇ ಹೊರತು ಅದಕ್ಕೆ ಬೇರೆಯಾದ ಎಂದರೆ ಸ್ವತಂತ್ರವಾದ, ಹಾವಾಗಲಿ ಬೆಳ್ಳಿಯಾಗಲಿ ಇರುವುದಿಲ್ಲ. ಎಂದರೆ, ಈ ಹಾವುಬೆಳ್ಳಿಗಳಿಗೆ ಸ್ವತಂತ್ರವಾದ ಸ್ವರೂಪವಿಲ್ಲ. ಆದ್ದರಿಂದ, ಯಾವುದಕ್ಕೆ ಸ್ವಂತವಾದ, ತನ್ನದೇ ಆದ, ಸ್ವರೂಪವಿಲ್ಲವೋ, ಅದು ತೋರಿಬರುತ್ತಿದ್ದರೂ ಸತ್ಯವಲ್ಲ. ಇದರಂತೆ, ಮಣ್ಣನ್ನು ಬಿಟ್ಟು ಗಡಿಗೆ–ಎಂಬ ಪದಾರ್ಥವು ಯಾವುದೂ ಸ್ವತಂತ್ರವಾಗಿ ಇಲ್ಲವಾದ್ದರಿಂದ, ಗಡಿಗೆ ಸತ್ಯವಸ್ತುವಲ್ಲ–ಮಿಥ್ಯಾಭೂತವಾದುದೆಂದು ತಿಳಿದುಬರುವುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ದರಿಂದ 'ಉಪಾದಾನಕಾರಣವಸ್ತುವೊಂದೇ ಸತ್ಯವು, ಅದರ ಕಾರ್ಯವೆಲ್ಲ ಮಿಥ್ಯಾ-' ಎಂದು ನಿಶ್ಚಿತವಾಗುವುದರಿಂದ,-"ಬ್ರಹ್ಮವೇ ಸತ್ಯ ಜಗತ್ತೆಲ್ಲ ಮಿಥ್ಯಾ'-ಎಂಬ ವೇದಾಂತ ಸಿದ್ಧಾಂತವು ಪ್ರಾಮಾಣಿಕವಾಗಿ ಸಮಂಜಸವಾಗಿದೆ ಶ್ರೀಭಗವತ್ಪಾದರ ಪ್ರತಿಪಾದನೆಯು ಈ ರೀತಿಯಾಗಿದೆ:

ಏಕೇನ ಮೃತ್ಪಿಂಡೇನ, ಪರಮಾರ್ಥತೋ ಮೃದಾತ್ಮನಾ ವಿಜ್ಞಾತೇನ, ಸರ್ವಂ ಮೃಣ್ಮಯಂ ಘಟಶರಾವೋದಂಚನಾದಿಕಂ ಮೃದಾತ್ಮಕತ್ವಾವಿಶೇಷಾದ್ವಿಜ್ಞಾತಂ ಭವತಿ । ಯತೋ ವಾಚಾರಂಭಣಂ ವಿಕಾರೋ ನಾಮಧೇಯಂ ವಾಚೈವ ಕೇವಲಮಾರಭ್ಯತೇ ವಿಕಾರೋ ಘಟಃ ಶರಾವ ಉದಂಚನಂ ಚೇತಿ। ನ ತು ವಸ್ತುವೃತ್ತೇನ ವಿಕಾರೋ ನಾಮ ಕಶ್ಚಿದಸ್ತಿ । ನಾಮಧೇಯಮಾತ್ರಮೇತದನೃತಂ; ಮೃತ್ತಿಕೇತ್ಯೇವ ಸತ್ಯಂ। ಬ್ರಹ್ಮವ್ಯತಿರೇಕೇಣ ಕಾರ್ಯಸ್ಯಾಭಾವಃ। (ಸೂ.೨.೧.೧೪)

ಒಂದು ಮಣ್ಣಿನ ಹೆಂಟೆಯನ್ನು ನೋಡಿ ಅದರಿಂದ ಮಣ್ಣಿನ ಸ್ವರೂಪವೂ, ಅದು ವಸ್ತುತಃ ಮಣ್ಣು ಹೊರತು ಬೇರೆ ಅಲ್ಲವೆಂದೂ ತಿಳಿದುಬರಲಾಗಿ, ಮಣ್ಣಿನಿಂದ ಆಗಿರುವ ಗಡಿಗೆ, ಹರವಿ ಮುಂತಾದುವೂ ವಸ್ತುತಃ ಮಣ್ಣಿಗಿಂತ ಬೇರೆಯಾವ ಸ್ವತಂತ್ರವಸ್ತುವಲ್ಲ, ಅದು ಕೇವಲ ಮಣ್ಣೇ ಎಂದು ತಿಳಿದುಬರುತ್ತದೆ. ಏಕೆಂದರೆ, ಮಣ್ಣಿನ ವಿಕಾರಗಳಾದ ಗಡಿಗೆ, ಮುಂತಾದುವು ವಾಚಾರಂಭಣವಾಗಿದ್ದು, ಕೇವಲ ನಾಮಮಾತ್ರವಾಗಿವೆ. ಗಡಿಗೆ, ಹರವಿ, ಉದಚನ ಎಂದು ಮುಂತಾಗಿ ಬರಿ ಹೆಸರಿನಿಂದ ವ್ಯವಹರಿಸಲ್ಪಡುತ್ತವೆಯೇ ಹೊರತು, ಅಲ್ಲಿ ಮಣ್ಣಲ್ಲದೆ ಬೇರೆ ವಸ್ತು ಏನೊಂದೂ ಇರುವುದಿಲ್ಲ; ಮತ್ತು ಮಣ್ಣು ಎಂಬ ವಸ್ತುವಿನಲ್ಲಿ ಏನೊಂದು ವಿಕಾರವೂ ಆಗಿರುವುದಿಲ್ಲ; ಆದ್ದರಿಂದ ಗಡಿಗೆ ಮುಂತಾದ ವಿಕಾರಗಳು ಕೇವಲ ನಾಮಮಾತ್ರ, ಬರೀ ಹೆಸರೇ ಆಗಿ ಅನೃತವಾಗಿವೆ, ಮಣ್ಣು ಮಾತ್ರವೇ ಅಲ್ಲಿ ಸತ್ಯವಸ್ತು; ಎಂದರೆ ಕಾರಣವಸ್ತು ಒಂದೇ ಸತ್ಯ, ಅದರ ಕಾರ್ಯಗಳೆಂದು ಪ್ರಸಿದ್ಧವಾದವು ಸತ್ಯಗಳಲ್ಲ, ಅಸತ್ಯಗಳು, ಅನೃತ ಅಥವಾ ಮಿಥ್ಯಾ. ಇದೇ ನ್ಯಾಯದಿಂದ ಸರ್ವಜಗತ್ತಿಗೂ ಕಾರಣವಾದ ಬ್ರಹ್ಮವೊಂದೇ ಸತ್ಯ; ಬ್ರಹ್ಮಕ್ಕೆ ಬೇರೆಯಾಗಿ ಸ್ವತಂತ್ರಸತ್ತೆಯಿಲ್ಲದಿರುವ ಜಗತ್ತು ಮಿಥ್ಯಾ ಎಂದು ನಿಶ್ಚಿತವಾಗುತ್ತದೆ.

"ದ್ವೈತಪ್ರಪಂಚವೆಲ್ಲ ಮಿಥ್ಯಾ ಎಂದಾದರೆ, ಅದು ವ್ಯವಹಾರಕ್ಕೆ ಬರುತ್ತಾ ಪ್ರಯೋಜನಕರವಾಗಿರುವುದು ಹೇಗೆ ಸಂಗತ?"- ಎಂದು ಅನೇಕರು ಸಂದೇಹಪಡುತ್ತಾರೆ ಇದು ಸರಿಯಲ್ಲ. ಮೊಲದ ಕೊಂಬು, ಬಂಜೆಯ ಮಗ, ಆಕಾಶಕುಸುಮ- ಮುಂತಾದುವು ವ್ಯವಹಾರಕ್ಕೆ ಬರದಂಥವು: ಇವು 'ಅಸತ್ತು'- ಎನಿಸುತ್ತವೆ. ಪ್ರಪಂಚವೆಲ್ಲ ಇಂಥ 'ಅಸತ್ತು' ಅಲ್ಲ. ಮತ್ತೇನೆಂದರೆ, 'ಅಸತ್ಯ', ಸತ್ಯವಲ್ಲ. ತ್ರಿಯೆಂದರೆ ಭೂತ, ಭವಿಷ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವರ್ತಮಾನವೆಂಬ ಮೂರು ಕಾಲದಲ್ಲಿಯೂ ಯಾವವಿಧದಿಂದಲೂ ಬಾಧಿತವಾಗದೆ, ಒಂದೇ ರೂಪದಿಂದ ಇರುವಂಥದ್ದು. ಇಂಥ ವಸ್ತುವನ್ನು ಪಾರಮಾರ್ಥಿಕವಸ್ತುವೆಂದು ಹೇಳುತ್ತಾರೆ. ಆತ್ಮವಸ್ತುವೊಂದೇ ಇಂಥ ಪಾರಮಾರ್ಥಿಕವಸ್ತು. ಪ್ರಪಂಚವೆಲ್ಲ ಹುಟ್ಟಿ ಪ್ರಳಯಹೊಂದುತ್ತಿರುವುದು. ಹೀಗೆ ವಿಕಾರಿಯಾಗಿ ನಶ್ವರವಾದ ಪ್ರಪಂಚವು ಸತ್ಯವಾಗಲಾರದು. ಅದು 'ಅಸತ್ತು'– ಅಲ್ಲವಾದ್ದರಿಂದ ವ್ಯವಹಾರಕ್ಕೆ ಉಪಯೋಗವಾಗುವುದರಲ್ಲಿ ಬಾಧಕವೇನೂ ಇರುವುದಿಲ್ಲ.

ಇದಲ್ಲದೆ, ಪಾರಮಾರ್ಥಿಕವಸ್ತುವು ವ್ಯವಹಾರಕ್ಕೆ ಬರುವುದೇ ಇಲ್ಲ. ಲೋಕದಲ್ಲಿಯೂ ಕೂಡ ಯಾವ ವಸ್ತುವೂ ತನ್ನ ವಾಸ್ತವವಾದ ರೂಪದಿಂದ ವ್ಯವಹಾರಕ್ಕೆ ಬರುವುದಿಲ್ಲ. ಮತ್ತೇನೆಂದರೆ, ತನ್ನ ವಿಕಾರದ ಮಿಥ್ಯಾರೂಪದಿಂದಲೇ ವ್ಯವಹಾರಕ್ಕೆ ಬರುತ್ತದೆ. ಆಭರಣ–ಮುಂತಾದ–ರೂಪದಿಂದಲೇ ಚಿನ್ನವು ಉಪಯೋಗಕ್ಕೆ ಬರುತ್ತದೆಯೇ ಹೊರತು ಕೇವಲ ಚಿನ್ನದ ರೂಪದಿಂದಲ್ಲ; ಕಟ್ಟಿಗೆ, ಬತ್ತಿ–ಮುಂತಾದ ಉಪಾಧಿಗಳ ಮೂಲಕವಾದ ಔಪಾಧಿಕರೂಪದಿಂದಲೇ ಬೆಂಕಿಯು ಉಪಯೋಗಕ್ಕೆ ಬರುವುದಲ್ಲದೆ ತನ್ನ ನಿಜವಾದ ರೂಪದಿಂದ ಬೆಂಕಿಯು ಪ್ರಯೋಜನಕರವಾಗುವುದಿಲ್ಲ. ಆಯಾವಸ್ತುಗಳ ನಿಜವಾದ ರೂಪವು ಕೇವಲ ನಿಮಿತ್ತಮಾತ್ರವಾಗಿದ್ದು, ಮಿಥ್ಯಾಭೂತವಾದ ಔಪಾಧಿಕವಿಕಾರರೂಪದಿಂದಲೇ ವ್ಯವಹಾರಕ್ಕೆ ವಿಷಯವಾಗುತ್ತವೆ. ಆದ್ದರಿಂದ ಪ್ರಪಂಚವೆಲ್ಲ ವ್ಯವಹಾರಕ್ಕೆ ಬರುವುದರಿಂದಲೇ ಅದು ವಾಸ್ತವವಲ್ಲ, ಮಿಥ್ಯೆಯೇ ಆಗಿರಬೇಕೆಂದು ಸ್ಪಷ್ಟವಾಗುತ್ತದೆ. "**ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ** (ಗೀ. ೨. ೧೬) ಅಸತ್ತಿಗೆ ಇರುವಿಕೆಯಿಲ್ಲ; ಮೂರು ಕಾಲದಲ್ಲಿಯೂ ಒಂದೇ ರೂಪವಾಗಿರುವ ಸದ್ವಸ್ತುವು ಯಾವಾಗಲೂ ಇಲ್ಲದ್ದಾಗುವುದಿಲ್ಲ–" ಎಂದು ಶ್ರೀಮದ್ಭಗವದ್ಗೀತೆಯು ಹೇಳುತ್ತದೆ. ಆದ್ದರಿಂದ ಒಂದು ಕಾಲದಲ್ಲಿ ಇದ್ದು, ಮತ್ತೆ ಇಲ್ಲದೇ ಹೋಗುವ ಪ್ರಪಂಚವು ಸತ್ತೂ ಅಲ್ಲ, ಅಸತ್ತೂ ಅಲ್ಲ–ಮಿಥ್ಯೆ– ಎಂದು ಸ್ಪಷ್ಟವು.

"ಪ್ರಪಂಚವೆಲ್ಲ ಬ್ರಹ್ಮಕ್ಕೆ ಅಭಿನ್ನ–ಭಿನ್ನವಾದುದಲ್ಲ–ಎಂದಾದರೆ, ಬ್ರಹ್ಮಕ್ಕೆ ಬೇರೆಯಲ್ಲದ ಪ್ರತಿವಸ್ತುವೂ ಒಂದಕ್ಕೊಂದು ಪರಸ್ಪರವಾಗಿ ಅಭಿನ್ನವೆಂದಾಗಿ– ಭೋಕ್ತೃ–ಭೋಗ್ಯ, ಯೋಗ್ಯ–ಅಯೋಗ್ಯ–ಎಂಬ ವಿಭಾಗವು ಇಲ್ಲದೇ ಹೋಗುವುದಲ್ಲವೆ?"–ಎಂದರೆ? ಹಾಗೇನಿಲ್ಲ–

ಸಮುದ್ರಾದುದಕಾತ್ಮನೋಽನನ್ಯತ್ವೇಽಪಿ ತದ್ವಿಕಾರಾಣಾಂ ಫೇನವೀಚೀತರಂಗಬುದ್ಬುದಾದೀನಾಂ ಇತರೇತರವಿಭಾಗಃ, ಇತರೇತರಸಂಶ್ಲೇಷಾದಿಲಕ್ಷಣಶ್ಚ ವ್ಯವಹಾರ ಉಪಪದ್ಯತೇ ॥ ನ ಚ ಸಮುದ್ರಾದುದಕಾತ್ಮನೋಽನನ್ಯತ್ವೇಽಪಿ ತದ್ವಿಕಾರಾಣಾಂ ಫೇನತರಂಗಾದೀನಾಮಿತರೇತರಭಾವಾಪತ್ತಿರ್ಭವತಿ;

Sri Vidyaranya Book Centre, Sringeri

CC-O. In Public Domain. Digitized by eGangotri

ನ ಚ ತೇಷಾಮಿತರೇತರಭಾವಾನಾಪತ್ತಾವಪಿ ಸಮುದ್ರಾತ್ಮನೋಽನ್ಯತ್ವಂ ಭವತಿ॥ ಏವಮಿಹಾಪಿ॥

(ಸೂ. ೨. ೧. ೧೩.)

ನೊರೆ, ಅಲೆ, ಗುಳ್ಳೆ–ಮುಂತಾದುವು ಜಲಮಯವಾದ ಸಮುದ್ರದ ವಿಕಾರಗಳಾಗಳಾಗಿದ್ದು, ಅದಕ್ಕೆ ಬೇರೆಯಾದವು ಅಲ್ಲ, ಅಭಿನ್ನಗಳೇ ಆಗಿರುತ್ತವೆ. ಆದರೂ ಇವು ಪರಸ್ಪರ–ಅಭಿನ್ನಗಳಾಗದೆ, ಬೇರೆಬೇರೆಯಾಗಿವೇ ಇವೆ; ಮತ್ತು ಪರಸ್ಪರ ಸಂಯೋಗ ವಿಯೋಗಾದಿವ್ಯವಹಾರವುಳ್ಳವೂ ಆಗಿರುತ್ತವೆ. ಸಮುದ್ರಕ್ಕೆ ಅಭಿನ್ನವಾಗಿವೆಯಾದರೂ ನೊರೆ, ಅಲೆ, ಮುಂತಾದುವುಗಳು ಒಂದು ಮತ್ತೊಂದು ಎಂದಾಗುವುದಿಲ್ಲ; ಹೀಗೆ ಇವು ಒಂದು ಮತ್ತೊಂದಲ್ಲವೆಂದಾದರೂ, ಸಮುದ್ರಕ್ಕೆ ಬೇರೆಯಾದವೂ ಆಗುವುದಿಲ್ಲ. ಇದರಂತೆಯೇ ಪ್ರಪಂಚವೆಲ್ಲ ಬೇರೆಬೇರೆಯಾಗಿ ಪರಸ್ಪರವಿಭಾಗದಿಂದ ಇದ್ದು ವ್ಯವಹಾರಕ್ಕೆ ಬರುತ್ತಿದ್ದರೂ, ವಸ್ತುತಃ ಮೂಲಕಾರಣವಾದ ಬ್ರಹ್ಮಕ್ಕೆ ಬೇರೆಯಾದದ್ದು ಆಗುವುದಿಲ್ಲ.

ಈ ಪ್ರಕಾರವಾಗಿ–"ಬ್ರಹ್ಮವೊಂದೇ ಸತ್ಯ, ಪ್ರಪಂಚವೆಲ್ಲ ಮಿಥ್ಯಾ; ಬ್ರಹ್ಮವು ಪಾರಮಾರ್ಥಿಕವಾಗಿ ಅದ್ವಿತೀಯವಸ್ತು"– ಎಂಬ ವೇದಾಂತ ಸಿದ್ಧಾಂತವು ಸರ್ವಸಮಂಜಸವಾಗಿದೆ.

ಇಲ್ಲಿಯೂ ಇತರ ಯಾವಮತದವರೂ ಚೇತನನಾದ ಈಶ್ವರನನ್ನು ಸಮಸ್ತ ಜಗತ್ತಿಗೂ ಉಪಾದಾನಕಾರಣವೆಂದೂ, ಅಭಿನ್ನನಿಮಿತ್ತೋಪಾದಾನಕಾರಣವೆಂದೂ ಒಪ್ಪುವುದಿಲ್ಲ. ಆದ್ದರಿಂದ ಇವರೆಲ್ಲರೂ ವೇದಬಾಹ್ಯರೆಂದು ಸ್ಪಷ್ಟವು. ವಿಶಿಷ್ಟಾದ್ವೈತಿಗಳು ಬ್ರಹ್ಮನನ್ನು ಅಭಿನ್ನನಿಮಿತ್ತೋಪಾದಾನಕಾರಣವೆಂದು ಹೇಳುವರಾದರೂ, ಇದು ಬರೀ ಹೇಳುವಿಕೆಮಾತ್ರವೇ ಹೊರತು ವಾಸ್ತವವಲ್ಲ, ಏಕೆಂದರೆ, ಬ್ರಹ್ಮನನ್ನು ನಿರ್ವಿಕಾರವೆಂದು ಒಪ್ಪಿದರೆ, ಜಗತ್ತು ಬ್ರಹ್ಮದ ಪರಿಣಾಮವಾಗದೇ ವಿವರ್ತವೆಂದಾಗಿ; ಮಿಥ್ಯಾ ಆಗುತ್ತದೆ. ಆದರೆ, ಅವರು ಜಗತ್ತನ್ನು ಸತ್ಯವೆಂದು ನಂಬುತ್ತಾರೆ. "ಬ್ರಹ್ಮವು ಜಗದ್ರೂಪವಾಗಿ ಪರಿಣಮಿಸಿದರೆ, ಬ್ರಹ್ಮವು ಅನಿತ್ಯವಾಗುತ್ತದೆ; ಬ್ರಹ್ಮದ ಇಚ್ಛೆಯಿಂದ ಜಗತ್ತು ಆಗುತ್ತದೆಂದು" ಅವರು ಹೇಳುತ್ತಾರೆ; ಆದರೆ ಈ ಇಚ್ಛೆಯು ನಿತ್ಯವಾದುದೋ ಅಚೇತನವೋ, ಸ್ವತಂತ್ರವೋ—ಎಂದು ವಿಚಾರಮಾಡಿದರೆ, ಸಾಂಖ್ಯಾದಿಮತಗಳಲ್ಲಿ ಒಂದು ಪಕ್ಷವಾಗುವುದು; ಇದು ಅವೈದಿಕಪಕ್ಷವೇ ಆಗುತ್ತದೆ. ಶ್ರೀಮತ್ಸೂತ್ರಕಾರರ. **'ಅಸಂಭವಸ್ತು ಸತೋಽನುಪಪತ್ತೇಃ'**-ಎಂದು ಸತ್ಯವಾದವಸ್ತುವಿಗೆ ಉತ್ಪತ್ತ್ಯಾದಿಗಳು ಇರುವಜಗತ್ತನ್ನು ಸತ್ಯವೆಂದುಒಪ್ಪುವ ವಾದಿಗಳೆಲ್ಲರೂ ಅವೈದಿಕರೆಂದು ಸರ್ವಸಿದ್ಧವಾಗುವುದು ಆದುದರಿಂದ 'ಅದ್ವಿತೀಯಬ್ರಹ್ಮವೇ ಪಾರಮಾರ್ಥಿಕಸತ್ಯವಾಗಿ ಯಥಾರ್ಥತತ್ತ್ವವು; ದ್ವೈತಪ್ರಪಂಚವೆಲ್ಲ ಮಿಥ್ಯಾಭೂತವಾದುದು,—ಎಂಬುದು ವೇದಾಂತಗಳ ಪರಮಸಿದ್ಧಾಂತವೆಂದು ಸ್ಪಷ್ಟವು.

Sri Vidyabharathi Book Centre, Sringeri

CC-O. In Public Domain. Digitized by eGangotri

"ವಾಚಾರಂಭಣಂ ವಿಕಾರೋ ನಾಮಧೇಯಂ, ಮೃತ್ತಿಕೇತ್ಯೇವ ಸತ್ಯಂ"-ಎಂದು ಶ್ರುತಿಯು ಮೃದ್ಘಟದೃಷ್ಟಾಂತಪೂರ್ವಕವಾಗಿ ಬ್ರಹ್ಮ ಮತ್ತು ಜಗತ್ತಿನ ಸತ್ಯಮಿಥ್ಯಾತ್ವಗಳನ್ನು ಪ್ರತಿಪಾದಿಸಿರುತ್ತದೆ, ಘಟವೆಂಬ ಕಾರ್ಯವು, ತನ್ನ ಉಪದಾನಕಾರಣವಾಗಿರುವ ಮೃತ್ತಿಕೆಗೆ ಬೇರೆಯಾದ-ಎಂದರೆ, ಮೃತ್ತಿಕೆಯನ್ನು ಬಿಟ್ಟು ಸ್ವತಂತ್ರವಾದ ಸತ್ತೆಯನ್ನುಳ್ಳ-ವಸ್ತುವಲ್ಲ; ಘಟವೆಂಬುದು ಬರಿಯ ನಾಮಧೇಯ ಹೆಸರುಮಾತ್ರ ಘಟವೆಂದು ವಸ್ತುವು ಯಾವುದೂ ಅಲ್ಲಿ ಇಲ್ಲ; ಮೃತ್ತಿಕೆಗೇ ಬೇರೆರೂಪವಲ್ಲಿರುವುದಕ್ಕೆ ಘಟ ಎಂದು ಹೆಸರುಮಾತ್ರ. ಹೀಗೆ ಘಟವು ತನ್ನ ಉಪದಾನಕಾರಣವಾದ ಮೃತ್ತಿಕೆಯಲ್ಲಿ ಕಲ್ಪಿತವಾದದ್ದು. ಕಲ್ಪಿತವಾದ ಆ ಘಟದಿಂದ ಆ ಮೃತ್ತಿಕೆಯು ವಸ್ತುತಃ ಸದ್ವಿತೀಯವಾಗುವುದಿಲ್ಲ. ಇದರಂತೆ, ಸಮಸ್ತದ್ವೈತಜಗತ್ಪ್ರಪಂಚವೂ ಬ್ರಹ್ಮದ ಕಾರ್ಯವಾಗಿರುತ್ತ, ಸ್ವತಂತ್ರಸತ್ತಾಕವಲ್ಲವಾಗಿ ಬ್ರಹ್ಮವು ಅದ್ವಿತೀಯವೆಂದು ಸಿದ್ಧಿಸುತ್ತದೆ. ಕಾರ್ಯವಸ್ತುವನ್ನು ಪರೀಕ್ಷಿಸಿ, ಅದರ ಕಾರಣದ ಸ್ವರೂಪವು ತಿಳಿದುಬರಲಾಗಿ,– ಆ ಕಾರ್ಯವಸ್ತುವು ಅದರಲ್ಲಿ ಕಲ್ಪಿತವಾದದ್ದು, ಮಿಥ್ಯಾ,–ಎಂದು ನಿಶ್ಚಿತವಾಗುತ್ತದೆ. "ಘಟವು ಹೀಗೆ ಮಿಥ್ಯಾ ಆಗಿ, ಅದರ ಕಾರಣವಾದ ಮೃತ್ತಿಕೆಯೇ ಸತ್ಯವೆಂದು ತಿಳಿಯುವುದೇ ಇದರ ತತ್ತ್ವಜ್ಞಾನವು" ಈ ತತ್ತ್ವಜ್ಞಾನವು ಉಂಟಾದ ಮೇಲೂ ಘಟವೇನೂ ಇಲ್ಲವಾಗುವುದಿಲ್ಲ ಘಟವು ತೋರಿಬರುತ್ತಿದ್ದು ಜಲಾಹರಣಾದಿಗಳಿಗೆ ಉಪಯುಕ್ತವೂ ಆಗಿರುತ್ತದೆ. ಘಟವು ಮೃತ್ತಿಗೆ ಭಿನ್ನವಲ್ಲ ಅನ್ಯವಲ್ಲ-ಅನನ್ಯ; ಮೃತ್ತಿಕೆಗೆ ಅನ್ಯವಾಗಿ ಭಿನ್ನವಾಗಿ, ಘಟವಿಲ್ಲ ಅಭಿನ್ನವಾಗಿ, ಅನನ್ಯವಾಗಿ, ಇದೆ. ಇದರಂತೆ, ಜಗತ್ಕಾರಣವಾಗಿರುವ ಬ್ರಹ್ಮಸ್ವರೂಪತತ್ತ್ವವು ಸಾಕ್ಷಾತ್ಕಾರವಾದರೂ, ಪ್ರಪಂಚವು ಸ್ವತಂತ್ರಸತ್ತಾಕವಾದ ಸತ್ಯವಸ್ತುವೆಂಬ ತಪ್ಪುತಿಳಿವು ಮಾತ್ರವೇ ಕಳೆಯುತ್ತದೆಯೇ ಹೊರತು, ಪ್ರಪಂಚವೇ ಬಾಧಿತವಾಗುವುದಿಲ್ಲವಾಗಿ, ಎಲ್ಲ ಜಗದ್ವ್ಯವಹಾರವೂ ಮುಕ್ತಿಯಲ್ಲಿಯೂ, ನಿರಾಬಾಧವಾಗಿರುತ್ತದೆ ಪ್ರಪಂಚವು ಬ್ರಹ್ಮಕ್ಕೆ ಅನ್ಯವಲ್ಲ, ಅನನ್ಯ ಅಷ್ಟೆ! ಹೀಗೆಂದು ಕೆಲವರು ಅಭಿಪ್ರಾಯಪಟ್ಟಿರುತ್ತಾರೆ.

ಮೃತ್ತಿಕೆಯು ಘಟಕ್ಕೆ ಹೇಗೋ ಹಾಗೇ, ಬ್ರಹ್ಮವು ಜಗತ್ತಿಗೆ ಪರಿಣಾಮ್ಯುಪಾದಾನ ಕಾರಣವಾಗಿರುವ ಪಕ್ಷದಲ್ಲಿ, ಈ ವ್ಯಾಖ್ಯಾನವು ಸಂಗತವಾದೀತು. ಬ್ರಹ್ಮವು ಜಗತ್ತಿಗೆಲ್ಲ ಮೂಲಕಾರಣವೆಂದು ಶ್ರುತಿಸಿದ್ಧವಾಗಿದೆ. ಆದ್ದರಿಂದ ಇದು ಕಾರ್ಯವಲ್ಲ ಜನ್ಯ,–ಹುಟ್ಟಿದ್ದು–ಅಲ್ಲ. ಆದ್ದರಿಂದ ಬ್ರಹ್ಮವು ನಿತ್ಯವಾದದ್ದು. ಪರಿಚ್ಛಿನ್ನವಾದದ್ದು-ಸಾವಯವವಾಗಿ, ವಿಕಾರಿಯಾಗಿ, ಅನಿತ್ಯವಾಗುವುದರಿಂದ ಬ್ರಹ್ಮವು ನಿರವಯವವೆಂದೂ, ಅಪರಿಚ್ಛಿನ್ನವೆಂದೂ ಎಂದರೆ, ದೇಶಕಾಲವಸ್ತು ಪರಿಚ್ಛೇದಶೂನ್ಯವಾಗಿರುವುದೆಂದೂ ನಿರ್ವಿಕಾರಾಖಂಡಚಿನ್ಮಾತ್ರಸ್ವರೂಪವದೆಂದೂ ತಿಳಿದುಬರುವುದು. ಇಂಥ ಬ್ರಹ್ಮವು

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗತ್ತಿಗೆ ಪರಿಣಾಮ್ಯುಪಾದಾನಕಾರಣವೆಂದಾಗದೆ, ವಿವರ್ತೋಪಾದಾನಕಾರಣವೆಂದು ಸಿದ್ಧಿಸುವುದು. ಆದ್ದರಿಂದ ಪ್ರಪಂಚವೆಲ್ಲ, ರಜ್ಜುವಿನ ವಿವರ್ತವಾದ ರಜ್ಜುಸರ್ಪದಂತೆ, ರಜ್ಜುವಿಗೆ ಬೇರೆಯಾದ– ಸ್ವತಂತ್ರವಾದ-ಸತ್ತೆಯಿಲ್ಲದೆ ಮಿಥ್ಯಾ ಆಗಿರುವಂತೆ, ಬ್ರಹ್ಮ-ಸತ್ತಾತಿರಿಕ್ತಸತ್ತಾಶೂನ್ಯವಾಗಿ, ಮಿಥ್ಯಾ–ಆಗಿರುವುದೆಂದು ನಿಶ್ಚಿತವಾಗುವುದು. ರಜ್ಜು-ವಿನಸರ್ಪದ ಸಾಕ್ಷಾತ್ಕಾರವಾದ ಅನಂತರ, ಅದರಲ್ಲಿ ಕಲ್ಪಿತವಾಗಿರುವ ರಜ್ಜುಸರ್ಪವು, ಮತ್ತೆ ಕಾಣಬರಲಾರದಂತಾಗುವುದು ಸರ್ವಾನುಭವಸಿದ್ಧವು. "ರಜ್ಜು–ಸರ್ಪವು ರಜ್ಜುವಿಗೆ ಅನ್ಯವಾಗಿಲ್ಲ, ಅನನ್ಯವಾಗಿ ಇದೆ"– ಎಂದಾಗುವುದೆ? ಇದರಂತೆ-ಜಗತ್ಕಲ್ಪನೆಗೆ ಅಧಿಷ್ಠಾನವಾಗಿರುವ ಬ್ರಹ್ಮದ ಸಾಕ್ಷಾತ್ಕಾರವಾಗಲಾಗಿ, ಸಮಸ್ತದ್ವೈತ,-ಜಗತ್ಪ್ರಪಂಚವೆಲ್ಲವೂ– 'ನಾಸೀದಸ್ತಿ ಭವಿಷ್ಯತಿ'– ಎಂಬಂತೆ, ಮೂರುಕಾಲಗಳಲ್ಲಿಯೂ ಇರುವಂಥದ್ದಲ್ಲವೆಂದೇ ಪೂರ್ಣವಾಗಿ ಬಾಧಿತವಾಗುವುದು; ಮತ್ತೆ ಇದರ ತೋರಿಬರು-ವಿಕೆಯಾಗಲಿ, ಇದರ ನಿಮಿತ್ತವಾದ ಯಾವ ವ್ಯವಹಾರವಾಗಲಿ ಎಲ್ಲಿ ಪ್ರಸಕ್ತವಾದೀತು? ರಜ್ಜುವು ರಜ್ಜುಸರ್ಪವಾಗುವಂತೆಯೇ ಬ್ರಹ್ಮವು ಜಗತ್ತಾಗಿರುವುದೆಂದು– "ಅಜಾಯ-ಮಾನೋ ಬಹುಧಾ ವಿಜಾಯತೇ"– ಶ್ರುತಿಯು ವಿಸ್ಪಷ್ಟಪಡಿಸುತ್ತದೆ. "ನಾಯಂ ಕುತಶ್ಚಿನ್ನ ಬಭೂವ ಕಿಂಚಿತ್।'–ಎಂದೂ ಶ್ರುತಿಯು ಇದನ್ನೇ ವಿವರಿಸಿದೆ. ಆದ್ದರಿಂದ ಬ್ರಹ್ಮವನ್ನು ಪರಮಾರ್ಥವಾಗಿ ಯಾವಾಗಲೂ ಸರ್ವಪ್ರಪಂಚಶೂನ್ಯವಾದ, ನಿಷ್ಪ್ರಪಂ-ಚಾದ್ವಿತೀಯತತ್ತ್ವವೆಂದೇ ತಿಳಿಯತಕ್ಕದ್ದು.

ವೇದಾಂತನ್ಯಾಯಪ್ರಸ್ಥಾನವಾಗಿರುವ ಶ್ರೀಬ್ರಹ್ಮಸೂತ್ರಗಳ ೧೯೨ ಅಧಿಕರಣ-ಗಳಲ್ಲಿಯೂ ಪ್ರತ್ಯಧಿಕರಣದ ಪೂರ್ವಪಕ್ಷ ಮತ್ತು ಸಿದ್ಧಾಂತಗಳ ತಾತ್ಪರ್ಯವು ಅದ್ವಿತೀಯಪರಬ್ರಹ್ಮತತ್ತ್ವದಲ್ಲಿಯೇ ಇರುವುದು, ನಿಷ್ಪಕ್ಷಪಾತವಿಚಾರಕುಶಲರಿಗೆ ಪ್ರಸಿದ್ಧವೇ ಇದೆ.

೪! **ಐಕ್ಯಂ ಜೀವಪರಾತ್ಮನೋರವಿತಥಂ॥** "ಜೀವಪರಮಾತ್ಮರ ಐಕ್ಯವು ಯಥಾರ್ಥವಾದುದು."

"ಬ್ರಹ್ಮದ ಕಾರ್ಯವಾದ ದ್ವೈತಪ್ರಪಂಚವೆಲ್ಲ ಮಿಥ್ಯಾ ಆಗಿದ್ದು ಬ್ರಹ್ಮಕ್ಕೆ ದ್ವಿತೀಯವಲ್ಲವೆಂದಾದರೂ, ಬ್ರಹ್ಮವನ್ನು ಅದ್ವಿತೀಯವೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ, "ದ್ವೈತವೆಂಬುದು ಸಜಾತೀಯ, ವಿಜಾತೀಯ, ಸ್ವಗತ–ಎಂದು ಮೂರು ವಿಧವಾಗಿದೆ. ಒಂದು ಮಾವಿನಮರಕ್ಕೆ ಇತರಮಾವಿನಮರಗಳಿಂದ ಸಜಾತಿಯಭೇದವೂ ಹಲಸು–ಮುಂತಾದಮರಗಿಡಗಳಿಂದಲೂ, ಕಲ್ಲುಮಣ್ಣು–ಮುಂತಾದ ಇತರವಸ್ತು-ಗಳಿಂದಲೂ ವಿಜಾತೀಯಭೇದವೂ; ತನ್ನಲ್ಲಿಯೇ ಇರುವ ರೆಂಬೆ, ಎಲೆ, ಹೂ, ಕಾಯಿ–ಮುಂತಾದವುಗಳಿಂದ ಸ್ವಗತಭೇದವೂ ಇರುತ್ತದೆ. ಬ್ರಹ್ಮವು ಚೇತನವಸ್ತುವಾಗಿ ನಿರವ-ಯವವಾದ್ದರಿಂದ ಸ್ವಗತಭೇದವಿಲ್ಲದುದೂ, ಜಡಪ್ರಪಂಚವೆಲ್ಲವೂ ಅದರ ಕಾರ್ಯವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಿಥ್ಯಾ—ಆದ್ದರಿಂದ ವಿಜಾತೀಯಭೇದವಿಲ್ಲವೆನ್ನೂ ಎಂದು ಹೇಳಬಹುದಾದರೂ. ಚೇತನರಾದ ಅಸಂಖ್ಯಾತಜೀವರು ಇರವುವರಿಂದ, ಸಜಾತೀಯಭೇದವು ಅಪರಿಹಾರ್ಯ-ವಾಗಿದೆ. ಪ್ರಪಂಚದಂತೆ ಜೀವರನ್ನು ಬ್ರಹ್ಮದ ಕಾರ್ಯವೆಂದು ಹೇಳಲಾಗುವುದಿಲ್ಲ. ಬ್ರಹ್ಮದ ಕಾರ್ಯವೆಂದಾದರೆ ಜೀವರು ಅನಿತ್ಯರೆಂದಾಗುವುದು; ಹೀಗಾದರೆ ಮತ್ತೆ ಮುಕ್ತಿಯಾರಿಗೆ? ಸಂಸಾರಿಗಳಾದ ಜೀವರ ಮುಕ್ತಿಗಾಗಿಯೇ ಅಲ್ಲವೆ ಎಲ್ಲ ಶಾಸ್ತ್ರಗಳೂ ಹೊರಟವೆ! ಆದ್ದರಿಂದ ನಿತ್ಯರಾದ ಅಸಂಖ್ಯಾತಜೀವರಿಂದ ಬ್ರಹ್ಮಕ್ಕೆ ಸಜಾತೀಯಭೇದವು ಅಪರಿಹಾರ್ಯವಾಗಿರುವುದರಿಂದ, ಬ್ರಹ್ಮವು ಪಾರಮಾರ್ಥಿಕವಾಗಿ ಅದ್ವಿತೀಯವೆಂಬುದು ಹೇಗೆ?"—ಎಂದು ಶಂಕಿಸಿದರೆ ಅದು ಸರಿಯಲ್ಲ.

'ನಾನ್ಯೋಽತೋಽಸ್ತಿ ದ್ರಷ್ಟಾ'—'ಬ್ರಹ್ಮವು ಚೇತನ; ಬ್ರಹ್ಮಕ್ಕೆ ಬೇರೆಯಾದ ಮತ್ತೊಂದು ಚೇತನವು ಇಲ್ಲ'—ಎಂದು ಶ್ರುತಿಯು ಹೇಳುತ್ತಿದೆ. ಬ್ರಹ್ಮಕ್ಕೆ ಬೇರೆಯಾಗಿ ಚೇತನವನ್ನಾಗಲಿ ಅಚೇತನವನ್ನಾಗಲಿ ಏನೊಂದನ್ನು ಒಪ್ಪಿದರೂ, ಬ್ರಹ್ಮಕ್ಕೆ ವಸ್ತುಪರಿಚ್ಛೇದವು ಸಂಭವಿಸಿ, ಬ್ರಹ್ಮವು ಅನಿತ್ಯವಾಗುತ್ತದೆ. ಇದರಂತೆ, ಜೀವನಿಗೂ ಬೇರೆಯಾಗಿ ಪ್ರಪಂಚವನ್ನಾಗಲಿ, ಬ್ರಹ್ಮವನ್ನಾಗಲಿ ಪಾರಮಾರ್ಥಿಕವಾಗಿ ಒಪ್ಪಿದರೆ, ಜೀವನೂ ಅನಿತ್ಯನಾಗುವನು. ಪರಿಚ್ಛಿನ್ನವಾದುದೆಲ್ಲ ಅನಿತ್ಯವೆಂದು ಸ್ಪಷ್ಟವಿದೆ. **ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಂ ।** (ಗೀ. ೨-೧೭)'— ವ್ಯಾಪಕವಾಗಿರುವ ವಸ್ತುವನ್ನೇ ಅವಿನಾಶಿ, ನಿತ್ಯ ಎಂದು ತಿಳಿಯುಕೋ'—ಎಂದು ಶ್ರೀಭಗವದ್ಗೀತೆಯೂ, ವ್ಯಾಪಕ—ಎಂದರೆ ಅಪರಿಚ್ಛಿನ್ನವಾದುದನ್ನೇ ನಿತ್ಯವೆಂದು ಉಪದೇಶಿಸುತ್ತದೆ. ವ್ಯಾಪಕ, ವಾಗಿ ಎರಡು ವಸ್ತುಗಳು ಸಂಭಾವಿತವಾಗುವುದಿಲ್ಲ—ಒಂದರಿಂದ ಮತ್ತೊಂದಕ್ಕೆ ಪರಿಚ್ಛೇದವೇ ಪ್ರಾಪ್ತವಾಗುತ್ತದೆ. ಆದ್ದರಿಂದ, 'ಚೇತನನಾದ ಜೀವನು ವಸ್ತುತಃ ಬ್ರಹ್ಮನೇ, ಎಂದು ಅವಶ್ಯ ಒಪ್ಪಬೇಕು.

ಬ್ರಹ್ಮವು ಒಂದೇ ವಸ್ತು ಆದರೂ,—ಒಂದೇ ಆಕಾಶವು ಘಟ ಮಠಾದಿ-ಉಪಾಧಿಗಳಿಂದ ಅನೇಕವೂ ಅನೇಕವಿಧವೂ ಆಗಿ ವ್ಯವಹಾರದಲ್ಲಿ ತೋರಿಬರುವಂತೆ,—ಒಂದೇ ಬ್ರಹ್ಮಚೈತನ್ಯವು ದೇಹಾದಿ—ಉಪಾಧಿಗಳಿಂದ ಅನೇಕ ಜೀವರಂತೆ ತೋರಿಬರುತ್ತದೆ.

ಶ್ರೀಭಗವತ್ಪಾದರು ಹೇಳುವುದು ಹೀಗೆ—

ಯಾವತ್ಕಿಂಚಿದ್ವಿಕಾರಜಾತಂ ದೃಶ್ಯತೇ ಘಟಘಟಿಕೋದಂಚನಾದಿ ವಾ, ಕಟಕಕೇಯೂರಕುಂಡಲಾದಿ ವಾ ಸೂಚೀನಾರಾಚನಿಸ್ತ್ರಿಂಶಾದಿ ವಾ—ತಾವಾನೇವ ವಿಭಾಗೋ ಲೋಕೇ ಲಕ್ಷ್ಯತೇ । ನ ತ್ವನಿಕೃತಂ ಕಿಂಚಿತ್ಕುತಶ್ಚಿದ್ವಿಭಕ್ತಮುಪಲಭ್ಯತೇ । ವಿಭಕ್ತತ್ವಾದ್ವಿಕಾರೋ ಭವಿತುಮರ್ಹತಿ । ಸೂ. (೨.೩.೭)

Sri Vidyabharathi Book Centre, Sringeri

CC-O. In Public Domain. Digitized by eGangotri

ಗಡಿಗೆ, ಕುಡಿಕೆ, ಉದಂಚನ-ಎಂದೂ, ಬಳೆ, ಅಂಗದ, ಕುಂಡಲ,-ಎಂದೂ; ಸೂಜಿ, ಬಾಣ: ಕತ್ತಿ-ಎಂದೂ ಕಾರ್ಯವಸ್ತುಗಳೆಲ್ಲ ಪರಸ್ಪರಬೇರೆಬೇರೆಯಾಗಿಯೇ ಕಾಣಬರುತ್ತವೆ; ಕಾರ್ಯವಲ್ಲದುದು ಯಾವುದೂ ವಿಭಕ್ತವಾಗಿ, ಬೇರೆ ಬೇರೆಯಾಗಿ, ಕಾಣಬರುವುದಿಲ್ಲ. ಆದ್ದರಿಂದ ಬೇರೆಯಾಗಿ ತೋರಿಬರುವುದೆಲ್ಲ ಕಾರ್ಯವೇ ಸರಿ.

ಹೀಗಾದರೆ, ವಿಭಕ್ತ (ಬೇರೆ ಬೇರೆ) ರಾಗಿರುವ ಜೀವರೂ ಕಾರ್ಯರಾಗುವರಲ್ಲವೆ? ಎಂದರೆ: ಹಾಗಲ್ಲ-

ನಾಸ್ಯ ವಿಭಾಗಃ ಸ್ವತೋಽಸ್ತಿ । ಬುದ್ಧ್ಯಾದ್ಯುಪಾಧಿನಿಮಿತ್ತಂ ತ್ವಸ್ಯ ಪ್ರವಿಭಾಗಪ್ರತಿಭಾನಂ, ಆಕಾಶಸ್ಯೇವ ಘಟಾದಿಸಂಬಂಧನಿಮಿತ್ತಂ । ಲಕ್ಷಣ-ಭೇದೋಽಪ್ಯನಯೋರುಪಾಧಿನಿಮಿತ್ತ ಏವ । (ಸೂ .೨.೧.೧೭)

ಚೇತನನಾದ ಆತ್ಮನಿಗೆ ವಿಭಾಗವು ಸ್ವತಃ ಇಲ್ಲ. ಬುದ್ಧಿ-ಮೊದಲಾದ ಉಪಧಿಯ-ನಿಮಿತ್ತದಿಂದಲೇ ಆತ್ಮನಲ್ಲಿ ವಿಭಾಗದ ತೋರುವಿಕೆ—ಘಟಾದಿಗಳ ಸಂಬಧದಿಂದ ಆಕಾಶಕ್ಕೆ ಹೇಗೋ ಹಾಗೆ. ಜೀವಬ್ರಹ್ಮರ ಲಕ್ಷಣಭೇದವು ತೋರಿಬರುತ್ತಿರುವುದೂ ಉಪಾಧಿಯ ನಿಮಿತ್ತದಿಂದಲೇ ಹೊರತು, ಸ್ವತಃ ಅಲ್ಲ. ಆದ್ದರಿಂದ-"ಜೀವನು ಸಂಸಾರಿಯಾಗಿದ್ದಾನೆ, ಬ್ರಹ್ಮವು ಅಸಂಸಾರಿಯಾದುದು; ಸಂಸಾರಿತ್ವ-ಅಸಂಸಾರಿತ್ವವೆಂಬ ವಿರುದ್ಧಲಕ್ಷಣವುಳ್ಳ ಜೀವಬ್ರಹ್ಮರಿಗೆ ಐಕ್ಯ ಎಂಬುದು ಹೇಗೆ?"—ಎಂಬ ಶಂಕೆಯೂ ಸಂಭವಿಸುವುದಿಲ್ಲ. ಈ ಭೇದವೆಲ್ಲ ಉಪಾಧಿಯಿಂದಾದುದು; ವಾಸ್ತವವಲ್ಲ-ಮಿಥ್ಯಾ

ಆತ್ಮನಿಗೆ ಸಂಸಾರವು ವಾಸ್ತವವಾಗಿ ಇಲ್ಲವೆಂಬುದನ್ನು ಶ್ರೀಭಗವತ್ಪಾದರವರು ಅನೇಕವಿಧವಾಗಿ ಪ್ರತಿಪಾದಿಸಿದ್ದಾರೆ—

"(1) ದೇಹಾದಿವ್ಯತಿರಿಕ್ತಸ್ಯಾತ್ಮನ ಆತ್ಮೀಯೇ ದೇಹಾದೌ ಅಭಿಮಾನೋ ಗೌಣೋ, ನ ಮಿಥ್ಯಾ"—ಇತಿ ಚೇತ್? ನ। ಪ್ರಸಿದ್ಧವಸ್ತುಭೇದಸ್ಯ ಗೌಣತ್ವ-ಮುಖ್ಯತ್ವಪ್ರಸಿದ್ಧೇಃ। ಯಸ್ಯ ಹಿ ಪ್ರಸಿದ್ಧೋ ವಸ್ತುಭೇದಃ-ಯಥಾ ಕೇಸ-ರಾದಿಮಾನಾಕೃತಿವಿಶೇಷೋಽನ್ವಯವ್ಯತಿರೇಕಾಭ್ಯಾಂ ಸಿಂಹಶಬ್ದಪ್ರತ್ಯಯ-ಭಾಙ್ಮುಖ್ಯೋಽನ್ಯಃ; ಪ್ರಸಿದ್ಧಃ ತತಶ್ಚಾನ್ಯಃ ಪುರುಷಃ ಪ್ರಾಯಿಕೈಃ ಕ್ರೌರ್ಯ-ಶೌರ್ಯಾದಿಭಿಃ ಸಿಂಹಗುಣೈಃ ಸಂಪನ್ನಃ ಸಿದ್ಧಃ—ತಸ್ಯ ಪುರುಷೇ ಸಿಂಹಶಬ್ದ-ಪ್ರತ್ಯಯೌ ಗೌಣೌ ಭವತಃ, ನಾಪ್ರಸಿದ್ಧವಸ್ತುಭೇದಸ್ಯ। ತತ್ರ ತ್ವನ್ಯಶಬ್ದ-ಪ್ರತ್ಯಯೌ ಭ್ರಾಂತಿನಿಮಿತ್ತಾವೇವ ಭವತೋ, ನ ಗೌಣೌ । ಯಥಾ ಮಂದಾಂಧಕಾರೇ ಸ್ಥಾಣುರಯಮಿತ್ಯಗೃಹ್ಯಮಾಣವಿಶೇಷೇ ಪುರುಷ ಶಬ್ದ-ಪ್ರತ್ಯಯೌ ಸ್ಥಾಣುವಿಷಯೌ; ಯಥಾ ವಾ ಶುಕ್ತಿಕಾಯಾಮಕಸ್ಮಾದ್ರಜತ-ಮಿತಿ ನಿಶ್ಚಿತೌ ಶಬ್ದಪ್ರತ್ಯಯೌ । ತದ್ವದ್ದೇಹಾದಿಸಂಘಾತೇ ಅಹಮಿತಿ ನಿರು-

Sri Vidyabharathi Book Centre, Sringeri

CC-O. In Public Domain. Digitized by eGangotri

ಪಚಾರೇಣ ಶಬ್ದಪ್ರತ್ಯಯೌ ಆತ್ಮಾನಾತ್ಮಾವಿವೇಕೇನೋತ್ಪದ್ಯಮಾನೌ, ಕಥಂ ಗೌಣೌ ಶಕ್ಯೌ ವದಿತುಂ। ತಸ್ಮಾದ್ದೇಹಾದ್ಯತಿರಿಕ್ತಾತ್ಮಾಸ್ತಿತ್ವವಾದಿನಾಂ ದೇಹಾದಾವ ಹಂಪ್ರತ್ಯಯೋ ಮಿಥ್ಯೈವ, ಸ ಗೌಣಃ ।(ಸೂ. ೧.೧.೪)

"ಆತ್ಮನು ದೇಹಾದಿಗಳಿಗೆ ಬೇರೆಯಾಗಿರುವುದರಿಂದ, ದೇಹಾದಿಗಳಲ್ಲಿ ನಾನು ಎಂಬ ಅಭಿಮಾನವು ಗೌಣವೇ ಹೊರತು, ಮಿಥ್ಯೆ ಅಲ್ಲ"– ಎಂದು ಕೆಲವರು ಹೇಳುತ್ತಾರೆ. ಇದು ಸರಿಯುಲ್ಲ. 'ದೇವದತ್ತನು ಸಿಂಹ'–ಎಂಬುದು ಗೌಣಜ್ಞಾನ; ಹಗ್ಗದಲ್ಲಿ 'ಇದು ಹಾವು' ಎಂಬುದು ಮಿಥ್ಯಾಜ್ಞಾನ–ಅಥವಾ ಭ್ರಾಂತಿಜ್ಞಾನ. ಸಿಂಹದಲ್ಲಿರುವ ಶೌರ್ಯಾದಿ ಗುಣಗಳನ್ನು ದೇವದತ್ತನಲ್ಲಿ ಕಂಡು, ದೇವದತ್ತನನ್ನು 'ಸಿಂಹ' ಎಂದು ಹೇಳುವುದರಿಂದ ಗುಣನಿಮಿತ್ತದಿಂದ ಆಗಿರುವ ಕಾರಣ, ಇದನ್ನು ಗೌಣಜ್ಞಾನವೆನ್ನುವರು. ಈ ಗೌಣಜ್ಞಾನದಲ್ಲಿ–"ಸಿಂಹವೆಂಬ ಪ್ರಾಣಿಯೇ ಬೇರೆ, ದೇವದತ್ತನೇ ಬೇರೆ"— ಎಂಬ ಭೇದದ ತಿಳಿವಳಿಕೆಯು ಎಲ್ಲರಿಗೂ ಯಾವಾಗಲೂ ಇದ್ದೇ ಇರುತ್ತದೆ. ಭೇದಜ್ಞಾನವಿದ್ದೂ, ಒಂದರ ಶಬ್ದವನ್ನು ಮತ್ತೊಂದರಲ್ಲಿ ಪ್ರಯೋಗಮಾಡಿದರೆ, ಅದು ಗೌಣವೆನಿಸುವುದು. 'ಇದು ಹಾವು'–ಎಂದು ಹಗ್ಗದಲ್ಲಿ ಭ್ರಾಂತಿಯುಂಟಾದಾಗ. ಹಗ್ಗಹಾವುಗಳ ಭೇದವು ತಿಳಿದುಬರುವುದಿಲ್ಲ. ಆದ್ದರಿಂದ, ಹಗ್ಗಹಾವುಗಳಂತೆ ವಸ್ತುತಃ ಬೇರೆಯೇ ಆಗಿದ್ದರೂ, ದೇಹ ಮತ್ತು ಆತ್ಮಾ—ಇವೆರಡರ ಭೇದವು ಸ್ಪಷ್ಟವಾಗಿ ತಿಳಿದುಬರದೆಯೇ ಉಂಟಾಗುವ ನಾನು ಮನುಷ್ಯ'–ಎಂಬ ಜ್ಞಾನವು ಮಿಥ್ಯಾಭ್ರಮೆಯೇ ಹೊರತು, ಗೌಣವೆಂದೆನಿಸದು. ಆದಕಾರಣ, ಆತ್ಮನು ವಸ್ತುತಃ ದೇಹಾದಿಗಳಿಗೆ ಬೇರೆಯಾಗಿರುವನೆಂದು ಒಪ್ಪುವವರೆಲ್ಲರೂ 'ನಾನು ಮನುಷ್ಯ'–ಎಂಬ ಅನುಭವಗಳನ್ನು ಮಿಥ್ಯೆಯೆಂದೇ ಒಪ್ಪಬೇಕು, ಗೌಣವೆಂದಲ್ಲ.

ಇದಲ್ಲದೆ,

ತತ್ಕಾರ್ಯೇಷ್ವಪಿ ಗೌಣತ್ವೋಪಪತ್ತೇಃ । ನ ಗೌಣಪ್ರತ್ಯಯಸ್ಯ ಮುಖ್ಯಕಾರ್ಯಾರ್ಥತಾ । ನ ತು ಸಿಂಹಕಾರ್ಯಂ ಗೌಣಶಬ್ದಪ್ರತ್ಯಯನಿಮಿತ್ತಂ ಕಿಂಚಿತ್ಸಾಧ್ಯತೇ । ಮಿಥ್ಯಾಪ್ರತ್ಯಯಕಾರ್ಯಂ ತು ಅನರ್ಥಮನುಭವತಿ । (ಗೀ. ೧೮. ೬೬.)

ಗೌಣಜ್ಞಾನದಲ್ಲಿ, ಆದ್ದರಿಂದ ಮುಖ್ಯವಾದ ಕಾರ್ಯವು ಆಗುವುದಿಲ್ಲ. 'ದೇವದತ್ತನು ಸಿಂಹ,–ಎಂಬಲ್ಲಿ ದೇವದತ್ತನಿಂದ ಸಿಂಹದ ಮುಖ್ಯಕಾರ್ಯಗಳೇನೂ ನಡೆಯುವುದಿಲ್ಲ. ಮಿಥ್ಯಾಜ್ಞಾನದಲ್ಲಾದರೋ, ಅದರ ಫಲವು ಕೂಡಲೆ ಅನುಭವಕ್ಕೆ ಬರುತ್ತದೆ; "ಇದು ಹಾವು"–ಎಂದು ತಿಳಿದಕ್ಷಣದಲ್ಲಿಯೇ ಹಾವಿನನಿಮಿತ್ತವಾದ ಭಯವು ಅನುಭೂತವಾಗುತ್ತದೆ. ಇದರಂತೆ,–"ನಾನು ಮನುಷ್ಯ"–ಎಂಬ ತಿಳಿವಾದಕ್ಷಣದಲ್ಲಿಯೇ ದೇಹನಿಮಿತ್ತವಾದ ಫಲಗಳೆಲ್ಲ ಅನುಭವಸಿದ್ಧವಾಗುತ್ತವೆ. ಇದರಿಂದಲೂ–"ನಾನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮನುಷ್ಯ" ಮುಂತಾದಜ್ಞಾನಗಳು ಮಿಥ್ಯಾಜ್ಞಾನಗಳೆಂದು ನಿಶ್ಚಿತವು. ಆದ್ದರಿಂದ ಆತ್ಮನಿಗೆ ಸಂಸಾರಿತ್ವವು ವಾಸ್ತವವಲ್ಲ.

೨. ಸಂವೇದ್ಯತ್ವಾಚ್ಚ ನ ಜ್ಞಾತೃಧರ್ಮತ್ವಂ। ಸಂವೇದ್ಯತ್ವಾದೇವ ಸ್ವಾತ್ಮವ್ಯತಿರಿಕ್ತಸಂವೇದ್ಯತ್ವಂ । (ಗೀ.೧೩.೨)

ಆತ್ಮನಿಗೆ ಸಂಸಾರಿತ್ವಕ್ಕೆ ಕಾರಣವೇ ಇಲ್ಲ. ಸಂಸಾರವೆಂದರೆ, ಸುಖ ದುಃಖಗಳ ಅನುಭವವು. ತಿಳಿದುಬರುವಂಥದ್ದು ತಿಳಿಯುವವನಿಗೆ ಸಂಬಂಧಿಸುವುದಿಲ್ಲ. ದೃಶ್ಯವಾದುದು ದ್ರಷ್ಟೃವಿನ ಧರ್ಮವಾಗುವುದಿಲ್ಲ; ಬೆಂಕಿಯನ್ನು ನೋಡುವವನಿಗೆ ಬೆಂಕಿಯ ಧರ್ಮಗಳು ಸಂಭವಿಸುವುದಿಲ್ಲ. ಆದ್ದರಿಂದ ಯಾವುವು ಅನುಭವಕ್ಕೆ ವಿಷಯವಾಗುವುವೋ, ಅವು ಆತ್ಮನ ಧರ್ಮಗಳಾಗಲಾರವು. ಇದರಂತೆ ಅನುಭವಗಮ್ಯವಾಗಿರುವ ಸಂಸಾರವು ವಸ್ತುತಃ ಆತ್ಮನಿಗೆ ಇದೆಯೆಂದು ಸಿದ್ಧಿಸುವುದಿಲ್ಲ; ಕೇವಲ ಭ್ರಾಂತಿಯಿಂದಲೇ "ನನಗೆ ದುಃಖ"–ಎಂದು ತಿಳಿಯುತ್ತಾನೆ. ಮತ್ತೂ, ಯಾವುದು ತಿಳಿದುಬರುವುದೋ ಅದು ತನಗೆ ಅತ್ಯಂತಬೇರೆಯಾಗಿರುವುದರಿಂದಲೇ ತಿಳಿದುಬರುತ್ತದೆ– ಪ್ರಕಾಶಿಸುತ್ತದೆ. ಹೀಗೆ ದ್ರಷ್ಟದೃಶ್ಯಗಳಿಗೆ ಅತ್ಯಂತಭೇದವೇ ಸಿದ್ಧವಾಗಿದೆ. ದೃಶ್ಯವಾದ ಸಂಸಾರವು ದ್ರಷ್ಟೃವಾದ ಆತ್ಮನದಾಗುವುದಿಲ್ಲ.

೩. ಯಾವತ್ಕಿಂಚಿತ್ ಕ್ಷೇತ್ರಜ್ಞಸ್ಯ ದೋಷಜಾತಮವಿದ್ಯಮಾನಮಾಸಂಜಯಸಿ, ತಸ್ಯ ಜ್ಞೇಯತ್ವೋಪಪತ್ತೇಃ, ಕ್ಷೇತ್ರಧರ್ಮತ್ವಮೇವ, ನ ಕ್ಷೇತ್ರಜ್ಞಧರ್ಮತ್ವಂ । ಜ್ಞೇಯೇನ ಜ್ಞಾತುಃ ಸಂಸರ್ಗಾನುಪಪತ್ತೇಃ। ಯದಿ ಸಂಸರ್ಗಃ ಸ್ಯಾತ್, ಜ್ಞೇಯತ್ವಮೇವ ನೋಪಪದ್ಯೇತ । (ಗೀ.೧೩.೨)

ತನಗೆ ತಾನಾಗಲಿ, ತನ್ನ ಧರ್ಮವಾಗಲಿ ವಿಷಯವಾಗುವುದಿಲ್ಲ; ವಿಷಯವಾದುದರ ಸಂಬಂಧವು ತನಗಾಗುವುದಿಲ್ಲ. ಬೆಂಕಿಯು ಇತರ ವಸ್ತುಗಳನ್ನು ವಿಷಯೀಕರಿಸಿ ಸುಡುವಂತೆ, ತನ್ನನ್ನು ಸುಟ್ಟುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ತನಗೆ ವಿಷಯವಾಗಿ ಅನುಭವಕ್ಕೆ ಬರುತ್ತಿರುವ ಸಂಸಾರದ ದುಃಖವು ಆತ್ಮನದಲ್ಲ.

"ಅನುಭೂಯಮಾನವಾಗಿರುವ ಸಂಸಾರವು ಆತ್ಮನಿಗೆ ಇಲ್ಲವಾಗಲಿ; ಆತ್ಮನೇ ವಸ್ತುತಃ ಸಂಸಾರೀ—ದುಃಖಸ್ವರೂಪನು–ಎಂದಾಗಬಾರದೇಕೆ?"—ಎಂದರೆ; ಇದು ಸರಿಯಾಗುವುದಿಲ್ಲ. ಆತ್ಮನು ಸಂಸಾರಿಸ್ವರೂಪನೆಂದು ಹೇಳಿದರೆ, ತನ್ನ ಸ್ವರೂಪವು ತನಗೆ ವಿಷಯವಾಗುವ ಹಾಗಿಲ್ಲ; ತನಗೆ ವಿಷಯವಾಗದ ಸಂಸಾರದಿಂದ ಆತ್ಮನಿಗೆ ಸಂಸಾರದ ಅನುಭವವು ಆಗುವಹಾಗಿಲ್ಲ. ಹೀಗಾಗಿ ಆತ್ಮನನ್ನು ಸಂಸಾರಿಸ್ವರೂಪನೆಂದು ಒಪ್ಪಿದರೂ, ಆತ್ಮನು ಸಂಸಾರವುಳ್ಳವನೆಂದಾಗದೇ ಹೋಗುವುದು. ಪ್ರಾಣಿಮಾತ್ರಕ್ಕೂ

Sri Vidyabharathi Book Centre, Sringeri

CC-O. In Public Domain. Digitized by eGangotri

ತನ್ನಲ್ಲಿ ನಿರತಿಶಯಪ್ರೀತಿಯಿರುವುದರಿಂದ, ಆತ್ಮನು ಸಂಸಾರಿಸ್ವರೂಪ–ದುಃಖರೂಪ ಎಂಬುದು ಅಸಂಗತವೇ ಸರಿ.

೪. ಕ್ರಿಯಾಶ್ರಯತ್ವಾನುಪಪತ್ತೇರಾತ್ಮನಃ। ಯದಾಶ್ರಯಾ ಕ್ರಿಯಾ ತಮವಿಕುರ್ವತೀ ನೈವಾತ್ಮಾನಂ ಲಭತೇ । ಯದಿ ಸ್ವಾಶ್ರಯಯಾ ಕ್ರಿಯಯಾ ಆತ್ಮಾ ವಿಕ್ರಿಯೇತ ಅನಿತ್ಯತ್ವಮೇವಾತ್ಮನಃ ಪ್ರಸಜ್ಯೇತ! (ಸೂ.೧.೧.೪)

ಸುಖದುಃಖಗಳ ಅನುಭವವೇ ಸಂಸಾರವು, ಕರ್ಮವೇ ಸುಖದಃಖಗಳಿಗೆ ಕಾರಣವು; ಆತ್ಮನಿಗೆ ಕರ್ಮವೇ ಸಂಭವಿಸಲಾರದುದರಿಂದ ಆತ್ಮನಿಗೆ ಸುಖದುಃಖಾನುಭವರೂಪವಾದ ಸಂಸಾರವು ಸಂಭವಿಸಲೇ ಆರದು. ಆಶ್ರಯವಿಲ್ಲದೆ ಕ್ರಿಯೆಯು ಉಂಟಾಗದು; ತನ್ನ ಆಶ್ರಯದಲ್ಲಿ ವಿಕಾರವನ್ನು ಉಂಟುಮಾಡದೆಯೆ ಕ್ರಿಯೆಯು ಹುಟ್ಟುವಹಾಗಿಲ್ಲ; ಆದ್ದರಿಂದ ಆತ್ಮನಲ್ಲಿ ಕ್ರಿಯೆಯು ಉಂಟಾಗಬೇಕಾದರೆ ಆತ್ಮನುವಿಕಾರಹೊಂದಬೇಕಾಗುವುದು, ವಿಕಾರಿಯಾದರೆ, ಆತ್ಮನು ಅನಿತ್ಯನೇ ಆಗುವನು. ಆದ್ದರಿಂದ ನಿತ್ಯನಾದ ಆತ್ಮನಲ್ಲಿ ಕರ್ಮವೇ ಸಂಭವಿಸಲಾರದುದರಿಂದ ಆತ್ಮನಿಗೆ ಸಂಸಾರವೆಂಬುದು ವಸ್ತುತಃ ಇಲ್ಲವೆಂದೇ ಸಿದ್ಧವಾಗುವುದು.

೫. ನ ಸ್ವಾಭಾವಿಕಮಾತ್ಮನಃ ಕರ್ತೃತ್ವಂ ಸಂಭವತಿ, ಅನಿರ್ಮೋಕ್ಷಪ್ರಸಂಗಾತ್ । ಕರ್ತೃತ್ವಸ್ವಭಾವತ್ವೇ ಹ್ಯಾತ್ಮನೋ ನ ಕರ್ತೃತ್ವಾನ್ನಿರ್ಮೋಕ್ಷಃ ಸಂಭವತಿ, ಅಗ್ನೇರಿವೌಷ್ಣ್ಯಾತ್ । ನ ಚ ಕರ್ತೃತ್ವಾದನಿರ್ಮುಕ್ತಸ್ಯ ಪುರುಷಾರ್ಥಸಿದ್ಧಿಃ, ಕರ್ತೃತ್ವಸ್ಯ ದುಃಖರೂಪತ್ವಾತ್ । (ಸೂ. ೨.೩.೪೦)

ಕರ್ತೃತ್ವವನ್ನಾಗಲಿ, ಸಂಸಾರವನ್ನಾಗಲಿ, ಆತ್ಮನಿಗೆ ಸ್ವಾಭಾವಿಕವೆಂದು ಹೇಳುವಹಾಗಿಲ್ಲ. ಕರ್ತೃತ್ವಾದಿಗಳು ಆತ್ಮನ ಸ್ವಭಾವಗಳೆಂದಾದರೆ, ಬೆಂಕಿಗೆ ಸ್ವಭಾವವಾದ ಬಿಸಿಯು ಬೆಂಕಿಯಿರುವವರಿವಿಗೂ ತಪ್ಪದೇ ಇರುವಂತೆ, ನಿತ್ಯನಾದ ಆತ್ಮನಿಗೂ ಸಂಸಾರಿತ್ವವು ಎಂದಿಗೂ ತಪ್ಪಲಾರದಾಗಿ. ಆತ್ಮನಿಗೆ ಮೋಕ್ಷವೇ ಅಸಂಭಾವಿತವೆನಿಸುವುದು;

೬. ಚೈತನ್ಯಾದ್ಬಹಿರುಪಲಭ್ಯಮಾನತ್ವಾದ್ದುಃಖಿತ್ವಾದೀನಾಂ । ಸುಷುಪ್ತ್ಯಾದಿಷು ಚಾನನುವೃತ್ತೇಃ । ಚೈತನ್ಯಸ್ಯ ತು ಸುಷುಪ್ತೇಽಪ್ಯನುವೃತ್ತಿಮಾಮನಂತಿ । ತಸ್ಮಾತ್ಸರ್ವದುಃಖವಿನಿರ್ಮುಕ್ತೈಕಚೈತನ್ಯಾತ್ಮಕೋಽಹಮಿತ್ಯಾತ್ಮಾನುಭವಃ । (ಸೂ. ೪.೧.೨.)

ಸ್ವಾಭಾವಿಕಧರ್ಮವು ಆ ವಸ್ತುವಿರುವಾಗಲೆಲ್ಲ ಇರಬೇಕಾಗುತ್ತದೆ. ಜಾಗ್ರತ್ತಿನಲ್ಲಿ ಕಂಡ ಸುಖಾದಿಗಳು ಸ್ವಪ್ನದಲ್ಲಾಗಲಿ: ಸುಷುಪ್ತಿಯಲ್ಲಾಗಲಿ ತೋರಿಬರುವುದಿಲ್ಲ. ಚೈತನ್ಯವು ಮಾತ್ರ ಸುಷುಪ್ತಿಯಲ್ಲಿಯೂ ಇದ್ದೇ ಇದೆ. ಆದ್ದರಿಂದ– 'ಸುಖಾದ್ಯನು-

Sri Vidyabharathi Book Centre, Sringeri

CC-O. In Public Domain. Digitized by eGangotri

ಭವರೂಪವಾದ ಸಂಸಾರವು ಆತ್ಮನಿಗೆ ಸ್ವಭಾವಭೂತವಾದುದಲ್ಲ; ಅವನು ಕೇವಲ ಶುದ್ಧಚೈತನ್ಯಮಾತ್ರನಾದ ಬ್ರಹ್ಮಸ್ವರೂಪನೇ ಸರಿ'– ಎಂದು ಸಿದ್ಧವಾಗುತ್ತದೆ. ಆದಕಾರಣ– 'ಸರ್ವದುಃಖರಹಿತವಾದ ಚೈತನ್ಯೈಕಸ್ವರೂಪನಾಗಿದ್ದಾನೆ'– ಎಂಬುದು ಆತ್ಮನ ವಾಸ್ತವವಾದ ಅನುಭವವು. ಈ ಅನುಭವವನ್ನು ಪಡೆಯತಕ್ಕದ್ದು.

ಜೀವನು ವಸ್ತುತಃ ಬ್ರಹ್ಮಸ್ವರೂಪನೇ ಆಗಿದ್ದಾನೆಂದು ಯಾವ ಇತರ ಮತದವರೂ ಒಪ್ಪುವುದಿಲ್ಲ. ಕೆಲವು ದ್ವೈತಾದ್ವೈತಿಗಳೂ, ಶೈವಶಾಕ್ತತಾಂತ್ರಿಕರೂ ಮುಕ್ತಿಯಲ್ಲಿ ಜೀವನು ಬ್ರಹ್ಮರೂಪನಾಗುತ್ತಾನೆಂದು ಹೇಳುತ್ತಾರೆ; ಆದರೆ ಇದು ಸಮಂಜಸವಾಗುವುದಿಲ್ಲ. ಸಂಸಾರವನ್ನು ಜೀವನಿಗೆ ವಾಸ್ತವವೆಂದೇ ಇವರು ಎಲ್ಲರೂ ಒಪ್ಪುತ್ತಾರಾದ್ದರಿಂದ, ವಾಸ್ತವವಾದ ಸಂಸಾರವು ಎಂದಿಗೂ ಕಳೆಯಲಾರದೇ, ಜೀವನು ಯಾವಾಗಲೂ ಸಂಸಾರಿಯೇ ಆಗಿರಬೇಕಾಗುತ್ತದೆ. "ಸಂಸಾರಾವಸ್ಥೆಯನ್ನು ಕಳೆದುಕೊಂಡು ಮುಕ್ತ್ಯವಸ್ಥೆಯನ್ನು ಹೊಂದುತ್ತಾನೆಂದು" ಹೇಳಿದರೆ, ಜೀವನು ವಿಕಾರಿಯಾಗಿ ಅನಿತ್ಯನೆನಿಸುವನು. ಮತ್ತು, ಆಗುಂತಕವಾದ ಮುಕ್ತಿಯು ನಿತ್ಯವಾಗದೇ ಹೋಗುವುದು. ಆದ್ದರಿಂದ, "ಆತ್ಮನು ಯಾವಾಗಲೂ ನಿತ್ಯಮುಕ್ತಸ್ವರೂಪನೇ ಆಗಿದ್ದಾನೆ; ಅಜ್ಞಾನದ ದೋಷದಿಂದ ಸಂಸಾರಿಯಾಗಿ ಭ್ರಾಂತಿಯಿಂದ ತೋರಿಬರುತ್ತಿದ್ದಾನೆ; ಸ್ವಸ್ವರೂಪದ ಸಾಕ್ಷಾತ್ಕಾರದಿಂದ ಈ ಭ್ರಾಂತಿಯು ಕಳೆಯಲು, ನಿತ್ಯಮುಕ್ತಸ್ವರೂಪದಲ್ಲಿದ್ದು ಧನ್ಯನಾಗುತ್ತಾನೆಂಬ" ವೇದಾಂತಸಿದ್ಧಾಂತವೇ ಯಥಾರ್ಥವಾದುದು.

ಮೋಕ್ಷದ ಸ್ವರೂಪದ ವಿಷಯದಲ್ಲಿಯೂ ವಾದಿಗಳ ಕಲ್ಪನೆಗಳು ವಿಚಿತ್ರಗಳಾಗಿವೆ.

ಚಾರ್ವಾಕರಲ್ಲಿ ದೇಹವೇ ಆತ್ಮನೆಂದು ಕೆಲವರೂ, ಇಂದ್ರಿಯಗಳೇ ಎಂದೂ, ಪ್ರಾಣವೇ ಎಂದೂ, ಮನಸ್ಸೇ–ಎಂದೂ ವಾದಿಸುತ್ತಾ, ಆತ್ಮನ ನಾಶವೇ ಮೋಕ್ಷವೆಂದು ಹೇಳುತ್ತಾರೆ.

ಕ್ಷಣಕ್ಷಣವೂ ನಾಶಹೊಂದುತ್ತಿರುವ ಜ್ಞಾನದ ಸಂತಾನವೇ ಆತ್ಮನೆಂದೂ ಇದರ ನಾಶವೇ ಮೋಕ್ಷವೆಂದೂ ಬೌದ್ಧರಲ್ಲಿ ಕೆಲವರು ಹೇಳುವರು. ಮತ್ತೆ ಕೆಲವರು ಆತ್ಮನು–ಎಂದು ಏನೊಂದೂ ಇಲ್ಲವೆಂದೂ, ಎಲ್ಲವೂ ಶೂನ್ಯವೇ ಎಂದೂ, ಶೂನ್ಯಭಾವವೇ ಮೋಕ್ಷವೆಂದೂ ಹೇಳುವರು.

ಈ ಎರಡು ಮತಗಳಲ್ಲಿಯೂ · ನಿತ್ಯನಾದ ಆತ್ಮನೇ ಇಲ್ಲವಾದ್ದರಿಂದ ಮೋಕ್ಷದ ಕಥೆಯೇ ಇಲ್ಲವಾಗಿದೆ.

ಜೈನರು ನಿತ್ಯನಾದ ಆತ್ಮನನ್ನು ಒಪ್ಪಿದರೂ, ಅವನು ದೇಹದ ಆಕಾರನಾಗಿರುವನೆಂದು ಹೇಳುವರು. ಬಂಧವು, ಕಳೆದಮೇಲೆ ಆತ್ಮನು ನಿರಂತರವೂ ಮೇಲೆಮೇಲಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋಗುತ್ತಿರುತ್ತಾನೆ–ಇದೇ ಮೋಕ್ಷವೆಂದು ಅವರಲ್ಲಿ ಕೆಲನರೂ; ಅಲೋಕಾಕಾಶಕ್ಕೆ ಹೋಗುತ್ತಾನೆ–ಇದೇ ಮೋಕ್ಷವೆಂದು ಮತ್ತೆ ಕೆಲನರೂ– ಹೇಳುವರು. ದೇಹಾಕಾರ-ನಾದ ಆತ್ಮನು ದೇಹದಂತೆ ಪರಿಚ್ಛಿನ್ನನೂ, ಸಾವಯವನೂ, ವಿಕಾರಿಯೂ ಆಗಿ ಅನಿತ್ಯನೇ ಆಗುವನು; ಮತ್ತೆ ಮೋಕ್ಷವು ಯಾರಿಗೆ? ಮೋಕ್ಷದಲ್ಲಿಯೂ ನಿರಂತರಗಮನ ಕ್ರಿಯೆಯಿರುವುದಾದರೆ, ದುಃಖವೇ ಆಗುವುದರಿಂದ, ಅದೆಂಥ ಮೋಕ್ಷವು?

ನ್ಯಾಯಮತದಲ್ಲಿ ಆತ್ಮನನ್ನು ವಸ್ತುತಃ ಜಡಸ್ವರೂಪನೆಂದು ಹೇಳುವರು. ಕಲ್ಲಿನ ಬಂಡೆಯಂತಿರುವ ಈ ಸ್ಥಿತಿಯೂ ಮೋಕ್ಷವಾಗುವುದು ಹೇಗೆ?

ಸಾಂಖ್ಯಮತದಲ್ಲಿ ಆತ್ಮನು ನಿತ್ಯಮುಕ್ತನೇ ಆದರೂ, ಪ್ರಧಾನದಿಂದ ಈಗ ವಾಸ್ತವವಾದ ಸಂಸಾರವುಂಟಾಗಿದೆಯೆಂದೂ, ಪ್ರಧಾನಪುರುಷರ ಭೇದಜ್ಞಾನದಿಂದ ಸರ್ವದುಃಖಗಳ ಪೂರ್ಣನಾಶವೇ ಮೋಕ್ಷವೆಂದೂ ಕಲ್ಪಿಸುತ್ತಾರೆ. ಆತ್ಮನು ವಸ್ತುತಃ ನಿತ್ಯಮುಕ್ತನೇ ಅದರೆ, ಅವನಿಗೆ ಈಗ ಸಂಸಾರವು ವಾಸ್ತವವಾಗುವುದು ಹೇಗೆ? ಪ್ರಧಾನಪುರುಷರ ಭೇದಜ್ಞಾನದಿಂದ ವಾಸ್ತವವಾದ ಸಂಸಾರದುಃಖವು ನಾಶವಾಗುವುದು ಹೇಗೆ? ಇದು ಅಸಂಭಾವಿತವೇ ಸರಿ.

ತಾಂತ್ರಿಕರು–ಶಿವನನ್ನೋ ವಿಷ್ಣುವನ್ನೋ ದೇವಿಯನ್ನೋ ಪೂಜಾದಿಸೇವೆಗಳಿಂದ ಒಲಿಸಿಕೊಂಡರೆ, ಕೈಲಾಸ, ವೈಕುಂಠ ಅಥವಾ ಚಿಂತಾಮಣಿಗೃಹ– ಮುಂತಾದ ಲೋಕ ಗಳಲ್ಲಿ ವಾಸವು ದೊರೆಯುವುದು–ಇದೇ ಮೋಕ್ಷವೆನ್ನುವರು. ಇವು ಆತ್ಮನ ಸ್ವರೂಪ-ಗಳಾಗದೇ, ಆಗಂತುಕಗಳಾದ್ದರಿಂದ ನಿತ್ಯವಾಗಲಾರದೆ ಮೋಕ್ಷವೆನಿಸಲಾರವು.

ಆದುದರಿಂದ ವೇದಾಂತಪಕ್ಷವನ್ನು ಬಿಟ್ಟು ಇತರ ಮತಗಳಲ್ಲಿ ಮೋಕ್ಷದ ಸ್ವರೂ-ಪವೇ ಸಿದ್ಧಿಸುವುದಿಲ್ಲ.

೫. **ಮುಕ್ತಿಶ್ಚ ತಜ್ಜ್ಞಾನತಃ ।** "ಜೀವಬ್ರಹ್ಮೈಕತ್ವತತ್ವದ ಅನುಭವ-ದಿಂದಲೇ ಮುಕ್ತಿಯು ಸಿದ್ಧಿಸುವುದು.

ಬ್ರಹ್ಮವಿದಾಪ್ನೋತಿ ಪರಂ । (ತೈ. ೨.೧.)
ಬ್ರಹ್ಮವೇದ ಬ್ರಹ್ಮೈವ ಭವತಿ ·(ಮುಂ. ೩.೨.೯)
ತರತಿ ಶೋಕಮಾತ್ಮವಿತ್ । (ಛಾಂ. ೭.೧.೩)

ಅಸ್ಯಾನರ್ಥಹೇತೋಃ ಪ್ರಹಾಣಾಯಾತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾಂತಾ ಆರಭ್ಯಂತೇ । (ಸ.ಶಾ. ೧.೧.೧.)

Sri Vidyabharathi Book Centre, Sringeri

CC-O. In Public Domain. Digitized by eGangotri

ಆತ್ಮನು ವಸ್ತುತಃ ನಿತ್ಯಮುಕ್ತಬ್ರಹ್ಮಸ್ವರೂಪನೆಂದು ಸಿದ್ಧಿಸಿರುವುದರಿಂದ, ಇಂಥ ಆತ್ಮನಲ್ಲಿ ಈಗ ತೋರಿಬರುವ ಸಂಸಾರವು ಅವಾಸ್ತವವೆಂದು ಸ್ಪಷ್ಟವು. ಆತ್ಮನ ವಾಸ್ತವವಾದ ಸ್ವರೂಪದ ಅಜ್ಞಾನದಿಂದಲೇ ಆತ್ಮನಿಗೆ ಸಂಸಾರವು ಪ್ರಾಪ್ತವಾಗಿದೆ; ಈ ಅಜ್ಞಾನದ ನಾಶವಾದರೆ; ಆತ್ಮನಿಗೆ ಸ್ವರೂಪಪ್ರಾಪ್ತಿರೂಪವಾದ ಮೋಕ್ಷವೆಂಬ ಪರಮಪುರುಷಾರ್ಥವು ಸಿದ್ಧಿಸಿ ಕೃತಕೃತ್ಯನಾಗುತ್ತಾನೆ. ಅಜ್ಞಾನದ ನಾಶವು, ಅದಕ್ಕೆ ವಿರುದ್ಧವಾದ ಜ್ಞಾನದಿಂದಲೇ ಸಾಧ್ಯ, ಕರ್ಮಾದಿಗಳಿಂದ ಆಗದು. ಬ್ರಹ್ಮಾತ್ಮೈಕತ್ವದ ಅಜ್ಞಾನವೇ ಸಂಸಾರಕ್ಕೆ ಕಾರಣವಾದ್ದರಿಂದ ಬ್ರಹ್ಮಾತ್ಮೈಕತ್ವದ ಜ್ಞಾನವೇ ಸಂಸಾರನಾಶಕ್ಕೆ ಕಾರಣವೆಂದು ಸ್ಪಷ್ಟವೇ ಇದೆ; ಕತ್ತಲೆಯನ್ನು ಕಳೆಯುವುದಕ್ಕೆ, ಬೆಳಕಿಗೆ ಬೇರೆಯಾವುದೊಂದರ ಸಹಾಯವೂ ಬೇಕಿಲ್ಲ? ಇದರಂತೆ ಸ್ವತಂತ್ರವಾಗಿ ಜ್ಞಾನವೊಂದೇ ಸಂಸಾರವನ್ನು ಕಳೆಯುವುದಕ್ಕೆ ಸಮರ್ಥವಾಗಿದೆ. ಆದ್ದರಿಂದ ಆತ್ಮೈಕತ್ವಜ್ಞಾನದಿಂದಲೇ ಮೋಕ್ಷಸಿದ್ಧಿ ಎಂದು ಸಿದ್ಧಾಂತವು.

ಆತ್ಮೈಕತ್ವಜ್ಞಾನದಿಂದ ಮುಕ್ತಿಯೆಂಬುದನ್ನು ಇತರ ಮತದವರು ಯಾರೂ ಒಪ್ಪುವುದಿಲ್ಲ. ಸಂಸಾರವನ್ನು ವಾಸ್ತವವೆಂದು ಒಪ್ಪುವುದರಿಂದ, ಜ್ಞಾನಮಾತ್ರದಿಂದ ಅವರ ಮತದಲ್ಲಿ ಸಂಸಾರವು ಕಳೆಯುವುದು ಸಾಧ್ಯವಿಲ್ಲ. ತಾಂತ್ರಿಕಮತಾವಲಂಬಿಗಳು ಕೆಲವರು ಹೀಗೆ ಅಭಿಪ್ರಾಯಪಡುತ್ತಾರೆ– ಪರಮಾತ್ಮನ ಸ್ವರೂಪವನ್ನು ತಿಳಿಯುವುದರಿಂದ ಅವನ ಮಹಿಮೆಯು ಗೊತ್ತಾಗುವುದು; ಆಗ ಅವನಲ್ಲಿ ಭಕ್ತಿಯುಂಟಾಗಿ, ಅವನನ್ನೇ ಭಜನೆ ಮಾಡುತ್ತಾನೆ; ಅದರಿಂದ ಅವನಿಗೆ ಭಗವಂತನ ಪ್ರಸಾದದ ಅನುಗ್ರಹವಾಗುತ್ತದೆ; ಭಗವದನುಗ್ರಹದಿಂದ ಅವನಿಗೆ ಮುಕ್ತಿಯು ದೊರೆಯುತ್ತದೆ"–ಎಂದು. ಇದು ಬರಿಯ ಕಥೆಯೇ ಹೊರತು, ವಸ್ತುಸ್ಥಿತಿಯಾಗಲಾರದು. ಭಗವಂತನಿಂದ ಅನುಗ್ರಹಮಾಡಿದ್ದಾದರೂ, ರಾಜನ ಅನುಗ್ರಹದಿಂದ ಲಭ್ಯವಾದ ಜಹಗಿರಿಯಂತೆ, ಮುಕ್ತಿಯು ಆತ್ಮನ ಸ್ವರೂಪವಾಗಲಾರದೇ ಹೋಗುವುದಲ್ಲದೆ, ಅದು ನಿತ್ಯವೆಂದೂ ಆಗದೇ ಹೋಗುವುದು. "ಸರ್ವಂ ಪರವಶಂ ದುಃಖಂ"– ಎಂಬ ಲಕ್ಷಣದಂತೆ, ಈ ಮುಕ್ತಿಯನ್ನು ದುಃಖದ ಕೋಟೆಯಲ್ಲಿಯೇ ಸೇರಿಸಬೇಕಾಗುವುದು. ಆದುದರಿಂದ, ವೇದೈಕಸಿದ್ಧವಾದ ಆತ್ಮತತ್ತ್ವಸಾಕ್ಷಾತ್ಕಾರದಿಂದ ನಿತ್ಯಮುಕ್ತಾತ್ಮಸ್ವರೂಪಸಿದ್ಧಿಯೆಂಬ ಅರ್ಥವೇ ಯಥಾರ್ಥವಾಗುವುದು.

೬. ಶ್ರೌತಂ ಕರ್ಮ ಚ ತತ್ರ ಸಾಧನಂ । "ಇಂಥ ಜ್ಞಾನಕ್ಕೆ ಶ್ರುತಿಯಲ್ಲಿ ಕರ್ಮಾದಿಗಳೇ ವಿಹಿತವಾಗಿರುವ ಸಾಧನಗಳು."

'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ ।' (ಬೃ.)

ದೃಷ್ಟಾರ್ಥಾ ಹಿ ವಿದ್ಯಾ । (ಸೂ. ೩.೪.೪೧)

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪೇಕ್ಷತೇ ಚ ವಿದ್ಯಾ ಸರ್ವಾಣ್ಯಾಶ್ರಮಕರ್ಮಾಣಿ ॥ ಉತ್ಪನ್ನಾ ಹಿ ವಿದ್ಯಾ ಫಲಸಿದ್ಧಿಂ ಪ್ರತಿ ನ ಕಿಂಚಿದನ್ಯದಪೇಕ್ಷತೇ; ಉತ್ಪತ್ತಿಂ ಪ್ರತಿ ತ್ವಪೇಕ್ಷತೇ। (ಸೂ. ೩.೪.೨೬.)

ಸ್ಮೃತಿಷ್ವಪಿ ಭಗವದ್ಗೀತಾದ್ಯಾಸು ಅನಭಿಸಂಧಾಯ ಫಲಮನುಷ್ಠಿತಾನಿ ಯಜ್ಞಾದೀನಿ ಮುಮುಕ್ಷೋರ್ಜ್ಞಾನಸಾಧನಾನಿ ಭವಂತೀತಿ ಪ್ರಪಂಚಿತಂ।- (ಸೂ. ೩.೪.೨೭)

ರೋಗಕ್ಕೆ ಕಾರಣವನ್ನು ವೈದ್ಯಶಾಸ್ತ್ರದಿಂದ ತಿಳಿದಮೇಲೆ, ಅಲ್ಲಿ ಹೇಳಿರುವ ಸಾಧನದಿಂದಲೇ ಅದನ್ನು ಪರಿಹರಿಸಿಕೊಳ್ಳಬೇಕಾಗುವುದು. ಬ್ರಹ್ಮಾತ್ಮೈಕ್ಯದ ಅಜ್ಞಾನವೇ ಸಂಸಾರರೋಗಕ್ಕೆ ಕಾರಣವೆಂದು ವೇದಾಂತಶಾಸ್ತ್ರದಿಂದ ತಿಳಿದುಬಂದಿರುವುದರಿಂದ. ಅಲ್ಲಿ ಹೇಳಿರುವ ಸಾಧನದಿಂದಲೇ ಅಜ್ಞಾನವನ್ನು ಕಳೆದುಕೊಂಡು ಸಂಸಾರವನ್ನು ಪರಿಹರಿಸಿಕೊಳ್ಳಲು ಸಾಧ್ಯವಾದೀತು. ಬ್ರಹ್ಮಾತ್ಮೈಕತ್ವಜ್ಞಾನವೇ ಸಂಸಾರಕಾರಣವಾದ ಅಜ್ಞಾನಕ್ಕೆ ನಿವರ್ತಕವೆಂದು ವೇದಾಂತಶಾಸ್ತ್ರದಿಂದ ಸಿದ್ಧಿಸಿರುತ್ತದೆ;

ಜ್ಞಾನವು ದೃಷ್ಟಫಲವು—'ಜ್ಞಾನವುಂಟಾಯಿತು, ವಿಷಯ ತಿಳಿಯಲಿಲ್ಲ'- ಎಂದಾಗುವುದಿಲ್ಲ. **'ಬ್ರಹ್ಮವಿದ್ಬ್ರಹ್ಮೈವ ಭವತಿ'**-'ಬ್ರಹ್ಮವನ್ನು ತಿಳಿದಕೂಡಲೆ ಬ್ರಹ್ಮವೇ ಆಗುತ್ತಾನೆ'-ಎಂದು ಶ್ರುತಿಯು ತಿಳಿಸುತ್ತದೆ. ಕರ್ಮದ ಫಲವಾದರೋ ಆಕೂಡಲೆ ಆಗುತ್ತದೆಂಬ ನಿಯಮವಿಲ್ಲ. ಅನುಭವಾತ್ಮಕವಾದ ಜ್ಞಾನವೇ ಇಂಥ ಸದ್ಯಃಫಲಕವಾಗುತ್ತದೆಯೇ ಹೊರತು- ಪರೋಕ್ಷಜ್ಞಾನವಲ್ಲ. ಆದ್ದರಿಂದ ಬ್ರಹ್ಮಾತ್ಮೈಕತ್ವವಿಷಯಕವಾದ, ಅನುಭವಾತ್ಮಕವಾದ ಜ್ಞಾನವೇ ಮೋಕ್ಷಸಿದ್ಧಿಗೆ ಬೇಕಾಗಿದೆ. ಇದನ್ನೇ ತತ್ತ್ವಸಾಕ್ಷಾತ್ಕಾರವೆಂದು ಹೇಳುತ್ತಾರೆ.

ಸಾಕ್ಷಾತ್ಕಾರರೂಪವಾದ ಬ್ರಹ್ಮಾತ್ಮೈಕತ್ವದ ಜ್ಞಾನವು ಶ್ರವಣ-ಮನನ-ನಿದಿಧ್ಯಾಸನಗಳಿಂದ ಲಭಿಸುತ್ತದೆಂದು ಶ್ರುತಿಯಿಂದ ತಿಳಿದುಬರುವುದು; ವೇದಾಂತವಾಕ್ಯಗಳ ಅರ್ಥವಿಚಾರವೇ **'ಶ್ರವಣ'**. ವೇದಾಂತವಾಕ್ಯಗಳಿಗೆಲ್ಲ ಅದ್ವಿತೀಯಬ್ರಹ್ಮಾತ್ಮೈಕ್ಯದಲ್ಲಿಯೇ ತಾತ್ಪರ್ಯವೆಂಬುದನ್ನು ಶ್ರವಣದಿಂದ ನಿಶ್ಚಯಿಸಿಕೊಂಡು, ಅನಂತರ ಮನನಮಾಡಬೇಕು. **'ಮನನ'** ವೆಂದರೆ, ಶ್ರವಣದಿಂದ ತಿಳಿದುಬಂದ ವೇದಾಂತಗಳ ತಾತ್ಪರ್ಯಾರ್ಥಕ್ಕೆ ಯಾವವಿಧವಾದ ವಿರೋಧವೂ ಇಲ್ಲವೆಂದು ತರ್ಕದಿಂದ ನಿರ್ಧರಿಸಿಕೊಳ್ಳುವುದು. ಯಥಾರ್ಥವಾದುದೆಂದು ಹೀಗೆ ದೃಢಪಟ್ಟ ತತ್ತ್ವವನ್ನು, ಇತರ ಚಿಂತೆಗಳನ್ನೆಲ್ಲಾ ಸಂಪೂರ್ಣವಾಗಿ ತೊರೆದು, ನಿರಂತರವಾಗಿ—ಎಂದರೆ, ಎಡಬಿಡದೆ ಚಿಂತಿಸುವುದು **ನಿಧಿಧ್ಯಾಸನವು.** ಈ ನಿದಿಧ್ಯಾಸನದ ಪರಿಪಾಕದಿಂದ ತತ್ತ್ವದ ಸಾಕ್ಷಾ-

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ಕಾರವಾಗುವುದು,–ಆತ್ಮತತ್ತ್ವವು ಅಪರೋಕ್ಷವಾಗಿ ಅನುಭವಕ್ಕೆ ಬರುವುದು. ಆ ಕೂಡಲೆ ಸರ್ವಸಂಸಾರಕಾರಣವಾದ ಅಜ್ಞಾನವು ನಿಃಶೇಷವಾಗಿ ನಾಶವಾಗಿ, ಮುಕ್ತಿಯು ಕೈಗೂಡುವುದು.

"ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ ॥ (ಮುಂ ೧.೨.೧೨): ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥ "(ಗೀ. ೪.೨.೧೨) ಎಂದು ಶ್ರುತಿಸ್ಮೃತಿಗಳು ಗುರುಮೂಲಕವಾಗಿಯೇ ವೇದಾಂತಶ್ರವಣಮಾಡಬೇಕೆಂದು ವಿಧಿಸುತ್ತವೆ. ಆದ್ದರಿಂದಲೇ–**''ಶಾಸ್ತ್ರಜ್ಞೋಽಪಿ ಸ್ವಾತಂತ್ರ್ಯೇಣ ಬ್ರಹ್ಮಜ್ಞಾನಾನ್ವೇಷಣಂ ನ ಕುರ್ಯಾತ್"**। (ಮುಂ. ಭಾಷ್ಯ ೧.೨.೧೨) "ಶಾಸ್ತ್ರಜ್ಞನಾಗಿದ್ದರೂ, ಆತ್ಮವಿಚಾರವನ್ನು ಗುರುಮೂಲಕವಾಗಿ ಅಲ್ಲದೆ ಸ್ವತಂತ್ರವಾಗಿ ಮಾಡಕೂಡದು."– ಎಂದು ಶ್ರೀಭಗವತ್ಪಾದರು ಅಪ್ಪಣೆಕೊಡಿಸಿದ್ದಾರೆ. ಸ್ವತಂತ್ರವಾಗಿ ವಿಚಾರಮಾಡುವುದರಿಂದ ವೇದಾಂತಗಳ ವಾಸ್ತವವಾದ ತಾತ್ಪರ್ಯಾರ್ಥವು ನಿಶ್ಚಿತನಾಗಿ ತಿಳಿದುಬರುವುದಿಲ್ಲವೆಂದೂ ಅಭಿಪ್ರಾಯವು- ಆದ್ದರಿಂದ, ಸಾಂಪ್ರದಾಯಿಕರಾದ ಸದ್ಗುರುಗಳ ಮೂಲಕವಾಗಿಯೇ ವೇದಾಂತಶ್ರವಣವನ್ನು ಮಾಡತಕ್ಕದ್ದು. ಈಗಿನ ಕಾಲದವರು ಸ್ವತಂತ್ರವಾಗಿ ಪುಸ್ತಕಗಳನ್ನು ಓದಿಕೊಂಡು ವೇದಾಂತಾರ್ಥವನ್ನು ತಿಳಿಯುವ ಪ್ರಯತ್ನವನ್ನು ಮಾಡತ್ತಿರುವುದರಿಂದ ವೇದಾಂತತತ್ತ್ವದಲ್ಲಾಗಲಿ, ಅದಕ್ಕೆ ಬೇಕಾದ ಸಾಧನೆಗಳಲ್ಲಾಗಲಿ ಶ್ರದ್ಧೆಯೇ ಇಲ್ಲದೆ, ಸ್ವಾಭಾವಿಕವಾದ ಅನಾಚಾರದಲ್ಲಿಯೇ ಇರುವುದು ಕಂಡುಬರುತ್ತಿದೆ. ಶ್ರೇಯಸ್ಕಾಮಿಗಳಾದವರು ಶ್ರದ್ಧಾವಂತರಾಗಿ, ಸದಾಚಾರಸಂಪನ್ನರಾಗಿ, ಸಾಂಪ್ರದಾಯಿಕರಾದ ಸದ್ಗುರುಗಳನ್ನಾಶ್ರಯಿಸಿ ತತ್ತ್ವಜ್ಞಾನವನ್ನು ಸಂಪಾದಿಸಲು ಪ್ರಯತ್ನಪಡತಕ್ಕದ್ದು.

'ಸಮಿತ್ಪಾಣಿಃ, ಸನ್ನ್ಯಸ್ಯ ಶ್ರವಣಂ ಕುರ್ಯಾತ್'– ಎಂದು ಮುಂತಾದ ಶ್ರುತಿಗಳಿಂದ ವೇದಾಂತಶ್ರವಣಮಾಡುವುದಕ್ಕೆ ಸನ್ನ್ಯಾಸಿಯಾದವನಿಗೇ ಮುಖ್ಯಾಧಿಕಾರವೆಂದು ತಿಳಿದುಬರುವುದು. **ಅಧಿಕಾರ**ವೆಂದರೆ ಫಲಯೋಗ್ಯತೆ. ಸಂಸಾರದುಃಖದಿಂದ ವಿರಕ್ತನಾಗಿ ಮೋಕ್ಷವೊಂದನ್ನೇ ತೀವ್ರವಾಗಿ ಅಪೇಕ್ಷಿಸಿ, ಸನ್ಯಾಸಾಶ್ರಮವನ್ನು ಸ್ವೀಕರಿಸುವವನು ಶ್ರವಣಮಾಡಿದರೆ, ಅವನಿಗೇ ಶ್ರವಣದಿಂದಾಗುವ ಫಲವು ದೊರಕುವುದೆಂದು ತಾತ್ಪರ್ಯವು. ವಿರಕ್ತಿಯಿಲ್ಲದವನು ಶ್ರವಣಮಾಡಿದರೂ ಮುಖ್ಯವಾದ ಫಲವು ದೊರೆಯುವುದಿಲ್ಲ. ಆದ್ದರಿಂದ ಸಂಸಾರದಲ್ಲಿ ದೃಢವಾದ ಮತ್ತು ತೀವ್ರವಾದ ವಿರಕ್ತಿಯನ್ನು ಸಂಪಾದಿಸಿಕೊಳ್ಳಬೇಕು.

ಇಂಥ ತೀವ್ರವಿರಕ್ತಿಯೇ ಸನ್ಯಾಸಾಶ್ರಮವನ್ನು ತೆಗೆದುಕೊಳ್ಳುವುದಕ್ಕೆ ಕಾರಣವು; ವಿರಕ್ತಿಯಿಲ್ಲದ ಸನ್ಯಾಸವು ವೇಷಮಾತ್ರವಾಗಿ, ಶ್ರವಣಾದಿಗಳಿಗೆ ಬೇಕಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಖ್ಯಾಧಿಕಾರವಾಗುವುದಿಲ್ಲ. ಅನಾದಿಜನ್ಮಗಳಿಂದ ಕೂಡಿಹಾಕಿಕೊಂಡಿರುವ ಕರ್ಮಗಳ ವಾಸನೆಗಳು ಅಂತಃಕರಣದಲ್ಲಿ ತುಂಬಿಕೊಂಡಿರುವವರಿಗೂ–"**ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಂ!**" (ಗೀ ೯–೩೩)—ಎಂಬ ಶ್ರೀಭಗವದ್ಗೀತಾ ವಚನದಂತೆ, "ಸಂಸಾರವು ಅನಿತ್ಯವೂ ಸುಖವಿಲ್ಲದುದೂ ಆಗಿರುವುದೆಂಬ"– ತಿಳಿವಿನಿಂದ ಬರಬೇಕಾದ ಶುದ್ಧವಾದ ವಿರಕ್ತಿಯು ಹುಟ್ಟುವುದಿಲ್ಲ. ಅದಕ್ಕಾಗಿ ಚಿತ್ತದಲ್ಲಿರುವ ದುರಿತವೆಲ್ಲ ಕಳೆದು, ಚಿತ್ತವು ಶುದ್ಧವಾಗಬೇಕು. ಶುದ್ಧವಾದ ಚಿತ್ತದಲ್ಲಿಯೇ ಮೇಲೆ ಹೇಳಿದ ಸಂಸಾರದ ದೋಷವು ಮನಗಂಡು, ಅದರಲ್ಲಿ ನಿಜವಾದ ವಿರಕ್ತಿಯುಂಟಾಗುತ್ತದೆ. ಚಿತ್ತಶುದ್ಧಿಯಿಲ್ಲದ ಕಾರಣದಿಂದಲೇ,–'ಸಂಸಾರವೆಲ್ಲ ಅನಿತ್ಯ, ದುಃಖರೂಪ'– ಎಂದು ಎಲ್ಲರಿಗೂ ತಿಳಿದಿದ್ದರೂ, ಯಾರಿಗೂ ವಿರಕ್ತಿಯು ಆಗಿಲ್ಲ. ಆದ್ದರಿಂದ ಮೊದಲು ಚಿತ್ತ ಶುದ್ಧಿಯನ್ನು ಸಂಪಾದಿಸಿಕೊಳ್ಳಬೇಕು.

"**ಚಿತ್ತಸ್ಯ ಶುದ್ಧಯೇ ಕರ್ಮ! ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ !**" (ಗೀ. ೮–೧೨)–ಎಂಬ ವಚನಗಳಿಂದ, ಶಾಸ್ತ್ರವಿಹಿತವಾದ ಸ್ವಧರ್ಮವನ್ನು ಶ್ರೀಭಗವದಾರಾಧನೆಯೆಂಬ ಭಾವನೆಯಿಂದ, ಯಥಾವಿಧಿಯಾಗಿ ಅನುಷ್ಠಿಸುವುದು ಚಿತ್ತಶುದ್ಧಿಗೆ ಕಾರಣವೆಂದು ತಿಳಿದುಬರುವುದು. "**ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ! ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ!**" ಗೀ. (೧೮–೪೫–೪೬) ಎಂದು ಮುಂತಾದ ಶ್ರೀಗೀತಾವಚನಗಳೂ ಇದೇ ಅರ್ಥವನ್ನೇ ವಿಶದವಾಗಿ ಪ್ರತಿಪಾದಿಸುತ್ತವೆ. ಶಾಸ್ತ್ರವಿಹಿತವಾದ ಸ್ವಧರ್ಮವನ್ನು ಭಗವದಾರಾಧನೆಯಾಗಿ, ಎಂದರೆ ನಿಷ್ಕಾಮವಾಗಿ, ಅನುಷ್ಠಿಸುವುದನ್ನು ಬಿಟ್ಟು, ಚಿತ್ತಶುದ್ಧಿಗೆ ಬೇರೊಂದು ಸಾಧನೆಯು ಯಾವುದೂ ಸಿದ್ಧವಾಗಿಲ್ಲ. '**ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ**'— "ಚಿತ್ತದಲ್ಲಿರುವ ದುರಿತವಾಸನೆಗಳ ಕಷಾಯವು ಕರ್ಮಗಳಿಂದ ಪಕ್ವವಾಗಿ ನಾಶವಾದರೆ, ಆಮೇಲೆ ಶ್ರವಣಾದಿಸಾಧನೆಗಳಿಂದ ತತ್ತ್ವಸಾಕ್ಷಾತ್ಕಾರರೂಪವಾದ ಜ್ಞಾನವು ಲಭಿಸುತ್ತದೆ".

ಶ್ರೀಭಗವತ್ಪಾದರವರು ಮೇಲೆ ಉದಾಹರಿಸಿದ ವಾಕ್ಯಗಳಿಂದ ಇದನ್ನೇ ಸ್ಫುಟಪಡಿಸಿದ್ದಾರೆ—

"ವಿದ್ಯೆ ಎಂದರೆ ತತ್ತ್ವಸಾಕ್ಷಾತ್ಕಾರರೂಪವಾದ ಜ್ಞಾನವು; ಇದು ತಾನು ಹುಟ್ಟುವುದಕ್ಕೆ ಎಲ್ಲ ಆಶ್ರಮಕರ್ಮಗಳನ್ನೂ ಅಪೇಕ್ಷಿಸುತ್ತದೆ. ಉತ್ಪನ್ನವಾದ ಮೇಲೆ, ಅಜ್ಞಾನವನ್ನು ಕಳೆಯುವುದಕ್ಕೆ, ವಿದ್ಯೆಯು ಬೇರೆ ಯಾವುದೊಂದನ್ನೂ ಅಪೇಕ್ಷಿಸುವುದಿಲ್ಲ; ತಾನು ಉತ್ಪನ್ನವಾಗುವುದಕ್ಕೆ ಮಾತ್ರ ಎಲ್ಲ ಕರ್ಮಗಳನ್ನೂ ಅಪೇಕ್ಷಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಫಲಾಪೇಕ್ಷೆಯಿಲ್ಲದೆ ಅನುಷ್ಠಿಸಿದ ಯಜ್ಞಾದಿಕರ್ಮಗಳು ಮುಮುಕ್ಷುವಾದವನಿಗೆ ಜ್ಞಾನಕ್ಕೆ ಸಾಧನಗಳಾಗುತ್ತವೆಂದು ಭಗವದ್ಗೀತೆ—ಮುಂತಾದ ಸ್ಮೃತಿಗಳಲ್ಲಿ ವಿಸ್ತಾರವಾಗಿ ಪ್ರತಿಪಾದಿಸಿರುತ್ತದೆ."

ಸಕಾಮಸ್ಯ ಬಂಧಕಾನ್ಯಪ್ಯೇತಾನಿ ಕರ್ಮಾಣಿ, ನಿಷ್ಕಾಮಸ್ಯ ಮುಮುಕ್ಷೋಃ ಉಪಾತ್ತದುರಿತಕ್ಷಯದ್ವಾರಾ ಚಿತ್ತಶುದ್ಧಯೇ, ಜ್ಞಾನೋತ್ಪತ್ತಯೇ ಚಾವಕಲ್ಪಂತೇ ।

"ಫಲಕಾಮನೆಯಿಂದ ಕರ್ಮಮಾಡುವವನಿಗೆ ಬಂಧಕಗಳಾದ ಈ ಕರ್ಮಗಳೇ, ನಿಷ್ಕಾಮನೆಯಿಂದ ಮಾಡುವ ಮುಮುಕ್ಷುವಿಗೆ, ಜನ್ಮಾಂತರಗಳಲ್ಲಿ ಸಂಪಾದಿತವಾಗಿರುವ ದುರಿತಗಳ ನಾಶದ ಮೂಲಕ ಚಿತ್ತಶುದ್ಧಿಗೂ, ತತ್ತ್ವಜ್ಞಾನದ ಉತ್ಪತ್ತಿಗೂ ಕಾರಣವಾಗುತ್ತವೆ." ಆದುದರಿಂದ ಶಾಸ್ತ್ರವಿಹಿತವಾಗಿರುವ ವರ್ಣಾಶ್ರಮಧರ್ಮಗಳನ್ನು ಅನುಷ್ಠಿಸುವುದು ಇಹಪರಶ್ರೇಯಸ್ಸಿಗೆ ಮುಖ್ಯವಾದ ಸಾಧನವೆಂದು ಸಿದ್ಧವಾಗುವುದು.

ಇತಿ ಹ್ಯಾಚಾರ್ಯಲೀಲಾಯುತಂ ।— "ಈ ಆರೂ ಶ್ರೀಭಗವತ್ಪೂಜ್ಯಪಾದಾಚಾರ್ಯರವರ ಲೀಲಾವೈಭವವು.

ಈ ಆರುವಿಷಯಗಳನ್ನೂ ಶ್ರೀಮಚ್ಛಂಕರಭಗವತ್ಪಾದಾಚಾರ್ಯರವರು ಲೋಕಾನುಗ್ರಹಕ್ಕಾಗಿ ಪ್ರತಿಪಾದಿಸಿರುವುದು ಅವರ ಲೀಲಾವೈಭವವಾಗಿದೆ. **ಶಾಸ್ತ್ರೋಪಪತ್ತಿಭ್ಯಾಮವಧಾರಿತತತ್ತ್ವದಶ್ವಯಾತ್ಮದರ್ಶನಂ ಸಮ್ಯಗ್ದರ್ಶನಂ । ತದ್ಬಾಹ್ಯತ್ವಾನ್ಮಿಥ್ಯಾದರ್ಶನಮನ್ಯತ್ ।** (ಮಾ. ಕಾ. ೩–೧೭)—ಎಂಬ ಭಗವತ್ಪಾದರ ಶ್ರೀಸೂಕ್ತಿಯಂತೆ, ಪ್ರಮಾಣ ಮತ್ತು ಅದಕ್ಕೆ ಅನುಸಾರವಾದ ಯುಕ್ತಿಗಳಿರುವುದರಿಂದ ಈ ಆರುವಿಷಯಗಳನ್ನು ಪ್ರತಿಪಾದಿಸುವುದು ಶ್ರೀಆಚಾರ್ಯರಿಗೆ ಕ್ಲೇಶವಾಗದೆ, ಕೇವಲ ಲೀಲಾಮಾತ್ರವಾಯಿತು. ಈ ಸಿದ್ಧಾಂತವು ಪ್ರಮಾಣ ಮತ್ತು ಯುಕ್ತಿಗಳಿಗನುಸಾರವಾಗಿ ಸ್ವಾನುಭವಕ್ಕೂ ಸಮ್ಮತವಾಗಿರುತ್ತಾ ಜಿಜ್ಞಾಸುಗಳಿಗೂ ಲೀಲಾರೂಪವಾಗಿಯೇ ಅನಾಯಾಸವಾಗಿ ಗ್ರಾಹ್ಯವಾಗಿರುತ್ತವೆ.

ಇತರಸಿದ್ಧಾಂತಗಳಿಗೆ ವೇದಪ್ರಮಾಣವು ದುರ್ಲಭವಾಗಿದೆ; ಇದನ್ನು ಪ್ರತಿಪಾದಿಸುವುದಕ್ಕಾಗಿ ಕ್ಲೇಶದಿಂದ ಯುಕ್ತಿಗಳನ್ನು ಕಲ್ಪಿಸುವ ಮಹಾಪ್ರಯಾಸವಿದೆ; ಇದನ್ನು ತಿಳಿಯುವುದು ಜಿಜ್ಞಾಸುಗಳಿಗೆ ಅತೀವಕ್ಲೇಶಕರವಾಗಿದೆ? ಅನುಭವಕ್ಕಂತೂ ತೀರಾ ಹೊಂದಲಾರದೇ ಇದೆ.

ವೇದಾಂತಸಿದ್ಧಾಂತವಾದರೋ, ಪ್ರಮಾಣಯುಕ್ತ್ಯನುಭವಗಳ ಸಾಮರಸ್ಯದಿಂದ ಯಥಾರ್ಥವೆನಿಸಿ ಬೆಳಗುತ್ತಿದೆ. ಇತರರು ಸಿದ್ಧಾಂತದ ಮೇಲೆ ಸಲ್ಲದ ದೋಷಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳಬಹುದು; ಅವು ಯಾವುವೂ ವಿಚಾರಕ್ಕೆ ನಿಲ್ಲತಕ್ಕವುಗಳಲ್ಲ. ಇತರ ಮತಗಳನ್ನು ವಿಮರ್ಶಿಸಿದರೆ, ಎಲ್ಲ ಕಡೆಗಳಲ್ಲಿಯೂ ಅಸಾಮಂಜಸ್ಯವು ಸ್ಪಷ್ಟವಾಗುತ್ತದೆ. ಆದುದರಿಂದ ಶ್ರೀಭಗವತ್ಪಾದರು ಪ್ರತಿಪಾದಿಸಿರುವ ವೇದಾಂತಸಿದ್ಧಾಂತವೇ ಸರ್ವೋತ್ಕರ್ಷದಿಂದ ಮೆರೆಯುತ್ತದೆ.'

ಶ್ರೀ ಮಚ್ಛಂಕರಭಗವತ್ಪೂಜ್ಯಪಾದಾಚಾರ್ಯರವರು ತಮ್ಮ ಪ್ರಸ್ಥಾನತ್ರಯ-ಭಾಷ್ಯಗಳಲ್ಲಿಯೂ ಇತರ ಪ್ರಕರಣಾದಿಗ್ರಂಥಗಳಲ್ಲಿಯೂ ಲೋಕಹಿತಕ್ಕಾಗಿ ಪ್ರತಿಪಾದಿ-ಸಿರುವ ಮುಖ್ಯವಿಷಯಗಳು ಈ ಆರು:–

೧. ಪಾರಮಾರ್ಥಿಕತತ್ತ್ವದ ವಿಷಯದಲ್ಲಿ ಶ್ರುತಿಯೊಂದೇ ಪ್ರಮಾಣವು; ಪಾರಮಾರ್ಥಿಕಪ್ರಮಾಣವಾದ ವೇದದಲ್ಲಿ ಪ್ರತಿಪಾದಿತವಾಗಿರುವ ವಿಷಯಗಳು ಯಾವುವೆಂದರೆ:–

೨. ಚೇತನವಾದ ಬ್ರಹ್ಮವೇ ಸಮಸ್ತದ್ವೈತಪ್ರಪಂಚಕ್ಕೂ ಅಭಿನ್ನ-ನಿಮಿತ್ತೋಪಾದಾನಕಾರಣವು;

೩. ಕಾರಣವಸ್ತುವೇ ಸತ್ಯ; ಕಾರ್ಯವೆಲ್ಲ, ಕಾರಣವನ್ನು ಬಿಟ್ಟು ಬೇರೇ-ಯಾದ ಸ್ವತಂತ್ರವಸ್ತುವಾಗದೆ, ಮಿಥ್ಯಾ; ಆದ್ದರಿಂದ ಸರ್ವಜಗತ್ತಿಗೂ ಮೂಲಕಾರಣವಾದ ಬ್ರಹ್ಮವೊಂದೇ ಸತ್ಯವಸ್ತು; ಜಗತ್ತೆಲ್ಲ ಮಿಥ್ಯೆ;

೪. ಜೀವನು ವಸ್ತುತಃ ಚೇತನನಾಗಿ ಅಸಂಸಾರಿಸ್ವರೂಪನಾದ್ದರಿಂದ, ಅವನು ಪಾರಮಾರ್ಥಿಕವಾಗಿ ಬ್ರಹ್ಮಸ್ವರೂಪನೇ ಆಗಿದ್ದಾನೆ. ಹೀಗೆ ಬ್ರಹ್ಮಕ್ಕೆ ಬೇರೆಯಾಗಿ ಎರಡನೆಯ ಚೇತನವಾಗಲಿ ಅಚೇತನವಾಗಲಿ ಇಲ್ಲದೆ, ಬ್ರಹ್ಮವು ಪೂರ್ಣವಾಗಿ ಅದ್ವಿತೀಯವಸ್ತುವಾಗಿದೆ;

೫. ಪಾರಮಾರ್ಥಿಕವಾದ ಅದ್ವಿತೀಯಬ್ರಹ್ಮಾತ್ಮರೂಪತತ್ತ್ವದ ಸಾಕ್ಷಾ-ತ್ಕಾರರೂಪವಾದ ಅನುಭವದಿಂದಲೇ, ಸರ್ವಸಂಸಾರದುಃಖರಹಿತವೂ ನಿರತಿಶ-ಯಾನಂದಸ್ವರೂಪವೂ ಆದ ಮುಕ್ತಿಯು ಸಿದ್ಧಿಸುತ್ತದೆ;

೬. ಶಾಸ್ತ್ರವಿಹಿತವಾಗಿರುವ ಅವರವರ ವರ್ಣಾಶ್ರಮಧರ್ಮಗಳನ್ನು ಎಂದರೆ ಸ್ವಧರ್ಮವನ್ನು, ನಿಷ್ಕಾಮವಾಗಿ ಎಂದರೆ ಭಗವದಾರಾಧನೆಯೆಂಬ ಶ್ರದ್ಧೆಯಿಂದ, ವಿಧಿವತ್ತಾಗಿ ಅನುಷ್ಠಿಸಿದರೆ, ಚಿತ್ತಶುದ್ಧಿಯ ಮೂಲಕ ವೇದಾಂತಶ್ರವಣಾದಿಗಳಿಂದ ಇಂಥ ತತ್ತ್ವಸಾಕ್ಷಾತ್ಕಾರವು ಲಭಿಸಿ; ಪರಮ ಪುರುಷಾರ್ಥವಾದ ಮೋಕ್ಷವು ಸಿದ್ಧಿಸುವುದು–ಎಂದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಆರು ವಿಷಯಗಳನ್ನೂ ಸಪ್ರಮಾಣವಾಗಿಯೂ ಸಯುಕ್ತಿಕವಾಗಿಯೂ ಸವಿಸ್ತರವಾಗಿ ಸ್ಪಷ್ಟವಾಗಿ ಶ್ರೀಭಗವತ್ಪಾದರು ಪ್ರಸ್ಥಾನತ್ರಯಭಾಷ್ಯಗಳಲ್ಲಿ ಪ್ರತಿಪಾದಿಸಿದ್ದಾರೆ. ಗ್ರಂಥವಿಸ್ತಾರಭಯದಿಂದ ಕೆಲವುವಾಕ್ಯಗಳನ್ನು ಮಾತ್ರವೇ ಇಲ್ಲಿ ಉದಾಹರಿಸಿದೆ ಇವು ಒಂದೊಂದೂ ಅಬಾಧಿತವಾಗಿದ್ದು, ಅನ್ಯಥಾಮಾಡಲು ಸಾಧ್ಯವಾಗದ ಈ ಆರುವಿಷಯಗಳೂ ಶ್ರೀಭಗವತ್ಪಾದರವರ ಅಸಾಧಾರಣವಾದ ಸರ್ವತೋದಿಗ್ವಿಜಯವಾಗಿವೆ!

'ಅನುವೃತ್ತಗುರುವಃ'–ಎಂಬ ಅಸಾಧಾರಣಬಿರುದಿನಿಂದ ಶೋಭಿಸುತ್ತ, ಅನಾದಿಸಿದ್ಧಸತ್ಸಂಪ್ರದಾಯಾನುಯಾಯಿಗಳಾದ ಶ್ರೀಭಗವತ್ಪಾದರು ಅದ್ವಿತೀಯತತ್ತ್ವವನ್ನು ಅದ್ವಿತೀಯವಾಗಿಯೇ ಪ್ರತಿಪಾದಿಸಿ, ಎಲ್ಲ ವಿಧದಿಂದಲೂ ಅದ್ವಿತೀಯಾಚಾರ್ಯರೇ ಆಗಿದ್ದಾರೆ!

'ಸರ್ವಜ್ಞಃ ಸ ಹಿ ಮಾಧವಃ'–ಎಂದು ಪ್ರಸಿದ್ಧರಾಗಿರುವ ಶ್ರೀಮಾಧವ ವಿದ್ಯಾರಣ್ಯಗುರುವರ್ಯರು, ತಮ್ಮ ಶಂಕರವಿಜಯಕಾವ್ಯದಲ್ಲಿ ಒಂದೇ ಪದ್ಯದಿಂದ ವರ್ಣಿಸಿರುವ ಶ್ರೀ ಭಗವತ್ಪಾದರ ಮಹಿಮೆಯು ಅಕ್ಷರಶಃ ಯಥಾರ್ಥವಾಗಿದೆ–

ಕುಮತಾನಿ ಚ ತೇನ ಕಾನಿ ನೋನ್ಮಥಿತಾನಿ ಪ್ರಥಿತೇನ ಧೀಮತಾ।
ಸ್ವಮತಾನ್ಯಪಿ ತೇನ ಖಂಡಿತಾನ್ಯತಿಯತ್ನೈರಪಿ ಸಾಧಿತಾನಿ ಕೈಃ॥
(ಮಾ. ಶಂ ೪-೭)

"ಸುಪ್ರಸಿದ್ಧಜ್ಞಾನಿಸಾರ್ವಭೌಮರಾದ ಶ್ರೀಭಗವತ್ಪಾದರಿಂದ ವೈದಿಕಾದ್ವೈತ–ಸಿದ್ಧಾಂತಕ್ಕೆ ವಿರುದ್ಧಗಳಾದ ಯಾವಕುಮತಗಳು ತಾನೇ ನಿರ್ಮೂಲಗೊಳಿಸಲ್ಪಟ್ಟಿಲ್ಲ;-ಹಾಗೆಯೇ ಅವರಿಂದ ಖಂಡನೆಮಾಡಲ್ಪಟ್ಟ ತಮ್ಮ ಮತಗಳನ್ನು ಯಾರುತಾನೇ ಅತಿ-ಪ್ರಯಾಸದಿಂದಲಾದರೂ ಸರಿಯೆಂದು ಸಾಧಿಸಿಕೊಂಡಿದ್ದಾರೆ?" ಎಂದು

"ಆಚಾರ್ಯಮಾಗವನೋಘಾ।"
"ಭಾಷಾಸು ರಮ್ಯಾ ಗೈರ್ವಾಣೀ ತತ್ರ ಶಾಂಕರ ಭಾರತೀ।
ಐಹಿಕಾಮುಷ್ಮಿಕಂ ಶ್ರೇಯಃ ಸರ್ವಂ ಯತ್ರ ಪ್ರತಿಷ್ಠಿತಂ॥"

"ಪ್ರಪಂಚದಲ್ಲಿ ಪ್ರಚಾರದಲ್ಲಿರುವ ಹಲವಾರು ಭಾಷೆಗಳಲ್ಲಿ, ಇವೆಲ್ಲಕ್ಕೂ ಮಾತೃರೂಪವಾಗಿರುವ ದೇವಭಾಷೆಯಾದ ಸಂಸ್ಕೃತಭಾಷೆಯೇ ಸರ್ವರಿಗೂ ಆಹ್ಲಾದಕರವೂ ಹಿತಕರವೂ ಆದುದು! ಸಂಸ್ಕೃತಭಾಷೆಯ ಅಪಾರಗ್ರಂಥಸಂದೋಹದಲ್ಲಿ ಶ್ರೀಶಂಕರ–ಭಗವತ್ಪಾದರವರ ವಾಣಿಯೇ ಸರ್ವಶ್ರೇಷ್ಠವಾದುದು! ಭಾಷಾಶೈಲಿಯಲ್ಲಾಗಲಿ, ವಿಷಯಪ್ರತಿಪಾದನೆಯ ವಿಸ್ಪಷ್ಟತೆಯಲ್ಲಾಗಲಿ, ಪ್ರತಿಪಾದಿಸಿರುವ ವಿಷಯದ ಸರ್ವತೋಮುಖ-ವಾದ ನಿರ್ದುಷ್ಟತೆಯಲ್ಲಾಗಲಿ,ಇಹಪರಗಳ ಶ್ರೇಯಸ್ಕರತೆಯಲ್ಲಾಗಲಿ ಶ್ರೀಭಗವತ್ಪಾದರ ಉಪದೇಶಗಳಿಗೆ ಸರಿಯಾದುದು ಲೋಕದಲ್ಲಿ ಬೇರೊಂದಿಲ್ಲ!"

Sri Vidyabharathi Book Centre, Sringeri

CC-O. In Public Domain. Digitized by eGangotri

ಇದರಿಂದ ಶ್ರೀಭಗವತ್ಪಾದಾಚಾರ್ಯರ ಲೋಕೋತ್ತರವಾದ ಮಹಿಮಾತಿಶಯವು ವ್ಯಕ್ತವಾಗುತ್ತದೆ. ಮನುಷ್ಯಮಾತ್ರರಿಂದ ಇಂಥ ಕಾರ್ಯಗಳು ಅಸಂಭಾವಿತವೇ ಸರಿ! ಆದುದರಿಂದ ಶ್ರೀಭಗವತ್ಪಾದರು ಸರ್ವಜ್ಞಮೂರ್ತಿಯಾದ ಶ್ರೀಪರಮೇಶ್ವರನ ಸಾಕ್ಷಾದವತಾರಪುರುಷರೆಂಬುದು ಯಥಾರ್ಥವೆಂದು ಸ್ಪಷ್ಟಪಡುತ್ತದೆ. ಈ ವಿಷಯದಲ್ಲಿ ಪುರಾಣವಚನಗಳೂ ಪ್ರಮಾಣವಾಗಿವೆಂಬುದನ್ನು ಮೊದಲೇ ತೋರಿಸಿರುತ್ತದೆ.

ಶ್ರುತಿಸ್ಮೃತಿನ್ಯಾಯಗಳಿಂದ ಆತ್ಮತತ್ತ್ವಜ್ಞಾನವೇ ಮುಕ್ತಿಗೆ ಕಾರಣವೆಂಬುದ ಪ್ರಸಿದ್ಧವಾಗಿದೆ. **"ತರತಿ ಶೋಕಮಾತ್ಮವಿತ್; ಜ್ಞಾನಾದೇವ ತು ಕೈವಲ್ಯಂ ಪ್ರಾಪ್ಯತೇ; ತಮೇವ ವಿದಿತ್ವಾ ಆತಿ ಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಽಯನಾಯ"**—ಮುಂತಾದ ಶ್ರುತಿಗಳು ಸ್ಪಷ್ಟವಾಗಿ ಈ ಅರ್ಥವನ್ನು ಬೋಧಿಸುತ್ತವೆ **"ಶ್ರುತಿರ್ಹಿ ಆತ್ಮೈಕತ್ವಜ್ಞಾನಾದನ್ಯನ್ಮೋಕ್ಷಂ ಪ್ರತಿ ದ್ವಾರಂ ವಾರಯತಿ"** "ಆತ್ಮೈಕತ್ವಜ್ಞಾನವನ್ನು ಬಿಟ್ಟು ಮೋಕ್ಷಕ್ಕೆ ಬೇರೊಂದು ಉಪಾಯವನ್ನು ಶ್ರುತಿಯು ತಡೆಯುತ್ತದೆ"—ಎಂದು ಶ್ರೀ ಭಗವತ್ಪಾದರು ಇದನ್ನು ವಿಶದಪಡಿಸಿದ್ದಾರೆ.

"ತತ್ತ್ವಜ್ಞಾನಾನ್ನಿಃಶ್ರೇಯಸಾಧಿಗಮಃ; ಜ್ಞಾತ್ವಾ ಮಾಂ ಶಾಂತಿಮೃಚ್ಛತಿ; ಜ್ಞಾತ್ವಾ ಅಮೃತಮಶ್ನುತೇ"—ಮುಂತಾದ ಸ್ಮೃತಿಗಳೂ ಇದೇ ಅರ್ಥವನ್ನು ವಿಧಿಸುತ್ತವೆ. ಸ್ಮೃತಿಪ್ರಸ್ಥಾನಕ್ಕೆಲ್ಲ ಪ್ರತೀಕವಾಗಿರುವ ಶ್ರೀಮದ್ಭಗವದ್ಗೀತೆಯಲ್ಲಿ ಕರ್ಮ, ಯೋಗ, ಭಕ್ತಿ ಮತ್ತು ಜ್ಞಾನಗಳನ್ನು ವಿಶೇಷವಾಗಿ ಹೊಗಳಿರುವುದು ಕಂಡುಬಂದರೂ, ಜ್ಞಾನವನ್ನು ಅತಿಶಯವಾಗಿ ವರ್ಣಿಸಿರುವುದು ಎದ್ದು ತೋರುತ್ತದೆ—**'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ; ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ; ಜ್ಞಾನೀ ತ್ವಾತ್ಮೈವ ಮೇ ಮತಂ; ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ; ತತ್ತ್ವತೋಜ್ಞಾತ್ವಾ ವಿಶತೇ ತದನಂತರಂ;'**—ಎಂದು ಮುಂತಾಗಿ. **'ನಾನುಶೋಚಂತಿ ಪಂಡಿತಾಃ'**—ಜ್ಞಾನವು ಶೋಕವಿಲ್ಲದುದಕ್ಕೆ ಕಾರಣ ಎಂದು ಆರಂಭಿಸಿ, **ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಹತ್'** ಎಂದು ಜ್ಞಾನದಲ್ಲಿಯೇ ಉಪಸಂಹೃತವಾಗಿರುವ ಶ್ರೀಗೀತೆಗೆ ಜ್ಞಾನದಲ್ಲಿಯೇ ಪರಮತಾತ್ಪರ್ಯವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಶ್ರೀಭಗವತ್ಪಾದರ ಗೀತಾಭಾಷ್ಯವು ಈ ವಿಷಯದಲ್ಲಿ ಶಿಖರಪ್ರಾಯವಾಗಿ ಬೆಳಗುತ್ತಿದೆ.

ನ್ಯಾಯವೂ ಇದೇ ಅರ್ಥವನ್ನು ಪುಷ್ಟೀಕರಿಸುತ್ತದೆ. ಶ್ರೀಭಗವತ್ಪಾದರು ವಿವರಿಸುವಂತೆ—**"ಮಿಥ್ಯಾಜ್ಞಾನನಿಮಿತ್ತಃ ಸಂಸಾರಃ ನ ಸಮ್ಯಗ್ಜ್ಞಾನಾದೃತೇ ವಿಸ್ರಂಸಿತುಮರ್ಹತಿ"**—"ಸಂಸಾರವು ಮಿಥ್ಯಾಜ್ಞಾನದಿಂದ ಆಗಿರುವುದರಿಂದ, ಸಮ್ಯಗ್ಜ್ಞಾನದಿಂದಲ್ಲದೆ ಬೇರೆ ಯಾವುದರಿಂದಲೂ ಅದು ಕಳೆಯಲು ತಕ್ಕುದಲ್ಲ."

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವತ್ಪಾದರು ಈ ರೀತಿಯಲ್ಲಿ ಪಾರಮಾರ್ಥಿಕವಾಗಿ ಜ್ಞಾನೈಕನಿಷ್ಠರಾದರೂ ವ್ಯವಹಾರದಶೆಯಲ್ಲಿ ಸಾಧನೆಯುನ್ನು ಬೋಧಿಸುವಾಗ ಪರಮಭಕ್ತಶಿಖಾಮಣಿಗಳೂ ಆಗಿದ್ದಾರೆ; ಪಾರಮಾರ್ಥಿಕಸ್ಥಿತಿಯನ್ನು ವ್ಯವಹಾರಕ್ಕೆ ಅನ್ವಯಿಸಿಕೊಂಡು ಪ್ರಪಂಚವೆಲ್ಲವೂ–"**ಕರ್ಮಬ್ರಹ್ಮೋಭಯಭ್ರಷ್ಟಂ ತಂ ತ್ಯಜೇದಂತ್ಯಜಂ ಯಥಾ**'–ಎಂಬ ನ್ಯಾಯದಂತೆ, ಅನರ್ಥಕ್ಕೆ ಭಾಗಿಯಾಗಿದೆ. ಪಾರಮಾರ್ಥಿಕಸ್ಥಿತಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ಅದರ ಸಿದ್ಧಿಗಾಗಿ, ವ್ಯವಹಾರಾವಸ್ಥೆಯಲ್ಲಿ ಅವರವರ ಅಧಿಕಾರಾನುಸಾರವಾಗಿ ಸಾಧನೆಯಲ್ಲಿ ನಿರತರಾಗಬೇಕು. ವ್ಯವಹಾರದಶೆಯಲ್ಲಿ ಯುಕ್ತಾಯುಕ್ತಗಳು, ಧರ್ಮಾಧರ್ಮಗಳು, ಕರ್ತವ್ಯಾಕರ್ತವ್ಯಗಳು, ಭಕ್ಷ್ಯಾಭಕ್ಷ್ಯಗಳು, ಸ್ಪೃಶ್ಯಾಸ್ಪೃಶ್ಯಗಳು ಮುಂತಾದ ಎಲ್ಲ ವಿಭಾಗವೂ ಶಾಸ್ತ್ರಾನುಸಾರವಾಗಿ ವ್ಯವಸ್ಥಿತವಾಗಿಯೇ ಇದೆ; ಇದನ್ನು ಅನುಸರಿಸುವುದು ಎಲ್ಲರಿಗೂ ಅವಶ್ಯವು

ಗುರುದೇವತಾನುಗ್ರಹವು ಲಭಿಸದೆ ಯಾವ ಸಾಧನೆಯೂ ಕೈಗೂಡುವುದಿಲ್ಲ. ಇದಕ್ಕಾಗಿ ಸಕಲದೇವತಾರಾಧನೆಯು ಅವಶ್ಯವಾಗಿದೆ. ಸಾಧನಾವಸ್ಥೆಯಲ್ಲಿ ಎಲ್ಲರೂ ದೇವತಾಧೀನರೆಂದೂ, ದೇವತೆಗಳು ಶ್ರೇಯಃಪ್ರಾಪ್ತಿಗೆ ಪ್ರತಿಬಂಧಕವನ್ನು ಮಾಡುವರೆಂದೂ, ಅವರನ್ನು ಸೇವಿಸುವವರಿಗೆ ಮಾತ್ರ ವಿಘ್ನವನ್ನು ಮಾಡದೆ ಶ್ರೇಯಸ್ಸಿದ್ಧಿಗೆ ಸಹಾಯಮಾಡುವರೆಂದೂ ಶ್ರುತಿಯು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಆದ್ದರಿಂದ–"**ತಸ್ಮಾನ್ಮುಮುಕ್ಷುರ್ದೇವಾರಾಧನಪರಃ ಶ್ರದ್ಧಾಭಕ್ತಿಪರಃ ಪ್ರಣೀಯೋ ಅಪ್ರಮಾದೀ ಸ್ಯಾದ್ವಿದ್ಯಾಪ್ರಾಪ್ತಿಂ ಪ್ರತಿ** (ಬೃ. ೧–೪–೧೯) 'ವಿದ್ಯಾಲಾಭಕ್ಕಾಗಿ ಮುಮುಕ್ಷುವು ಶ್ರದ್ಧಾಭಕ್ತಿವಿನಯಾದಿಪೂರ್ವಕವಾಗಿ ಸಕಲದೇವತಾ ಆರಾಧನೆಯಲ್ಲಿ ನಿರತನಾಗಿರಬೇಕು'—ಎಂದು ಶ್ರೀಭಗವತ್ಪಾದರು ಉಪದೇಶಿಸಿದ್ದಾರೆ. ಈ ಕಾರಣದಿಂದಲೇ ಆಯಾ ವಿಶೇಷಕಾಲದಲ್ಲಿ ಆಯಾ ದೇವತೆಗಳ ವ್ರತಾಚರಣಾದಿಗಳು ಸತ್ಸಂಪ್ರದಾಯಸಿದ್ಧವಾಗಿ ಬಂದಿರುತ್ತವೆ.

ಶ್ರೀಭಗವತ್ಪಾದರು ಜ್ಞಾನಮಾತ್ರನಿಷ್ಠರಾದವರು; ಭಕ್ತಿಮಾರ್ಗವು ಕೇವಲ ಸಗುಣದೇವತಾವಿಷಯಕವಾದುದು. ಇತರ ವೈಷ್ಣವಾದಿಮತದವರಿಗೆ ಸಗುಣಸ್ವರೂಪವೇ ಪರಮತತ್ತ್ವವು; ಆದ್ದರಿಂದ ಭಕ್ತಿಮಾರ್ಗವು ಅವರಿಗೆ ಪ್ರಧಾನವಾದುದು. ಆದರೂ ಭಕ್ತಿಯ ಪರಮೋತ್ಕರ್ಷವನ್ನು ಶ್ರೀಭಗವತ್ಪಾದರ ದೇವತಾಸ್ತೋತ್ರಗಳಲ್ಲಿಯೇ ಕಾಣಬೇಕಾಗಿದೆ. ಇತರರಂತೆ ಏಕೈಕದೇವತಾಪ್ರಾಧಾನ್ಯಕ್ಕೆ ಬೆಲೆ ಕೊಡುವುದು—'**ಯತ್ತು ಕೃತ್ಸ್ನವದೇಕಸ್ಮಿನ್ ಕಾರ್ಯೇ ಸಕ್ತಮಹೇತುಕಂ । ಅತತ್ತ್ವಾರ್ಥವದಲ್ಪಂ ಚ ತತ್ತಾಮಸಮುದಾಹೃತಂ ॥** (ಗೀ. ೧೮–೨೨)–'ಏತಾವಾನೇವಾತ್ಮಾ ಈಶ್ವರೋ ವಾ, ನಾತಃ ಪರಮಸ್ತೀತಿ, ತಾಮಸಾನಾಂ ಹಿ ಪ್ರಾಣಿನಾಂ ಅವಿವೇಕಿನಾಂ ಈದೃಶಂ ಜ್ಞಾನಂ ದೃಶ್ಯತೇ!"— ಎಂಬುತೆ ತಾಮಸವಾಗುವುದೆಂದು ಪರಿಗಣಿಸಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವತ್ಪಾದರು ಸಕಲದೇವತೆಗಳ ವಿಷಯದಲ್ಲಿಯೂ, ಶಿಷ್ಯರ ಅನುಗ್ರಹಕ್ಕಾಗಿ, ಸ್ತೋತ್ರಗಳನ್ನು ಕರುಣಿಸಿರುತ್ತಾರೆ. ಈ ಸ್ತೋತ್ರಗಳು ಕವಿತಾಧೋರಣೆಯಲ್ಲಾಗಲಿ ಶಬ್ದಲಾಲಿತ್ಯದಲ್ಲಾಗಲಿ, ಕಲ್ಪನಾವೈಖರಿಯಲ್ಲಾಗಲಿ, ಭಕ್ತಿಜ್ಞಾನವೈರಾಗ್ಯಾದಿರಸ-ಸಂಭಾರದಲ್ಲಾಗಲಿ, ಅನುಪಮವಾಗಿ, ಪಂಡಿತಪಾಮರಾದಿಸರ್ವಜನಹೃದಯಂಗಮ-ವಾಗಿ ಬೆಳಗುತ್ತಿರುವುದು ಸರ್ವರಿಗೂ ಸ್ವಸಾಕ್ಷಿಕವೇ ಆಗಿದೆ!"

ಹೀಗೆ ಯಾವರೀತಿಯಲ್ಲಿ ನೋಡಿದರೂ ಶ್ರೀಮಚ್ಛಂಕರಭಗವತ್ಪೂಜ್ಯಪಾದಾ-ಚಾರ್ಯರವರು ಅದ್ವಿತೀಯರಾಗಿ ಶೋಭಿಸುತ್ತಿದ್ದಾರೆ. ಇಂಥವರ ಶಿಷ್ಯಕೋಟಿಯಲ್ಲಿ ಸೇರಿ, ಇವರ ದಿವ್ಯಾದ್ವೈತೋಪದೇಶಕ್ಕೆ ಪಾತ್ರರಾಗಿರುವವರೇ ಧನ್ಯರೆಂಬಲ್ಲಿ ಸಂದೇಹವೇನಿದೆ?!

ಬ್ರಹ್ಮಾದ್ವೈತವೇ ಪಾರಮಾರ್ಥಿಕಸಿದ್ಧಾಂತವು. ಈ ತತ್ತ್ವದ ಸಾಕ್ಷಾತ್ಕಾರ-ದಿಂದಲೇ ಸರ್ವರಿಗೂ ಪುರುಷಾರ್ಥಸಿದ್ಧಿಯಾಗುವುದು. ಈ ತತ್ತ್ವಸಾಕ್ಷಾತ್ಕಾರವನ್ನು ಪಡೆಯುವುದಕ್ಕಾಗಿಯೇ ಪ್ರತಿಯೊಬ್ಬರೂ ಪ್ರಯತ್ನಪಡುವುದು ಅವಶ್ಯವಾಗಿದೆ. ಈ ಸಾಧನೆಗಳನ್ನು ಅನುಷ್ಠಿಸುವುದಕ್ಕೆ ಎಲ್ಲ ಮನುಷ್ಯರಿಗೂ ಅಧಿಕಾರವಿದೆ. ತತ್ತ್ವಸಾಕ್ಷಾತ್ಕಾರಕ್ಕೆ ಬೇಕಾದ ಸಾಧನೆಗಳಿಗೆಲ್ಲ ಮೂಲಭೂತವಾದ ಸಾಧನೆಯೆಂದರೆ, ನಿಷ್ಕಾಮ-ವಾಗಿ ಸ್ವಧರ್ಮವನ್ನು ಅನುಷ್ಠಿಸುವುದು. ಮೇಲೆ ವಿವರಿಸಿರುವಂತೆ ನಿಷ್ಕಾಮಕರ್ಮಾ-ನುಷ್ಠಾನದಿಂದ ಚಿತ್ತಶುದ್ಧಿಯಾಗಿ, ವಿರಕ್ತಿಯು ಹುಟ್ಟಿ, ಸನ್ನ್ಯಾಸಪೂರ್ವಕವಾದ ಶ್ರವಣಾದಿಗಳ ಮೂಲಕ ತತ್ತ್ವಸಾಕ್ಷಾತ್ಕಾರವು ಅನಾಯಾಸವಾಗಿ ಸಿದ್ಧಿಸುತ್ತದೆ; ಸ್ವಧರ್ಮಾನುಷ್ಠಾನವಿಲ್ಲವಾದರೆ, ಚಿತ್ತಶುದ್ಧಿಯಾಗದೆ, ಮುಂದಿನ ಸಾಧನೆಗಳು ಯಾವುವೂ ಫಲಕಾರಿಗಳಾಗುವುದಿಲ್ಲ. ಆದಕಾರಣ ಪರಮಪುರುಷಾರ್ಥಸಿದ್ಧಿಗೆ ಅವಶ್ಯಗಳಾದ ಸಾಧನೆಗಳ ಮಧ್ಯದಲ್ಲಿ ನಮಗೆ ಕೃತಿಸಾಧ್ಯವಾದ ಸಾಧನೆ—ಎಂದರೆ ನಮ್ಮ ಪ್ರಯತ್ನದಿಂದ ಮಾಡಲು ಶಕ್ಯವಾದ ಸಾಧನೆ—ಸ್ವಧರ್ಮಾನುಷ್ಠಾನವು ಒಂದೇ ಆಗಿದೆ. ಆದುದರಿಂದ ವಿವೇಕಶಾಲಿಗಳಾಗಿ ಪ್ರತಿಯೊಬ್ಬರೂ ಸ್ವಧರ್ಮವನ್ನು ಧರ್ಮಶಾಸ್ತ್ರಗಳ ಮೂಲಕ ತಮ್ಮ ತಮ್ಮ ಸಂಪ್ರದಾಯಸಿದ್ಧರಾದ ಆಚಾರ್ಯರುಗಳಿಂದ ತಿಳಿದುಕೊಂಡು ಅದರಲ್ಲಿ ಶ್ರದ್ಧೆಯಿಂದ ನಿರತರಾಗಬೇಕು.

ಕವಿಸಾರ್ವಭೌಮ ಶ್ರೀಕಾಳಿದಾಸಮಹಾಕವಿಯು ತನ್ನ ಅಮೋಘವಾದ ರಘುವಂಶಮಹಾಕಾವ್ಯದಲ್ಲಿ ಶ್ರೀರಾಮಚಂದ್ರನ ಚರಿತೆಯನ್ನು ವರ್ಣಿಸಿ, ಕಡೆಯಲ್ಲಿ ಶ್ರೀರಾಮಚಂದ್ರನ ಮಹಿಮೆಯನ್ನು ವರ್ಣಿಸುತ್ತ—

ನಿರ್ವರ್ತ್ಯೈವಂ ದಶಮುಖಶಿರಶ್ಛೇದಕಾರ್ಯಂ ಸುರಾಣಾಂ
ವಿಷ್ವಕ್ಸೇನಃ ಸ್ವತನುಮವಿಶತ್ಸರ್ವಲೋಕಪ್ರತಿಷ್ಠಾಂ।

Sri Vidyabharathi Book Centre, Sringeri

CC-O. In Public Domain. Digitized by eGangotri

ಲಂಕಾನಾಥಂ ಪವನತನಯಂ ಚೋಭಯೋ ಸ್ಥಾಪಯಿತ್ವಾ
ಕೀರ್ತಿಸ್ತಂಭದ್ವಯಮಿವ ಗಿರೌ ದಕ್ಷಿಣೇ ಚೋತ್ತರೇಚ॥

"ಶ್ರೀ ಮಹಾವಿಷ್ಣುವು ರಾವಣಸಂಹಾರರೂಪದ ದೇವತೆಗಳ ಕಾರ್ಯವನ್ನು ನೆರವೇರಿಸಿ, ವಿಭೀಷಣ ಮತ್ತು ಆಂಜನೇಯರೀರ್ವರನ್ನು ತನ್ನ ಕೀರ್ತಿಸ್ತಂಭಗಳಂತೆ ಭಾರತದ ದಕ್ಷಿಣೋತ್ತರಗಳ ಸುವೇಲಾಚಲ ಮತ್ತು ಹಿಮಾಲಯಪರ್ವತಗಳಲ್ಲಿ ನೆಲೆಮಾಡಿ, ಸರ್ವಲೋಕಕ್ಕೂ ಅಧಾರವಾಗಿರುವ ತನ್ನ ಸ್ವರೂಪಕ್ಕೆ ಹಿಂತಿರುಗಿದನು" ಎಂದು ಮುಕ್ತಾಯಮಾಡಿದ್ದಾನೆ.

ಇದು ರಾವಣವಧೆಯೆಂಬ ದೇವತಾಕಾರ್ಯಮಾತ್ರವಾದದ್ದು; ವಿಭೀಷಣಾಂಜನೇಯರ ಸ್ಥಾಪನೆಯಿಂದ ಮುಂದೆ ಯಾವ ಉಪಕಾರವೂ ಆಗಿಲ್ಲ. ಶ್ರೀಭಗವತ್ಪಾದರ ಧರ್ಮಸ್ಥಾಪನೆಯು ಸರ್ವಕಾಲದಲ್ಲಿಯೂ ನಿರಂತರವೂ ಶ್ರೇಯಸ್ಕರವಾಗಿ ಬೆಳಗುವಂಥದ್ದು. ಆಗಿರುತ್ತದೆ. ಶ್ರೀಪರಮೇಶ್ವರನ ಮಹಿಮೆಯುಅಸದೃಶವೂ ಶಾಶ್ವತವೂ ಸರ್ವಶ್ರೇಯಸ್ಕರವೂಆದುದು, ಆದರೂ:-

ಕವಿವರ್ಯರಿಗೆ ಅಕ್ಷರಲಕ್ಷವನ್ನು ಬಹುಮಾನಿಸುತ್ತಿದ್ದ ಭೋಜರಾಜನನ್ನು ಕುರಿತು ಒಬ್ಬ ಕವಿಯು-

"ತ್ವಯಿ ವರ್ಷತಿ ರಾಜೇಂದ್ರ ಸ್ವರ್ಣವರ್ಷಾನ್ ನಿರಂತರಂ !
ಅಭಾಗ್ಯಛತ್ರಸಂಪನ್ನೇ ಮಯಿ ನಾಯಾಂತಿ ಬಿಂದವಃ ॥

"ಭೋಜರಾಜನ್, ನೀನು ನಿರಂತರವೂ ಸುವರ್ಣದ ಮಳೆಯನ್ನೇ ಸುರಿಸುತ್ತಿದ್ದರೂ, ದುರದೃಷ್ಟವೆಂಬ ಛತ್ರಿಯನ್ನು ಹಿಡಿದುಕೊಂಡಿರುವ ನನಗೆ ಒಂದು ಹನಿಯೂ ದೊರೆಯದಾಗಿದೆ"-ಎಂದು ಹೇಳಿದಂತೆ,-

ಸಾರ್ವಕಾಲಿಕವೂ ಶ್ರೇಯಸ್ಕರವೂ ಆದ ಶ್ರೀಭಗವತ್ಪಾದರ ಉಪದೇಶಗಳನ್ನು ತಿಳಿದು ಅನುಸರಿಸದವರ ದೌರ್ಭಾಗ್ಯವನ್ನೇನೆಂದು ವರ್ಣಿಸೋಣ!

ಸರ್ವಜ್ಞನಾದ ಶ್ರೀಪರಮೇಶ್ವರನು ಆಯಾಜೀವರಿಗೆ ಇಂಥ ಶ್ರೇಯಸ್ಕರವಾದ ಮನುಷ್ಯಜನ್ಮವನ್ನು ಅನುಗ್ರಹಿಸುತ್ತಾನೆ. ಆದ್ದರಿಂದ ಯಾರುಯಾರಿಗೆ ಯಾವಯಾವ ದೇಶ-ಕಾಲ-ಮಾತಾಪಿತೃ-ಮತ-ಮುಂತಾದಸನ್ನಿವೇಶಗಳಲ್ಲಿ ಜನ್ಮವು ಲಭಿಸಿದೆಯೋ, ಅದದು ಅವರವರಿಗೆ ಶ್ರೇಯಸ್ಕರವೆಂದು ನಿಶ್ಚಿತವಾಗುತ್ತದೆ, ಆದಕಾರಣ ತಮ್ಮತಮ್ಮ ಮತಗಳನ್ನು ಅನುಸರಿಸುವುದು ಎಲ್ಲರಿಗೂ ಸಹಜವೂ, ಶ್ರೇಯಸ್ಕರವೂ, ಸುಲಭವೂ ಆಗಿದೆ. ಅದೇ ಸ್ವಧರ್ಮಾನುಷ್ಠಾನವು. ಇದರಲ್ಲಿ ಇತರಮತಗಳ ದ್ವೇಷಾಸೂಯಾದಿಗಳಿಗಾಗಲಿ, ಉತ್ಕೃಷ್ಟನಿಕೃಷ್ಟಗಳೆಂಬ ತಾರತಮ್ಯಕ್ಕಾಗಲಿ ಎಳ್ಳಷ್ಟೂ ಅವಕಾಶವಿರುವುದಿಲ್ಲ ಅವರವರ ಧರ್ಮವು ಅವರವರಿಗೆ ಶ್ರೇಷ್ಠವು ಮತ್ತು ಹಿತಕರವಾದುದು. ಆದ್ದರಿಂದ ಇತ-

Sri Vidyabharathi Book Centre, Sringeri

CC-O. In Public Domain. Digitized by eGangotri

ರರ ಹಿತಕ್ಕೆ ಹಾನಿಯಾಗದಂತೆ ಸ್ವಧರ್ಮದಲ್ಲಿ ಪರಮಶ್ರದ್ಧೆಯಿಂದ ನಿರತರಾಗಿರುವುದು ಸರ್ವಲೋಕಕ್ಕೂ ಕ್ಷೇಮಕರವಾದುದು. **"ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ"**–ಎಂಬ ಶ್ರೀ ಭಗವದ್ವಾಣಿಯು ಯಥಾರ್ಥವೇ ಸರಿ ! ಇದೇ ಸಕಲಶಾಸ್ತ್ರಗಳ, ಮತ್ತು ಎಲ್ಲ ಮಹಾತ್ಮರುಗಳ ಪರಮಹಿತೋಪದೇಶ ಸರ್ವರಿಗೂ ಹಿತಕರವಾದ ಇಂಥ ಹಿತೋಪದೇಶವನ್ನು ಅನುಗ್ರಹಿಸಿರುವ ಶ್ರೀಭಗವತ್ಪಾದರೊಬ್ಬರೇ ವಾಸ್ತವವಾಗಿಯೂ ಜಗದೇಕಗುರುಗಳು!

ಜಯ ಶ್ರೀಶಂಕರಸದ್ಗುರುಭಗವನ್।

ಅದ್ವೈತಂ ಪರಮಂ ತತ್ತ್ವಂ ಸ್ವಧರ್ಮಾಚರಣಂ ಹಿತಂ।
ಅದ್ವಿತೀಯೋಪದೇಶೋಽಯಮದ್ವಿತೀಯಗುರೋಃ ಪರಃ॥

ಶ್ರುತಿಪ್ರಾಮಾಣಿಕಶ್ಚಾಯಂ ಕೇವಲಾದ್ವೈತಡಿಂಡಿಮಃ
ಉದ್ಘೋಷ್ಯತಾಂ ಸತಾಂ ಸರ್ವಶ್ರೇಯೋಭ್ಯುದಯಸಿದ್ಧಯೇ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಶಿಷ್ಟಂ

ಭಾರತದೇಶದ ಏಕತ್ವವನ್ನು ತೋರಿಸುವುದಕ್ಕಾಗಿಯೇ ಶ್ರೀಭಗವತ್ಪಾದರು ಸಂಸ್ಕೃತಭಾಷೆಯಲ್ಲಿಯೇ ತಮ್ಮ ಉಪದೇಶಗಳನ್ನು ಪ್ರಚಾರಮಾಡಿದ್ದಾರೆಂದು ಆಧುನಿಕ ವಿಚಾರಕುಶಲರು ಅಭಿಪ್ರಾಯಪಡುತ್ತಿದ್ದಾರೆ; ಅವರು ಭಾರತದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿರುವುದೂ ಈಉದ್ದೇಶದಿಂದಲೇ ಎಂದು ವರ್ಣಿಸುತ್ತಾರೆ; ಮತ್ತೂ ಇದಕ್ಕಾಗಿಯೇ ಪಂಚಾಯತನದೇವತಾರಾಧನೆಯ ಪದ್ಧತಿಯನ್ನೂ ಜಾರಿಗೆ ತಂದಿರುತ್ತಾರೆಂದೂ ಒಕ್ಕಣಿಸುತ್ತಾರೆ!

"ಸ್ವದೇಶೋ ಭುವನತ್ರಯಂ"-ಎಂದು ಉದ್ಘೋಷಿಸಿರುವ ಶ್ರೀಭಗವತ್ಪಾದರವರಿಗೆ ಈಗಿನವರಂತೆ, ಪರಿಚ್ಛಿನ್ನದೇಶಾಭಿಮಾನವತ್ತೆಂಬ ಮಾತು ಎಷ್ಟು ಸಮಂಜಸವು? "ಸರ್ವಶ್ರೇಯಸ್ಕರವಾಗಿರುವ ವೇದಶಾಸ್ತ್ರವನ್ನು ಪ್ರಚಾರಮಾಡಿರುವ ಶ್ರೀಪರಮೇಶ್ವರನು ಭರತಖಂಡಕ್ಕೆ ಮಾತ್ರವೇ ದೇವನೆಂದು"-ಬಗೆಯುವ ಅಲ್ಪಜ್ಞರ ಸಹೋದರರೇ ಇವರ !

ಸಮಸ್ತಪ್ರಪಂಚಕ್ಕೂ ಇಹಪರಗಳಶ್ರೇಯೋಭ್ಯುದಯಗಳಿಗೆ ಅವಶ್ಯವಾಗಿರುವ ವಾಸ್ತವಸಾಧನೆಗಳನ್ನು ಉಪದೇಶಿಸುವ ನಿತ್ಯವಾಗಿರುವ ವೇದಶಾಸ್ತ್ರದ ಮುಖ್ಯವಾದ ತಾತ್ಪರ್ಯಾರ್ಥವನ್ನು ಯಥಾವತ್ತಾಗಿಯೂ ವಿಶದವಾಗಿಯೂ ಪ್ರತಿಪಾದಿಸುವುದಕ್ಕಾಗಿಯೇ ಶ್ರೀಭಗವತ್ಪಾದರವರ ಅವತಾರವಾಗಿರುವುದೆಂಬ ಜಗತ್ಪ್ರಸಿದ್ಧವಾಗಿರುವ ಅಂಶವೂ ಇವರ ಗಮನಕ್ಕೆ ಬರದಿರುವುದು ಆಶ್ಚರ್ಯವೇ! ಅಥವಾ, ಇದನ್ನೂ ನಂಬದ ವಿಚಾರಕುಶಲರೇ ಇವರಿರಬಹುದು!

ವೇದಶಾಸ್ತ್ರಗಳ ಉಪದೇಶಾನುಷ್ಠಾನಗಳಿಗೆಲ್ಲ ಕರ್ಮಭೂಮಿಯಾಗಿರುವ ಭರತಖಂಡದ ವರ್ಣಾಶ್ರಮಧರ್ಮಿಗಳಿಗೇ ಅಧಿಕಾರವಿರುವುದು; ಇವುಗಳ ಅಧ್ಯಯನಾಚರಣೆಗಳು ವೇದಶಾಸ್ತ್ರಗಳ ಭಾಷೆಯಿಂದಲೇ ಆಗಬೇಕು- ಇಲ್ಲವಾದರೆ ಅವು ಸಫಲಗಳಾಗದೆ, ಅನರ್ಥಗಳೂ ಆಗುವುವು. "ಅಗ್ನಯೇ ಸ್ವಾಹಾ"-ಎಂದು ಹೇಳಬೇಕಾಗಿರುವಲ್ಲಿ- "ವಹ್ನಯೇ ಸ್ವಾಹಾ"- ಎಂದು ಪರ್ಯಾಯವಾಗಿ ಹೇಳಿದರೂ ಅದು ನಿಷ್ಫಲವೂ ದುಷ್ಫಲವೂ ಆಗುವುದೆಂದು ಶಾಸ್ತ್ರದ ಮರ್ಯಾದೆಯಿರುವುದು. ಇದರ ಘನತೆಯನ್ನರಿಯದೆ- "ಸಂಸ್ಕೃತದಲ್ಲಿನ್ನೇನು?"- ಎಂದು ಬಡಬಡಿಸುವವರ ಪ್ರಾಜ್ಞತೆಯು ಶ್ಲಾಘನೀಯವೇ ಸರಿ! ದೇಶಭಾಷೆಯಿಂದಲೇ ದೇವತಾಪೂಜೆಯನ್ನು ಮಾಡುತ್ತೇವೆಂದು, -"ಮುಖೇ ಆಚಮನವಾಚಮನಂ ಸಮರ್ಪಯಾಮಿ"- ಎಂದು ಹೇಳಬೇಕಾಗಿರುವಲ್ಲಿ, "ನಿನ್ನ ಬಾಯಿಗೆ ಅಷ್ಟು ನೀರುಬಿಡುತ್ತೇನೆ, ನೀರುಬಿಡುತ್ತೇನೆ"- ಎಂದು ಹೇಳಿದರೆ, ಎಷ್ಟು ಶ್ಲಾಘ್ಯವೆನಿಸುತ್ತದೆಯಲ್ಲವೆ?

ಧರ್ಮಶಾಸ್ತ್ರಗಳಿಂದ ನಿಯಮಿತವಾಗಿರುವ ಪಂಚಾಯತನದೇವತಾರಾಧನೆಯು ಶ್ರೀಭಗವತ್ಪಾದರ ಕಾಲದಲ್ಲಿ ಪ್ರಚಾರದಲ್ಲಿರಲಿಲ್ಲವೆ?-ಅದು ಅನಂತರವೇ ಬಂದದ್ದೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಭಗವತ್ಪಾದರವರು ಅವತರಿಸಿದಾಗ ಅನಾದಿಯಾಗಿ ಪ್ರಚಾರದಲ್ಲಿದ್ದ ಎಲ್ಲ ನಾಸ್ತಿಕತಾರ್ಕಿಕಮತಗಳನ್ನೂ ಪರಿಶೋಧಿಸಿ ನಿರಾಕರಿಸಿ, ವೈದಿಕಸನಾತನಾದ್ವೈತ ಸಿದ್ಧಾಂತವನ್ನು ಅಬಾಧಿತವಾಗಿ ಪ್ರತಿಪಾದಿಸಿ, ಇದರ ಸಿದ್ಧಿಗೆ ಅವಶ್ಯವಾಗಿರುವ ವೈದಿಕಸನಾತನವರ್ಣಾಶ್ರಮಧರ್ಮವನ್ನು ಲೋಕದಲ್ಲಿ ಸ್ಥಾಪಿಸಿರುತ್ತಾರೆ- ಶ್ರೀಭಗವದವತಾರಗಳಿಗೆಲ್ಲ ಇದೇ ಪರಮಗುರಿಯಾದುದು? ಎಲ್ಲ ದ್ವೈತವಿಶಿಷ್ಟಾ ದ್ವೈತಾದಿಮತಗಳು ಅವರ ಕಾಲದಲ್ಲಿ ಹೆಸರಿಲ್ಲದವುಗಳಾಗಿದ್ದು' ಈಚೆಗೆ ಬಂದ ಕಲ್ಪಿತಮತಗಳೇ ಎಂದು ಇದರಿಂದ ನಿಶ್ಚಿತವಾಗುವುದು. "ಶ್ರೀಭಗವತ್ಪಾದರು ನಿರಾಕರಿಸಿಲ್ಲದ ಈ ಮತಗಳು ಹಾಗಾದರೆ ಯಥಾರ್ಥಗಳೇ ಆಗುವುವಲ್ಲವೆ?"–ಎಂದು ಭ್ರಮಿಸಬಾರದು; ಇತರ ಮತಗಳ ನಿರಾಕರಣೆಯಿಂದಲೇ ಇವೂ ಸುನಿರಾಕೃತಗಳೇ ಆಗುತ್ತವೆ; ಮತ್ತು, ಈಚಿನ ಅನೇಕವಿದ್ವಾಂಸರುಗಳಿಂದಲೂ ನಿರಾಕೃತಗಳೇ ಆಗಿವೆ. ಆದರೂ, ಇವುಗಳನ್ನು ಗಮನಿಸದೆ, ಇವರು ತಾವು ಹೇಳಿದ್ದನ್ನೇ ಹೇಳಿಕೊಂಡು ಹೋಗುತ್ತಿರುವರು–"ಮತ್ತಃ ಸ್ಮೃತಿಜ್ಞಾನಮಪೋಹನಂ ಚ, ನಿಗ್ರಹಃ ಕಿಂ ಕರಿಷ್ಯತಿ"–ಎಂಬ ಶ್ರೀಭಗವದ್ವಚನಗಳು ಯಥಾರ್ಥಗಳೇ!

ಕ್ರಿಸ್ತಶಕ 17ನೇ ಶತಮಾನದ ವಾದಿರಾಜರೆಂಬ ಮಾಧ್ವಮತದವರು–ಮೀನುಗಾರಿಕೆಯ ಬೆಸ್ತರು ಈಚಲುಮರದಿಂದ ಹೆಂಡವನ್ನು ಇಳಿಸುವ ಹಳೇಪೈಕದವರು, ಹೊನ್ನೆಗರು, ಬಂಟರು, ತೋಟಿಗರು-ಇವರೇ ಮೊದಲಾದ ಕೀಳುಜಾತಿಯವರಿಗೆ ಮುದ್ರೆ ಹಾಕಿ ಬ್ರಾಹ್ಮಣರನ್ನಾಗಿ ಮಾಡಿ, ಮಾಧ್ವಮಹಾಮಂಡಲವನ್ನು ಸ್ಥಾಪಿಸಿ, ಮಾಧ್ವಪಂಗಡವನ್ನು ಬೆಳೆಸಿದರೆಂಬ ವಿಷಯವು ಚಾರಿತ್ರಿಕಶೋಧನೆಗಳಿಂದ ವ್ಯಕ್ತಪಟ್ಟಿರುತ್ತದೆ.

(ಮಂಗಳೂರಿನ ಡಾ|| ಮ. ನು–ಅಚ್ಯುತಶರ್ಮರ 1969 ರಲ್ಲಿ ಪ್ರಕಟಿತವಾಗಿರುವ– "ಉಡುಪಿಕ್ಷೇತ್ರದ ನೈಜಚಿತ್ರ ಮತ್ತು ಚಾರಿತ್ರಿಕಹಿನ್ನೆಲೆ-" ಎಂಬ ಪುಸ್ತಕವನ್ನು ಪರಾಮರ್ಶಿಸತಕ್ಕದ್ದು.)

ಶ್ರೀ ವೈಷ್ಣವರಿಗೆ ಆಳ್ವಾರರುಗಳೇ ಮೂಲಪುರುಷರು ಎಂಬುದನ್ನು ತಿಳಿಯತಕ್ಕದ್ದು ಶಿಷ್ಟರು ಇವರುಗಳೊಡನೆ ಲೌಕಿಕ–ವೈದಿಕ-ಯಾವಸಂವ್ಯವಹಾರವನ್ನೂ ಮಾಡುವುದಿಲ್ಲ, ಸರ್ವಸಾಂಕರ್ಯದ ಈಗಿನ ಕಲಿಯ ಮಹಿಮೆಯಲ್ಲಿ ಏನೇನು ತಾನೆ ಸಂಭವಿಸುವುದಿಲ್ಲ.! "ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ!"–ಎಂದು ಶ್ರೀಸರ್ವಶಕ್ತಭಗವಂತನೇ ಹೆದರಿರುವ ಸರ್ವಸಾಂಕರ್ಯಕ್ಕೆ ನಾಗರಿಕಕುಶಲರು ಸರ್ವಸನ್ನಾಹಸಿದ್ಧರಾಗಿರುವರಲ್ಲವೆ?

ಇದನ್ನೆಲ್ಲ—"ನ ಹಿ ನಿಂದಾ ನಿಂದ್ಯಂ ನಿಂದಿತುಂ ಪ್ರವೃತ್ತಾ; ಕಿಂ ತು, ಸ್ತುತ್ಯಂ ಸ್ತೋತುಂ!"–"ನಿಂದೆಗೆ ನಿಂದ್ಯವಾದುದರ ನಿಂದೆಯಲ್ಲಿ ತಾತ್ಪರ್ಯವಲ್ಲ; ಮತ್ತೆ? ಸ್ತುತ್ಯ-

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದುದರ ಸ್ತುತಿಯಲ್ಲಿಯೇ"–ಎಂಬ ಅಭಿಪ್ರಾಯದಿಂದ ತಿಳಿಯತಕ್ಕದ್ದು.–ನಿಂದ್ಯವನ್ನು ನಿಂದಿಸಿ ನಮಗೆ ಆಗುವ ಫಲವೇನು?

"ಶಾಸ್ತ್ರನಿಷ್ಣಾತರೂ ವಿಚಾರಚತುರರೂ ಆಗಿರುವ ಇತರಮತೀಯವಿದ್ವಾಂಸರುಗಳಿಗೆ, ಅವರು ಹೀಗೆ ಮಾಡಿರುವ ಅಪಾರ್ಥಗಳು ತಿಳಿಯಲಿಲ್ಲವೆ?"–ಎಂದರೆ, "ಮತ್ತಃ ಸರ್ವಂ ಪ್ರವರ್ತತೇ; ಮತ್ತಃ ಸ್ಮೃತಿಜ್ಞಾನಮಪೋಹನಂ ಚ।"–ಎಂದು ಮುಂತಾದ ಪ್ರಮಾಣಗಳಂತೆ, ಸರ್ವೇಶ್ವರನ ನಿಯಮಕ್ಕೆ ಅಧೀನವಾಗಿ-'ಸ್ವಭಾವೋ ದುರತಿಕ್ರಮಃ।'-ಎಂಬುದು ಅಪರಿಹಾರ್ಯವೇ ಆಗಿರುತ್ತದೆ. ಚರಾಚರಾತ್ಮಕವಾಗಿರುವ ಜಗತ್ತೆಲ್ಲವೂ ಈ ನಿಯಮಬದ್ಧವೇ ಆಗಿರುವುದು; ಯಾವುದೂ ಈಶ್ವರನಿಯಮಿತವಾಗಿರುವ ತನ್ನ ಸ್ವಭಾವವನ್ನು ಎಲ್ಲಿಯೂ ಬದಲಾಯಿಸಲಾರದು. ಶ್ರೀಭಗವತ್ಪಾದರು ವಿವರಿಸಿರುವಂತೆ "ನ ಹಿ ಪದಾರ್ಥಾಃ ದೇಶಾಂತರೇ ಕಾಲಾಂತರೇ ವಾ ಸ್ವಂ ಸ್ವಂ ಸ್ವಭಾವಂ ಜಹತಿ। ನ ಹಿ ದೇಶಾಂತರೇ ಕಾಲಾಂತರೇ ವಾ ಅಗ್ನಿರನುಷ್ಣೋ ಭವತ್ಯುದಕಂ ವೋಷ್ಣಂ।" ನ ಹಿ ಸ್ವಭಾವೋ ಭಾವಾನಾಂ ವ್ಯಾವರ್ತ್ಯೇತೌಷ್ಣ್ಯವದ್ರವೇಃ" ।– "ಎಂಬುದು ಶ್ರೀವಾರ್ತಿಕಕಾರರ ವಚನವು.

"ಇತರರು ನಿಮ್ಮನ್ನು ಕುರಿತೂ ಹೀಗೆಯೇ ಹೇಳಿದರೆ?"– ಎಂದು ಕೇಳಬಹುದು. 'ತಥಾಸ್ತು'– ಎಂದೇ ನಮ್ಮ ಉತ್ತರವು! ಹಾಗಾದರೆ ಸರಿತಪ್ಪುಗಳ ನಿರ್ಣಯ ಹೇಗೆ?"–ಎಂದರೆ, "ಈಶ್ವರಃ ಪ್ರಮಾಣಂ" ಸ್ವಧರ್ಮೇ ನಿಧನಂ ಶ್ರೇಯಃ; ಯೋ ಯೋ ಯಾಂ ಯಾಂ ತನುಂ ಇಚ್ಛತಿ। ತಸ್ಯಾಚಲಾಂ ಶ್ರದ್ಧಾಂ,ತಾಮೇವ ವಿದಧಾಮಿ"— ಎಂಬುದೇ ಶ್ರೀಭಗವದುಕ್ತಿಃ। ಕತ್ತೆಯ ಸ್ವಭಾವವು ಸರಿಯೋ, ಕುದುರೆಯ ಸ್ವಭಾವವು ಸರಿಯೋ? ಎಂಬ ಪ್ರಶ್ನೆಗೆ ಉತ್ತರವೇ ಇದಕ್ಕೂ ಉತ್ತರವೆಂದು ಸಮಾಧಾನಮಾಡಿಕೊಳ್ಳಬಹುದು!

"ಕತ್ತೆಯು ಉತ್ತಮವೋ, ಕುದುರೆಯು ಉತ್ತಮವೋ?– ಎಂದರೆ, ಕತ್ತೆಯ ಕೆಲಸಕ್ಕೆ ಕತ್ತೆಯೇ ಉತ್ತಮ, ಕುದುರೆಯ ಕೆಲಸಕ್ಕೆ ಕುದುರೆಯೇ ಉತ್ತಮ"-ಎಂದೇ ಉತ್ತರವು. ಆದರೆ, ಈಗಿನ ನಾಗರಿಕತೆಯಂತೆ, ಎಲ್ಲವುದನ್ನೂ ಎಲ್ಲ ಕೆಲಸಕ್ಕೂ ಉಪಯೋಗಿಸುವುದು?– ಅದೂ ಈಶ್ವರನಿಯಮಕ್ಕೆ ಅಧೀನವಲ್ಲವೆ? ಸರಿತಪ್ಪುಗಳನ್ನು ನಿರ್ಧರಿಸುವವರು ಯಾರು?–ಪ್ರಬಲರು! ಪ್ರಪಂಚದ ಸ್ಥಿತಿಯೂ ಇದೇ ಇರುವುದು ಪ್ರತ್ಯಕ್ಷವೇ ಇದೆಯಷ್ಟೆ! ಸರ್ವಜ್ಞನೂ ಸರ್ವಶಕ್ತನೂ ಆಗಿರುವ ಈಶ್ವರನಿದ್ದರೆ ಅವನ ನಿಯಮವೇ ಜಯಿಸುವುದು! 'ಅದು ಯಾವುದು?" ಎಂದರೆ-

"ಮತ್ತಃ ಸ್ಮೃತಿಜ್ಞಾನಮಪೋಹನಂ ಚ।"– ಎಂದು ಮೊದಲೇ ತಿಳಿಸಿದಂತೆ, ಅವರವರಿಗೆ ತೋಚಿದ್ದೇ!'-ಯತ್ರ ಸ್ವಪ್ರತಿಭಾ ಮಾನಂ ತಸ್ಮೈ ಶ್ರೀಕಲಯೇ ನಮಃ।"

"ಸ್ವಸ್ತ್ಯಸ್ತು ಸರ್ವಜಗತಃ।"

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶೃಂಗಗಿರಿ ಕವಿ ನರಸಿಂಹಶರ್ಮರ ಕೃತಿಗಳು:–

[ವೇದಾಂತಸಿದ್ಧಾಂತವನ್ನು ಸರಳವಾಗಿ ಯಥಾವತ್ತಾಗಿ ತಿಳಿಯಲು, ಕನ್ನಡಾ-ನುವಾದವಿವರಣಸಹಿತಗಳಾಗಿ, ವಿದ್ವನ್ಮಾನ್ಯಗಳಾಗಿರುವ ಈ ಗ್ರಂಥಗಳನ್ನು ಮತ್ತೆ ಮತ್ತೆ ಮನನಮಾಡತಕ್ಕದ್ದು.]

೧. ಕರ್ಣಾಟಕ–ಅದ್ವೈತಮಕರಂದ. ೨. ಶ್ರೀಮದ್ವಾಲ್ಮೀಕಿರಾಮಾಯಣದಲ್ಲಿನ ರಾವಣಾಸುರನ ಸ್ವರೂಪ. ೩. ಶ್ರೀವಾಲ್ಮೀಕಿರಾಮಾಯಣದ ಶ್ರೀರಾಮಜನ್ಮೋತ್ಸವಘಟ್ಟ ೪. ಶ್ರೀಶೃಂಗಗಿರಿಜಗದ್ಗುರುಶ್ರೀಮದಭಿನವವಿದ್ಯಾತೀರ್ಥ ಮಹಾಸನ್ನಿಧಾನದವರು ತಮ್ಮ ಪಟ್ಟಾಭಿಷೇಕಮಹೋತ್ಸವದ ೧೭ :೧೦. ೧೯೫೪ ರಂದು ಅಶೇಷಶಿಷ್ಯಜಗತ್ತಿಗೆ ಅನುಗ್ರಹಿಸಿದ ಉಪದೇಶ. ೫. ವಿಚಾರಪರತೆ. ೬. ಜಗತ್ತಿನ ರಾಜ್ಯಭಾರ. ೭. ಶ್ರೀಶೈವ-ಸಿದ್ಧಾಂತಪರಿಭಾಷಾ-- ಕನ್ನಡಾನುವಾದ. ೮. ಶ್ರೀಸದ್ಗುರೂತ್ಕರ್ಷನವರತ್ನಮಾಲಿಕಾ; ೯. ಶ್ರೀದಕ್ಷಿಣಾಮೂರ್ತಿಸ್ತೋತ್ರತಾತ್ಪರ್ಯಚಂದ್ರಿಕಾ; ೧೦. ಶ್ರೀಸ್ಕಾಂದ–ಪುರಾಣಾಂತರ್ಗತಾಭಿಲಾಷಾಷ್ಟಕವಿವೃತಿಃ । (೮.೯. ೧೦.–ಸಂಸ್ಕೃತಭಾಷೆಯವು). ೧೧. ಶ್ರೀಶ್ರೀಕಂಠೇಶ್ವರಸುಪ್ರಭಾತಪ್ರಾರ್ಥನಾನಕ್ಷತ್ರಮಾಲಿಕಾಸ್ತೋತ್ರಂ । ೧೨. ಶ್ರೀಮದ್ರಾಮಾಯಣದ ಉಪದೇಶ. ೧೩. The Biography of the Soul ೧೪. ಶ್ರೀಭಗವತ್ಪಾದರವರ ಆತ್ಮಬೋಧಪ್ರಕರಣಂ. ೧೫. ಶ್ರೀರಾಮಚಂದ್ರಮಾನಸಪೂಜಾವಿಧಾನಂ–ಶೋಧಿತಂ. ೧೬. ಶ್ರೀಭಗವತ್ಪಾದೀಯವೇದಾಂತ-ಮರ್ಯಾದಾ. ೧೭. ವೇದಾರ್ಥ ಅಥವಾ ವೈದಿಕದರ್ಶನಂ. ೧೮. ಶ್ರೀಭಗವ-ತ್ಪಾದದಿವ್ಯನಾಮಭಜನಮಾಲಾ. ೧೯. ವ್ಯವಹಾರ ಮತ್ತು ಧರ್ಮಶಾಸ್ತ್ರ. ೨೦. ಶ್ರೀಭಗವತ್ಪಾದೀಯಂ ವಿಜ್ಞಾನನೌಕಾಪ್ರಕರಣಂ. ೨೧ ಶ್ರೀಭಗವತ್ಪಾದರ ದಿವ್ಯಾಷ್ಟೋತ್ತರಸಹಸ್ರ–ಅಷ್ಟೋತ್ತರಶತನಾಮಾವಳಿಃ । ೨೨. ಶ್ರೀಭಗವತ್ಪಾದ-ಮಹಿಮೋತ್ಕರ್ಷಮಂಜರೀ. ೨೩. ಶ್ರೀಭಗವತ್ಪಾದೀಯಾ ಆನಂದಲಹರೀ. ೨೪. ಶ್ರೀಭಗವತ್ಪಾದೀಯಂ ಮನೀಷಾಪಂಚಕಂ. ೨೫. ವೇದಾಂತಾಧಿಕಾರೀ. ೨೬. ಶ್ರೀಸುರೇಶ್ವರಾಚಾರ್ಯರು. ೨೭. ಶ್ರೀಭಗವತ್ಪಾದೀಯಾ ಶತಶ್ಲೋಕೀ. ೨೮. ವೇದಾಂತಸಿದ್ಧಾಂತ–ಮೂಲಾವಿದ್ಯೆ. ೨೯. ಶ್ರೀಸದಾಶಿವಬ್ರಹ್ಮೇಂದ್ರರ ಆತ್ಮವಿದ್ಯಾವಿಲಾಸಃ । ೩೦. ಸನಾತನಧರ್ಮಕಿರುಗ್ರಂಥ.
೩೧. ಶ್ರೀಮದಪ್ಪಯ್ಯದೀಕ್ಷಿತೇಂದ್ರವಿಜಯ. ೩೨. ಶ್ರೀಗೀತಾತತ್ತ್ವಶತ-ಶ್ಲೋಕೀ. ೩೩. ಶ್ರೀಶಂಕರಾಚಾರ್ಯರ ಮತ್ತು ಶ್ರೀವಿದ್ಯಾರಣ್ಯರ ಸುಪ್ರಭಾತ-ಸ್ತೋತ್ರಪರಿಷ್ಕಾರಃ. ೩೪. ಜೀವನ ಜೀವನಯಾತ್ರೆ; ೩೫. ಶ್ರೀವಿದ್ಯಾರಣ್ಯರ ಬ್ರಹ್ಮವಿದಾಶೀರ್ವಾದಪದ್ಧತಿಃ । ೩೬. ಶ್ರೀಭಗವತ್ಪಾದರ ಶ್ರೀಸಾಂಬದಶಶ್ಲೋಕೀ ಮತ್ತು ಶ್ರೀವಿಷ್ಣುಪಾದಾದಿಕೇಶಾಂತಸ್ತೋತ್ರಂ. ೩೭. ಶ್ರೀಭಗವತ್ಪಾದೀಯದಶಶ್ಲೋಕೀ

Sri Vidyabharathi Book Centre, Sringeri

CC-O. In Public Domain. Digitized by eGangotri

೩೮. ಕರ್ತವ್ಯನಿರೂಪಣಂ. ೩೯. ಸನಾತನಹಿಂದೂಧರ್ಮ- ಪ್ರಶ್ನೋತ್ತರೀ. ೪೦. ಶ್ರೀಭಗವತ್ಪಾದೀಯಾಧ್ಯಾಸಭಾಷ್ಯ, ೪೧. ಶ್ರೀಭಗವತ್ಪಾದೀಯಂ ಹರಿಮೀಡೇಸ್ತೋತ್ರಂ. ೪೨. ಭರ್ತೃಹರಿನೀತಿಶತಕಂ. ೪೩. ಶ್ರೀಪದ್ಮಪಾದಾಚಾರ್ಯರ ವಿಜ್ಞಾನದೀಪಿಕಾನುಸಾರಸಂಗ್ರಹಃ; ಶ್ರೀಭಗವತ್ಪಾದೀಯಬ್ರಹ್ಮಾನುಚಿಂತನಪ್ರಕರಣಂ. ೪೪. ಮೂಲಾವಿದ್ಯಾವಿಮರ್ಶವಿಚಾರಗೋಷ್ಠಿಯ ಮಧ್ಯಸ್ಥರ ವರದಿ ೪೫. ಭಗವದ್ಭಕ್ತಿ; ಹಸ್ತಾಮಲಕೀಯಪ್ರಕರಣಂ ೪೬. ಸದಾಚಾರಸೂತ್ರವಿವರಣೆ. ೪೭. ಶ್ರೀಸದಾಶಿವಬ್ರಹ್ಮೇಂದ್ರರ ಅದ್ವೈತರಸಮಂಜರೀ ೪೮. ಶ್ರೀಶೃಂಗಗಿರಿ ಶ್ರೀಶಾರದಾಜಗದ್ಗುರುಪೀಠವೈಶಿಷ್ಟ್ಯಂ ೪೯. ಶ್ರೀಶೃಂಗಗಿರಿಶ್ರೀಶಾರದಾಮಹಿಮಾದರ್ಶಃ । ೫೦. ಶ್ರೀಭಗವತ್ಪಾದೀಯಮದ್ವೈತಪಂಚರತ್ನಂ. ೫೧. ಶ್ರೀಭಗವತ್ಪಾದೀಯಂ ಅದ್ವೈತಾನುಭೂತಿಪ್ರಕರಣಂ. ೫೨. ಶ್ರೀಶಂಕರಾನಂದಸರಸ್ವತೀಪ್ರಣೀತಂ ಅದ್ವೈತತತ್ತ್ವಾದರ್ಶಃ । ಶ್ರೀತೋಟಕಾಚಾರ್ಯಕೃತಶ್ರುತಿಸಾರಸಮುದ್ಧರಣಸಾರಃ । ೫೩. ಭಾರತಸಾವಿತ್ರೀಸಂಗ್ರಹ. ೫೪. ಶ್ರೀಗುರೂಪದೇಶಃ ! ೫೪. ಶ್ರೀಭಗವತ್ಪಾದೀಯಂ ಸ್ವಾತ್ಮನಿರೂಪಣಂ. ೫೫. ಶ್ರೀವಾಲ್ಮೀಕೀಯಂ ಸಂಗ್ರಹರಾಮಾಯಣಂ. ೫೬.ಶ್ರೀಭಗವತ್ಪಾದೀಯಃ ಅಧ್ಯಾತ್ಮೋಪದೇಶವಿಧಿಃ।; ಏಕಶ್ಲೋಕೀಪ್ರಕರಣಂ ಚ । ೫೭. ವೇದಾಂತಮರ್ಯಾದಾ- ಶ್ರೀಗೀತಾಮೃತತರಂಗಿಣೀ. ೫೮. ಶ್ರೀಭಗವತ್ಪಾದೀಯಾ ಉಪದೇಶಸಾಹಸ್ರೀ-ಗದ್ಯಭಾಗ-ಶಿಷ್ಯಪ್ರತಿಬೋಧಪ್ರಕಾರಃ ೫೯. ಶ್ರೀವ್ಯಾಸತಾತ್ಪರ್ಯನಿರ್ಣಯ, ಶ್ರೀಭಗವತ್ಪಾದೀಯಂ ಸಾಧನಪಂಚಕಂ ೬೦. ಶ್ರೀಸಚ್ಚಿದಾನಂದವಿಜಯಃ; ಶ್ರೀಗುರುಪಾದುಕಾಸ್ತೋತ್ರಂ; ಶ್ರೀಗುರೂಪದೇಶಃ, ಭವಬಂಧಮುಕ್ತ್ಯಷ್ಟಕಂ: ಶ್ರೀದೇಶಿಕೋತ್ಕರ್ಷಮಂಜರೀ. ೬೧. ಶ್ರೀಬ್ರಹ್ಮಸೂತ್ರತಾತ್ಪರ್ಯವಿಮರ್ಶೆ; ಶ್ರೀಭಗವತ್ಪಾದೀಯಃ ಸರ್ವಶಾಸ್ತ್ರಾರ್ಥಸಂಕ್ಷೇಪಃ । ೬೨. ಶ್ರೀವ್ಯಾಸಮಹರ್ಷಿಚರಿತಸಂಗ್ರಹಃ । ಶ್ರೀಪದ್ಮಪಾದಾಚಾರ್ಯಚರಿತಸಂಗ್ರಹಃ ೬೩. ಶ್ರೀಸದ್ಗುರೂಪದೇಶಷೋಡಶೀ ಸಂಸಾರಗತಿಃ; ೬೪. ಶ್ರೀವಿದ್ಯಾರಣ್ಯಚರಿತ್ರೆಪರಿಷ್ಕಾರ. ೬೫. ದ್ವೈತಸಿದ್ಧಾಂತವೈಜಯಂತೀಭಂಜಿನೀ; ಸಭಾಸಾರಸಂಗ್ರಹಾಸಾರತಾದರ್ಶಿನೀ ೬೬. ಶ್ರೀಭಗವತ್ಪಾದೀಯಸರ್ವವೇದಾಂತಸಿದ್ಧಾಂತಸಾರಸಂಗ್ರಹಪ್ರಕರಣಂ-ಪ್ರಥಮೋಭಾಗಃ । ೬೭. ಸದ್ಬೋಧಾಮೃತಗುರುಶಿಷ್ಯಸಂವಾದಧುರೀ- ಆತ್ಮತತ್ತ್ವ. ೬೮. ವೇದಾಂತರಹಸ್ಯಂ: ವೇದಾಂತಡಿಂಡಿಮಃ । ೬೯. ಆತ್ಮಜ್ಞಾನಂ ೭೦. ಶ್ರೀಮದೀಶ್ವರಸಿದ್ಧಿಪ್ರಕರಣಂ; ಶ್ರೀರಾಮಗೀತಾ ೭೧. ಆತ್ಮಯಾಥಾತ್ಮ್ಯಂ ೭೨. ಭಾಮತೀಚತುಃಸೂತ್ರೀವಿವರಣಂ. ೭೩ ಶ್ರೀಭಗವತ್ಪಾದೀಯಾ ಲಘುವಾಕ್ಯವೃತ್ತಿ ೭೪, ಶ್ರೀಭಗವತ್ಪಾದೀಯಾ ನಿರ್ವಾಣಮಂಜರೀ ೭೫. ಪುರುಷಾರ್ಥಮೀಮಾಂಸಾ ೭೬. ದರ್ಶನಗಳು. ೭೭. ಶ್ರೀಮದಾಚಾರ್ಯೇಂದ್ರಸ್ತವಃ; ಶ್ರೀಜಗದ್ಗುರುಪಂಚಕಂ

Sri Vidyabharathi Book Centre, Sringeri

CC-O. In Public Domain. Digitized by eGangotri

೭೮. ಶ್ರೀಗಣೇಶಮಹಿಮಾ ೭೯. ಪುರುಷಾರ್ಥಸಾಧನಂ ಕರ್ಮೈವ ೮೦. ಸರ್ವಕರ್ಮಸನ್ನ್ಯಾಸಃ ೮೧. ಶ್ರೀಸದಾಶಿವಬ್ರಹ್ಮೇಂದ್ರರ ಚರಿತ್ರೆ. ೮೨. ಮೂಲಾವಿದ್ಯಾನಿರಾಸವಾದವಿಮರ್ಶೆ. ೮೩. ಧರ್ಮನಿರುಕ್ತಿಃ। ೮೪. ಶ್ರೀಭಗವತ್ಪಾದಭಾಷ್ಯಸೂಕ್ತಿಸುಧಾಸಾಗರರತ್ನಮಾಲಾ ೮೫. ಶ್ರೀಗಣೇಶಪುರಾಣಂ. ೮೬. ಸಂಕ್ಷಿಪ್ತಶ್ರೀಮಾಧವೀಯಶಂಕರವಿಜಯಃ ಶ್ರೀಭಗವತ್ಪಾದೀಯಮುಖ್ಯಶಿಷ್ಯಚತುಷ್ಟಯಚರಿತಸಂಗ್ರಹಃ ೮೭. ಶ್ರೀವಾರಣಾಸೀಕ್ಷೇತ್ರದಲ್ಲಿ ನಡೆಯಿಸಿದ ಶ್ರೀಮದ್ಭಾಗವತಸಪ್ತಾಹದ ವಿವರ. ೮೮. ಶ್ರೀಸೂತಸಂಹಿತಾಂತರ್ಗತಶ್ರೀಬ್ರಹ್ಮಗೀತಾ. ೮೯. ಸ್ತೋತ್ರಮುಕ್ತಾವಳಿ-ಇತ್ಯಾದಿ ಇತ್ಯಾದಿ.

ಇವುಗಳಲ್ಲದೆ, ೧೯೩೫ ರಿಂದಲೂ ವೇದಾಂತಶಾಸ್ತ್ರದ ಪ್ರವಚನಗಳೂ; ಅನೇಕಾನೇಕಪತ್ರಿಕೆಗಳಲ್ಲಿ ವಿದ್ವತ್ಪೂರ್ಣಗಳಾದ ಲೇಖನಗಳೂ; ಸಭೆಗಳಲ್ಲಿ ಉಪನ್ಯಾಸಾದಿಗಳೂ ನಡೆದುಬಂದಿರುತ್ತವೆ.

ಈ ಮೇಲಿನ ಪುಸ್ತಕಗಳ ಪ್ರತಿಗಳು ಮುಗಿದಿವೆಯಾಗಿ, ಪಾರಮಾರ್ಥಿಕತತ್ತ್ವವಿಚಾರದಲ್ಲಿ ಶ್ರದ್ಧಾವಂತರು ಯಾರಾದರೂ ಪ್ರಚಾರಮಾಡುವಲ್ಲಿ. ಈ ಪುಸ್ತಕಗಳ ಒಂದು ಪ್ರತಿಯನ್ನು ಕೊಡಲಾಗುವುದು.

"ಸ್ವಾಧ್ಯಾಯಪ್ರವಚನಾ ಭ್ಯಾಂ ನ ಪ್ರಮದಿತವ್ಯಂ!"- "ವೇದಶಾಸ್ತ್ರಗಳ ಅಧ್ಯಯನ ಮತ್ತು ಅದರ ಪ್ರವಚನವನ್ನು ಎಂದೂ ಯಾರೂ ತಪ್ಪಕೂಡದು"- ಎಂಬುದು ಶ್ರೀಪರಮಾತ್ಮನ ವೇದ ಮೂಲಕವಾದ ಕಟ್ಟಪ್ಪಣೆಯು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕೃತಂ

ಸರ್ವಲೋಕೈಕಹಿತಕರವಾಗಿರುವ ವೈದಿಕಸನಾತನವರ್ಣಾಶ್ರಮಧರ್ಮದ ಉದ್ಧಾರಕ್ಕಾಗಿಯೇ ಆಗುವ ಶ್ರೀಭಗವದವತಾರಗಳಲ್ಲಿ, ಪರಮಹಂಸ ಶ್ರೀಮಚ್ಛಂಕರಭಗವತ್ಪೂಜ್ಯಪಾದರವರ ಅವತಾರವೇ ಪರಮೋತ್ಕೃಷ್ಟವಾದುದು. ಶ್ರೀಭಗವತ್ಪಾದರ ಜೀವನಚರಿತ್ರೆಯು ಲೋಕದಲ್ಲಿ ಅನೇಕವಿಧಗಳಿಂದ ಪ್ರಕಟವಾಗುತ್ತಿದೆ, "ಸರ್ವಜ್ಞಃ ಸ ಹಿ ಮಾಧವಃ"।— ಎಂಬಂತೆ ಈ ವಿಷಯದಲ್ಲಿ ಪ್ರಾಮಾಣಿಕವಾಗಿರುವ ಶ್ರೀಮನ್ಮಾಧವೀಯಶಂಕರವಿಜಯಾನುಸಾರವಾಗಿ, ಶ್ರೀಭಗವತ್ಪಾದರವರ ಮತ್ತು ಇವರಮುಖ್ಯಶಿಷ್ಯಚತುಷ್ಟಯದವರ ನೈಜವಾದ ಚರಿತ್ರೆಯು, ಶ್ರೀಶೃಂಗಗಿರಿಶ್ರೀಶಾರದಾಜಗದ್ಗುರುಪೀಠಾವತಂಸರಾಗಿರುವ ಶ್ರೀಶ್ರೀಮದಭಿನವವಿದ್ಯಾತೀರ್ಥಮಹಾಸನ್ನಿಧಾನದವರ ಮತ್ತು ಇವರಕರಕಮಲಸಂಜಾತರಾಗಿರುವ ಶ್ರೀಶ್ರೀಭಾರತೀತೀರ್ಥಸನ್ನಿಧಾನದವರ ಆದೇಶಾನುಸಾರವಾಗಿ, ನೂರಾರುಸಾಂಪ್ರದಾಯಿಕ ಶಾಸ್ತ್ರೀಯವೇದಾಂತಪ್ರಕರಣಗಳನ್ನು ಪ್ರಕಟಿಸಿ ಪ್ರಸಿದ್ಧರಾಗಿರುವ ಶೃಂಗಗಿರಿಕವಿನರಸಿಂಹಶರ್ಮರಿಂದ, ಶ್ರೀಮಾಧವೀಯ ಶಂಕರವಿಜಯದ ವಚನಗಳನ್ನೇ ಸಾಕ್ಷಾತ್ತಾಗಿ ಸಂಗ್ರಹಿಸಿ, ಯಥಾವತ್ತಾಗಿ ವಿವರಿಸಿ ನಿರೂಪಿತವಾಗಿದೆ. ಆಸ್ತಿಕಸನ್ಮತಿಗಳು ಶ್ರೀಭಗವತ್ಪಾದಗುರುಸಾರ್ವಭೌಮರ ಯಥಾವತ್ತಾದ ಚರಿತ್ರೆ, ಮಹಿಮೆ ಮತ್ತು ಉಪದೇಶಗಳನ್ನು ತಿಳಿದುಕೊಂಡು, ಇ[illegible] ಶ್ರೇಯೋಭ್ಯುದಯಗಳಿಗೆ ಪಾತ್ರರಾಗಲು ಇದು ಉಪಯುಕ್ತವಾಗಿದೆಯೆಂದು ಶ್ರೀ[illegible]ವರ್ಯರುಗಳು ಹಾರೈಸುತ್ತಾರೆ:

ಅಹಮೇವ ಪರಂ ಬ್ರಹ್ಮ ಮತ್ತೋ ನಾನ್ಯೋಽಸ್ತಿ ಕಶ್ಚನ ।
ಸಚ್ಚಿದಾನಂದರೂಪೋಽಹಂ ನಿತ್ಯಮುಕ್ತೋಽಹಮದ್ವಯಃ ॥

Sri Vidyabharathi Book Centre, Sringeri